ಪರಾಮರ್ಶನ ಗ್ರಂಥ

ಅಕ್ಷರ ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ.

ಜಾಲರಿಮನೆ



ಲ.ನಾ.ರಾಯ

K. Srinivas Rao
28/7/55

ಜಾಲರಿಮನೆ

K. Srinivas Rao

ಲ. ನಾ. ರಾಯ

ಹಿಂದೂಸ್ಥಾನ್ ಪ್ರಕಾಶನ
ಬಳೇಪೇಟೆ, :: ಬೆಂಗಳೂರು-೨

ಮೊದಲನೆಯ ಮುದ್ರಣ : ಅಕ್ಟೋಬರ್ ೧೯೫೪

ಮುಖಚಿತ್ರ:
ಆರ್. ಎಸ್. ನಾಯ್ಡು

ಬೆಲೆ ಒಂದೂವರೆ ರೂಪಾಯಿ

ಮುದ್ರಣಕಾರರು :
ವಿ. ರಾಮಯ್ಯ ಮತ್ತು ಸೋದರರು,
ಶ್ರೀ ಸತ್ಯನಾರಾಯಣ ಪ್ರೆಸ್,
ಅರಳೇಪೇಟೆ, — ಬೆಂಗಳೂರು-೨.

ಅರಿಕೆ

ಜನಜೀವನದಲ್ಲಿ ಅನುದಿನವೂ ಕಾಡುತ್ತಿರುವ ವೇಶ್ಯಾಸಮಸ್ಯೆ ದಿನ ದಿನಕ್ಕೆ ಬೃಹದಾಕಾರವನ್ನು ತಾಳುತ್ತಿದೆ. ಸಮಾಜ ಸುವ್ಯವಸ್ಥಿತವಾಗ ಬೇಕಾದರೆ ಅದರ ನರನಾಡಿಗಳೆನಿಸಿದ ವ್ಯಕ್ತಿಯ ಜೀವನವೂ ನಿರ್ಮಲ ವಾಗಬೇಕು.

ವೇಶ್ಯಾಸಮಸ್ಯೆ ಇಂದು ಒಂದು ಬಗೆಹರಿಯದ ಸಮಸ್ಯೆಯಾಗಿ ನಗರಗಳಲ್ಲೇ ಅಲ್ಲದೆ ಹಳ್ಳಿಗಳಲ್ಲೂ ತನ್ನ ದುಷ್ಟ ನಾಲಗೆಯನ್ನು ಚಾಚು ತ್ತಿರುವ ನಿದರ್ಶನಗಳು ನಮ್ಮ ಕಣ್ಣುಮುಂದೆ ಎಷ್ಟೊ ನಲಿದಾಡುತ್ತಿವೆ. ಈ ಸಮಸ್ಯೆಯನ್ನು ಬಗೆಹರಿಸಲು ಅನೇಕ ಹೆಸರಾಂತ ಸಾಹಿತಿಗಳು ಹಗಲಿರಳು ಕಷ್ಟಪಡುತ್ತಿದ್ದಾರೆ. ಅವರು ರಚಿಸಿರುವ ಕೃತಿಗಳಲ್ಲಿ ವೇಶ್ಯಾ ವಾಟಿಗಳಿಂದಾಗಬಹುದಾದ ಅನರ್ಥಗಳನ್ನು ಸಮಾಜದ ಕಣ್ಣುತೆರೆಯು ವಂತೆ ವಿಧವಿಧವಾಗಿ ಬಣ್ಣಿಸಿದಾರೆ.

ಅದೇ ವಿಚಾರಸರಣಿಯ ಕಥೆ ಈ 'ಜಾಲರಿಮನೆ.' ಇದು ಬರಿಯ ಕಥೆಯಾಗಿರದೆ ವೇಶ್ಯಾಜೀವನದ ಒಂದು ನೈಜಚಿತ್ರವಾಗಿದೆ. ಈ ಸಮಸ್ಯೆ ಯನ್ನು ನಾನು 'ಬಡತನ' 'ಕಾಮಾತುರತೆ' 'ಅನೈಸರ್ಗಿಕ ದಾಂಪತ್ಯ' 'ಉನ್ಮಾದ ಪ್ರೇಮ' 'ಸ್ವೇಚ್ಛಾವಿಹಾರ' ಇವೇ ಮುಂತಾದ ಅನೇಕ ಮುಖಗಳಿಂದ ನೋಡಿ ಚಿತ್ರಿಸಿದ್ದೇನೆ.

ಸಾಹಿತಿ ಸ್ವತಂತ್ರ ಮನಸ್ಕ. ಅವನು ಯಂತ್ರ ಸಾಹಿತ್ಯವನ್ನು ನಿರ್ಮಿಸಲಾರ. ಲೋಕದ ಯಥಾರ್ಥ ಜೀವನವನ್ನೂ ಕಂಡು ತನ್ನದೇ ಆದ ರೀತಿಯಲ್ಲಿ ಜೀವನದ ಕಥೆಯನ್ನು ಜನತೆಯ ಮುಂದೆ ನಿರೂಪಿಸುವ ಹೊಣೆಗಾರಿಕೆ ಹೊತ್ತಿರುತ್ತಾನೆ. ಅದೇ ರೀತಿಯಲ್ಲಿ ಈ 'ಜಾಲರಿಮನೆ' ಕಾದಂಬರಿಯನ್ನೂ ಅನೇಕರ, ಅನೇಕ ಅನುಭವದ ತಿರುಳನ್ನೆಲ್ಲಾ ಒಟ್ಟುಗೂಡಿಸಿ ಈ ರೂಪದಲ್ಲಿ ಓದುಗರ ಮುಂದಿಟ್ಟಿದ್ದೇನೆ.

ಈ ತೆರನಾದ 'ಜಾಲರಿಮನೆ'ಗಳಿಂದ ನಮ್ಮ ಮಾನವತೆಯೇ ಅಧೋ ಮಟ್ಟಕ್ಕೆ ಇಳಿದು, ಪಶುವೃತ್ತಿ ಪ್ರಾಧಾನ್ಯತೆ ಹೊಂದಿ ನಮ್ಮ ಭಾವೀ ಪೀಳಿಗೆಯ ಮೇಲೆ ಎಂತಹ ಭಯಂಕರ ದುಃಷ್ಪರಿಣಾಮವನ್ನುಂಟು ಮಾಡಬಹುದೆಂಬುದನ್ನು ಓದುಗರು ಅರಿತು ಅದರ ನಿವಾರಣೆಗೆ ತಕ್ಕ ಪರಿಹಾರೋಪಾಯವನ್ನು ಕೈಗೊಳ್ಳುವರೆಂಬುದೇ ನನ್ನ ಆಶಯವಾಗಿದೆ.

ಇಂತಹ ಸಮಸ್ಯೆಯ ಫಲವಾಗಿ ಹೊರಬಂದ ಪೀಳಿಗೆ ಹೇಗೆ ಸಮಾಜ ಕಂಟಕವಾಗಿ ಪರಿಣಮಿಸುವುದೆಂಬುದನ್ನು ನನ್ನ ಮುಂದಿನ ಕಾದಂಬರಿ 'ಪಂಚರಂಗಿ'ಯಲ್ಲಿ ಚಿತ್ರಿಸಲು ಪ್ರಯತ್ನಿಸುತ್ತಿದ್ದೇನೆ.

ಈ ಕಾದಂಬರಿಯನ್ನು ಬರೆಯುವಾಗ ನನಗೆ ನೆರವಿತ್ತ ಗೆ|| ಶೇಷಾದ್ರಿ, ಗೆ|| ಗೋಪಾಲ್‌ರವರಿಗೆ ವಂದನೆಗಳು. ಕಾದಂಬರಿಯನ್ನು ಪ್ರಕಟಿಸಿದ ಹಿಂದೂಸ್ಥಾನ್ ಪ್ರಕಾಶನದವರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಸತ್ಯನಾರಾಯಣ ಮುದ್ರಣಾಲಯದ ವಿ. ರಾಮಯ್ಯ ಮತ್ತು ಸೋದರರಿಗೂ, ರಕ್ಷಾಕವಚವನ್ನು ಅಂದವಾಗಿ ಚಿತ್ರಿಸಿಕೊಟ್ಟ ಕಲಾವಿದ ಶ್ರೀ ಆರ್. ಎಸ್. ನಾಯ್ಡುರವರಿಗೂ ನನ್ನ ವಂದನೆಗಳು.

ಮೈಸೂರು
೩೦-೯-೫೪ }

ಲ. ನಾ. ರಾಯ

ಅರ್ಜುನ ಉವಾಚ :—

ಅಥ ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ ।
ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ ॥

ಅರ್ಜುನನು ಕೇಳಿದನು :—

ಭಗವಂತನೇ, ಮನುಷ್ಯನು ಇಚ್ಛೆಯಿಲ್ಲದಿದ್ದರೂ ಬಲಾತ್ಕರಿಸಲ್ಪಟ್ಟವನಂತೆ ಯಾವುದರ ಪ್ರೇರಣೆಯಿಂದ ಪಾಪವನ್ನು ಮಾಡುವನು ?

ಶ್ರೀ ಭಗವಾನುವಾಚ :—

ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।
ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಮ್ ॥

ಭಗವಂತನು ಹೇಳಿದನು :—

ಮನುಷ್ಯನು ಕೆಟ್ಟ ದಾರಿಗೆ ಹೋಗುವಂತೆ ಮಾಡುವುದು ಕಾಮ ಮತ್ತು ಕ್ರೋಧ. ಇವು ರಜೋಗುಣದಿಂದ ಹುಟ್ಟಿದುದು. ಯಾವ ಭೋಗಗಳಿಂದಲೂ ತೃಪ್ತಿ ಕಾಣದಂತಹುದು. ಮಹಾ ನೀಚನಾದ ಪಾಪಿಯು. ಇಹಲೋಕದ ಶ್ರೇಯಸ್ಸಿಗೆ ಶತ್ರುವಾದುದೆಂದು ತಿಳಿ.

ಧೂಮೇನಾವ್ರಿಯತೇ ವಹ್ನಿರ್ಯಥಾದರ್ಶೋ ಮಲೇನ ಚ ।
ಯಥೋಲ್ಬೇನಾವೃತೋ ಗರ್ಭಸ್ತಥಾ ತೇನೇದಮಾವೃತಮ್ ॥

ಬೆಂಕಿಯನ್ನು ಹೊಗೆಯೂ, ಕನ್ನಡಿಯನ್ನು ರಜೋರೂಪವಾದ ಕೊಳೆಯೂ, ಗರ್ಭವನ್ನು ಜರಾಯುವೆಂಬ ಗರ್ಭದ ಚೀಲವೂ ಮುಚ್ಚಿಕೊಂಡಿರುವಂತೆ ಜ್ಞಾನವು ಈ ಕಾಮ-ಕ್ರೋಧಗಳಿಂದ ಮುಚ್ಚಲ್ಪಟ್ಟಿದೆ.

ಆವೃತಂ ಜ್ಞಾನಮೇತೇನ ಜ್ಞಾನಿನೋ ನಿತ್ಯವೈರಿಣಾ ।
ಕಾಮರೂಪೇಣ ಕೌಂತೇಯ ದುಷ್ಪೂರೇಣಾನಲೇನ ಚ ॥

ಜ್ಞಾನಿಗಳ ಜ್ಞಾನವು ನಿತ್ಯವೈರಿಯೂ, ತೃಪ್ತಿಪಡಿಸಲು ಅಸಾಧ್ಯವೂ ಆದ ಅಗ್ನಿಪ್ರಾಯವಾದ ಈ ಕಾಮದಿಂದ ಮುಚ್ಚಲ್ಪಟ್ಟಿದೆ.

ಇಂದ್ರಿಯಾಣಿ ಮನೋ ಬುದ್ಧಿರಸ್ಯಾಧಿಷ್ಠಾನಮುಚ್ಯತೇ ।
ಏತೈರ್ವಿಮೋಹಯತ್ಯೇಷ ಜ್ಞಾನಮಾವೃತ್ಯ ದೇಹಿನಮ್ ॥

ಕಾಮವೆಂಬ ಈ ಶತ್ರುವಿಗೆ ಶ್ರೋತ್ರಾದಿ ಇಂದ್ರಿಯಗಳು (ಕಣ್ಣು, ಕಿವಿ, ಮೂಗು, ಬಾಯಿ ಮುಂತಾದವು) ಮನಸ್ಸು ಮತ್ತು ಬುದ್ಧಿ ಇವುಗಳು ವಾಸಸ್ಥಳಗಳೆಂದು ಹೇಳಲ್ಪಟ್ಟಿದೆ. ಈ ಕಾಮವು ಜ್ಞಾನವನ್ನು ಆವರಿಸಿಕೊಂಡು ಜೀವಿಯನ್ನು ಮೋಹಗೊಳಿಸುತ್ತದೆ.

ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ ।
ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನನಾಶನಮ್ ॥

ಆದುದರಿಂದ ನೀನು ಮೊದಲು ಇಂದ್ರಿಯಗಳನ್ನು ನಿಗ್ರಹಿಸಿ ಜ್ಞಾನ-ವಿಜ್ಞಾನ ನಾಶಿಯಾದ ಈ ಪರಮ ಪಾಪಿಯಾದ ಕಾಮವನ್ನು ವಿನಾಶಗೊಳಿಸು.

ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ ॥

ದೇಹಕ್ಕಿಂತಲೂ ಇಂದ್ರಿಯಗಳು ಶ್ರೇಷ್ಠವಾದುದ್ದು. ಇಂದ್ರಿಯಗಳಿಗಿಂತಲೂ ಮನಸ್ಸು ಶ್ರೇಷ್ಠವಾದುದ್ದು. ಮನಸ್ಸಿಗಿಂತ ಬುದ್ಧಿಯು ಶ್ರೇಷ್ಠವಾದುದ್ದು. ಬುದ್ಧಿಗಿಂತ ಶ್ರೇಷ್ಠವಾದುದ್ದೇ ಆತ್ಮವಸ್ತು

ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।
ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್ ॥

ಈ ರೀತಿ ಬುದ್ಧಿಯಿಂದ ಆತ್ಮನನ್ನು ತಿಳಿದವನಾಗಿ, ಆತ್ಮಜ್ಞಾನದ ವಿವೇಕದಿಂದ ಯುಕ್ತನಾಗಿ, ಮನಸ್ಸು-ಇಂದ್ರಿಯ-ದೇಹಗಳನ್ನು ವಶಪಡಿಸಿಕೊಂಡು, ದುರ್ಜಯವಾದ ಕಾಮ ಕ್ರೋಧಗಳೆಂಬ ಮಹಾಶತ್ರುಗಳನ್ನು ಧ್ವಂಸಮಾಡು.

—ಶ್ರೀಮದ್ಭಗವದ್ಗೀತಾ.
ಅಧ್ಯಾಯ ೩. ಶ್ಲೋಕಗಳು ೪೦-೪೩.

ಅರ್ಪಣೆ

ಸನ್ನಿವೇಶಗಳ ಸುಳಿಗೆ ಸಿಕ್ಕಿ
'ಜಾಲರಿಮನೆ' ಸೇರಬೇಕಾಗಿ ಬಂದ
ನನ್ನ ನಿರ್ಭಾಗ್ಯ ಸೋದರಿಯರಿಗೆ

— ಲ. ನಾ. ರಾ.

ನಾಕವೋ ನರಕವೋ
ಎಲ್ಲ ನಿನ್ನಲ್ಲಿಹುದು, ನಿನ್ನ ಮನೆಯೊಳಗಿಹುದು,
ಮನವಿಟ್ಟು ಮನೆಯೊಳಗೆ ನಾಕವಂ ನೀನರಸು
'ಜಾಲರಿಯ ಮನೆ'ಯೇಕೊ ಬೆಪ್ಪುಬೊಮ್ಮ.

—ಸಿ. ಎಸ್. ಮಲ್ಲಯ್ಯ

ಜಾಲರಿಮನೆ

೧

ರುದ್ರಮ್ಮ

"ರುದ್ರಮ್ಮಾ.......ರುದ್ರಮ್ಮಾ......."

ಹೊರಬಾಗಿಲಿಂದಲೇ ಕೂಗುತ್ತ ಹೊಸ್ತಲೊಳಕ್ಕೆ ಕಾಲಿಟ್ಟ ಬಸವಣ್ಣಪ್ಪ.

"ಯಾರೂ........?"

ಎನ್ನುತ್ತ ಕುಡಿಯುತ್ತಿದ್ದ ಕಾಫಿ ಬಟ್ಟಲನ್ನು ಹಾಗೆಯೇ ಕೈಲಿ ಹಿಡಿದು ರುದ್ರಮ್ಮ ಅಡಿಗೆ ಮನೆಯಿಂದ ನಡುಮನೆಗೆ ಬಂದಳು.

"ಓ, ಬಸಣ್ಣಪ್ಪ! ಬಾಣ್ಣ ಕೂತ್ಕೊ. ಬೋ ಅಪರೂಪ ಆಗೋದಲ್ಲ?"

ಬಸವಣ್ಣಪ್ಪನನ್ನು ಆದರದಿಂದ ಆಹ್ವಾನಿಸಿ ರುದ್ರಮ್ಮ ಬಳಿಯಲ್ಲಿದ್ದ ಕುರ್ಚಿಯೊಂದರ ಮೇಲೆ ತಾನೂ ಕುಳಿತುಕೊಂಡಳು.

"ಏಳಿರ್ನಿಲ್ವಾ ನಗರಕ್ಹೋಯ್ತೀನಿ ಅಂತ? – ನನ್ನ ತಂಗಿ ಮಗಳ ಮದುವೇಗೆ."

ಬಸವಣ್ಣಪ್ಪ ಕುಳಿತ ಬಿರುಸಿಗೆ ಆ ಹಳೆಯ ಸೋಫದ ಸ್ಪ್ರಿಂಗು ಕಿರುಗುಟ್ಟಿತು. ರುದ್ರಮ್ಮ ಅಡಿಗೆಮನೆ ಕಡೆ ಮುಖ ತಿರುವಿ

"ಏ ಗಿರೀ, ಬಸಣ್ಣಪ್ಪನಿಗೆ ಒಂದು ಲೋಟ ಕಾಪಿ ತತ್ತಾರೆ" ಎಂದು ಬಸವಣ್ಣಪ್ಪನ ಕಡೆ ತಿರುಗಿ

"ನಿಜ ನೋಡು. ನಾನು ಮರ್ತೇಬುಟ್ಟಿದ್ದೆ ನೀನು ನಗರಕ್ಹೋಗಿದ್ದಿ ಅನ್ನೋದ್ನ. ಎಲ್ಲೋ ಉಸಾರಿಲ್ವೇನೋ ಅಂತಿದ್ದೆ."

"ಉಸಾರಿಲ್ದೆ ನಂಗೇನು ಬಂದೈತೆ ಧಾಡಿ. ಒಳ್ಳೆ ಗೂಳಿ ಅಂಗಿದ್ನಿ."

ಗಿರಿಜೆ ಓಲಾಡುತ್ತ ಬಂದು ಕಾಫಿ ಬಟ್ಟಲನ್ನು ಬಸವಣ್ಣಪ್ಪನ ಕೈಗೆ ಕೊಟ್ಟಳು. ಅದನ್ನು ತೆಗೆದುಕೊಳ್ಳುತ್ತ ಅವನು ಗಿರಿಜೆಯನ್ನು ಕೇಳಿದ:

"ಏನು ಗಿರೀ, ಚಂದಾಕಿದ್ದೀಯಾ ?"

"ಇಂಗಿವ್ನಣ್ಣ"

ಎಂದವಳೇ ಗಿರಿಜೆ ಅಡಿಗೆಯಮನೆ ಕಡೆ ನಡೆದಳು.

"ಈವತ್ತು ಎಸರಿಗೆ ಬೀನೀಸ್ ಆಕ್ಬಿಡು. ನಂಜ್ಕೋಳಕ್ಕೆ ಅಸಿಚಟ್ನಿ ಅರದ್ಬುಟ್ರಾಯ್ತು, ವಸಿ ಬೆಳ್ಳುಳ್ಳೀನೂ ಆಕಿ"

ರುದ್ರಮ್ಮ ಅವಳ ಕಡೆ ಕೂಗಿ ಹೇಳಿದಳು.

ಬಟ್ಟಲಿನಲ್ಲಿದ್ದ ಕಾಫಿ ಮುಗಿಯಲು ಬಸವಣ್ಣಪ್ಪ ಅದನ್ನು ಸೋಫದ ಬುಡದಲ್ಲಿಟ್ಟ.

ರುದ್ರಮ್ಮ ಅವನನ್ನು ಕೇಳಿದಳು :

"ಏನು, ಮದುವೆ ಚಂದಾಕಿ ನಡೀತಾ ?"

"ಊ್ಞಂ, ನಡೀತು."

"ಅಂದಂಗೆ ನಾನೇಳಿದ ಇಚಾರ ಏನ್ಮಾಡ್ದೆ ?"

"ಅದ್ನೆ ಏಳೋಣಾ ಅಂತ್ಬಂದೆ. ಉಡುಗಿ ಅವ್ವ ಒಪ್ಕೊಂಡವ್ಳೇ ಕಳಿಸಿಕೊಡೋಕೆ."

"ಉಡ್ಗಿ ಎಂಗವ್ಳೆ ?"

"ದುಂಡು ದುಂಡಾಗಿ ಚಂದಾಕೇಸೋ ಅವ್ಳೆ. ಆದರೆ........"

"ಏನ್ ಆದರೆ........?"

"ವಸಿ ಕಪ್ಪು."

"ಅಷ್ಟೇ ತಾನೆ. ಪೌಡರ್ ಬಳದ್ರಾಯ್ತು. ಏನಿದ್ರೂ ನಮ್ದೆಲ್ಲಾ ಕತ್ಲೊತ್ತಿನ ಯಾಪಾರ. ಕೆಂಪು ಕಪ್ಪು ಯಾರು ನೋಡ್ತಾರೆ."

"ಆದರೂ, ಈಗಿನ ಕಾಲದ ಜನಕ್ಕೆ........"

"ನಿಜ. ಥಳಕೂ ಪಳಕು ಇರಬೇಕು."

"ಅದೊಂದೂ ಬರಾಕಿಲ್ಲ ಅದ್ಕೆ. ಅಳ್ಳಿಮುಕ್ಕ."

"ಬುಡು. ಅದೇನು ಪರ್ಮಾದ. ಒಂದೆಳ್ಡು ದಿನ ಎಕ್ಕೊಂಟ್ರೆ ತಾನಾಗೇ ಬತ್ತದೆ. ಈ ಊರಿನ ನೀರ್ಕುಡದ್ರೆ ಜಣ್ಣಾನೂ ಅಂಟ್ಕೊಂತದೆ.

ಕಣ್ಣಿಗೆ ರಂಗಾಗಿರೋ ಸೀರೆ ಉಡಸ್ಬುಟ್ಟು, ಎದೆ ಮುಂದಕ್ಕೆ ಚಾಚ್ಕೊಳ್ಳೋ ಅಂಗೆ ಎತ್ತಿ ಕಟ್ಟಬಿಟ್ರೆ........ಅಂದಂಗೆ ಎದೆ ಎಂಗೈತೆ?"

"ಪರವಾಯಿಲ್ಲ. ಚಂದಾಕೈತೆ."

"ಚಂದಾಕಿ ಅಂದ್ರೆ, ದುಂಡಗೆ ದಪ್ಪವಾಗೈತಾ ?"

"ಐತೆ."

"ಇರೋದು ನೋಡು ಅದರಾಗೇನೆ. ಈ ಪಟ್ಣದ ಮುಕ್ಕಗೋಳು ಅದ್ಕೆ ಬಾಯಿಬಾಯಿ ಬಿಡ್ತವೆ, ಆಳಾದೋವು......."

"ಅಂತೂ ಎಲ್ಲಾ ಗಿಲೀಟ್ನಾಗೇ ಐತೆ ಅನ್ನ."

"ಈಗಿನ ಕಾಲಾನೇ ಅಂಗಾಗೋಗೈತೆ. ಎಲ್ಲಾ ಯಾಪಾರಾನೂ ಗಿಲೀಟು. ಇನ್ನು ನಮ್ದು ಯಾಪಾರ ಕೇಳ್ಬೇಕಾ ? ಜನ ಗಿಲೀಟಿಗೆ ಸರ್ಯಾಗಿ ಒಡೆಯೋ ಅಂಗೆ ನ್ಯಾಯಕ್ಕೆ ಬಗ್ಗೋಕಿಲ್ಲ."

"ಅದು ನಿಜ ಅನ್ನ."

"ಎಲ್ಲಾ ಕೇಳಿ ಮುಖ್ಯವಾದ ಪೈಂಟೇ ಕೇಳೋದು ಬುಟ್ಬುಟ್ನಲ್ಲ"

"ಏನೂ ?"

"ಉಡ್ಗೀಗೆ ವಯಸ್ಸೆಷ್ಟು ?"

"ಅಂತ್ತೊಂಭತ್ತು – ಇಪ್ಪತ್ತು ಇರಬೌದು"

"ಗಂಡ ಅನ್ನ ?"

"ಊಹ್ಞಂ ಅನ್ನ."

"ಯಾಕೆ – ಬುಟ್ಬುಟ್ಟನ್ನ ?"

"ಸಿಪಾಯಿಗೆ ಸೇರ್ತಿನಿ ಅಂತ ಈಗ ಐದು ವರ್ಸಕ್ಕೆ ಇಂದೇನೇ ಮನೆ ಬುಟ್ಟು ಓಂಟೋದೋನು ಪತ್ತೇನೇ ಇಲ್ವಂತೆ !"

"ಸರಿ ಅಂಗಾರೆ. ಯಾವಾಗ ಕರ್ಕೊಂಡು ಬರ್ತೀ ?"

"ಲೆಕ್ಕಾಚಾರ ಎಲ್ಲಾ ಪೈಸಲ್ಮಾಡಿ ಮಾತಾಡಿ ನೀನು ಏಳ್ದಾಗ."

"ಲೆಕ್ಕಾಚಾರ ಏನ್ಮಾಡ್ಬೇಕು, ಏಳ್ಬಡು."

"ನೀನೇನು ಇಷ್ಟು ಅಣ ಅಂತ ಒಟ್ಟಿಗೇ ಕೊಟ್ಬುಡ್ತೀಯೋ, ಇಲ್ಲ ಅವಳ ಗೇಮೆ ಮೇಲೆ ಕೊಡ್ತೀಯೋ ?"

"ಈಗ ನಂತಾವೂ ಅಣ ಇಲ್ಲ–ನಿಂಗೊತ್ತಿರೋ ಅಂಗೆ–ಒಟ್ಟೆ ಕ್ಕೊಡಾಕೆ. ಗೇಮ ಮೇಲೇ ಮಾತಾಡು."

"ನೀನೇ ಏಳು."

"ಅವಳು ದುಡದದ್ರಾಗೆ ರೂಪಾಯಿಗೆ ಅತ್ತಾಣಿ ನಂಗೆ, ಆರಾಣಿ ಅವಳ್ಗೆ. ಊಟ, ತಿಂಡಿ, ಮನೆ ಬಾಡಿಗೆ ಅದೆಲ್ಲಾ ನಾನು ನೋಡ್ಕೋ ಬೇಕು. ಬಟ್ಟೆ-ಬರೆ, ಸೆಂಟು, ಉವ್ವ, ಮದ್ದು-ಗಿದ್ದು ಎಲ್ಲಾ ಆ ಆರಾಣೀಲಿ ಅವಳು ನೋಡ್ಕೋಳ್ಳಿ. ಅದರಾಗೆ ಅವರಮ್ಮನಿಗೂ ಒಸಿ ಕಳಸ್ಕೋಳ್ಳಿ. ನಾನು ಬೇಡಾ ಅನ್ನಾಕಿಲ್ಲ."

"ಸರಿಯೋಯ್ತು. ಮಧ್ಯೆ ನನ್ನೇನು ನಂಜನಗೂಡಿಗೆ ಕಳಿಸಿ ಬಿಡ್ತಿಯಾ ?"

"ನನ್ನ ಬಾಗದಾಗೆ ಒಂದಾಣಿ, ಅವಳ ಬಾಗದಾಗೆ ಒಂದಾಣಿ ನಿಂದು."

"ಅಂದ್ರೆ ?"

"ರೂಪಾಯ್ನಾಗೆ ಒಂಭತ್ತಾಣಿ ನಂಗೆ, ಒಂದಾಣಿ ಅವಳ್ಗೆ ಎಳ್ಡಾಣಿ ನಿಂಗೆ."

"ಅದೆಲ್ಲಾ ಆಗ್ಗೀಗಾಕಿಲ್ಲ. ಅವಳ್ಗೂ ಖರ್ಚೈತೆ ಪಾಪ! ಅವರಪ್ಪ ಅನ್ನೆ, ಒಬ್ಬ ತಮ್ಮ ಅನ್ನೆ. ಅವರ ಜೀವಣಾನೂ ನಡೀಬೇಕು. ಅವಳ್ದೂ ಬಟ್ಟೆಬರೆ ಖರ್ಚೆಲ್ಲಾ ಐತೆ ಅಂತೀಯಾ."

"ಅಂಗಾರೆ ನೀನೇ ಏಳು ಏನ್ಮಾಡ್ಬೇಕು ?"

"ನಂದು ಎಳ್ಡಾಣಿ ಓಗ್ತಾ ಆದ್ನಾಕಾಣೀಲಿ ನಿಂಗೆ ಏಳಾಣೀ ಅವಳಿಗೆ ಏಳಾಣೀ."

"ಬಾಳಾ ಕಮ್ಮಿ ಆಯ್ತು. ನಂಗೂ ಅಪಾರ ಖರ್ಚೈತೆ. ಮನೆ ಬಾಡಿಗೆ, ಊಟ ಉಪಚಾರ, ಆಳು,........ಪೋಲೀಸ್ನೋರ್ಗೆ ಬೇರೆ ಕೊಡ ಬೇಕು. ಇಲ್ದಿದ್ರೆ ಅವರು ನನ್ನು ಜೀವಸಹಿತ ಬುಟ್ಟಾರ."

"ಅದು ಎಂಗೋ. ನಿನ್ನೇಳಾಣೀಲಿ ಅದ್ನೆಲ್ಲಾ ನೋಡ್ಕೋಬೇಕು. ಅವಳೊಬ್ಬಳ್ಗೇ ಏನು ನೀನು ಆ ಖರ್ಚೆನ್ನೆಲ್ಲಾ ಮಾಡಾಕಿಲ್ವಲ್ಲಾ. ಎಲ್ಲಾ

ಒಟ್ಟಾರೆ ನಡಕೊಂಡೋಯ್ತದೆ. ಅವಳ್ಗೂ ಕಾಸು ಸಿಕ್ಕಿ ಆಸೆ ಉಟ್ಟದ್ರೆ ತಾನೇ ಈ ಕಸುಬಿನಾಗೆ ಉಳಿಯೋದು."

"ಅಂಗೇ ಆಗ್ಲಿ. ನಾಳೆ ಓಗಿ ಕರ್ಕೊಂಡ್ಬಂದ್ಬುಡು. ಅವರವ್ಮನೂ ಜತೆಯಾಗೇ ಬರ್ಲಿ. ಎಲ್ಲಾ ಮೊಖಾಬಿಲೆ ಮಾತಾಡಿ ಓಗ್ಲಿ."

"ಆಗೆ ಮಾಡ್ತೀನಿ. ಅಂದಾಗೆ ಇನ್ನೊಂದು ಇಚಾರ ಏಳೋದು ಮರ್ತುಬುಡ್ದಿದ್ನಲ್ಲ."

"ಏನಪ್ಪ ಅಂತ ಇಚಾರ?"

"ಇಲ್ಲಿಗೆ ಬತ್ತಿದ್ದಂಗೆ ಅಣ್ಣಮ್ಮನ ಗುಡಿ ತಾವ ಜೀವಣ್ಣರಾಯ ಸಿಕ್ಕಿದ್ದ. ಚಂಜೆ ಏಳು ಗಂಟೇಗೆ ಬತ್ತಾನಂತೆ. ಏಳ್ಬುಡು ರುದ್ರಮ್ಮನಿಗೆ ಅಂತ ಏಳ್ದ."

"ಅವನೊಬ್ಬ ಇಚಿತ್ರದ ಮನ್ಸಾ. ಈವತ್ತು ಮೂಸಿದ್ದು ನಾಳೆ ಬ್ಯಾಡಾ ಅಂತಾನೆ. ದಿನಾ ಒಸ ಮಾಲು ಅಂದ್ರೆ ಎಲ್ಲಿಂದ ತರ್ಲಿ."

"ಒಳ್ಳೆ ಖುಸಿ ಮನ್ಸಾ. ಧಾರಾಳವಾಗಿ ಖರ್ಚು ಮಾಡ್ತಾನೆ."

"ಅದ್ಕೇ ಅವನ್ನ ಬಿಡಲಾರ್ದೆ ನಾನೂ ಒದ್ದಾಡ್ತಿರೋದು."

"ಯಾಕೆ, ನಮ್ಮ ಪುಟ್ಟತಾಯಿ ಅವಳಲ್ಲಾ"

"ಅವಳ್ನ ಈಗಾಗ್ಲೇ ಮೂರ್ದಪ ಮೂಸ್ನೋಡಿ ಮೂಗು ಸಿಂಡರಿಸಿ ಕೊಂಡು ಹ್ವಾದ"

"ಜಾನಕೀನ ಕರಸು."

"ಅವಳ್ನೂ ನೋಡವ್ನೆ."

"ಸುಬ್ಬೂಬಾಯಿ, ಅನಸೂಯ, ಮಳವಳ್ಳಿ ಮಾಲತಿ, ಆಸನದ ರಂಗೀ ಮಗಳು ಕಾಂತ ಅವರ್ನ ಯಾರ್ನಾರೂ ನೋಡು."

"ಅವರ್ದೆಲ್ಲಾ ಕತೆ ಮುಗಿದು ಓಗೈತೆ."

"ಅಂದಂಗೆ ಆ ಕುಂದಾಪುರದ ಕಮ್ಲಿ ಜೊತೇಲಿ ಒಂದಿನ ಇಲ್ಲಿಗೆ ಬಂದಿದ್ಲಲ್ಲ – ಅವಳ ಎಸರು ಎಂಥಾದ್ದೊ ಚಂದಾಕೈತಲ್ಲಪ್ಪಾ........"

"ಯಾರು ನೀನು ಏಳೋದು."

"ಅದೇ ನಮ್ಮ ಕಮ್ಲಿ ಅನ್ನಲ್ಲ."

"ಊ್ಣಂ"

"ಅನ್ನೀಗ ತಿಂಗಳ ಕೆಳಗೆ ಒಬ್ಬ ಹುಡುಗನ್ನೂ ಒಬ್ಬ ಹುಡುಗೀನೂ ಸಂಗಾಟ ಕರ್ಕೊಂಡು ಬಂದಿರ್ನಿಲ್ವಾ. ಮಾಡೀ ಮೇಲಿನ ಏಳ್ನೇ ನಂಬರು ರೂಮು ನೀನು ಬಿಟ್ಕೊಟ್ಟಿರ್ನಿಲ್ವಾ?"

"ಓ, ಅವಳ್ನಾ ನೀನು ಏಳೋದು. ಆ ಕಾಲೇಜು ಉಡ್ಗಿ."

"ಔದು. ಅವಳ ಎಸರೇನೋ ಒಸ ತರಾ ಐತೆ."

"ಆದೇ ಆ ಅಸರು ಸಿಲ್ಕಿನ ಸೀರೆ ಉಟ್ಕೊಂಡು ಬಂದಿದ್ಲಲ್ಲಾ–ಉದ್ದೀನೆ ಜಡೆ ಬುಟ್ಕೊಂಡು........"

"ಊ್ಞಂ ಊ್ಞಂ........ಅವಳೇ........"

"ಅವಳೆಸ್ರು ಏಳ್ತೀನ್ತಾಳು........ನಿಮ್ಮಿ ಅಂತ."

"ನಿಮ್ಮಿ ನಿಮ್ಮಿ. ಔದು. ಅವಳ್ನ ನೋಡದ್ನಾ ನಮ್ಮ ಜೀವಣ್ಣ?"

"ಇನ್ನೂ ಇಲ್ಲ."

"ಅವಳ್ನ ಕರಸ್ಬುಡು."

"ಏ, ಬುಡು. ಅವಳು ಒಳ್ಳೆ ದೊಡ್ಮನಸ್ರ ಮಗಳಿದ್ದಂಗವ್ಳೆ. ಎಂದೋ ಏನೋ ವಸಿ ಘಾಸಿಬಿದ್ದು ಇಲ್ಲಿಗೆ ಬಂದಿದ್ಲು ಅಂದ್ರೆ ಇಂಗೆ ಕಸುಬಿನಗೆ ಒಪ್ಕೊಂಡಾಳ!"

"ಪರ್ಯತ್ನ ಮಾಡಬೋದಲ್ಲ."

"ಅಂಗೆ ಮಾಡೋಕೋಗಿ ಮೂತಿ ತಿವಿಸ್ಕೊಂಡ್ರೆ ಸುಮ್ಕೆ ಅವಮಾನ."

"ಈಗ ನೀನು ಮಾಡ್ತಿರೋದು ಬಲೇ ಮಾನದ ಕೆಲಸ ಅಲ್ವಾ!"

"ಆದ್ರೂ........"

"ಏನು ಆದ್ರೂ........?"

"ಮಾನ ಬಿಟ್ಟೋಳು ಅಂತ ಊರ್ನಾಗೆಲ್ಲಾ ಸೀರೆ ಬಿಚ್ಕೊಂಡು ಕುಣೀತಿವ್ನಾ?"

"ಅದು ಬೇರೆ ಇಚಾರ."

"ಬೇರೇನೂ ಅಲ್ಲ ಏನೂ ಅಲ್ಲ. ನಮ್ಮ ಮರ್ವಾದೇನೂ ನಮಗೆ ಇದ್ದೇ ಇರ್ತದೆ."

"ನೋಡು ರುಪ್ರಕ್ಕ, ಇಷ್ಟು ವರ್ಷ ನೀನು ಕಸುಬು ನಡ್ಸೂ ನಿಂಗೆ

ಇವೇಕ ಬರ್ನಿಲ್ವಲ್ಲಾ. ನಿನ್ನ ತಲೆಯಾಗೆ ಏನು ಜೇಡಿಮಣ್ಣು ತುಂಬೈತಾ ಅಂತ !"

"ಅಂಗಂದ್ರೆ ?"

"ಅಂಗಂದ್ರೆ ಇಂಗೆ. ಆ ಉಡ್ಗಿ ದೊಡ್ಮನಸ್ರ ಮಗಳು ಇರ್ಬೌದು. ಆವರೆ ಮಾನವಂತೆ ಅಂತ ಏಳಾಕೆ ಬರಾಕಿಲ್ಲ. ಅಂಗೇನಾರ ಅವ್ಳು ಮಾನ ಮರ್ವಾದೆ ಇದ್ದೋಳಾಗಿದ್ರೆ, ಕವ್ತಿ ಸಂಗಾಟ ಯಾವೋನ್ನಾರ ಕಟ್ಕೊಂಡು ಇಲ್ಲೀಗಂಟ ಬತ್ತಿದ್ಲ? ಇನ್ನೂ ಮದ್ವೆಗಿದ್ವೆ ಇಲ್ಲ ಅಂತ ಕಾಣ್ತದೆ. ಪರಾಯಕ್ಕೆ ಬಂದವ್ಳೆ. ಮನೇಲೂ ಎಲ್ಲೋ ಒಳ್ಳೇ ಪೊಗದಸ್ತಾಗಿ ಊಟ ಬೀಳ್ತದೆ. ಅದರಿಂದ ಮಸ್ತೀನೂ ಉಂಟಾಗೈತೆ. ಅಪರಿವರ ಸಂಗಾಟ ಆದೀ ಬೀದೀ ಬಿದ್ರೆ ಪಬ್ಲಿಕ್ಕಾಗೋಗಿ ಮನೇಗಂಟ ಎಲ್ಲಿ ಸಮಾಚಾರ ಮುಟ್ಟೈತೈತೋ ಅಂತ ಇಲ್ಲಿಗೆ ಬಂದಿದ್ಲು-ಯಾರ್ರೂ ಪತ್ತೇಗೆ ಬರಾಕಿಲ್ಲಾ ಅಂತ."

"ಏನೋ ಅಂತಿದ್ದೆ ಬಸಣ್ಣಪ್ಪ, ನಿನ್ಮಾತ್ಲೇನೂ ಚುರಕಾಗೈತೆ. ಅಂಗಾರೆ ನಾನು ಈಗ್ಲೇ ಕವ್ತಿ ಮನೆಗೆ ಓಗಿ ಅವಳ ಇಚಾರಾನೆಲ್ಲಾ ತಿಳ್ಕೊಂತೀನಿ. ಗಿಟ್ಬೋ ಅಂಗಿದ್ರೆ ಪರ್ಯತ್ನಾನೂ ಮಾಡ್ತೀನಿ."

"ಅಂಗ್ಮಾಡು. ಇನ್ನು ನಾನೂ ಓಯ್ತಿನಿ"

ಎಂದು ಬಸವಣ್ಣಪ್ಪ ಕುಳಿತ ಸ್ಥಳದಿಂದ ಎದ್ದ.

"ಯಾಕೆ ಊಟ ಮಾಡ್ಕೊಂಡೋದ್ರಾಯ್ತು." ರುದ್ರಮ್ಮ ಆಸ್ಥೆಯಿಂದ ಹೇಳಿದಳು.

"ಇಲ್ಲ. ಈವತ್ತು ಸಂಕ್ರಪ್ಪನ ಮನೇಲಿ ಊಟಕ್ಕೆ ಕರೆದವ್ರೆ."

"ಸರಿ ಅಂಗಾರೆ. ಮತ್ತೆ ಯಾವಾಗ ಬತ್ತೀ"

"ನಾಳೆ ಅಳ್ಳೀಗೋಗಿ ಉಡ್ಗೀನೂ ಕರ್ಕೊಂಡು ನಾಡದ್ದು ಒಟ್ಟಿಗೆ ಬತ್ತೀನಿ."

"ಅಂಗಾರೆ ನಾಡದ್ದು ಖಂಡಿತ ತಾನೆ."

"ಔಮ. ಯಾಪಾರ ಕುದುರ್ದಾಗೇ ಮುಗಸ್ಬುಡೋಣ."

ಬಸವಣ್ಣಪ್ಪ ಹೊರಹೊರಟ. ರುದ್ರಮ್ಮ ನೀರು ಮನೆಗೆ ಹೋಗಿ ಮುಖ ತೊಳೆದುಕೊಂಡು ಬಂದಳು. ಮುಖದ ತುಂಬ ವೀಭೂತಿ ಪಟ್ಟೆ

ಬಳಿದು, ಅಗಲವಾಗಿ ಕುಂಕುಮ ಹಚ್ಚಿ, ಬೂಟಾ ಕಲಾಬತ್ತಿನ ರೋಜಾ ಬಣ್ಣದ ಸಿಲ್ಕು ಸೀರೆ ಉಟ್ಟು, ಮೈತುಂಬ ಮಾಮೂಲು ಶಾಲು ಹೊದೆದು, ಕಾಲಲ್ಲಿ ಚಪ್ಪಲಿಗಳನ್ನು ಮೆಟ್ಟಿಕೊಂಡು ಕುಂದಾಪುರದ ಕಮ್ತಿ ಮನೆಗೆ ಹೊರಡಲು ಅನುವಾದಳು.

೨

ರುದ್ರಮ್ಮನ ಹುಟ್ಟೂರು ರಾಮನಗರ. ಅವಳ ತಂದೆ ಶಾಂತವೀರಯ್ಯ ನಿಷ್ಠಾವಂತ ಶಿವಾಚಾರ ಮನೆತನದವನು. ಅವನ ಪೂರ್ವಿಕರು ಬಹಳ ಕಾಲ ಭೈರವೇಶ್ವರ ದೇವಾಲಯದ ತಮ್ಮಡಿಗಳಾಗಿದ್ದರು. ಆದರೆ ಅವನ ತಂದೆಯ ಕಾಲದಲ್ಲಿ ತಮ್ಮಡಿತನ ಕಾರಣಾಂತರಗಳಿಂದ ಅವರ ಕೈಬಿಟ್ಟಿತು. ಆದರಿಂದಾಗಿ ಶಾಂತವೀರಯ್ಯ ತನ್ನ ಪೂರ್ವಜರು ಆರ್ಜಿಸಿಬಿಟ್ಟಿದ್ದ ಮೂರು ಎಕರೆ ಹೊಲದಲ್ಲಿ ಜೀವನ ತಳ್ಳಬೇಕಾಗಿತ್ತು.

ಶಾಂತವೀರಯ್ಯನಿಗೆ ಕಾಡುವ ಸಂಸಾರವಿರಲಿಲ್ಲ. ಇದ್ದವಳು ಒಬ್ಬಳೇ ಮಗಳು ರುದ್ರಮ್ಮ. ಅವನ ಹೆಂಡತಿ ಪುಟ್ಟಮ್ಮ ಕೈಲಾಸ ಸೇರಿಕೊಂಡಾಗ ಶಾಂತವೀರಯ್ಯನಿಗೆ ಹರೆಯ ತೀರಿತ್ತು. ಮತ್ತೆ ಮದುವೆಯಾಗುವ ಮನಸ್ಸು ಅವನಿಗೆ ಬರಲಿಲ್ಲ. ಅವರಿವರು ಬಂದು ಪ್ರಸ್ತಾಪ ಮಾಡಿದಾಗ 'ಇಲ್ಲದ ಕಾಷ್ಟವ್ಯಸನ ಯಾಕೆ ಕಟ್ಟಿಕೊಳ್ಳಲಿ, ನಮ್ಮ ರುದ್ರಿ ಮದುವೆ ಒಂದು ಮಾಡಿಬಿಟ್ಟು ಹಾಯಂತ ಆ ಹರನ ಮರೆ ಹೊಕ್ಕಿಡ್ತೇನೆ' ಎಂದುಬಿಟ್ಟ.

ತಾಯಿ ಸಾಯುವಾಗ ರುದ್ರಮ್ಮನಿಗೆ ಎಂಟು ವರ್ಷ ವಯಸ್ಸು. ಅಲ್ಲಿಂದ ಮುಂದೆ ಅವಳು ತಂದೆಯ ಪ್ರೀತಿವಾತ್ಸಲ್ಯದಲ್ಲಿ ಬೆಳೆದಳು. ಶಾಂತವೀರಯ್ಯ ಅವಳಿಗೆ ಯಾವುದರಲ್ಲಿ ಏನೂ ಕಡಿಮೆಮಾಡಿರಲಿಲ್ಲ. ಇರುವವಳು ಒಬ್ಬ ಮಗಳು, ಅವಳು ಸುಖವಾಗಿದ್ದರೆ ಸಾಕು. ಒಳ್ಳೆಯ ಕಡೆ ನೋಡಿ ಮದುವೆ ಮಾಡಿ ಗಂಡನ ಮನೆ ಸೇರಿಸಿಬಿಟ್ಟರೆ ಅಲ್ಲಿಗೆ ನನ್ನ ಜವಾಬ್ದಾರಿ ಮುಗಿಯಿತು ಎಂದು ಯೋಚಿಸುತ್ತಿದ್ದ ಶಾಂತವೀರಯ್ಯ.

ಒನ್ಮೆ ಭರಮಸಾಗರದಿಂದ ಶಿವಬಸಪ್ಪ ಯಾವುದೋ ಸ್ವಂತ ಕೆಲಸ ಕ್ಕಾಗಿ ಶಾಂತವೀರಯ್ಯನನ್ನು ಕಾಣಲು ರಾಮನಗರಕ್ಕೆ ಬಂದಿದ್ದ. ಶಿವಬಸಪ್ಪನಿಗೂ ಶಾಂತವೀರಯ್ಯನಿಗೂ ಬಹಳ ಹಿಂದಿನ ಸ್ನೇಹ. ಶಾಂತವೀರಯ್ಯನ ಹೆಂಡತಿ ಪುಟ್ಟಮ್ಮ ಬದುಕಿದ್ದಾಗ ಶಿವಬಸಪ್ಪ

ಶಾಂತವೀರಯ್ಯ ಇಬ್ಬರೂ ಸೇರಿ ಸಂತೆವ್ಯಾಪಾರ ಮಾಡುತ್ತಿದ್ದರು. ತೆಂಗಿನಕಾಯಿ, ಕಡಲೆಪುರಿ, ಬತಾಸು, ಬಾಳೆಹಣ್ಣು, ಮಾವಿನಹಣ್ಣುಗಳೇ ಅವರ ವ್ಯಾಪಾರದ ಸರಕು. ಅನಾನುಕೂಲಗಳ ದೆಸೆಯಿಂದ ಈಗ ವ್ಯಾಪಾರ ಬಿಟ್ಟುಬಿಟ್ಟಿದ್ದರೂ ಸ್ನೇಹಕ್ಕೇನೂ ಚ್ಯುತಿ ಬಂದಿರಲಿಲ್ಲ.

ಮಾತಿಗೆ ಮಾತು ಬಂದಾಗ ಶಿವಬಸಪ್ಪ

"ಮಗಳ ಮದುವೇಗೆ ಏನಾರ ಏರ್ಪಾಟು ಮಾಡಿದೀಯಾ?" ಎಂದು ಕೇಳಿದ.

"ಸರಿಯಾದ ಕಡೆ ಇಂದ ಯಾವುದಾನಾ ಗಂಡು ಬರಬೇಕಲ್ಲಪ್ಪ" ಶಾಂತವೀರಯ್ಯ ಉತ್ತರಿಸಿದ.

"ಗಂಡು ಬರ್ಲಿ ಅಂತ ಕಾಯ್ಕೊಂಡು ಕುಂತ್ಕೊಂಡ್ರೆ ಆಯ್ತದೇನಪ್ಪ. ನನ್ಮ ವಯಸ್ಸೂ ಕಳೀತಾಅದೆ. ಯಾವಾಗ್ಲೋ ಏನೋ ಸಿವನಪ್ಪಣೆ. ಅಷ್ಟರಾಗೆ ನಾವೇ ಕಷ್ಟಬಿದ್ದು ಒಂದು ಕಡೆ ಸೇರಿಸ್ದೇ ತಾಸ್ತಾರ ಮಾಡಿದರೆ ಏನಪ್ಪ ಗತಿ."

ಆ ಮಾತು ಕೇಳಿ ಶಾಂತವೀರಯ್ಯನಿಗೆ ಕ್ಷಣಕಾಲ ಹೃದಯ ಝಲ್ಲೆಂದಿತು. 'ಮನುಷ್ಯಜೀವ ಶಾಶ್ವತವಲ್ಲ. ಅದರಲ್ಲೂ ತನ್ನಂಥ ವಯಸ್ಸು ದಾಟಿದವನು ಆಕಸ್ಮಾತ್ ಕಣ್ಣುಮುಚ್ಚಿದರೆ ಮಗಳ ಗತಿಯೇನು? ಆದಷ್ಟು ಜಾಗ್ರತೆ ರುದ್ರಿ ಮದುವೆ ಮಾಡಿಬಿಡಬೇಕು' ಎಂದು ಅವನು ಯೋಚಿಸಿದ.

"ನಿಜ. ನೀನು ಏಳೋ ಮಾತು. ಯಾವುದಾನ ಒಳ್ಳೇ ಜಾಗ ಇದ್ರೆ ಏಳ್ತೀಯಾ?"

"ಆಗ್ಲಿ ನಮ್ಮೂರು ಸಾವ್ಕಾರ್ರು ನಂಜಪ್ಪನೋರು ಅವ್ರಲ್ಲ, ಅವರ ಅಣ್ಣನ ಮಗ ಬಸವರಾಜು ಅಂತ ಅವ್ನೆ. ಅವನೂ ಅಲ್ಲಿ ಇಲ್ಲಿ ಎಣ್ಣು ತಡಕ್ತ ಅವ್ರೆ. ನಾನೂ ಓಗಿ ಒಂದು ಮಾತು ಆಕಿ ನೋಡ್ತೀನಿ."

"ಸಾವ್ಕಾರ್ರು ಅಂತೀಯ ನಮ್ಮಂತ ಬಡವರ ಮನೆ ಉಡುಗೀನ ಮದುವೆ ಆಯ್ತಾರ."

"ಸಿವನಿಚ್ಚೆ ಇದ್ರೆ ಯಾಕಾಗ್ಬಾರ್ದು."

ಶಿವನಿಚ್ಛೆಯಂತೆ ಬಸವರಾಜಪ್ಪನಿಗೂ ರುದ್ರಮ್ಮನಿಗೂ ಮದುವೆ ಆಯಿತು. ಶಾಂತವೀರಯ್ಯ ಮನೆ ಜಮೀನುಗಳನ್ನು ಸಾಹುಕಾರ ಚನ್ನಬಸಪ್ಪನಿಗೆ ಅಡಮಾನ ಹಾಕಿ ಹಣ ಒದಗಿಸಿಕೊಂಡು ಬಹಳ ಅದ್ದೂರಿಯಿಂದಲೇ ಮದುವೆ ಮಾಡಿದ. 'ಮಗಳು ಸಾಹುಕಾರರ ಮನೆ ಸೇರಿದಳು. ಇನ್ನೇನು ಯಾವ ಯೋಚನೆಯೂ ಇಲ್ಲದೆ ಸುಖವಾಗಿರ್ತಾಳೆ. ಈ ಅಂಗೈಯ್ಯಗಲ ಜಮೀನು ಮುಂಗೈಯ್ಯಗಲ ಮನೆ ಕಟ್ಕೊಂಡು ಅವಳಿಗೇನಾಗಬೇಕಾಗಿದೆ. ತಾನು ಬದುಕಿರೋವರೆಗೂ ಅದರಿಂದ ತನ್ನ ಜೀವನ ನಡೆದರೆ ಸಾಕು. ಆಮೇಲೆ ಅದು ಸಾಲ – ಬಡ್ಡಿಗಳಿಗೆ ಸಾಹುಕಾರನಿಗೆ ಸೇರ್ಕೊಂಡ್ರೆ ಸೇರ್ಕೊಳ್ಳಿ' ಎಂದು ಶಾಂತವೀರಯ್ಯ ಯೋಚಿಸಿದ. ಅದೇ ಚನ್ನಬಸಪ್ಪನ ಮನಸ್ಸಿನೊಳಗಿನ ಅಭಿಲಾಷೆಯೂ ಆಗಿತ್ತು. 'ಎಷ್ಟೇ ಆದರೂ ಮುದುಕ. ಎಷ್ಟು ದಿನ ಇದ್ದಾನು. ಅಬ್ಬಬ್ಬಾ ಅಂದ್ರೆ ಇನ್ನು ಒಂದೆರಡು ವರ್ಷ ಇದ್ದರೆ ಹೆಚ್ಚು. ಅಲ್ಲಿಯವರೆಗೂ ಅವನೇ ಅನುಭವಿಸಿಕೊಂಡಿರ್ಲಿ. ಆಮೇಲೆ ಸಾಲ ತೀರಿಸಿ ಅದನ್ನ ಬಿಡಿಸಿಕೊಳ್ಳೋರು ತಾನೆ ಯಾರಿರ್ತಾರೆ. ರುದ್ರಮ್ಮನ ಕೈಹಿಡಿದಾತ ಬೇಕಾದಷ್ಟು ಸ್ಥಿತಿವಂತ. ಈ ಟೋಟಗಲ ಜಮೀನು, ಮನೆ ಮೇಲೆ ಅವನಿಗೇನು ಲಕ್ಷ್ಯ ಬಂದಾತು. ಹೀಗಾಗಿ ಅದೆಲ್ಲಾ ಅರ್ಥ ಜೆಲೀಗೆ ತನಗೆ ದಕ್ಕಿದ ಹಾಗಾಗುತ್ತೆ' ಎಂದು ಅವನು ಲೆಕ್ಕಾಚಾರ ಹಾಕಿದ್ದ.

ಚನ್ನಬಸಪ್ಪನ ಲೆಕ್ಕಾಚಾರ ಸುಳ್ಳಾಗಲಿಲ್ಲ. ಅವನು ಯೋಚಿಸಿದಷ್ಟು ದಿನವೂ ಕಾಯಬೇಕಾಗಲಿಲ್ಲ. ರುದ್ರಮ್ಮನಿಗೆ ಮದುವೆಯಾದ ಆರು ತಿಂಗಳಿಗೆ ಮುದುಕ ಶಾಂತವೀರಯ್ಯ ಶಿವಪಾದ ಸೇರಿದ.

ರುದ್ರಮ್ಮ ಗಂಡನ ಮನೆ ಸೇರುವ ಮುನ್ನ ಮನಸ್ಸಿನಲ್ಲಿ ಏನೇನೋ ಕನಸಿನ ಮನೆ ಕಟ್ಟಿದ್ದಳು. ಗಂಡನ ಮನೆ ಹಾಗಿರುತ್ತೆ, ಹೀಗಿರುತ್ತೆ; ಆ ಸುಖ, ಈ ಸುಖ ಎಂದು ಅದೆಷ್ಟೋ ಕಲ್ಪನೆಯ ಸುಖ ಕಂಡಿದ್ದಳು. ಸಾಹುಕಾರರ ಮನೆಯ ಸೊಸೆ ಎಂದರೆ ತಾನೆಷ್ಟು ಗೌರವದಿಂದ ಬಾಳಬಹುದು ಎಂದುಕೊಂಡಿದ್ದಳು.

ಆದರೆ ಅವಳ ಕನಸಿನ ಮನೆ ಕನಸಾಗಿಯೇ ಉಳಿಯಿತು. ಕಲ್ಪ

ನೆಯ ಸುಖಸ್ವಪ್ನ ಕೇವಲ ಕಲ್ಪನೆಯೇ ಆಗಿತ್ತು. ಮಾವನ ಮನೆಯಲ್ಲಿ ಅವಳ ಬಾಳು ಹತ್ತರಲ್ಲಿ ಹನ್ನೊಂದು ಎಂಬಂತಾಗಿತ್ತು.

ಸುತ್ತಲ ಹತ್ತಾರು ಗ್ರಾಮಗಳ ಭೂಮಿ ಸಾಹುಕಾರ್ ನಂಜಪ್ಪನವರಿಗೆ ಸೇರಿತ್ತು. ಸಾವಿರಾರು ಎಕರೆ ಜಮೀನಿನ ಒಡೆತನ, ಸಾಲದುದಕ್ಕೆ ನಾಲ್ಕು ಬಸ್ಸು ಲೈನುಗಳು, ಚನ್ನಪಟ್ಟಣದಿಂದ ಬೆಂಗಳೂರು; ಮದ್ದೂರು ಮಾರ್ಗವಾಗಿ ಕುಣಿಗಲು; ಮಂಡ್ಯ ಮಾರ್ಗವಾಗಿ ತಿರಮಕೂಡಲು ನರಸೀಪುರ; ರಾಮನಗರ ಮಾರ್ಗವಾಗಿ ಕಾನಕಾನಹಳ್ಳಿಗೆ ಅವರ ಬಸ್ಸುಗಳು ಓಡಿಯಾಡುತ್ತಿದ್ದುವು. ಅಲ್ಲದೆ ಸುತ್ತಲ ಪ್ರಾಂತ್ಯದಲ್ಲಿ ಬೆಳೆದ ದಿನಸಿಗಳ ಒಟ್ಟು ವ್ಯಾಪಾರ ಮತ್ತು ಲೇವಾದೇವಿಯಿಂದಲೂ ಅವರು ವಿಪುಲ ಧನ ಗಳಿಸುತ್ತಿದ್ದರು. ಅವರ ಸಾಹುಕಾರಿಕೆ ದಿನದಿನಕ್ಕೆ ಬೆಳೆಯುತ್ತ ಮುಟ್ಟಿದ್ದೆಲ್ಲಾ ಚಿನ್ನವಾಗುತ್ತಿತ್ತು. ಮನೆಯಲ್ಲಿ ಲಕ್ಷ್ಮಿ ತಾಂಡವವಾಡುತ್ತಿದ್ದಳು.

ನಂಜಪ್ಪನವರ ಹೆಂಡತಿ ಶಾಂತಮ್ಮ ಗಂಡನ ಕೂಡ ಸಂಸಾರ ಮಾಡಲಾರಂಭಿಸಿ ಇಪ್ಪತ್ತು ವರ್ಷಗಳು ಸಂದಿದ್ದು ಆರು ಮಕ್ಕಳ ತಾಯಾಗಿದ್ದರೂ ಗಂಡನ ಎದುರು ನಿಂತು ಎಂದೂ ಮಾತನಾಡಿದವಳಲ್ಲ. ಅವನ ರೀತಿನೀತಿಗಳನ್ನು ಪ್ರಶ್ನಿಸಿದವಳಲ್ಲ. ಹಾಗೆ ಮಾಡಲು ಅವಳಿಗೆ ಎದೆಗಾರಿಕೆಯೂ ಇರಲಿಲ್ಲ. ತನ್ನ ಗಂಡನಿಗೆ ಬೇಕೆನಿಸಿದಾಗ ಅವನ ಭೋಗದ ವಸ್ತುವಾಗಿ, ಮನೆಯೊಳಗಣ ಒಂದು ಮಾನವಯಂತ್ರವಾಗಿ ಅವಳು ತನ್ನ ಬಾಳು ಸಾಗಿಸುತ್ತಿದ್ದಳು. ಅದರಲ್ಲಿ ಅವಳಿಗೆ ಯಾವ ಉತ್ಸಾಹವಾಗಲಿ ನಿರುತ್ಸಾಹವಾಗಲಿ ಇರದಿದ್ದರೂ 'ಅದೇ ಬಾಳು' ಎಂದು ಅವಳು ಬಗೆದಂತಿತ್ತು.

ಇನ್ನು ನಂಜಪ್ಪನವರಾದರೊ ಹಲವಾರು 'ಸಭ್ಯ' ಜನರ ಕೂಡ ಓಡಿಯಾಡಬೇಕಾಗಿದ್ದವರು! 'ಈಗಿನ ಕಾಲದ' ವ್ಯವಹಾರಗಳಲ್ಲಿ ಕೈಹಾಕಿದ್ದವರು! ಜತೆಗೆ ಸಾಹುಕಾರಿಕೆಯ ಅಮಲು ಬೇರೆ! ಹೀಗಾಗಿ ಕೆಲವು ದುಷ್ಟ ಹವ್ಯಾಸಗಳನ್ನು ಅವರು ಅಂಟಿಸಿಕೊಂಡಿದ್ದುದೇನು ಹೆಚ್ಚಲ್ಲ.

ನಂಜಪ್ಪನವರಿಗೆ ಕುಡಿತ ಹಾದರಗಳೆಂದರೆ ಪಂಚಪ್ರಾಣ: 'ಕಣ್ಣಿಗೆ

ಬೇಕಾದ ಹೆಣ್ಣುಗಳನ್ನು ಒದಗಿಸಿ ಕೊಡುವುದಕ್ಕೇ ಹಲವು 'ಆಪ್ತ' ಮಿತ್ರರನ್ನು ನಿಯೋಜಿಸಿಕೊಂಡಿದ್ದರು. ಹಳ್ಳಿಯಲ್ಲೇ ಇಬ್ಬರು ವೇಶ್ಯೆಯರನ್ನು ಖಾಯಮ್ಮಾಗಿ ಇಟ್ಟುಕೊಂಡಿದ್ದರು. ಅವರಿಗೆ ಪ್ರತ್ಯೇಕವಾದ ಮನೆಗಳನ್ನೂ ಕಟ್ಟಿಸಿಕೊಟ್ಟು ಅವರ ಜೀವನವನ್ನೂ ತಾವೇ ನಡೆಸುತ್ತಿದ್ದರು. ಒಂದು ಕಾಲವಲ್ಲಿ ಒಬ್ಬ ಸಾಹುಕಾರನ ಸಾಹುಕಾರಿಕೆಯನ್ನು ಜನ ಅವನು ಇಟ್ಟುಕೊಂಡ ವೇಶ್ಯೆಯರ ಸಂಖ್ಯೆಯ ಮೇಲೆ ಅಳೆಯುತ್ತಿದ್ದರಂತೆ! ನಂಜಪ್ಪನವರು ತಮ್ಮ ಸಾಹುಕಾರಿಕೆಯನ್ನು ಪ್ರದರ್ಶಿಸಲು ಆ ಕಾಲದ ಸಂಪ್ರದಾಯವನ್ನು ಅನುಸರಿಸುತ್ತಿದ್ದರು.

ಬಸವರಾಜು ತನ್ನ ಚಿಕ್ಕಪ್ಪನಿಗೆ ಯಾವುದರಲ್ಲಿ ಏನೂ ಕಡಿಮೆಯಿರಲಿಲ್ಲ. ಒಂದು ವಿಧದಲ್ಲಿ ಅವನು ತನ್ನ ಚಿಕ್ಕಪ್ಪನಿಗೂ ಒಂದು ಕೈ ಮೇಲಾಗಿದ್ದನೆನ್ನಬಹುದು. ಕುಡಿತ ಹಾದರದ ಜೊತೆಗೆ ಕುದುರೆ ಜೂಜಿನ ಷೋಕಿಯೂ ಅವನಲ್ಲಿ ಸೇರಿಕೊಂಡಿತ್ತು.

ತಂದೆ ಸಾಯುವಾಗ ಬಸವರಾಜುವಿಗೆ ಕೇವಲ ಆರು ವರ್ಷ ವಯಸ್ಸು. ತಾಯಿ ಅವನನ್ನು ಹೆತ್ತಾಗಲೇ ಕಣ್ಣುಮುಚ್ಚಿಕೊಂಡಿದ್ದಳು. ಆದರಿಂದಾಗಿ ಅವನು ತನ್ನ ಚಿಕ್ಕಪ್ಪ ನಂಜಪ್ಪನವರ ಪೋಷಣೆಯಲ್ಲಿಯೇ ಬೆಳೆಯಬೇಕಾಯಿತು.

ನಂಜಪ್ಪನವರಾದರೂ ತಮ್ಮ ಅಣ್ಣನ ಮಗನನ್ನು ತಬ್ಬಲಿ ಮಗುವೆಂದು ಮಮತೆಯಿಂದಲೇ ಸಾಕಿದ್ದರು. ಅವರಲ್ಲಿ ಮಾನವಸಹಜವೆನಿಸಿದ ಹಲವು ದುಷ್ಟಗುಣಗಳಿದ್ದುವಾದರೂ ಅನ್ಯಾಯಚಿಂತನೆಯಂತಹ ದುಷ್ಟಗುಣವಿರಲಿಲ್ಲ. ತಮ್ಮ ಅಪಾರವಾದ ಆಸ್ತಿಗೆ ಏಕಮಾತ್ರ ಭಾಗಸ್ಥನಾಗಿದ್ದ ಅಣ್ಣನ ಮಗನಿಗೆ ದ್ರೋಹಬಗೆಯುವ ವಿಶ್ವಾಸಘಾತಕತನ ಅವರಲ್ಲಿರಲಿಲ್ಲ.

ಬಸವರಾಜು ಚನ್ನಪಟ್ಟಣದ ಹೈಸ್ಕೂಲಿನಲ್ಲಿ ಎಸ್. ಎಸ್. ಎಲ್. ಸಿ ಓದಿ ತೇರ್ಗಡೆಯಾದ ನಂತರ ಬೆಂಗಳೂರಿನಲ್ಲಿ ಇಂಟರ್‌ಮಿಡಿಯೆಟ್ ಕಾಲೇಜ್ ಸೇರಿದ. ಅವನು ಓದಿ ಬುದ್ಧಿವಂತನಾಗಲಿ, ಜನ ಅಣ್ಣನ ಮಗನಿಗೆ ಅನ್ಯಾಯಮಾಡಿಬಿಟ್ಟನೆಂದು ಅಂಗುಲದಷ್ಟೂ ತನ್ನನ್ನು ದೂರ

ದಂತಾಗಲಿ ಎಂಬ ಆಶಯದಿಂದ ನಂಜಪ್ಪನವರು ಅವನಿಗೆ ಎಲ್ಲ ಸೌಲಭ್ಯಗಳನ್ನೂ ಒದಗಿಸಿದ್ದರು.

ಆದರೆ ಬೆಂಗಳೂರು ಸೇರಿದ ಮೇಲೆ ಬಸವರಾಜು ಅಪಮಾರ್ಗ ಹಿಡಿದ. ದುಷ್ಟಜನರ ಸ್ನೇಹ ಅವನಿಗೆ ಸುಲಭವಾಗಿ ದೊರೆಯಿತು. ಉಕ್ಕಿ ಬರುತ್ತಿದ್ದ ಪ್ರಾಯ, ಮನೆಯಿಂದ ಕೇಳಿ ಕೇಳಿದಾಗಲೆಲ್ಲ ದೊರೆಯುತ್ತಿದ್ದ ಹಣ, ಇವುಗಳಿಂದ ಅವನಿಗೆ ತಲೆ ತಿರುಗಿತು. ಓದಿನಲ್ಲಿ ಆಸಕ್ತಿ ಕಡಿಮೆಯಾಗಿ ಮನಸ್ಸು ವಿಲೋಭನೆಗಳನ್ನು ಅರಸಿಕೊಂಡು ಹೊರಟಿತು. ನಾಯಕಸಾನಿಯರ ಮನೆ, ಕುಡಿತದ ಬಾರು, ಜೂಜಿನ ಕಟ್ಟೆ ಅವನ ವಿಹಾರಕೇಂದ್ರಗಳಾದುವು.

ನಂಜಪ್ಪನವರಿಗೆ ಈ ಎಲ್ಲ ಸಮಾಚಾರಗಳೂ ತಿಳಿದಾಗ ಅವರು ಬಹಳ ಭಯಗೊಂಡರು. ಮಗನನ್ನು ಸನ್ಮಾರ್ಗದಲ್ಲಿ ಬೆಳೆಸಬೇಕೆಂಬ ಪ್ರಯತ್ನ ವಿಫಲವಾಯಿತಲ್ಲ ಎಂದು ವ್ಯಥೆಗೊಂಡರು. ಎಷ್ಟು ಒಳ್ಳೆಯದನ್ನು ಮಾಡಹೋದರೂ ಅವನು ಕಡೆಗೂ ಕೆಟ್ಟ ಮಾರ್ಗ ತುಳಿದು ತಮ್ಮ ಮೇಲೆ ದೂರು ತರುವಂತಾಯಿತಲ್ಲ ಎಂಬ ಚಿಂತೆ ಅವರನ್ನು ಕಾಡಹತ್ತಿತು.

ಬಸವರಾಜು ಆ ವರ್ಷ ತೇರ್ಗಡೆ ಹೊಂದಲಿಲ್ಲ. ಜೂನಿಯರ್ ಇಂಟರ್ ಪರೀಕ್ಷೆಯಲ್ಲಿ ಫೇಲಾದ. ಇನ್ನು ಅವನ ಓದು ಮುಂದುವರಿಸಲು ಯತ್ನಿಸುವುದು ವ್ಯರ್ಥವೆಂದು ನಂಜಪ್ಪನವರಿಗೆ ಅರಿವಾಯಿತು. ಅವರು ಅನಾರೋಗ್ಯದ ಸೋಗು ತೆಗೆದು ತಮ್ಮೆಲ್ಲ ಕೆಲಸಗಳನ್ನೂ ಬಸವರಾಜುವಿಗೆ ಹೊರಿಸಿದರು.

ಇದೇ ಸಮಯದಲ್ಲೇ ಶಿವಬಸಪ್ಪ ನಂಜಪ್ಪನವರನ್ನು ಕಂಡು ತನ್ನ ಸ್ನೇಹಿತ ರಾಮನಗರದ ಶಾಂತವೀರಯ್ಯನ ಮಗಳು ರುದ್ರಮ್ಮನನ್ನು ಬಸವರಾಜುವಿಗೆ ತಂದುಕೊಳ್ಳುವ ವಿಚಾರ ಪ್ರಸ್ತಾಪ ಮಾಡಿದ.

ನಂಜಪ್ಪನವರು ಶಾಂತವೀರಯ್ಯನನ್ನೂ ಅವನ ಮಗಳನ್ನೂ ಕರೆಸಿ ನೋಡಿದರು. ಒಪ್ಪಿಗೆಯಾಯಿತು. ಬಸವರಾಜುವಿಗೆ ಚಿಕ್ಕಪ್ಪನನ್ನು ವಿರೋಧಿಸುವ ಧೈರ್ಯವಿರಲಿಲ್ಲ. ಅದರಿಂದಾಗಿ ಅವನೂ 'ಹ್ಞೂಂ' ಎನ್ನಬೇಕಾಯಿತು.

ರುದ್ರಮ್ಮ ಮನೆಗೆ ಬಂದರೂ ಬಸವರಾಜು ತನ್ನ ದಾರಿ ಬಿಡಲಿಲ್ಲ. ಅದುವರೆಗೂ ಹಣಕ್ಕಾಗಿ ಚಿಕ್ಕಪ್ಪನನ್ನು ಕಾಡಬೇಕಾಗಿತ್ತು. ಈಗಲಾದರೊ ತಾನೇ ಸರ್ವಾಧಿಕಾರಿಯಾಗಿ ತನ್ನ ಕೈಯಲ್ಲೇ ಹಣ ಓಡಿಯಾಡುತ್ತಿದ್ದುದರಿಂದ ಅವನಿಗೆ ಯಾವುದಕ್ಕೂ ಕೊರತೆಯಿರಲಿಲ್ಲ.

ದಿನ ಬೆಳಗಾದರೆ ಅವನು ಬೆಂಗಳೂರಿನಲ್ಲಿಯೇ ಇರತೊಡಗಿದ. ಅವನಾಯಿತು ಸೂಳೆಯರ ಮನೆಯಾಯಿತು, ಸೌತ್‌ಪೆರೇಡಿನ ಬಾರುಗಳಾದವು, ಹೋಟೆಲು ಸಿನಿಮಾಗಳಾದವು. ಯಾವಾಗಲಾದರೊಮ್ಮೆ ಮನಸ್ಸು ಬಂದಾಗ, ಅದೂ ಚಿಕ್ಕಪ್ಪನ ಬಲವಂತಕ್ಕೆ ಊರಿಗೆ ಹೋಗಿ, ಕೆಲಸದವರಿಗೆ ಮಾಡಬೇಕಾದ ಕೆಲಸಗಳನ್ನು ನಿಗದಿಸಿ ಬೆಂಗಳೂರಿಗೆ ವಾಪಸು ಹೊರಟುಬರುತ್ತಿದ್ದ. ಹಾಗೆ ಊರಿಗೆ ಬಂದಾಗಲೂ ಹೆಂಡತಿಯೊಂದಿಗೆ ಮಾತನಾಡಿದರೆ ಮಾತನಾಡಿದ, ಇಲ್ಲವಾದರೆ ಇಲ್ಲವೇ ಇಲ್ಲ.

ರುದ್ರಮ್ಮನ ಜೀವನ ಬರಡು ಜೀವನವಾಯಿತು. ಅವಳು ಕಟ್ಟಿದ್ದ ಹೊಂಗನಸು ಒಡೆದು ಛಿದ್ರಛಿದ್ರವಾಯಿತು.

ಇಂದಲ್ಲ ನಾಳೆ ತನ್ನ ಗಂಡ ದಾರಿಗೆ ಬಂದಾನು ವಿವೇಕ ತಂದುಕೊಂಡಾನು ಎಂದು ರುದ್ರಮ್ಮ ಆಸೆ ಭರವಸೆಗಳನ್ನು ಹೊತ್ತು ಅದರಲ್ಲಿಯೇ ಮೂರು ವರ್ಷಗಳನ್ನು ಕಳೆದಳು. ಆದರೆ ಅಷ್ಟು ದೀರ್ಘ ಅವಧಿಯ ನಿರೀಕ್ಷಣೆಯಿಂದಲೂ ಅವಳ ಆಸೆ ಫಲಿಸಬಹುದಾದ ಸೂಚನೆ ಸೂಜಿಯ ಮೊನೆಯಷ್ಟು ಸಹ ಕಾಣಬರಲಿಲ್ಲ. ಕಡೆಗೆ ಅವಳ ತಾಳ್ಮೆ ಸಡಲಿತು, ಮನಸ್ಸು ರೋಸಿತು.

ಹೆಣ್ಣಿನ ಮುಖ ಎಷ್ಟು ಮೋಹಕವೋ ಅವಳ ಮನಸ್ಸೂ ಅಷ್ಟೇ ಮೋಹಕ. ಆದರೆ ಕುರೂಪಿಯಾದ ಹೆಣ್ಣಿನ ಮುಖ ಅದೆಷ್ಟು ಅಸಹ್ಯಕರವೋ ಹಾಗೆಯೇ ಅವಳ ವಿರೂಪಗೊಂಡ ಮನಸ್ಸೂ ಇನ್ನೂ ಹೆಚ್ಚು ಅಸಹ್ಯಕರ. ಮಾತ್ರವಲ್ಲ, ಭಯಂಕರವೂ ಹೌದು.

ರುದ್ರಮ್ಮನ ಮನಸ್ಸು ಸಹನೆಯ ಮಿತಿ ಮೀರಿ ಅತಿ ಅಸಹ್ಯಕರವಾದ ಆಲೋಚನೆಗಳಿಗೆ ಎಡೆಗೊಟ್ಟಿತು.

"ಅವರು ತಮ್ಮ ಸುಖಕ್ಕಾಗಿ ದಾರಿಬಿಟ್ಟು ಅಡ್ಡದಾರಿ ಹೋಗುತ್ತಿರುವಾಗ ನಾನಾದರೂ ಏಕೆ ಸುಮ್ಮನೆ ಕುಳಿತಿರಲಿ. ಅವರಂತೆ ನನಗೂ ಸುಖ

ಬೇಡವೆ? ನಾನು ಹುಟ್ಟಿರುವುದಾದರೂ ಏಕೆ? ನನ್ನ ಈ ರೂಪು, ಈ ಲಾವಣ್ಯ ಎಲ್ಲವನ್ನೂ ಕಾಡುಕುಸುಮದಂತೆ ಬಾಡಿಸಬೇಕೆ? ನಾನೂ ಯಾವುದಾದರೊಂದು ಮಾರ್ಗವನ್ನು ಹಿಡಿದು ಸುಖದಿಂದಿರಬಾರದೇಕೆ?"

ಪ್ರಶ್ನೆಗಳ ಮಾಲೆಯೇ ಅವಳ ಮುಂದೆ ಬಂದು ನಿಲ್ಲುತ್ತಿತ್ತು.

"ಇಲ್ಲ. ಅದು ಸಾಧ್ಯವಿಲ್ಲ, ಅವರು ಎಷ್ಟೇ ಆದರೂ ಗಂಡಸು. ಕೆಟ್ಟರೂ ಚಿಂತೆಯಿಲ್ಲ, ಸಮಾಜ ಅವರನ್ನು ಕ್ಷಮಿಸುತ್ತದೆ. ಅವರು ತಮ್ಮ ಕೆಟ್ಟತನವನ್ನು ಬಿಟ್ಟುಕೊಟ್ಟು ಸಜ್ಜನರೆನಿಸಿಕೊಂಡು ಬಾಳಲು ಸಮಾಜ ಅವಕಾಶ ಕೊಡುತ್ತದೆ. ಪಾಪ ತೊಳೆದು ಅವರು ಪುನೀತರಾಗಿಬಿಡುತ್ತಾರೆ. ಆದರೆ ಅದೇ ಹೆಂಗಸು ಕೆಟ್ಟರೆ ಅಕ್ಷಮ್ಯ ಅಪರಾಧವೆನಿಸುತ್ತದೆ. ಅವಳ ಪಾಪದ ಕಲೆ ಸಿಡುಬಿನ ಕಲೆಯಂತೆ ಮುಖದ ಮೇಲೆ ಅಚ್ಚಳಿಯದೆ ಉಳಿಯುತ್ತದೆ"

ಮರುಕ್ಷಣವೇ ವಿವೇಕ ಎಚ್ಚರಿಸುತ್ತಿತ್ತು.

"ಹಾಗಾದರೆ ಗಂಡು ತನ್ನನ್ನು ನಿರ್ಲಕ್ಷಿಸಿದಾಗ ಹೆಣ್ಣು ತನ್ನ ಸುಖವನ್ನು ಅವನಿಗಾಗಿ ಬಲಿ ಕೊಡಬೇಕೇನು?"

"ಅಗತ್ಯವಿಲ್ಲ. ಗಂಡನ್ನು ಒಲಿಸಿಕೊಂಡು ತನ್ನ ಸುಖ ಕಾಣಲು ಯತ್ನಿಸಬೇಕು."

"ಆದರೂ ಗಂಡು ಒಲಿಯದೇ ಹೋದರೆ?"

"ಆಗ ಇದ್ದೇ ಇದೆ ತ್ಯಾಗ. ಅದಕ್ಕೆ ಮೀರಿದ ಸುಖವುಂಟೆ?"

"ತ್ಯಾಗ! ಹೇಳಲು ಎಷ್ಟು ಸೊಗಸು, ಅನುಭವಿಸಲು ಎಷ್ಟು ಪೆಡಸು."

"ಅದು ನಮ್ಮ ಹಿಂದೂ ಸ್ತ್ರೀಯರ ಆದರ್ಶಜೀವನದ ಮಹಾಮಂತ್ರ"

"ಇರಬಹುದು. ಆ ಕಾಲ ಹಿಂದಾಗಿ ಹೋಯಿತು. ಈಗ ಕಾಲ ಬದಲಾಗಿದೆ."

"ಆ ಕಾಲ ಬದಲಾದರೂ ನಿಸರ್ಗ ನಿಯಮಗಳೇನೂ ಬದಲಾಗಲಿಲ್ಲವಷ್ಟೆ. ಗಂಡು ಹೆಣ್ಣಾಗಲಿಲ್ಲ, ಹೆಣ್ಣು ಗಂಡಾಗಲಿಲ್ಲ. ಅದರಿಂದ ಕಾಲ

ಬದಲಾಯಿತೆಂದು ನಿಸರ್ಗ ನಿಯಮಗಳನ್ನೂ ಬದಲಿಸಲು ಯತ್ನಿಸಿ ಹೆಣ್ಣು ಗಂಡಿನಂತೆ ವರ್ತಿಸುವುದು ಅವಿವೇಕ."

ಅಂತೂ ವಿವೇಕವೇನೋ ಒಮ್ಮೆ ಗೆದ್ದಿತು. ಆದರೂ ಮನಸ್ಸು ಮಾತ್ರ ಹೊಯ್ದಾಟದಲ್ಲೇ ಸಿಕ್ಕಿತ್ತು.

"ನಿಸರ್ಗ ನಿಯಮಗಳನ್ನು ಬದಲಿಸಲು ತೊಡಗುವುದು ಅಸಾಧ್ಯ, ಅವಿವೇಕ. ನಿಜ. ಆದರೂ ಸಮಾಜ ನಿಯಮಗಳನ್ನಾದರೂ ಕಾಲಕ್ಕೆ ತಕ್ಕಂತೆ ಬದಲಿಸಬಹುದಷ್ಟೆ."

"ಸಮಾಜ ನಿಯಮಗಳು ಪೂರ್ಣವಾಗಿಯೂ ನಿಸರ್ಗ ನಿಯಮಗಳನ್ನೇ ಅವಲಂಬಿಸಿವೆ. ಒಂದರ ಉಲ್ಲಂಘನೆ ಮತ್ತೊಂದರ ಉಲ್ಲಂಘನೆಯಾಗದೇ ಹೋದೀತೇ!"

"ಅದು ಹೇಗೆ? ನಿಸರ್ಗ ದೈವಕಲ್ಪಿತ. ಸಮಾಜ ಮಾನವ ಕಲ್ಪಿತ."

ಈಗ ಮನಸ್ಸು ಪ್ರಫುಲ್ಲಗೊಂಡಿತು, ತಾನು ಗೆದ್ದೆನೆಂಬ ಹೆಮ್ಮೆಯಿಂದ. ಆದರೂ ವಿವೇಕ ಮನಸ್ಸಿನ ಅವಿವೇಕವನ್ನು ಮೆಟ್ಟಲು ಯತ್ನಿಸುತ್ತಿತ್ತು.

"ಸಮಾಜ ನಿಯಮಗಳು ನಿಸರ್ಗ ನಿಯಮಗಳನ್ನು ಅವಲಂಬಿಸಿದ ಮೇಲೆ ಸಮಾಜ ನಿಸರ್ಗವನ್ನೇ ಅವಲಂಬಿಸಬೇಕಷ್ಟೆ. ದೈವಕಲ್ಪಿತವಾದ ನಿಸರ್ಗವನ್ನು ಮಾನವ ತನ್ನ ಉಪಯೋಗಕ್ಕೆ ಬಳಸಿಕೊಳ್ಳುವಾಗ ಹಲವು ನಿಯಮಗಳನ್ನು ಪಾಲಿಸಲೇ ಬೇಕು. ಅವನ್ನೇ ಸಮಾಜನಿಯಮಗಳೆನ್ನುವುದು. ಆದುದರಿಂದ ಸಮಾಜದ ನಿಯಮಗಳನ್ನು ಪಾಲಿಸದೆ ನಿಸರ್ಗದ ಸುಖವನ್ನು ಅನುಭವಿಸುವುದು ಅಸಂಭವ."

ಮನಸ್ಸು ಮತ್ತೆ ಹೊಯ್ದಾಟಕ್ಕೆ ಆರಂಭಿಸಿತು. ಸೋಲನೊಪ್ಪಿಕೊಳ್ಳಲು ಅದು ಸಿದ್ಧವಿರಲಿಲ್ಲ.

"ಹೆಣ್ಣು ಗಂಡುಗಳ ಮಿಳನ ನಿಸರ್ಗ ನಿಯಮವೇ ಅಲ್ಲವೆ?"

"ಅಲ್ಲವೆಂದವರಾರು?"

"ಅಂದ ಮೇಲೆ ಒಂದು ಹೆಣ್ಣು ತನಗೆ ಬೇಕಾದ ಸುಖ ನೀಡಬಲ್ಲ ಗಂಡನ್ನು ಆರಸಿಕೊಂಡು ಸುಖಪಡುವುದರಲ್ಲಿ ಅಭ್ಯಂತರವೇನು?"

"ಗಂಡು ಹೆಣ್ಣಿಗಾಗಿಯೇ ಹುಟ್ಟಿದೆ. ಹೆಣ್ಣು ಗಂಡಿಗಾಗಿಯೇ ಹುಟ್ಟಿದೆ. ನಿಜ. ಆದರೂ ಗಂಡು-ಹೆಣ್ಣುಗಳು ತಮ್ಮ ಸುಖಕ್ಕಾಗಿ ಸಮಾಜ ನಿಯಮಗಳನ್ನು ಪಾಲಿಸದೆ ಗತ್ಯಂತರವಿಲ್ಲ."

"ಸಮಾಜ ನಿಯಮಗಳನ್ನೂ ಧಿಕ್ಕರಿಸುವುದರಿಂದ ಆಗುವುದಾದರೂ ಏನು? ನಿಸರ್ಗದತ್ತ ಸುಖ ದೊರಕಲಾರದೆಂದೆ?"

"ಸಮಾಜ ನಿಯಮಗಳ ಉಲ್ಲಂಘನೆಯಿಂದ ನಿಸರ್ಗದ ಸುಖ ದೊರಕಲಾರದೆಂದಲ್ಲ. ದೊರಕೀತು. ಆದರೆ ಅದರ ಪ್ರತಿಫಲ ದುಃಖ, ದುಃಖ"

"ಸುಖ ಬೇಕೆಂದು ಬಯಸಿದವರು ದುಃಖವನ್ನೂ ಅನುಭವಿಸಲೇ ಬೇಕಲ್ಲವೆ?"

"ಅಂತಹ ಅಗತ್ಯವೇನಿಲ್ಲ. ಸಮಾಜ ಹಾಕಿಕೊಟ್ಟ ದಾರಿಯಲ್ಲಿ ಹೋದರೆ ದುಃಖದ ಅನುಭವ ಅಷ್ಟಿರುವುದಿಲ್ಲ."

"ಅದು ಹೇಗೆ?"

"ಬೆಟ್ಟದ ಮೇಲಿನ ದೇವಿಯ ದರ್ಶನಕ್ಕೆ ಭಕ್ತ ದೇವಾಲಯಕ್ಕೆ ಹೋಗಬೇಕಾದಾಗ ಸಮಾಜ ಕಲ್ಪಿಸಿದ ರಸ್ತೆ, ಮೆಟ್ಟಲುಗಳಿವೆ. ಅವನ್ನು ಬಿಟ್ಟು ಅವನು ತನಗೆ ತೋರಿದಂತೆ ನೇರವಾಗಿಯೇ ಹೋಗುತ್ತೇನೆಂದು ಯತ್ನಿಸಿದರೆ ಯಾವುದು ವಿವೇಕ, ಯಾವುದು ಅವಿವೇಕ."

ಮನಸ್ಸು ಮಣಿಯಾಯಿತು. ಆದರೂ ಅದು ಮೊಂಡುವಾದ ಹೂಡಿತು.

"ಅಂತೂ, ಅವನು ಹೇಗೇ ಹೋಗಲಿ ದೇವಾಲಯವನ್ನು ತಲಪುವ ನಲ್ಲವೆ?"

"ತಲಪಬಹುದು ಅಥವಾ ಅವನು ದಾರಿಯಲ್ಲಿಯೇ ಬಂಡೆಯನ್ನೆಡವಿ ಸಾವಿಗೆ ತುತ್ತಾಗಲೂಬಹುದು. ಅಂತೂ ಒಟ್ಟಿನಲ್ಲಿ ಅದೆಷ್ಟು ದುಃಖಕರ."

ಈ ಬಾರಿ ಮನಸ್ಸು ಹೌದೆಂದಿತು.

ಆದರೆ ಮರುಕ್ಷಣದಲ್ಲಿಯೇ ಮನಸ್ಸು ಮತ್ತೆ ವಿಚಾರಮಗ್ನವಾಯಿತು.

"ಸಮಾಜಕ್ಕೆ ಹೆದರಿ ದುಃಖಕ್ಕೆ ಭಯಪಟ್ಟು ಜೀವನದಲ್ಲಿ ನಿಸರ್ಗ ಒದಗಿಸಿಕೊಟ್ಟಿರುವ ಸುಖವನ್ನು ತ್ಯಜಿಸಲು ನಾನು ಸಮ್ಮತಿಸಲಾರೆ."

"ಹಾಗಾದರೆ ನೀನು ಅದರಿಂದ ಒದಗಿಬರಬಹುದಾದ ಎಲ್ಲ ದುಃಖಗಳನ್ನೂ ಅನುಭವಿಸಲು ಸಿದ್ಧಳಾಗಿರಬೇಕು."

ಸುಖದ ಮೋಡಿಗೆ ಹಾತೊರೆಯುತ್ತಿದ್ದ ಅವಳ ಮನಸ್ಸು 'ಹೌದು ನಾನು ಸಿದ್ಧಳಾಗಿದ್ದೇನೆ. ಬಂದುದೆಲ್ಲಾ ಬರಲಿ, ಎದುರಿಸುತ್ತೇನೆ. ನನಗಿಂದು ಸಮಾಜವೂ ಬೇಡ, ಆದರ ಬಂಧನವೂ ಬೇಡ. ಸುಖಬೇಕು. ಆ ಸುಖ ಪ್ರಾಪ್ತಿಗಾಗಿ ಏನು ಬೇಕಾದರೂ ಮಾಡುತ್ತೇನೆ' ಎಂದಿತು.

ರುದ್ರಮ್ಮನ ಕಣ್ಣುಗಳ ಮುಂದೆ ಡ್ರೈವರ್ ಮುನಿಸ್ವಾಮಿ ಸುಳಿದು ಹೋದ. ಅವನು ತನ್ನನ್ನು ನೋಡಿದಾಗಲೆಲ್ಲಾ ಹುಸಿನಗು ನಗುವುದು, ಹುಬ್ಬು ಹಾರಿಸುವುದು, ಕಣ್ಣು ಮಿಟುಕಿಸುವುದು, ಕಾಮುಚೇಷ್ಟೆ ನಟಿಸುವುದು ಎಲ್ಲವೂ ಅವಳ ಸ್ಮೃತಿಪಥದ ಮುಂದೆ ಹಾದುಹೋಯಿತು.

"ಅವನು ನನ್ನಲ್ಲಿ ಅನುರಕ್ತನಾಗಿದ್ದಾನೆ. ನಾನಾದರೂ ಅವನನ್ನೇಕೆ ಪ್ರೇಮಿಸಿ ನನ್ನ ಕಾಮತೃಷ್ಣೆಯನ್ನು ತೀರಿಸಿಕೊಳ್ಳಬಾರದು."

"ಥೂ, ಅವನು ನಿನ್ನ ಗಂಡನ ಕೂಲಿಯಾಳು!"

"ಆದರೇನಂತೆ? ಅವನೊಬ್ಬ ಗಂಡಸಲ್ಲವೆ. ಅಂದ ಮೇಲೆ ನನ್ನನ್ನು ತಣಿಸುವ ಶಕ್ತಿ ಅವನಿಗಿಲ್ಲವೆ?"

"ಅಕಸ್ಮಾತ್ ಯಾರ ಕಣ್ಣಿಗಾದರೂ ಬಿದ್ದರೆ?"

"ಹೌದು. ಗಂಡಸು ಇಂತಹ ಅನೀತಿಯುತ ಕೆಲಸ ಮಾಡಿದರೆ ಯಾರೂ ಅಷ್ಟಾಗಿ ಗಮನಿಸುವುದಿಲ್ಲ. ಹೆಂಗಸು ಹಾಗೆ ಮಾಡಿದರೆ ಎಲ್ಲರೂ ಅವಳಿಗೆ ಬಹಿಷ್ಕಾರದ ಬೇಡಿ ತೊಡಿಸುವರು. ಎಂತಹ ವಿಚಿತ್ರ ಸಮಾಜ. ಇರಲಿ. ಯಾರೂ ಕಾಣದಂತೆ ಗುಟ್ಟಿನಲ್ಲಿ ನಡೆಸಿದರೆ ಆಯಿತು."

"ಅದು ಎಷ್ಟು ದಿನ ತಾನೇ ಸಾಧ್ಯ?"

"ನಡೆದಷ್ಟು ದಿನ."

"ಒಂದು ವೇಳೆ......."

"ನಿಜ. ಆಗಬಾರದುದೇನಾದರೂ ಆಗಿಹೋದರೆ ಮಾಡುವುದೇನೆಂದೆ? ಭಯವೇಕೆ ಪಡಬೇಕು? ಮನೆಬಿಟ್ಟು ಅವನ ಹಿಂದೆಯೇ ಎಲ್ಲಿ

ಗಾದರೂ ಓಡಿಹೋದರಾಯಿತು. ಹೇಗೂ ಒಂದು ಗಂಡಿಗೆ ಒಂದು ಹೆಣ್ಣು ಬೇಕೇಬೇಕಷ್ಟೆ. ಅವನು ನನಗೆ ಆಸರೆ ಕೊಡಲಾರನೆ?"

"ಕೊಡಬಹುದು. ನಿನ್ನಲ್ಲಿ ರೂಪುಲಾವಣ್ಯಗಳಿರುವವರೆಗೂ ಅವನು ನಿನಗೆ ಕೊಡಬಹುದು. ಆದರೆ ಎಂದೆಂದಿಗೂ ಅವನು ನಿನ್ನ ಕೈಬಿಡಲಾರನೆಂದು ನಂಬುವುದು ತಪ್ಪು."

"ಮುಂದೆ ಎಂದಿನ ಮಾತೋ ಇಂದೇಕೆ? ಅಂದಿನವರೆಗೆ ನಾನು ಬದುಕಿರುವೆನೆಂಬುದರ ನಂಬಿಕೆಯಾದರೂ ಏನಿದೆ. ಇಂದಿನ ಮಾತು ಇಂದಿಗೆ ಬೇಕು. ನನ್ನ ರೂಪುಯೌವನಗಳು ನನ್ನನ್ನು ಎಲ್ಲಿದ್ದರೂ ಹೇಗಿದ್ದರೂ ಕಾಪಾಡುವುದಲ್ಲವೆ. ಅವನಿಲ್ಲದಿದ್ದರೆ ಮತ್ತೊಬ್ಬ."

"ನಿನ್ನ ರೂಪು ಯೌವ್ವನಗಳಾದರೂ ಶಾಶ್ವತವಲ್ಲ."

"ನಾನೇ ಶಾಶ್ವತಳಲ್ಲದಿರುವಾಗ ಅವುಗಳ ಅಶಾಶ್ವತತೆ ಯಾವ ಗಣನೆ."

"ದುಡುಕಿ ಕೆಡಬೇಡ."

"ಹಾಗೆಯೇ ಇದ್ದು ಬರುವ ಸುಖವಾದರೂ ಏನು?"

"ಹಾಗಾದರೆ, ಪಾಪಮಾಡಿ ಆಡುವ ಜನರ ಬಾಯಿಗೆ ಬಿದ್ದು ನರಕಕ್ಕೆ ಹೋಗಬೇಕೆನ್ನುವೆಯ?"

"ಹ್ಞು – ಆಡುವ ಜನ ಹೇಗಿದ್ದರೂ ಆಡಿಕೊಳ್ಳುತ್ತಾರೆ. ಲೋಕಮಾತೆ ಸೀತಾದೇವಿಯ ಮೇಲೆಯೇ ಅಪವಾದ ಹೊರಿಸಲಿಲ್ಲವೆ. ಅವರ ಬಾಯಿ ತಡೆಯುವುದರಿಂದ ಬರುವ ಲಾಭವಾದರೂ ಏನಿದೆ. ಆಡಿಕೊಳ್ಳಲಿ. ಬೇಕಾದಷ್ಟು ಆಡಿಕೊಳ್ಳಲಿ. ಬಾಯಿ ನೋಯುವವರೆಗೂ ಆಡಿಕೊಂಡು ಅನಂತರ ತಮ್ಮಷ್ಟಕ್ಕೆ ತಾವೇ ತೆಪ್ಪಗಾಗುತ್ತಾರೆ. ಇನ್ನು ನರಕ. ಕಣ್ಣೆದುರಿನ ಸ್ವರ್ಗಸುಖ ಬಿಟ್ಟು ಕಣ್ಣಿಗೆ ಕಾಣದ ನರಕದ ಚಿಂತನೆ ಯಾಕೆ?"

"ಇದು ಹುಚ್ಚು. ನೀನು ಅಧಃಪತನದ ಕಡೆಗೆ ನುಗ್ಗುತಿರುವೆ. ಎಚ್ಚರಿಕೆ."

"ಇಂದು ಜಗತ್ತೇ ಅಧಃಪತನದ ಹಾದಿ ಹಿಡಿದಿರುವಾಗ ನನ್ನೊಬ್ಬಳಿಂದೇನು. ನನ್ನಿಚ್ಛೆ ಬಂದಂತೆ ನಾನು ಮಾಡುತ್ತೇನೆ."

ರೋಸಿ ನುಡಿಯಿತು ಮನಸ್ಸು, ವಿವೇಕ ಎದುರು ನಿಲ್ಲಲಾರದೆ ಕಂಬಿಕಿತ್ತಿತು.

ಇದುವರೆಗೆ ಮುನಿಸ್ವಾಮಿ ರುದ್ರಮ್ಮನ ಕಡೆಗೆ ಬೀರುತ್ತಿದ್ದ ನೋಟ ಈಗ ರುದ್ರಮ್ಮ ಮುನಿಸ್ವಾಮಿಯ ಮೇಲೆ ಬೀರುವಂತಾಯಿತು.

ಮುನಿಸ್ವಾಮಿ ಸಾಹುಕಾರ್ ನಂಜಪ್ಪನವರ ಚನ್ನಪಟ್ಟಣ–ಕಾನಕಾನ ಹಳ್ಳಿ ಬಸ್‌ಲೈನಿನಲ್ಲಿ ಕೆಲಸ ಮಾಡುತ್ತಿದ್ದ. ಅವನು ಹರಯ ಮುಟ್ಟಿದ್ದ ನಾದರೂ ಇನ್ನೂ ಲಗ್ನಮಾಡಿಕೊಂಡಿರಲಿಲ್ಲ. ಚಿತ್ತೂರಿನಲ್ಲಿದ್ದ ಅವರಮ್ಮ ಮಗನಿಗೆ ಅವೆಷ್ಟೋ ಒತ್ತಾಯದ ಕಾಗದಗಳನ್ನು ಸಹ ಬರೆದಿದ್ದಳು. ತಾನು ಬದುಕಿರುವಾಗಲೇ ತನ್ನ ಕಣ್ಣು ಮುಂದೆ ಅವನೊಂದು ಲಗ್ನವಾಗಿ ಸಂಸಾರ ಮಾಡಬೇಕೆಂದು ಬೇಡಿಕೆ ಹಾಕಿದ್ದಳು. ಮುಂದಿನ ವರ್ಷ ನೋಡೋಣವೆಂದು ಮಗ ಹೇಗೂ ಮುದುಕಿಗೆ ಸಮಾಧಾನ ಹೇಳಿಬಿಡು ತ್ತಿದ್ದ. ಅಂತಹ ಎರಡು 'ಮುಂದಿನ ವರ್ಷ'ಗಳು ಈಗಾಗಲೇ ಸಂದಿದ್ದುವು.

ಮುನಿಸ್ವಾಮಿ ಅಚ್ಚಕಪ್ಪಿನ ಗಿಡ್ಡನೆಯ ಮೂತಿಯಾಗಿದ್ದರೂ ಅವನ ಮಿರುಗುವ ಕಣ್ಣುಗಳಲ್ಲಿ ಏನೋ ಒಂದು ತೆರನಾದ ಆಕರ್ಷಕ ಶಕ್ತಿಯಿತ್ತು. ಚಿಕ್ಕಂದಿನ ದುಷ್ಟತನದ ಫಲವಾಗಿಯೇ ಏನೋ ಅವನ ಕೆಳತುಟಿ ಕೊಂಚ ಭಾಗ ಹರಿದು ಬಾಯಲ್ಲಿ ಅಡಗಿ ಕುಳಿತಿದ್ದ ಹಲ್ಲೊಂದು ಹೊರಕಾಣು ತ್ತಿತ್ತು. ಅಡ್ಡಡ್ಡವಾಗಿ ಬೆಳೆದಿದ್ದ ಅವನ ದೇಹ ನಿಲುವಿಗೆ ಕೊಂಚ ದೊಡ್ಡ ದಾಗಿಯೇ ತೋರುತ್ತಿತ್ತು.

ನಂಜಪ್ಪನವರ ಬಸ್ಸುಗಳು ಬೆಳಗ್ಗೆ ಚನ್ನಪಟ್ಟಣ ಬಿಟ್ಟು ಹೊರಟು ಮತ್ತೆ ಸಂಜೆಗೆ ವಾಪಸು ಚನ್ನಪಟ್ಟಣಕ್ಕೆ ಬಂದುಬಿಡುತ್ತಿದ್ದವು. ಅಲ್ಲಿಂದ ಭರಮಸಾಗರ ಎರಡು ಮೈಲು ದೂರದಲ್ಲಿದ್ದುದರಿಂದ ಬಸ್ಸುಗಳು ರಾತ್ರಿವೇಳೆ ಗಳಲ್ಲಿ ನಂಜಪ್ಪನವರ ಬಂಗಲೆಯ ಆವರಣದಲ್ಲಿಯೇ ತಂಗುತ್ತಿದ್ದುವು. ಕೆಲವರು ಡ್ರೈವರು ಕಂಡಕ್ಟರುಗಳು ಆ ಹಳ್ಳಿಯಲ್ಲಿಯೇ ಮನೆಗಳನ್ನು ಮಾಡಿಕೊಂಡು ತಮ್ಮ ಸಂಸಾರಗಳ ಸಮೇತ ವಾಸಮಾಡುತ್ತಿದ್ದರು. ಇನ್ನು ಕೆಲವರು ಕುಡಿತ ಹಾದರ ಮುಂತಾದ ದುಶ್ಚಟಗಳಿಗೆ ಬಿದ್ದವರು ರಾತ್ರಿಯನ್ನು ಚನ್ನಪಟ್ಟಣದಲ್ಲಿ ತಮಗೆ ತೋರಿದ ರೀತಿಯಲ್ಲಿ 'ಸುಖ' ವಾಗಿ ಕಳೆದು ಬೆಳಗ್ಗೆ ಬಸ್ಸು ಹೊರಡುವ ವೇಳೆಗೆ ಹಳ್ಳಿಯಲ್ಲಿ ಹಾಜರಾಗು

ತ್ತಿದ್ದರು. ಮುನಿಸ್ವಾಮಿ ಒಮ್ಮೊಮ್ಮೆ ಬೇಸರ ಬಂದಾಗ ಇಂತಹ 'ಸುಖ' ಕಾಣಲು ಚನ್ನಪಟ್ಟಣಕ್ಕೆ ಹೋಗುತ್ತಿದ್ದನಾದರೂ ಇತ್ತೀಚೆಗೆ ರುದ್ರಮ್ಮನ ದೃಷ್ಟಿ ತನ್ನ ಮೇಲೆ ಬೀಳಹತ್ತಿದಂದಿನಿಂದ ಹಳ್ಳಿಯಲ್ಲಿಯೇ ಉಳಿಯ ತೊಡಗಿದ. ಸಾಹುಕಾರರ ಮನೆಯಲ್ಲಿಯೇ ಹೇಗೂ ಊಟ ಆಗುತ್ತಿತ್ತು. ಸೀಟುಗಳಿಗೆ ಹಾಕಿರುವ ಕುಷನ್ನುಗಳನ್ನು ಹಾಸಿಕೊಂಡು ತಾನು ನಡೆಸು ತ್ತಿದ್ದ ಬಸ್ಸಿನಲ್ಲಿಯೇ ಪವಡಿಸುತ್ತಿದ್ದ.

ಮುನಿಸ್ವಾಮಿಯೂ ಸಮಯ ಕಾಯುತ್ತಿದ್ದ. ರುದ್ರಮ್ಮನೂ ಸಮಯ ಸಾಧಿಸುತ್ತಿದ್ದಳು. ತಮ್ಮಿರ್ವರ ಮಧುರ ಮಿಲನಕ್ಕೆ, ಪರಸ್ಪರ ಸುಖಾ ಲಿಂಗನಕ್ಕೆ, ಅವರ ಹೃದಯ ದಹಿಸುತ್ತಿದ್ದ ಕಾಮದ ಉರಿಯನ್ನು ಸಂತೃಪ್ತ ಮಾಡಲಿಕ್ಕೆ,

೩

ಸಾಮಾನ್ಯವಾಗಿ ನಂಜಪ್ಪನವರು ರಾತ್ರಿಹೊತ್ತಿನಲ್ಲಿ ತಮ್ಮ ಸೂಳೆಯರ ಬಿಡಾರಗಳಲ್ಲಿಯೇ ಇರುತ್ತಿದ್ದರು. ಮನೆಯಲ್ಲಿ ಶಾಂತಮ್ಮ, ಮಕ್ಕಳು, ರುದ್ರಮ್ಮ, ಜೊತೆಗೆ ಒಬ್ಬಿಬ್ಬ ಕೆಲಸಗಾರರು.

ಒಂದು ರಾತ್ರಿ ಹನ್ನೊಂದು ಗಂಟೆ ಹೊಡೆದಿತ್ತು. ಎಲ್ಲರೂ ಹಾಸಿಗೆ ಸೇರಿ ಕಂಬಳಿಗಳ ಒಳಗೆ ಗೊರಕೆ ಹೊಡೆಯುತ್ತಿದ್ದರು. ರುದ್ರಮ್ಮನಿಗೆ ಎಷ್ಟು ಪ್ರಯತ್ನಿಸಿದರೂ ನಿದ್ರೆಯೇ ಹತ್ತದು. ಕಾಮ ಅವಳ ಅಂಗಾಂಗಗಳನ್ನೆಲ್ಲ ತೀಕ್ಷ್ಣವಾಗಿ ದಹಿಸುತ್ತಿತ್ತು.

ರುದ್ರಮ್ಮ ಆ ಮಗ್ಗುಲಿನಿಂದ ಈ ಮಗ್ಗುಲಿಗೆ, ಈ ಮಗ್ಗುಲಿನಿಂದ ಆ ಮಗ್ಗುಲಿಗೆ ಹೊರಳಿದಳು. ಏನೋ ಒಂದು ಅವ್ಯಕ್ತ ಯಾತನೆ ಅವಳ ಹೃದಯವನ್ನು ಇರಿಯುತ್ತಿತ್ತು. ಅಂಗತ್ತನಾಗಿ ಮಲಗಿ, ತಲೆದೆಸೆಗಿದ್ದ ದಿಂಬನ್ನು ತೆಗೆದು ಎದೆಯ ಮೇಲಿಟ್ಟುಕೊಂಡು ಅದನ್ನು ಗಾಢವಾಗಿ ತಬ್ಬಿಕೊಂಡಳು, ಏನೋ ಒಂದು ತೆರನಾದ ಸುಖ ಅನುಭವಿಸುವ ಕಾತರತೆಯಿಂದ. ಆದರೆ ಅದರಿಂದ ಅವಳಿಗೆ ಯಾವ ತೃಪ್ತಿಯೂ ದೊರೆಯಲಿಲ್ಲ. ತನ್ನ ಹುಚ್ಚಿಗಾಗಿ ತಾನೇ ನಕ್ಕಳು. ಮತ್ತೆ ದಿಂಬನ್ನು ತಲೆಯಡಿಗೆ ಸೇರಿಸಿದಳು. ದುಃಖದ ಕಂಬನಿಗಳು ಅವಳ ಕಣ್ಣುಗಳಿಂದ ಹರಿಯತೊಡಗಿದವು. ಹೃದಯದ ಉದ್ವೇಗ ಕ್ಷಣಕ್ಷಣಕ್ಕೂ ಹೆಚ್ಚುಹತ್ತಿತು. ಉನ್ಮತ್ತಳಂತೆ ಹಾಸಿಗೆಯಲ್ಲಿ ಎದ್ದು ಕುಳಿತಳು. ಕುಳಿತವಳು ಸುತ್ತಲೂ ಒಮ್ಮೆ ನೋಡಿದಳು. ಶಾಂತಮ್ಮ ಮಕ್ಕಳೆಲ್ಲರೂ ಗಾಢನಿದ್ರೆಯಲ್ಲಿದ್ದರು. ರುದ್ರಮ್ಮನ ಎದೆ ಡವಡವನೆ ಬಡಿಯತೊಡಗಿತು. ಆದರೂ ಒಂದು ಧೈರ್ಯ ಅವಳಿಗೆ ಇಲ್ಲದ ಶಕ್ತಿ ನೀಡುತ್ತಿತ್ತು. ರುದ್ರಮ್ಮ ಎದ್ದು ನಿಂತಳು. ನಿಂತವಳೇ ಮತ್ತೊಮ್ಮೆ ಸುತ್ತಲೂ ದೃಷ್ಟಿ ಹೊರಳಿಸಿದಳು.

ನಂತರ ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತ ಉಸಿರು ಬಿಗಿಹಿಡಿದು ಕೋಣೆಯ ಚಿಲಕವನ್ನು ಶಬ್ದ ಮಾಡದಂತೆ ತೆಗೆದು ಹೊರಗೆ ಅಡಿಯಿಟ್ಟಳು. ಅವಳ ದೇಹವೆಲ್ಲವೂ ಬೆವರಿನಿಂದ ತೊಯ್ದುಹೋಗಿತ್ತು.

ಮುನಿಸ್ವಾಮಿಗೆ ಅದೇ ತಾನೆ ನಿದ್ದೆಹತ್ತುತ್ತಿತ್ತು. ರುದ್ರಮ್ಮನ ಮೃದು ಮೋಹಕ ಕೈ ಅವನ ಒರಟು ಕೆನ್ನೆಗೆ ತಾಕಿದೊಡನೆಯೇ ಅವನು ಎಚ್ಚೆತ್ತ.

ಗಂಡಸಿಗೆ ಕಾಮೋದ್ರೇಕವುಂಟಾದರೆ ಅವನು ಸಂಯಮದಿಂದ ಅದನ್ನು ತಡೆಯಬಲ್ಲ. ಆದರೆ ಅತಿಕಾಮಿಯಾದ ಹೆಂಗಸಿಗೆ ಸಂಗಸುಖ ದಿಂದಲ್ಲದೆ ಅವಳಲ್ಲಿನ ಕಾಮ ಅಡಗದು.

ಕಾಮಾತಿರೇಕದಿಂದ ಉನ್ಮಾದಿನಿಯಂತಾಗಿದ್ದ ರುದ್ರಮ್ಮ ತನ್ನ ಹೆಣ್ಣುತನಕ್ಕೆ ಭೂಷಣವಾದ ಸಭ್ಯತೆ, ಲಜ್ಜೆಗಳನ್ನು ತ್ಯಜಿಸಿದಳು. ಡ್ರೈವರ್ ಮುನಿಸ್ವಾಮಿಯ ಮೈಮೇಲೆ ಪಶುವಿನಂತೆ ಬಿದ್ದು ಒದ್ದಾಡಿ ದಳು.

ಮುನಿಸ್ವಾಮಿಯ ಕೈ ಅನೈಚ್ಛಿಕವಾಗಿ ರುದ್ರಮ್ಮನ ಎದೆಯ ಮೇಲೆ ಸರಿದು ಅವಳ ತುಂಬಿದ ಸ್ಥನಗಳನ್ನು ಮರ್ದಿಸಿತು. ಆದರಿಂದ ರುದ್ರಮ್ಮನ ದೇಹ ರೋಮಾಂಚನಗೊಂಡಿತು. ತನ್ನ ಗಂಡನು ತನಗೆ ಸಾಸಿವೆಯಷ್ಟಾ ದರೂ ಇಂತಹ ಸೌಖ್ಯವನ್ನು ಕೊಡಲಿಲ್ಲವಲ್ಲ ಎಂದು ಅವಳು ಮನಸ್ಸಿ ನಲ್ಲಿಯೇ ಅಂದುಕೊಂಡಳು. ಮುನಿಸ್ವಾಮಿಯ ದೇಹಕ್ಕೆ ತನ್ನ ದೇಹ ವನ್ನು ತಾಗಿಸಿ ಅವನ ಕುತ್ತಿಗೆಗೆ ಮಾಲೆಯಾಗಿ ತನ್ನ ತೋಳುಗಳನ್ನು ಬಿಗಿದು ಅರೆತೆರೆದ ನಯನಗಳಿಂದ ಅವನ ಮುಖ ನೋಡುತ್ತ ಇಸಿದನಿಯಲ್ಲಿ ಹೇಳಿದಳು—"ನನ್ನನ್ನು ಇದೇ ರೀತಿ ಪ್ರೀತಿಸುತ್ತಿದ್ದರೆ ಸಾಕು."

ರುದ್ರಮ್ಮ ಮುನಿಸ್ವಾಮಿಯರ ಕಾಮಕ್ರೀಡೆ ಅಂದಿನಿಂದ ದಿನವಹಿ ನಡೆಯಲಾರಂಭಿಸಿತು. ಇಬ್ಬರೂ ಮೇರೆಯರಿಯದ ಒಲವು ನಲಿವುಗಳಿಂದ ಇರುತ್ತಿದ್ದರಾದರೂ ಇಬ್ಬರ ಹೃದಯದಲ್ಲೂ ತಮ್ಮ ಈ ದುರ್ನಡತೆಯನ್ನು ಯಾರಾದರೂ ಕಂಡಾರು ಎಂಬ ಭೀತಿ ಇದ್ದೇ ಇರುತ್ತಿತ್ತು. ಅವರ ಸುಖ ದಲ್ಲಿಯೂ ಸದಾ ಆ ಭೀತಿ ಅವರನ್ನು ಚೂರಿಯಂತೆ ಇರಿಯುತ್ತಿತ್ತು. ಆದರಿಂದಾಗಿ ಆ ಸುಖದಲ್ಲಿ ಒಂದು ಸಂತೃಪ್ತಿ ಕಾಣದಂತಾಗಿದ್ದರು.

ರುದ್ರಮ್ಮನಂತೂ ತನ್ನ ಹಾಸಿಗೆಯಿಂದೆದ್ದು ಸದ್ದುಮಾಡದಂತೆ ಬಾಗಿಲ ಅಗಳಿ ತೆಗೆದು ಹೊರನಡೆದು ಮುನಿಸ್ವಾಮಿಯೊಂದಿಗೆ ಸರಸವಾಡಿ ಮತ್ತೆ ಸ್ವಸ್ಥಾನ ಸೇರಬೇಕಾದರೆ ಅವಳಿಗೆ ಹೋದ ಜೀವ ಬಂದಂತಾಗುತ್ತಿತ್ತು. ಮುನಿಸ್ವಾಮಿಗೂ ಅಷ್ಟೆ. ರುದ್ರಮ್ಮನ ತೋಳಸೆರೆಗಾಗಿ ಅವನು ನಿರಂತರ ಹಂಬಲಿಸುತ್ತಿದ್ದನಾದರೂ ಅದೇ ತೋಳಸೆರೆ ಕುತ್ತಿಗೆಯ ಉರುಲಾಗಿ ಎಲ್ಲಿ ಪರಿಣಮಿಸೀತೋ ಎಂಬ ಹೆದರಿಕೆ ಅವನನ್ನು ಯಾವಾಗಲೂ ಕಾಡುತ್ತಿತ್ತು.

ಒಂದು ರಾತ್ರಿ ನಡೆದ ಘಟನೆಯಂತೂ ರುದ್ರಮ್ಮನನ್ನು ಸಂಪೂರ್ಣವಾಗಿ ಅಧೀರಳನ್ನಾಗಿ ಮಾಡಿಬಿಟ್ಟಿತ್ತು. ಎಂದಿನಂತೆ ಆ ರಾತ್ರಿ ಸಹ ಎದ್ದು ಎಲ್ಲರೂ ಮಲಗಿರುವುದನ್ನು ನೋಡಿ ಬಾಗಿಲು ತೆರೆದು ಹೊರಗೆ ಕಾಲಿಟ್ಟಿದ್ದಳು. ಅಷ್ಟರಲ್ಲಿ ಶಾಂತಮ್ಮನಿಗೂ ಎಚ್ಚರವಾಗಿ ಬಾಗಿಲು ಶಬ್ದ ಕೇಳಿ ಹಾಸಿಗೆಯಿಂದೆದ್ದು ಯಾರಿರಬಹುದೆಂದು ನೋಡಲೋ ಏನೋ ಅವಳೂ ಹೊರಬಂದಳು. ಅದೃಷ್ಟವಶಾತ್ ರುದ್ರಮ್ಮ ಶಾಂತಮ್ಮ ಬಂದುದನ್ನು ಗಮನಿಸಿ ನಿಂತಲ್ಲಿಯೇ ನಿಂತಳು. ಜಲಬಾಧೆಗೆ ಹೋಗಬೇಕಾಗಿತ್ತೆಂದು ಹೇಳಿ ನುಸುಳಿಕೊಂಡಳು. ಒಬ್ಬಳೇ ರಾತ್ರಿವೇಳೆಗಳಲ್ಲಿ ಹಾಗೆ ಹೊರಗೆ ಹೋಗಬಾರದೆಂದು, ಇನ್ನು ಮುಂದೆ ತನ್ನನ್ನು ಎಬ್ಬಿಸಿಬೇಕೆಂದು ಶಾಂತಮ್ಮ ಹೇಳಿದಳು. ಆದರೂ ರುದ್ರಮ್ಮನ ಹೃದಯದ ಅಳುಕು ಅವಳನ್ನು ಬಹಳ ಬಾಧಿಸಿತು.

ಈ ಕಳ್ಳಬಾಳು ಬಹಳ ದಿನ ಸಾಗದೆಂದು ರುದ್ರಮ್ಮನಿಗನ್ನಿಸಿತು. ಮುನಿಸ್ವಾಮಿಯೂ ಹೌದೆಂದ.

"ಅಂಗಾರೆ ಪತ್ತೇನೇ ಕೊಡದಂತೆ ನಾವೇಕೆ ಇಲ್ಲಿಂದ ಎಲ್ಲೀಗಾನಾ ಓಡೋಗಿಬಿಡಬಾರ್ದು"

ಆಳೆದು ಸುರಿದು ಸೂಚಿಸಿದಳು ರುದ್ರಮ್ಮ.

"ಆ್ಞಂ! ಓಡೋಗೋದ?"

ಘಾಬರಿಗೊಂಡು ಕೇಳಿದ ಮುನಿಸ್ವಾಮಿ.

"ಅಂಗಲ್ಲದೆ ನಂಗಿನ್ನೇನು ಉಪಾಯಾನು ತೊಚೋಕಿಲ್ಲ. ಇಲ್ಲಿದ್ರೆ ನಮ್ಮ ಸುಖ ನಾವು ಬುಟ್ಟಡಬೇಕು."

"ಓಡೋಗಿಬಿಟ್ರೆ ನಾವು ಸುಖವಾಗಿರಬೋದು ಅಂತೀಯ."

"ಎಂಗಾನಾ ಧೈರ್ಯ ಮಾಡಿ ಒಂಟ್ಹೋದ್ರೆ ದಿನಾ ಇಂಗೆದರ್ಕ್ಕೊಂಡು ನಡೆಯೋದು ತಪ್ತದೆ. ನೀನೆಂಗೂ ಗಂಡಸು. ಇನ್ನೆಲ್ಲಾರ ಚಾಕರಿ ಸಿಕ್ಕಾಕಿಲ್ವಾ?"

"ಚಾಕರಿ ಎಲ್ಲಾನಾ ಸಿಕ್ಕಬೌದು. ಆದ್ರೆ ನೀನು ನನ್ನ ಸಂಗಾಟ ಓಡಿಬಂದುಬುಟ್ರೆ ನಿನ್ನ ಗಂಡ ಮಾವ ಎಲ್ಲಾ ಸುಮ್ಕಿರ್ತಾರ. ಪೋಲೀಸ್ ಟೇಸನ್ಗೋಗಿ ಕಂಪ್ಲೇಟ್ ಕೊಟ್ಟು ಎಂಗಾನಾ ಪತ್ತೆ ಅಚ್ಚಿ ನನ್ನ ಚಮ್ಡ ಸುಲದ್ಬಿಡ್ತಾರೆ. ಎಷ್ಟಾದ್ರೂ ಅವ್ರು ಸಾವ್ಕಾರ್ರು."

"ಅದರ ಚಿಂತೆ ನಿಂಗ್ಬೇಡ. ನಾನು ಖುಷೀ ಪಟ್ಟು ನಿನ್ನ ಇಂದ್ಗುಟ್ಟಿ ಬಂದುಬಿಟ್ಟೆ ಅಂದ್ರೆ ಯಾರೇನು ಮಾಡೋಕೂ ಆಗಾಕಿಲ್ಲ."

"ಆದರೂ ನಾಳೆ ಅಂತ ಸಂದರ್ಪ ಬಂದಾಗ ನೀನು ಎಂಗೆ ತಿರಗ್ಕೊಂತೀಯೋ! ಆಮೇಕಿಂದ ನಾನು ಜೈಲು ಗಿಯ್ಲು ಕಾಣಬೇಕಾಯ್ತದೋ ಏನೋ."

"ನಿನ್ನಾಣೆ, ನನ್ನಾಣೆ, ಸಿವನಾಣೆ ನಾನು ನಿನ್ನ ಬಿಟ್ಟುಕೊಡಾಕಿಲ್ಲ. ಈ ಪರಾಣ ಇದ್ರೂ ಸೈ, ಓದ್ರೂ ಸೈ. ನನ್ನ ಮಾತ್ನಾಗೆ ನೀನು ವಸೀನೂ ಅಪನಂಬಿಕೆ ಪಡಬೇಡ."

ಸತ್ಯ ಪ್ರಮಾಣಗಳನ್ನು ಹಾಕಿ ರುದ್ರಮ್ಮ ಮುನಿಸ್ವಾಮಿಯ ಎದೆಯಲ್ಲಿ ಧೈರ್ಯ ತುಂಬಿದಳು. ಅವನನ್ನು ನಾನಾ ಪ್ರಕಾರವಾಗಿ ಉತ್ತೇಜಿಸಿ ಹುರಿದುಂಬಿಸಿದಳು. ಮುನಿಸ್ವಾಮಿಗೂ ಅದೇ ತಾನೆ ದೊರಕಿದ್ದ ಸ್ವರ್ಗಸದೃಶವಾದ ಅವಳ ಸಂಗಸುಖವನ್ನು ಬಿಡುವ ಮನಸ್ಸಾಗಲಿಲ್ಲ. ಆದರೂ ತನಗೆ ಕೆಲಸ ಕೊಟ್ಟು ಸಲಹಿದ ಧಣಿಗೇ ಎರಡು ಬಗೆಯಬೇಕಲ್ಲ ಎಂದು ಅವನು ಚಿಂತಿಸಿದ.

"ಅವರು ನನ್ನ ಧಣಿ. ಕೆಲಸ ಕೊಟ್ಟು ಕಾಪಾಡವ್ರೆ. ಅವರಿಗೆ ನಾನು ಇಂಗೆ ಅನ್ನಾಯ ಮಾಡೋದು ಚಂದಾಕ್ಕೈತಾ."

"ನೀನು ದುಡೀದೇ, ಅವರಿಗೆ ಫಾಯಿದೆ ತೋರಸ್ದೇ, ಅವರೇನೂ ನಿಂಗೆ ಸಂಬಳ ಕೊಡ್ತಿಲ್ಲ. ನೀನು ದುಡಿದಿದ್ದಿ, ಅವರು ಸಂಬಳ ಕೊಟ್ಟವ್ರೆ. ಇದರಾಗೇನು ಅವರು ಮಾಡಿರೊ ಬೋ ಉಪ್ಕಾರ?"

"ನಿಜ. ಆದ್ರೂ……."

"ಆದ್ರೂ ಏನು ?"

"ನೀನು ಅವರ ಲಗ್ನ ಆದ ಎಂಡ್ತಿ. ಗಂಡನ್ನ ಬುಟ್ಬುಟ್ಟು ನನ್ನ ಇಂದ್ಗುಟ್ಟಿ ಓಡಿಬರೋದು ಧರ್ಮಾನಾ ? ವಸಿ ಯೋಚ್ನೆ ಮಾಡು."

"ಅವರೂ ನನ್ನ ಲಗ್ನ ಆದ ಎಂಡ್ತಿ ಅಂತ ತಿಳ್ಕೊಂಡು ಧರ್ಮವಾಗಿ ನಡಕೊಂಡಿದ್ರೆ ನಾನಾರಾ ಯಾಕೆ ಇಂಗೆ ದಾರಿ ಬುಟ್ಟು ಅಲೀಬೇಕಾಯ್ತಿತ್ತು."

"ಗರ್ತಿ ಅನ್ನಸ್ಕೊಂಡೋಳು ಗಂಡ ಎಂಗಿದ್ರೂ ವಸಿ ತಡ್ಕೋಬೇಕು."

"ವಸಿ ಏನು ? ಮೂರು ವರ್ಸದಿಂದ ತಡೆದೂ ತಡೆದೂ ಅದರಿಂದ ಏನೂ ಫಾಯಿದೆ ಇಲ್ಲ ಅಂತ ಇದಕ್ಕೆ ಮನಸ್ಸುಮಾಡ್ದೆ. ನಾನು ಹಾದರಕ್ಕೆ ಬಿದ್ದದ್ದು ನನ್ನ ತಪ್ಪಲ್ಲ. ನನ್ನ ಸರೀಗೆ ನಡೆಸಿಕೊಳ್ದೆ ಓದ ಅವರ್ದೇ ತಪ್ಪು. ಅಲ್ಲವೇ, ನೀನೇ ಏಳು ?"

"ನಿಜ."

"ಅವರಿಗೆ ಸುಖ ಬೇಕು. ಅದ್ಕೆ ಸಿಕ್ಕಿದ ಸೂಳೆ ತಾಕ್ಕೆ ಓಯ್ತಾರೆ. ಅವರಂಗೆ ಮನುಷಜನ್ಮದಾಗೆ ಉಟ್ಟಿರೋ ನಂಗೂ ಸುಖ ಬೇಡವಾ ? ನಂಗೂ ಪರಾಯ ಇಲ್ಲವಾ ?"

ಆ ಮಾತು ಕೇಳಿ ಮುನಿಸ್ವಾಮಿಗೆ ನಗುಬಂತು. ಅವನಂದ,

"ಅಂಗಾರೆ ಅವರು ಸೂಳೆ ಮಡಕ್ಕೊಂಡವ್ರೆ ಅಂತ ನೀನು ಮಿಂಡಗಾರನ್ನ ಆರಸ್ಕೊಂಡು ಓಯ್ತಿದೀಯಾ ?"

"ಇನ್ನೇನ್ಮಾಡೋಕಾಯ್ತದೆ. ಅವರೊಂದು ದಾರಿ ಇಡದ್ರೆ ನಾನೊಂದು ದಾರಿ ಇಡೀನೇ ಬೇಕು."

"ಅದರಿಂದ ಬಾಳೇ ಮುರೀತದೆ."

"ಸುಖ ಇಲ್ಲದ ಬಾಳು ಮುರಿದರೆ ಮುರೀಲಿ."

ರುದ್ರಮ್ಮ ಮನೆಬಿಟ್ಟು ಹೊರಡಲು ಖಂಡಿತ ನಿರ್ಧರಿಸಿಬಿಟ್ಟಿದ್ದಾಳೆ ಎಂದು ಮುನಿಸ್ವಾಮಿ ಕಂಡುಕೊಂಡ. ಒಂದು ವೇಳೆ ತಾನು ಕೈಬಿಟ್ಟರೂ ಅವಳು ಮತ್ತೆ ಯಾರ ಹಿಂದಾದರೂ ಓಡಿಹೋಗುವುದಂತೂ ಖಂಡಿತ. ಹಾಗಿರುವಲ್ಲಿ ತಾನಾಗಿ ಒಲಿದು ಬಂದ ಅಂತಹ ಸುಂದರಿಯನ್ನು ನಿರಾಕರಿಸು

ವುದು ಮೂರ್ಖತನವೆಂದು ಅವನು ಬಗೆದ. ಅವಳ ಮೋಹಕ ರೂಪ ಅವನನ್ನು ಪೂರ್ಣವಾಗಿ ಮಾರುಗೊಳಿಸಿತ್ತು. ಅವನ ಹೃದಯವನ್ನು ಕ್ಷಣಕಾಲ ಆಕ್ರಮಿಸಿದ್ದ ವಿವೇಕ ಮಾಯವಾಗಿ ಆ ಸ್ಥಳದಲ್ಲಿ ವಿಷಯ ಲಾಲಸೆ ಮತ್ತೆ ಮೂಡಿತು.

"ಅಂಗಾರೆ ಇಲ್ಲಿಂದ ಒಂಟೋಗೋಣ ಅಂತೀಯ?"

"ಔದು. ನಿನಗೂ ನನ್ನ ಮೇಲೆ ಪಿರೀತಿ ಇರೋದಾದ್ರೆ."

"ನಿನ್ನ ಮೇಲೆ ಪಿರೀತಿ ಇಲ್ದಿದ್ರೆ ನಾನು ನಿನಗಾಗಿ ಇಷ್ಟು ಅಂಬಲಸ್ತಿದ್ನಾ?"

"ಮತ್ಯಾಕೆ ನೀನು ಇಲ್ಲೀಗಂಟ ಆಕಾಸ್ಪುರಾಣ ಏಳೋಕೆ ಸುರು ಮಾಡಿದ್ದು."

"ನಿನ್ನ ಮನಸ್ಸು ಎಂಗೈತೆ ಅಂತ ಚಂದಾಗೆ ತಿಳ್ಕೊಳ್ಳೋಣ ಅಂತ."

"ಈಗ ತಿಳ್ಕೊಂಡ್ಯಲ್ಲ"

ರುದ್ರಮ್ಮ ಮುನಿಸ್ವಾಮಿಯ ಕಡೆಗೆ ಒಂದು ನೋಟ ಬೀರಿದಳು. ಆ ನೋಟ ಅವನ ಹೃದಯದಲ್ಲಿ ಅಪೂರ್ವವಾದ ವಿದ್ಯುತ್ ತರಂಗವನ್ನು ಹುಟ್ಟಿಸಿತು. ಇನ್ನು ಮರುಮಾತನಾಡದೆ ಅವನು ರುದ್ರಮ್ಮನ ಹಂಚಿಕೆಗೆ ಒಪ್ಪಿಕೊಂಡ.

ತನ್ನ ಒಡವೆ ವಸ್ತುಗಳನ್ನೆಲ್ಲಾ ಒಂದೊಂದಾಗಿ ಮುನಿಸ್ವಾಮಿಯ ಹಸ್ತ ಕೊಟ್ಟು, ಮನೆಯಿಂದ ಹೊರಕ್ಕೆ ಸಾಗಿಸಿದಳು ರುದ್ರಮ್ಮ. ಜತೆಗೆ ಕೈಗೆ ಸಿಕ್ಕಿದ ಶಾಂತಮ್ಮನ ಒಂದೆರಡು ಒಡವೆಗಳನ್ನೂ ಸೇರಿಸಿಕೊಂಡಳು. ಸಮಯ ನೋಡಿ ಮನೆಯಲ್ಲಿದ್ದ ಕಬ್ಬಿಣದ ಪೆಟ್ಟಿಗೆಯಿಂದಲೂ ಒಂದಷ್ಟು ನಗದು ಹಣ ಸಂಗ್ರಹಿಸಿದಳು.

ಒಂದು ರಾತ್ರಿ ಯಾರಿಗೂ ಗೋಚರವಾಗದಂತೆ ರುದ್ರಮ್ಮ ಮುನಿಸ್ವಾಮಿಯರಿಬ್ಬರೂ ಭರಮಸಾಗರದಿಂದ ಪರಾರಿಯಾದರು.

೪

ಮೂರು ಮಹಡಿ ಚಂದ್ರಮ್ಮ

ಮೂರು ಮಹಡಿ ಚಂದ್ರಮ್ಮನ ಮನೆ ಎಂದರೆ ಆಗಿನ ಬೆಂಗಳೂರಿನ ರಸಿಕಜನಕ್ಕೆ ಅದೊಂದು ಸ್ವರ್ಗ. ಆಗಿನ್ನೂ ಈಗಿನಷ್ಟು ನಾಗರಿಕತೆ ಹರಡಿರಲಿಲ್ಲ. ಅಂತೆಯೇ ಸೂಳೆಗಾರಿಕೆಯೂ ಈಗಿನಷ್ಟು ಬೆಳೆದಿರಲಿಲ್ಲ. ಎಲ್ಲೆಲ್ಲೂ ಹಸಿವಿನ ಹಾಹಾಕಾರ ರುದ್ರತಾಂಡವವಾಡುತ್ತ, ಜನ ಪರದೇಶಿಗಳಂತೆ ಬಳಲಿ ಬೆಂಡಾಗಿ, ಮಾನವಂತರ ಹೆಣ್ಣುಮಕ್ಕಳು ಸಹ ಹಿಡಿ ಕೂಳಿಗಾಗಿ ಸೂಳೆಗಾರಿಕೆಯನ್ನು ಅವಲಂಬಿಸುವಂತಹ ದುಃಸ್ಥಿತಿ ಇನ್ನೂ ಬಂದಿರಲಿಲ್ಲ. ಜನತೆ ಜೀವನದಲ್ಲಿ ಪೂರ್ಣ ಸಂತೃಪ್ತರಾಗಿರದಿದ್ದರೂ ಈಗಿರುವಷ್ಟು ಅತೃಪ್ತರಾಗಿರಲಿಲ್ಲ. ವಿಲಾಸವಿಭ್ರಮಗಳಿಗಾಗಿ ಆಗ ಸೂಳೆಗಾರಿಕೆ ಇದ್ದಿತಾದರೂ ಈಗಿನಂತೆ ಕೇವಲ ಒಂದು ಹಿಡಿ ಅನ್ನಕ್ಕಾಗಿ ಸೂಳೆಗಾರಿಕೆ ಇರಲಿಲ್ಲ.

ಚಂದ್ರಮ್ಮನ ವೇಶ್ಯಾವಾಟ ಸಾಮಾನ್ಯ ಜನರ ನಿಲುಕಿಗೆ ಸಿಲುಕುವಂತಿರಲಿಲ್ಲ. ಏನಿದ್ದರೂ ಅದು ಶ್ರೀಮಂತರ ಶೃಂಗಾರಸದನವಾಗಿತ್ತು. ಸಾಮಾನ್ಯರೂ ಅಷ್ಟೆ. ಪಾಪಭೀರುಗಳಾಗಿ ನೀತಿಧರ್ಮಗಳಿಂದ ನಡೆದುಕೊಳ್ಳುತ್ತಿದ್ದರು. ಸೂಳೆಯರ ಮನೆ ಕಡೆ ಸುಳಿದು ಸಹ ನೋಡುತ್ತಿರಲಿಲ್ಲ. ತಮ್ಮನ್ನೇ ನೆಚ್ಚಿದ ಹೆಂಡತಿ ಮಕ್ಕಳಿಗೆ ದ್ರೋಹ ಬಗೆಯುವಂತಹ ದುರಾಲೋಚನೆ ಮಾಡುತ್ತಿರಲಿಲ್ಲ. ಧನಮದದಿಂದ ಸೊಕ್ಕಿದ ಸಿರಿವಂತರು ಮಾತ್ರ ಸೂಳೆಗಾರಿಕೆಗೆ ಆಶ್ರಯದಾತರಾಗಿದ್ದರು.

ಸರಾಫ್ ಅಂಗಡಿ ರಂಗಯ್ಯಶೆಟ್ಟಿ, ತರಗುಪೇಟೆ ಭದ್ರಣ್ಣ, ಜವಳಿ ಶಂಕರಪ್ಪ, ಚಿನ್ನಕೆಲಸದ ಚಲುವಾಚಾರಿ, ಬಸ್‌ಸರ್ವಿಸ್ ಪೆರುಮಾಳಯ್ಯರಂತಹ ಹೆಸರಾಂತ ಐಶ್ವರ್ಯವಂತರು ಅವಳ ಗಿರಾಕಿಗಳ ಗುಂಪಿನಲ್ಲಿದ್ದರು.

ಚಂದ್ರಮ್ಮ ರೂಪುಯೌವ್ವನಗಳಲ್ಲಿ ಒಳ್ಳೆ ರತಿಯಂತಿದ್ದಳು. ಅದೆಷ್ಟೋ ಮಂದಿ ಶ್ರೀಮಂತ ಯುವಕರು ಅವಳ ರೂಪಕ್ಕೆ ಮಾರುಹೋಗಿ ಅವಳ ಸಂಗಕ್ಕಾಗಿ ಹಾತೊರೆಯುತ್ತಿದ್ದರು. ಅವಳ ಕೃಪಾಕಟಾಕ್ಷಕ್ಕಾಗಿ, ಒಂದು ಹುಸಿನೋಟಕ್ಕಾಗಿ ಅವಳ ಮುಂದೆ ಹೊನ್ನಿನ ಸುರಿಮಳೆಯನ್ನೇ ಸುರಿಯಲು ಸಿದ್ಧರಾಗಿದ್ದರು.

ಹದಿನಾಲ್ಕನೆಯ ವಯಸ್ಸಿನಲ್ಲಿದ್ದಾಗ ಚಂದ್ರಮ್ಮ ಋತುಮತಿಯಾದಳು. ಅವಳ ತಾಯಿ ನಂಜಾಸಾನಿ ಕುಲಪದ್ಧತಿಯಂತೆ ಬಹಳ ಅದ್ದೂರಿಯಿಂದಲೇ 'ಗೆಜ್ಜೆಪೂಜೆ' ಮಾಡಿಸಿದಳು. ನಂಜಾಸಾನಿಗೆ ಸಾವಿರಾರು ರೂಪಾಯಿ ಸುರಿದು ಕಂಟ್ರಾಕ್ಟರ್ ಶ್ರೀನಿವಾಸಮೂರ್ತಿ ಚಂದ್ರಮ್ಮನೊಂದಿಗೆ ಪ್ರಥಮ ಸಮಾಗಮ ಮಾಡುವ ಮಹಾಭಾಗ್ಯವನ್ನು ಸಂಪಾದಿಸಿಕೊಂಡಿದ್ದ.

ಚಂದ್ರಮ್ಮ ಕೆಲವು ತಿಂಗಳ ಕಾಲ ಶ್ರೀನಿವಾಸಮೂರ್ತಿಯ ಒಲವಿನ ರಾಣಿಯಂತಿದ್ದಳು. ಅವಳ ರೂಪಿಗೆ ಮನಸೋತಿದ್ದ ಅವನು ಅವಳು ಕೇಳಿಕೇಳಿದುದನ್ನೆಲ್ಲಾ ತಂದುಕೊಡುತ್ತಿದ್ದ. ಅವಳನ್ನು ಕಟ್ಟಿಕೊಂಡು ಮೈಸೂರು, ಕೃಷ್ಣರಾಜಸಾಗರ, ಉದಕಮಂಡಲ ಮುಂತಾದ ಕಡೆಗಳಿಗೆಲ್ಲ 'ಮಧುಚಂದ್ರ ದರ್ಶನ'ಕ್ಕೆಂದು (Honeymoon) ಹೋಗಿಬಂದ.

ಶ್ರೀನಿವಾಸಮೂರ್ತಿಯ ವಯಸ್ಸು ಮೂವತ್ತೈದಕ್ಕೆ ಮೀರಿರಲಿಲ್ಲ. ಒಂದು ತೆರನಾದ 'ಟಿಪ್ ಟಾಪ್' ವ್ಯಕ್ತಿತ್ವ. ಸದಾ ನಗುನಗುತ್ತಿರುವ ಅವನ ಮುಖ ಎಂತಹವರ ಮನಸ್ಸನ್ನೂ ಸೆಳೆಯುವಂತಿತ್ತು.

ಚಂದ್ರಮ್ಮನಿಗೆ ಶ್ರೀನಿವಾಸಮೂರ್ತಿಯಲ್ಲಿ ಸ್ವಾಭಾವಿಕವಾದ ಪ್ರೇಮ ಅಂಕುರಿಸಿತು. ಅವಳು ಅವನಿಗಾಗಿ ಸದಾ ಕಾತರಿಸುವಂತಾದಳು. ತನ್ನ ಕುಲಕಸುಬನ್ನು ತ್ಯಜಿಸಿ ಅವನ ಕೈಹಿಡಿದ ಹೆಂಡತಿಯಂತೆ ಅವನೊಂದಿಗೆ ಬಾಳುವೆ ನಡೆಸಬೇಕೆಂದು ಅವಳ ಹೃದಯ ಆಶಿಸತೊಡಗಿತು.

ಒಂದು ದಿನ, ಶ್ರೀನಿವಾಸಮೂರ್ತಿ ಚಂದ್ರಮ್ಮನ ಮಲಗುವ ಕೋಣೆಯಲ್ಲಿ ಮಂಚದ ಮೇಲೆ ಕುಳಿತು, ಅವಳ ಕೆನ್ನೆಗೆ ಕೆನ್ನೆ ಕೂಡಿಸಿ, ಎದುರಿಗೆ ಗೋಡೆಯ ಮೇಲೆ ತೂಗುಹಾಕಿದ್ದ ಕನ್ನಡಿಯಲ್ಲಿ ಪ್ರತಿಬಿಂಬವನ್ನು ನೆಟ್ಟನೋಟದಿಂದ ನೋಡುತ್ತಿದ್ದ. ಅವನ ತೋಳು ಅವಳ

ಕುತ್ತಿಗೆಯನ್ನು ಬಳಸಿ ಕೈ ಎದೆಯ ಮೇಲೆ ಸರಿದು ಸ್ಥನವೊಂದನ್ನು ಮೃದು ವಾಗಿ ಸ್ಪರ್ಶಿಸುತ್ತಿತ್ತು. ಅವಳ ತೋಳು ಅವನ ಬೆನ್ನ ಹಿಂದೆ ಹಾಯ್ದು ಸೊಂಟವನ್ನು ಸುತ್ತುಗಟ್ಟಿ ಅವನನ್ನು ತನ್ನೆಡೆಗೆ ಗಾಢವಾಗಿ ಸೆಳೆದುಕೊಳ್ಳು ತ್ತಿತ್ತು. ಮರುಕ್ಷಣ ಅವರಿಬ್ಬರ ಮುಖಗಳೂ ಎದುರುಬದುರು ತಿರುಗಿದವು. ನಾಲ್ಕುತುಟಿಗಳೂ ಒಂದಾಗಿ ಕೂಡಿದವು. ಅವರ್ಣನೀಯ ಆನಂದ ಅವರಿಬ್ಬರನ್ನೂ ಪುಲಕಿತಗೊಳಿಸಿತು. ಶ್ರೀನಿವಾಸಮೂರ್ತಿ ಉನ್ಮತ್ತನಂತೆ ಚಂದ್ರಮ್ಮನನ್ನು ಬಿಗಿದಪ್ಪಿ ಅವಳ ಮುಖಕೆನ್ನೆಗಳ ಮೇಲೆ ಮತ್ತೆ ಮತ್ತೆ ಮುದ್ದಿಸಿದ.

ಅದೇ ಸಮಯವನ್ನು ಸಾಧಿಸಿ ಚಂದ್ರಮ್ಮ ಶ್ರೀನಿವಾಸಮೂರ್ತಿಯ ಎದುರು ತನ್ನ ಮನದಾಸೆಯನ್ನು ಮಂಡಿಸಿದಳು.

“ನನ್ನದೊಂದು ಮಾತು ನಡೆಸಿಕೊಡುವಿರಾ, ದೊರೆ ?”

“ಅದೇನು ಹೇಳು.”

“ನೀವು ನಡೆಸಿಕೊಡುವೆನೆಂದರೆ ?”

“ಬಾಯಿಬಿಟ್ಟು ಹೀಗೆಂದು ಹೇಳದೆ ನಡೆಸಿಕೊಡು ಎಂದರೆ ಏನು ನಡೆಸಿಕೊಡಲಿ, ಚಿನ್ನಾ ?”

“ನನಗೆ ಈ ಬಾಳು ಬೇಡವಾಗಿದೆ.”

“ಈ ಬಾಳು ಅಂದರೆ ?”

“ಸೂಳೆಯ ಬಾಳು.”

“ಸೂಳೆಯಾಗಿ ಹುಟ್ಟಿ ಸೂಳೆಯಬಾಳು ಬೇಡವೆಂದರೆ ಹೇಗಾಗು ತ್ತದೆ.”

“ಹಾಗಾದರೆ ನಮ್ಮ ಹುಟ್ಟಿನ ಮೇಲೆ ನಾವು ಸೂಳೆಯರೆಂದು ಠಸ್ಸೆ ಒತ್ತಿರುತ್ತದೇನು ?”

“ಹಾಗಲ್ಲ. ಸಮಾಜ ನಿಮ್ಮ ಕುಲವನ್ನು ಸೂಳೆಯರ ಕುಲವನ್ನಾಗಿ ಮಾಡಿದೆ.”

“ಅಂದರೆ ಸೂಳೆಯರ ಕುಲದಲ್ಲಿ ಹುಟ್ಟಿದವಳು ಗರತಿಯಾಗಿ ಬಾಳ ಬೇಕೆಂದು ಆಶಿಸಿದರೆ ಸಮಾಜ ನಿಷೇಧಿಸುತ್ತದೇನು ?”

"ಇಲ್ಲಾ........ಆದರೆ........"

ಯಾವುದೊಂದನ್ನೂ ನಿಶ್ಚಿತವಾಗಿ ಹೇಳಲಾರದೆ ತಡವರಿಸಿದ ಶ್ರೀನಿವಾಸಮೂರ್ತಿ. ಅದನ್ನು ಗಮನಿಸಿ ಚಂದ್ರಮ್ಮ ಕೇಳಿದಳು.

"ಹೇಳಿ – ಹೇಳಿ. ಪರವಾಗಿಲ್ಲ. ನಿಮ್ಮ ಮನಸ್ಸಿನಲ್ಲಿರುವುದಾದರೂ ಏನು. ಧೈರ್ಯವಾಗಿ ಹೇಳಿ."

"ಸೂಳೆ ಸಂಸಾರಿಯಾಗಬಲ್ಲಳೆ ?"

"ಸಂಸಾರಿಗಳು ಸೂಳೆಯರಾಗಿಲ್ಲವೆ ?"

"ಅದು ಬೇರೆ ಮಾತು."

"ಏಕೆ ?"

"ಸನ್ನಿವೇಶ ಪ್ರಭಾವದಿಂದ ಹಲವು ಸಂಸಾರಿಗಳು ಸೂಳೆಯರಾಗಿರ ಬಹುದು.

"ಹಾಗೆಯೇ ಹಲವರು ಸೂಳೆಯರೂ ತಮ್ಮ ಸೂಳೆಗಾರಿಕೆ ಬಿಟ್ಟು ಸಂಸಾರಿಗಳಾಗಲು ಇಚ್ಛಿಸಬಾರದೇಕೆ ?"

"ಇಚ್ಛಿಸಬಹುದು. ಆದರೆ ಸಮಾಜ ಒಪ್ಪಬೇಕಲ್ಲ !"

"ಅಂದರೆ ಸೂಳೆಯರ ಕುಲದಲ್ಲಿ ಹುಟ್ಟಿದವರು ಸೂಳೆಗಾರಿಕೆ ಯಲ್ಲಿಯೇ ತಮ್ಮ ಬಾಳು ಮುಗಿಸಬೇಕೆಂದು ನಿಮ್ಮ ಸಮಾಜ ಹೇಳುತ್ತ ದೇನು ?"

ಶ್ರೀನಿವಾಸಮೂರ್ತಿ ನಿರುತ್ತರನಾದ. ಚಂದ್ರಮ್ಮ ಅದರಿಂದ ಸ್ಫೂರ್ತಿಗೊಂಡವಳಂತೆ ಹೇಳಿದಳು,

"ಪಾಪಿಗಳನ್ನು ಪುನೀತರನ್ನಾಗಿ ಮಾಡಲು ಒಪ್ಪದ ಸಮಾಜ ಇದ್ದರೇನು, ಸತ್ತರೇನು ?"

"ನೀ ಹೇಳುವ ಮಾತು ನಿಜವಾದರೂ ಸಮಾಜದ ಕಟ್ಟುನಿಟ್ಟು ಗಳನ್ನು ಮುರಿಯುವ ಧೈರ್ಯ ನಮಗಿಲ್ಲ."

"ಅನರ್ಥಕಾರಿಯಾದ ಇಂತಹ ಕಟ್ಟುಗಳಿಂದ ಸಮಾಜದ ಭದ್ರತೆಗೇ ಅಪಾಯವಲ್ಲವೆ ?"

"ಆದರೂ ಸೂಳೆಯಾಗಿ ಹುಟ್ಟಿ, ಸೂಳೆಯ ಬಾಳು ನಡೆಸದೆ ಸಂಸಾರಿ ಯಾಗಿ ಬಾಳಬೇಕೆಂದು ಆಶಿಸುವ ಸೂಳೆಯರು ಅತಿ ವಿರಳ."

"ಆಗಲಿ. ಹಾಗೆ ಬಾಳಬೇಕೆಂದು ಬಯಸುವವರಿಗಾದರೂ ಸಮಾಜ ಅವಕಾಶ ಕೊಡಬೇಕಾದುದು ಅಗತ್ಯವಿಲ್ಲವೆ ?"

"ನಿಜ. ಒಪ್ಪಿಕೊಳ್ಳುತ್ತೇನೆ. ಅಂತಹ ಸೂಳೆಯರ ಕೈ ಹಿಡಿದು ಬಾಳಸಂಗಾತಿಯೆಂದು ಭಾವಿಸಿ ಬಾಳುವ ಜನರಾದರೂ ಯಾರಿದ್ದಾರೆ!"

"ನಿಮ್ಮಂತಹ ವಿಚಾರವಂತರು ಮೇಲ್ಪಂಕ್ತಿ ಹಾಕಿಕೊಡಬಹುದಲ್ಲ"

ಶ್ರೀನಿವಾಸಮೂರ್ತಿ ಕ್ಷಣಕಾಲ ಅಪ್ರತಿಭನಾದ. ಚಂದ್ರಮ್ಮನ ಮುಖವನ್ನು ನಿಟ್ಟಿಸಿ ಕೇಳಿದ :

"ನೀನು ಹೇಳುತ್ತಿರುವುದಾದರೂ ಏನು? ನನಗೆ ಅರ್ಥವಾಗಲಿಲ್ಲ"

"ನಾಲ್ಕು ಜನದ ಭೋಗದವಸ್ತುವಾಗಿ ಯಂತ್ರದಂತೆ ಬಾಳು ನಡೆಸುವ ಇಚ್ಛೆ ನನಗಿಲ್ಲ. ನನಗೂ ಹೃದಯವಿದೆ. ಸೂಳೆಯ ಕುಲದಲ್ಲಿ ಹುಟ್ಟಿದ್ದರೂ ನನ್ನ ಹೃದಯದಲ್ಲಿಯೂ ಒಲವಿದೆ. ಸುಪ್ತವಾಗಿದ್ದ ಒಲವನ್ನು ವಿಕಾಸವಾಗುವಂತೆ ಮಾಡಿದವರು ನೀವು. ಈ ನನ್ನ ಜೀವನವನ್ನು ನಿಮ್ಮ ಚರಣಸೇವೆಯಲ್ಲಿ ವಿನಿಯೋಗಿಸಲು ನಾನು ಆಶಿಸುತ್ತಿದ್ದೇನೆ. ಅದನ್ನು ನಡೆಸಿಕೊಡುವಿರಾ ?"

ಚಂದ್ರಮ್ಮನ ಆರ್ತನೋಟ ಶ್ರೀನಿವಾಸಮೂರ್ತಿಯ ಹೃದಯವನ್ನು ಮುಟ್ಟಿತು. ಅಲೌಕಿಕ ಸೌಂದರ್ಯದಿಂದ ಶೋಭಿಸುತ್ತಿರುವವಳೊಬ್ಬಳು ತನ್ನನ್ನು ಹಾಗೆ ಯಾಚಿಸುತ್ತಿರುವುದು ಅವನಿಗೆ ಹೆಮ್ಮೆಯೆನಿಸಿತು. ಅದೆಷ್ಟೋ ಕೋಟ್ಯಾಧೀಶ್ವರರು ಅವಳಿಗಾಗಿ ಬಾಯಿಬಾಯಿಬಿಟ್ಟುಕೊಂಡು ಕಾಯುತ್ತಿರುವಾಗ ಅವಳಾದರೂ ತನಗಾಗಿ ಕಾತರಿಸುತ್ತಿದ್ದಾಳೆ ನಿಜ. ತನಗಾದರೋ ಮದುವೆಯಾಗಿ ಮನೆಯಲ್ಲಿ ಹೆಂಡತಿಯಿದ್ದಾಳೆ. ಮೂವರು ಮಕ್ಕಳಿದ್ದಾರೆ. ಇದ್ದರೇನಂತೆ? ಇವಳನ್ನೂ ಇಟ್ಟುಕೊಂಡ ಸೂಳೆಯಂತೆ ನಡೆಸಿಕೊಳ್ಳಬಾರದೇಕೆ? ಆದರೂ ಅವಳು ಧರ್ಮದಿಂದ ಬಾಳುವಳೆಂಬ ಭರವಸೆಯಾದರೂ ಏನಿದೆ? ಈಗ ಉತ್ಸಾಹದಲ್ಲಿ ಏನೇನೋ ಹೇಳುತ್ತಾಳೆ. ಮುಂದೆ ಇದೇ ರೀತಿ ಇರುವಳೆಂಬ ನಂಬಿಕೆ ಏನು? ಇಲ್ಲ. ಸಾಧ್ಯವಿಲ್ಲ. ಹಾಗಾದರೆ? ಶ್ರೀನಿವಾಸಮೂರ್ತಿಯ ಮನಸ್ಸು ವಿಚಾರಮಗ್ನವಾಯಿತು. ಕೊನೆಗೆ ಅವನು ನಿರ್ಧರಿಸಿದ. ಹೇಗೂ ಅವಳೊಬ್ಬಳು ಸೂಳೆ. ನನ್ನೊಂದಿಗೆ ಇರಬೇಕೆನ್ನುವಷ್ಟು ಕಾಲ ಇದ್ದುಕೊಳ್ಳಲಿ, ಅದೂ

ಅವಳ ತಾಯಿಯ ಮನೆಯಲ್ಲೇ! ಮುಂದೆ ಅವಳು ದಾರಿಬಿಟ್ಟು ತನ್ನ ಕುಲಕಸುಬನ್ನೇ ಹಿಡಿದರೆ ಅವಳಷ್ಟಕ್ಕೆ ಅವಳನ್ನು ಬಿಟ್ಟು ತನ್ನ ಹಾದಿ ತಾನು ಹಿಡಿದರಾಯಿತು.

"ಏನು ಯೋಚಿಸುತ್ತಿರುವಿರಲ್ಲ ?"

ಅದೇ ಆರ್ತನೋಟದಲ್ಲಿ ಕೇಳಿದಳು ಚಂದ್ರಮ್ಮ.

"ಏನಿಲ್ಲ. ಇವಕ್ಕೆಲ್ಲಾ ನಿಮ್ಮ ತಾಯಿ ಒಪ್ಪುವಳೇ ಎಂದು."

"ನೀವು ಒಪ್ಪಿದರೆ ಅವಳನ್ನು ಒಪ್ಪಿಸುವ ಭಾರ ನನ್ನದು."

"ನನ್ನ ಮಾತಿರಲಿ. ಮೊದಲು ಅವಳನ್ನು ಒಪ್ಪಿಸು."

ಚಂದ್ರಮ್ಮನ ಮನಸ್ಸು ಆನಂದದಿಂದ ಉಬ್ಬಿ ನಲಿಯಿತು. ಆ ಆನಂದೋತ್ಸಾಹದಲ್ಲಿ ಅವಳು ಶ್ರೀನಿವಾಸಮೂರ್ತಿಯನ್ನು ಮನಸಾರ ತಬ್ಬಿ ಮುದ್ದಿಟ್ಟಳು.

ತಾಯಿಯ ಅನುಮತಿಯನ್ನು ಕೇಳಲು ಚಂದ್ರಮ್ಮ ನಿಧಾನಿಸಲಿಲ್ಲ. ಮರುದಿನ ಬೆಳಗ್ಗೆಯೇ ಅವಳೊಂದಿಗೆ ಆ ಮಾತು ಪ್ರಸ್ತಾಪಿಸಿದಳು.

"ಅಮ್ಮಾ......."

"ಏನು ಚಂದ್ರಾ ?"

"ನಾಲ್ಕು ಜನರ ತೊತ್ತಾಗಿ ಈ ಹಾಳು ಬಾಳು ಬಾಳುವುದಕ್ಕಿಂತ ನಾನು ಆಜೀವ ಒಬ್ಬನನ್ನು ಆಶ್ರಯಿಸಿ ಸುಖವಾಗಿದ್ದುಬಿಡಬೇಕೆಂದಿದ್ದೇನೆ."

ಆ ಮಾತು ಕೇಳಿ ನಂಜಾಸಾನಿಗೆ ಏಕಕಾಲದಲ್ಲಿ ಸಾವಿರ ಚೇಳುಗಳು ಕುಟುಕಿದಂತಾಯಿತು. ಇಡೀ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಯಿತು. ಮಗಳ ಕಡೆಯಿಂದ ಅವಳು ವಿಪುಲ ಹಣವನ್ನು ಗಳಿಸಬೇಕೆಂದು ಎಣಿಕೆಹಾಕಿದ್ದಳು. ಅಂತೆಯೇ ಅವಳಿಗಾಗಿ ಹಂಬಲಿಸಿ ಹೊನ್ನಿನ ಮಳೆಯನ್ನೇ ಕರೆಯುವ ಶ್ರೀಮಂತರು ಈಗಾಗಲೇ ನಂಜಾಸಾನಿಯ ಬೆನ್ನುಹತ್ತಿದ್ದರು. ಭೀಮಣ್ಣನ ಮೂಲಕ ಅವಳು ಅದೆಷ್ಟೋ ಮಂದಿಯೊಂದಿಗೆ ಬಾಯಿಮಾತಿನ ಒಪ್ಪಂದ ಸಹ ಮಾಡಿಕೊಂಡಿದ್ದಳು. ಆದರೂ ತನ್ನ ಮನಸ್ಸಿನಲ್ಲಾಗುತ್ತಿದ್ದ ತಳಮಳವನ್ನು ತೋರಗೊಡದೆ ಅವಳೆಂದಳು :

"ಅದು ನಮಗೆ ಕೂಡಿಬಂದದ್ದಲ್ಲ, ಚಂದ್ರಾ"

"ಅಂದರೆ?"

"ನಾಲ್ಕು ಜನರ ಸೇವೆಗಾಗಿಯೇ ಈ ನಮ್ಮ ಕುಲ ಮುಡಿಪು. ನಮಗೆ ದೇವರು ಈ ದೇಹ, ಈ ರೂಪಕೊಟ್ಟಿರುವುದಾದರೂ ಅದಕ್ಕಾಗಿಯೇ."

"ಅದನ್ನು ನಾನು ಒಪ್ಪುವುದಿಲ್ಲ."

"ನೀನು ಒಪ್ಪದಿದ್ದರೂ ಅನೂಚಾನವಾಗಿ ಕಾಲಕಾಲಾಂತರ ದಿಂದಲೂ ನಡೆದು ಬಂದಿರುವ ಕುಲಪದ್ಧತಿ ಅದು."

"ಅಂದರೆ ಸೂಳೆಯ ಮಗಳಾಗಿ ಹುಟ್ಟಿದವಳು ಸೂಳೆಯ ಕಸುಬು ಮಾಡಿಯೇ ಸಾಯಬೇಕೆಂಬ ನಿಯಮವಿದೆಯೆ ?"

"ಅಂತಹ ನಿಯಮವಿಲ್ಲದಿದ್ದರೂ ನಡವಳಿಕೆ ಇದೆ."

"ಆ ನಡವಳಿಕೆಯನ್ನೇಕೆ ನಾವು ಮುರಿಯಬಾರದು. ಎಲ್ಲರಂತೆ ನಾವೂ ಮನುಷ್ಯರು, ನಮಗೂ ಹೃದಯವಿದೆ, ಸ್ವಾಭಿಮಾನದಿಂದ ಜೀವಿಸ ಬೇಕೆಂಬ ಹಂಬಲವಿದೆ. ಎಂಬುದನ್ನು ಜಗತ್ತಿಗೆ ಸಾರಬಾರದೇಕೆ ?"

"ಅದರಿಂದ ಪ್ರಯೋಜನವಿಲ್ಲ."

"ಏಕೆ ?"

"ಹಾಗೆ ಮಾಡಹೊರಟರೆ ಜಗತ್ತು ನಮ್ಮ ಕಡೆಗೆ ಬೆರಳು ಮಾಡಿ ಕೊಂಕುನುಡಿಯಾಡಿ ನಗುವುದೇ ಹೊರತು ನಮ್ಮೊಂದಿಗೆ ಅನುತಾಪ ತೋರಿಸದು."

ಚಂದ್ರಮ್ಮನಿಗೆ ತಾಯಿಯ ಮಾತಿನಲ್ಲಿ ಸ್ವಲ್ಪವಾದರೂ ಸತ್ಯವಿದೆ ಎನ್ನಿಸಿರಬೇಕು. ಅವಳು ತುಸುಹೊತ್ತು ಮೌನದಿಂದಿದ್ದು ವಿಚಾರದಲ್ಲಿ ಸಿಲುಕಿದಳು. ನಂಜಾಸಾನಿ ಮತ್ತೆ ಹೇಳಿದಳು.

"ಗರತಿ ಸೂಳೆಯಾದಾಗ ಹಾಸ್ಯಮಾಡಿ ನಕ್ಕ ಜಗತ್ತೇ ಸೂಳೆ ಗರತಿ ಯಾಗುವೆನೆಂದಾಗಲೂ ನಗುತ್ತದೆ."

"ಗರತಿ ಸೂಳೆಯಾದರೆ ನಗುವುದು ನ್ಯಾಯವೇ. ಆದರೆ ಸೂಳೆ ಗರತಿಯಾದರೆ ನಗಬೇಕೇಕೆ ?"

"ಅದು ಜಗತ್ತಿಗೆ ಅಂಟಿಕೊಂಡಿರುವ ಜಾಡ್ಯ."

"ಆ ಜಾಡ್ಯಕ್ಕೆ ಹೆದರಿ ನಾವು ನಮ್ಮ ಬಾಳನ್ನು ಹಾಳುಮಾಡಿಕೊಳ್ಳ ಬೇಕೆ. ಬದಲಾಗಿ ಅದನ್ನು ಎದುರಿಸಿ ಬಾಳನ್ನು ನಂದನವನವನ್ನಾಗೇಕೆ ಮಾಡಿಕೊಳ್ಳಬಾರದು."

ವೃಥಾ ಮಾತು ಎಲ್ಲೆಲ್ಲಿಗೋ ಸಾಗುತ್ತಿದೆಯೆಂದು ನಂಜಾಸಾನಿ ಭಾವಿಸಿದಳು. ಅಂತೆಯೇ ಅವಳಂದಳು :

"ಸುಮ್ಮನೆ ಉಪಯೋಗಕ್ಕೆ ಬಾರದ ಮಾತು ಇದು"

"ಉಪಯೋಗವೋ ನಿರುಪಯೋಗವೋ. ನಾನಂತೂ ಶ್ರೀನಿವಾಸ ಮೂರ್ತಿಯವರೊಬ್ಬರನ್ನೇ ಆಶ್ರಯಿಸಿ ಇದ್ದುಬಿಡಬೇಕೆಂದು ನಿಶ್ಚಯಿಸಿ ದ್ದೇನೆ."

"ನಮ್ಮ ಕುಲಕಸುಬನ್ನು ಬಿಟ್ಟು?"

"ಹೌದು."

"ಅದು ಸಾಧ್ಯವಿಲ್ಲ."

"ಏಕೆ?"

"ನನಗೆ ಸಮ್ಮತವಿಲ್ಲ."

"ಕಾರಣ ?"

"ಆಗಲೇ ಹೇಳಿದೆನಲ್ಲ. ನಮ್ಮ ಕುಲಧರ್ಮವನ್ನು ನಾವು ಬಿಡದೆ ಪಾಲಿಸಬೇಕು. ಅದರಿಂದಲೇ ನಮ್ಮ ಉದ್ಧಾರ."

"ಉದ್ಧಾರವೆನ್ನುವ ಬದಲು ಅವನತಿ ಎಂದು ಹೇಳಲೊಲ್ಲೆಯೇಕೆ?"

"ನೀನಿನ್ನೂ ಚಿಕ್ಕವಳು. ನಿನಗೆ ಯಾವುದೂ ತಿಳಿಯುವುದಿಲ್ಲ."

"ಇದು ಸರಿ, ಇದು ತಪ್ಪು ಎಂಬುದಾದರೂ ಗೊತ್ತಾಗುತ್ತದೆಯೋ"

"ನೀನು ಯಾವುದು ಸರಿ ಎನ್ನುತ್ತಿರುವೆಯೋ ಅದೇ ತಪ್ಪು; ಯಾವುದು ತಪ್ಪು ಎನ್ನುತ್ತಿರುವೆಯೋ ಅದೇ ಸರಿ."

ಮಗಳು ತಾಯಿಯ ಮುಖವನ್ನು ತೀಕ್ಷ್ಣವಾಗಿ ದೃಷ್ಟಿಸಿ ನೋಡಿ ದಳು. ಅವಳ ವಾದ ಮೊಂಡುವಾದ ಎನ್ನಿಸಿತು.

"ನಿನ್ನ ದೃಷ್ಟಿಯಲ್ಲಿ ಹಾಗಿರಬಹುದು"

ಮಾತು ವಿರಸಕ್ಕೆ ಹೋಗುತ್ತಿದೆಯೆಂದು ನಂಜಾಸಾನಿ ಬಗೆದಳು. ಅದರ ರೀತಿಯನ್ನು ಮೆಲ್ಲಗೆ ಬದಲಿಸಲು ಯತ್ನಿಸಿದಳು—

"ನನ್ನ ಮಾತು ಕೇಳು, ಚಂದ್ರಾ"

"ಹೇಳು. ಏನು ಹೇಳಬೇಕೆಂದಿರುವೆಯೋ ಎಲ್ಲವನ್ನೂ ಹೇಳಿ ಬಿಡು."

ಚಂದ್ರಮ್ಮನ ದನಿಯಲ್ಲಿ ದುಃಖವಿತ್ತು, ನೋವಿತ್ತು. ಅದನ್ನು ಕಂಡುಕೊಂಡ ನಂಜಾಸಾನಿ, ಅವಳನ್ನೂ ತನ್ನ ಕಡೆಗೆ ತಿರುಗಿಸಿಕೊಳ್ಳಬೇಕೆಂದು ಒಲುಮೆಯ ಸ್ವರದಲ್ಲಿ ಹೇಳಿದಳು—

"ರೂಪಿನಲ್ಲಿ ನೀನು ಅಪ್ಸರೆ, ಚಂದ್ರಾ"

"........................"

"ನೀನಿರುವಲ್ಲಿ ಲಕ್ಷ್ಮಿ ತಾಂಡವವಾಡುತ್ತಾಳೆ."

"ಯಾವ ಲಕ್ಷ್ಮಿ?"

"ಧನಲಕ್ಷ್ಮಿ."

"ಅವಳೊಬ್ಬಳು ಸೈತಾನ್."

"ಜಗತ್ತೇ ಇಂದು ಪೂಜಿಸುವ ಧನವನ್ನು ಸೈತಾನ್ ಎನ್ನುವೆಯಾ ?"

"ಅದು ಸೈತಾನ್ ಆಗಿರದಿದ್ದರೆ ಅದರ ದೆಸೆಯಿಂದ ಜಗತ್ತಿನಲ್ಲಿ ಇಷ್ಟೊಂದು ಅನ್ಯಾಯ ಎಲ್ಲಿರುತ್ತಿತ್ತು ?"

"ಹಣದಿಂದಲೇ ಜನದ ಬಾಳಲ್ಲವೆ ?"

"ಅಂತೆಯೇ ಅದು ತಾಯಿ ಮಕ್ಕಳನ್ನು ತೊರೆಸುತ್ತದೆ, ಗಂಡ ಹೆಂಡಿರನ್ನು ತೊರೆಸುತ್ತದೆ, ಅಣ್ಣತಮ್ಮಂದಿರನ್ನು ಬಿಡಿಸುತ್ತದೆ, ಮಾಡ ಬಾರದ ಅನ್ಯಾಯಗಳನ್ನು ಮಾಡಿಸುತ್ತದೆ, ಮಾನವಾಗಿ ಬಾಳುವ ಹೆಣ್ಣುಗಳನ್ನೂ ಪ್ರಲೋಭನೆಗೆ ಗುರಿಪಡಿಸಿ ಅವರ ಶೀಲವನ್ನು ಹಾಳುಮಾಡುತ್ತದೆ."

"ಶೀಲ ಹಾಳಾದರೂ ಬದುಕಿರಬಹುದು. ಆದರೆ ಹಣವಿಲ್ಲದಿದ್ದರೆ ಬದುಕು ಸಾಗದು."

"ಅದಕ್ಕೇ ನಾನಂದದ್ದು. ಆ ಹಾಳು ಹಣ ಸೈತಾನ್ ಎಂದು"

ಮತ್ತೆ ಮಾತಿನ ಧಾರೆಯನ್ನು ಬದಲಿಸಲೇ ಬೇಕು ಎನ್ನಿಸಿತು ನಂಜಾಸಾನಿಗೆ—

"ನೀನು ಒಬ್ಬನ ಅಡಿಯಾಳಾಗಿ ಪಡುವ ಸುಖವಾದರೂ ಏನಿದೆ ?"

“ಒಲುಮೆಯ ಸುಖ, ನಲಿವಿನ ಸುಖ, ಹೃದಯದ ಸುಖ.”

“ಆ ಸುಖವನ್ನು ನೀನು ನಾಲ್ವರಲ್ಲಿಯೂ ಕಾಣಬಹುದಲ್ಲ”

“ಅದು ಪೈಶಾಚಿಕ.”

ನಂಜಾಸಾನಿಗೂ ಮಗಳ ಮಾತು ನಿಜವೆನಿಸಿತು. ಆದರೂ ಅವಳು ಅದಕ್ಕೆ ಒಪ್ಪಲು ಸಾಧ್ಯವಿರಲಿಲ್ಲ.

“ಚಂದ್ರಾ, ಕಾಲದಿಂದ ನಡೆದು ಬಂದ ಕುಲಧರ್ಮವನ್ನು ಬಿಡುವುದು ಅಪಾಯ.”

“ಅದನ್ನು ಆಗಲೇ ಹೇಳಿದೆಯಲ್ಲವೆ ?”

“ಮಾತ್ರವಲ್ಲ, ನೀನು ಯಾವನೋ ಒಬ್ಬನ ದಾಸಿಯಂತೆ ಅವನಿಗೆ ನಿನ್ನ ದೈವದತ್ತವಾದ ಈ ಸುಂದರ ದೇಹವನ್ನು ಸಮೆಸುವುದಕ್ಕಿಂತ, ನೀನು ನಾಲ್ವರ ಆರಾಧ್ಯದೇವತೆಯಾಗಿ ಅವರು ನಿನ್ನ ದಾಸಾನುದಾಸರಾಗಿ ತಮ್ಮ ದೇಹ ಸಮೆಸುವಂತಹ ಮಹಾಸಂದರ್ಭವನ್ನು ಕಳೆದು ಕೊಳ್ಳುವುದು ಅವಿವೇಕ.”

“ಚೆನ್ನಾಗಿದೆ, ನಿನ್ನ ವಿವೇಕದ ಉಪದೇಶ!”

ಚಂದ್ರಮ್ಮ ಮೂದಲಿಸಿದಳು. ನಂಜಾಸಾನಿಗೂ ನಾಚಿಕೆಯೆನ್ನಿಸಿತು. ಮುಖಭಂಗವಾದಂತಾಯಿತು. ಅವಳು ತುಸು ರೋಷದಿಂದಲೇ ನುಡಿದಳು :

“ನಿನಗೆ ಇಷ್ಟು ಸ್ವತಂತ್ರ ಕೊಟ್ಟಿದ್ದೇ ನನ್ನ ತಪ್ಪು. ನಾನು ಹೇಳಿದಂತೆ ಕೇಳಿಕೊಂಡು ಬಿದ್ದಿರು. ಇಲ್ಲವಾದರೆ ನಿನ್ನ ಸ್ಥಿತಿ ನೆಟ್ಟಗಾಗುವುದಿಲ್ಲ. ಬಹಳ ಕಷ್ಟಕ್ಕೆ ಗುರಿಯಾಗಬೇಕಾದೀತು. ಎಚ್ಚರಿಕೆ”

ಎಂದವಳೆ ಅಲ್ಲಿ ನಿಲ್ಲದೆ ಮುಖ ಸಿಂಡರಿಸಿಕೊಂಡು ತನ್ನ ಕೋಣೆಯ ಕಡೆಗೆ ಹೊರಟುಹೋದಳು. ತನ್ನ ಮನೋಭಿಲಾಷೆಗೆ ತಾಯಿ ಸಮ್ಮತಿ ಕೊಡುವಳೆಂದು ಬಹಳ ಭರವಸೆಯಿಂದಿದ್ದಳು ಚಂದ್ರಮ್ಮ. ಅಂತೆಯೇ ಮನಸ್ಸಿನಲ್ಲಿ ಮುಗಿಲೆತ್ತರದ ಬಾಳುವೆಯ ಗೋಪುರ ಕಲ್ಪಿಸಿಕೊಂಡಿದ್ದಳು. ನಂಜಾಸಾನಿಯ ಮಾತುಗಳಿಂದ ಅದು ಬುಡಸಹಿತ ನಡುಗಿದಂತಾಯಿತು. ಸಾಕ್ಷಾತ್ ತಾಯಿಯೇ ಮಗಳಿಗೆ ಕುಲಧರ್ಮದ ಹೆಸರಿನಲ್ಲಿ ಸೂಳೆಗಾರಿಕೆಯನ್ನು ಬೋಧಿಸುವ ಮೌಢ್ಯವನ್ನು ಕಂಡು ಚಂದ್ರಮ್ಮ ನೊಂದುಕೊಂಡಳು.

ಅಂದಿನಿಂದ ತಾಯಿ ಮಗಳಿಗೆ ವಿರಸ ಬೆಳೆಯಲಾರಂಭಿಸಿತು. ತನ್ನ ನಿರ್ಧಾರವನ್ನು ಬದಲಿಸಲಾರದೆ ಚಂದ್ರಮ್ಮ ಮತ್ತೆ ಮತ್ತೆ ತಾಯಿಯನ್ನು ಬೇಡಿದಳು, ಕಾಡಿದಳು. ಅದರ ಪ್ರತಿಫಲವಾಗಿ ಭೀಮಣ್ಣನಂಥವರು ಗಿರಾಕಿಗಳನ್ನು ಮನೆಗೆ ಕರೆತರುವಂತಾಯಿತು. ಅವರನ್ನು ರಮಿಸುವಂತೆ ನಂಜಾಸಾನಿ ಮಗಳಿಗೆ ಆಗ್ರಹಗೊಂಡು ಹೇಳುವುದೂ ಚಂದ್ರಮ್ಮ ಅದನ್ನು ವಿರೋಧಿಸಿ ನಿಲ್ಲುವುದೂ ಮೊದಲಾಯಿತು. ಇದರಿಂದ ಪರಿಸ್ಥಿತಿ ಇನ್ನೂ ವಿಷಮಗೊಂಡಿತು.

ಕಡೆಗೆ ಚಂದ್ರಮ್ಮ ಯೋಚಿಸಿದಳು. ಇನ್ನು ತಾಯಿಯ ಮನೆಯಲ್ಲುಳಿದರೆ ತನಗೆ ಉಳಿಗಾಲವಿಲ್ಲವೆಂದೂ ಅಲ್ಲಿಂದ ಹೊರಬೀಳುವುದೇ ಸರಿಯೆಂದೂ ಚಂದ್ರಮ್ಮನಿಗೆ ತೋರಿತು. ಅಂತೆಯೇ ಅವಳು ಶ್ರೀನಿವಾಸ ಮೂರ್ತಿಗೆ ವಿಚಾರವೆಲ್ಲವನ್ನೂ ತಿಳಿಸಿ ತನ್ನನ್ನು ಎಲ್ಲಿಗಾದರೂ ಕರೆದುಕೊಂಡು ಹೋಗಿಬಿಡುವಂತೆ ಕೇಳಿಕೊಂಡಳು. ಅದನ್ನು ಕೇಳಿ ಶ್ರೀನಿವಾಸ ಮೂರ್ತಿ ಗಾಬರಿಗೊಂಡ.

"ಇದು ಸಾಧ್ಯವೇ ಚಂದ್ರಾ ?"

"ಏಕೆ ಸಾಧ್ಯವಿಲ್ಲ."

"ಜನ ಏನನ್ನುತ್ತಾರೆ ?"

"ಇವನಿಗೇನು ಬಂತು ಸೂಳೆಯನ್ನು ಕಟ್ಟಿಕೊಂಡು ಓಡಿಹೋಗುವುದಕ್ಕೆ ಎಂದು."

"ನಾನು ಸೂಳೆಯರ ಕುಲದಲ್ಲಿ ಹುಟ್ಟಿದ ಮಾತ್ರಕ್ಕೆ, ನನ್ನ ತಾಯಿ ಸೂಳೆಯ ಕಸುಬು ಮಾಡುತ್ತಿದ್ದ ಮಾತ್ರಕ್ಕೆ ನಾನೂ ಸೂಳೆಯಾಗಿಬಿಟ್ಟೆನೆ ?"

"ಆದರೂ ಜನ ನಿನ್ನನ್ನು ಸೂಳೆಯೆಂದೇ ಕರೆಯುವರು."

"ಜನ ಒಪ್ಪಲೀ. ಬಿಡಲಿ, ನಿಮಗಾದರೂ ತಿಳಿಯದೇ ನಾನು ಅಂತಹ ಯಾವ ಕೀಳು ಕೆಲಸಕ್ಕೂ ಕೈಹಾಕಿಲ್ಲವೆಂದು."

ಶ್ರೀನಿವಾಸಮೂರ್ತಿಯ ಬಾಯಿ ಕಟ್ಟಿದಂತಾಯಿತು. ಚಂದ್ರಮ್ಮ ಮತ್ತೆ ಹೇಳಿದಳು:

“ಜನಕ್ಕೆ ಹೆದರಿ ನೀವು ನನ್ನ ಬಾಳು ಹಾಳು ಮಾಡಬೇಡಿ.”

“ಆದರೆ ನಿನಗಾಗಿ ನಾನು ನನ್ನ ಗೌರವ ಪ್ರತಿಷ್ಠೆಗಳನ್ನು ಬಲಿಕೊಡಲೇ.”

ಆ ಮಾತು ಕೇಳಿ ಚಂದ್ರಮ್ಮನ ಕಣ್ಣುಗಳಿಂದ ಫಳಫಳನೆ ಕಂಬನಿಗಳುದುರಿದುವು.

“ಹಾಗಾದರೆ ನೀವು ಈ ನರಕದಿಂದ ನನ್ನನ್ನು ಪಾರುಮಾಡಲಾರಿರಾ ?”

ಕಣ್ಣೀರಿಡುತ್ತಲೇ ಕೇಳಿದಳು ಚಂದ್ರಮ್ಮ.

“ಸಾಧ್ಯವಿಲ್ಲ. ಎಷ್ಟಾದರೂ ಇಂದು ನೀನು ಸೂಳೆ. ನಿನ್ನನ್ನು ಉದ್ಧರಿಸಲು ಹೊರಟು ನಾನು ಸಮಾಜದ ನಗೆಗೆ ಗುರಿಯಾಗಲಾರೆ.”

ಸ್ಥೈರ್ಯದಿಂದ ಶ್ರೀನಿವಾಸಮೂರ್ತಿ ಉತ್ತರಿಸಿದ.

“ಅಷ್ಟೇ ಅಲ್ಲ. ನಾನೊಬ್ಬ ಸಂಸಾರಿ. ನನಗೆ ಹೆಂಡತಿ ಮಕ್ಕಳಿದ್ದಾರೆ. ನಿನಗೋಸ್ಕರ ಅವರ ಜೀವನವನ್ನು ಕಲುಷಿತಗೊಳಿಸಲಾರೆ.”

“ಏನು ? ನಿಮಗೆ ಮದುವೆಯಾಗಿದೆಯೆ ? ಮಕ್ಕಳಿದ್ದಾರೆಯೆ ?”

ತಲೆಯೆತ್ತಿ ಶ್ರೀನಿವಾಸಮೂರ್ತಿಯ ಮುಖ ನಿಟ್ಟಿಸಿ ನೋಡುತ್ತ ಚಂದ್ರಮ್ಮ ಆಶ್ಚರ್ಯ ಚಕಿತಳಾಗಿ ಕೇಳಿದಳು. ಅವಳಿಗೆ ಆ ವಿಷಯವೇ ಗೊತ್ತಿರಲಿಲ್ಲ!

“ಹೌದು ” ಮೂರ್ತಿ ಉತ್ತರಿಸಿದ.

“ಹಾಗಿದ್ದೂ ನೀವೇಕೆ ನನ್ನ ಸಂಗ ಮಾಡಿದಿರಿ ?”

“ಮೋಜಿಗೆ.”

“ಮೋಜಿಗೆ! ಹ್ಞ....ನಿಮ್ಮ ಮೋಜಿಗೆ ಒಬ್ಬಳ ಜೀವನವನ್ನೇ ಹಾಳು ಮಾಡಿದಿರಲ್ಲವೆ ?”

“ಎಲ್ಲಿಯ ಹಾಳು ? ನಿಮ್ಮಂಥವರ ಬಾಳಾದರೂ ಇರುವುದು ಅದಕ್ಕಾಗಿಯೇ ಅಲ್ಲವೆ ?”

“ಅಂದರೆ ?”

“ಸೂಳೆಗಾರಿಕೆಗೆ. ನಾಲ್ವರು ರಸಿಕರನ್ನು ಸಂತಸಗೊಳಿಸುವುದಕ್ಕೆ. ನಿಮಗಿರುವ ರೂಪು ಲಾವಣ್ಯಗಳಾದರೂ ಆ ನಾಲ್ವರಿಗಾಗಿ.”

ಶ್ರೀನಿವಾಸಮೂರ್ತಿಯ ಬಾಯಲ್ಲಿಯೂ ಅದೇ ಮಾತು, ತನ್ನ ತಾಯಿಯಾಡಿದ ಮಾತುಗಳ ಪುನರಾವರ್ತನೆ. ಚಂದ್ರಮ್ಮನ ಕೋಪ ನೆತ್ತಿಗೇರಿತು. ಕಟಕಟನೆ ಹಲ್ಲುಗಳನ್ನು ಕಡಿದಳು. ಆವೇಶಗೊಂಡವ ಳಂತೆ ಕೇಳಿದಳು,

"ಹಾಗಾದರೆ, ನೀವು ನಮ್ಮನ್ನು ವಿಲಾಸವಸ್ತುವೆಂದು ತಿಳಿದಿ ರೇನು ?"

"ಅಲ್ಲದೇ ಇನ್ನೇನು ?"

"ನಿಮ್ಮ ಹೆಂಡತಿ ಮಕ್ಕಳಿಗೆ, ಅಕ್ಕ ತಂಗಿಯರಿಗೆ ಇರುವಂತೆ ನಮ್ಮ ಹೃದಯವೂ ಪ್ರೇಮಕಾತರವಾಗಿರುವುದೆಂದು ನಿಮಗೆ ತಿಳಿಯದೇ ?"

"ಅವರು ಸಂಸಾರಿಗಳು."

"ಅಂದರೆ ಸೂಳೆಯರಾಗಿ ಹುಟ್ಟಿದವರು ಮನುಷ್ಯರಲ್ಲವೆಂದು ನಿಮ್ಮ ಅಭಿಪ್ರಾಯವೇ ?"

"ಹಾಗೆಂದು ನಾನು ಹೇಳಲಿಲ್ಲ."

"ನೀವು ಹೇಳಲಿಲ್ಲ ನಿಜ. ಆದರೆ ನಿಮ್ಮಂಥ ಮಾನವ ಪಿಶಾಚಿಗಳು ಹಣದ ಹುಮ್ಮಸ್ಸಿನಲ್ಲಿ, ಯೌವನದ ಮದದಲ್ಲಿ, ಕಾಮದ ಭರದಲ್ಲಿ ಹಾಗೆಯೇ ಭಾವಿಸಿದಂತಿದೆ. ನಾವೂ ಮಿಕ್ಕೆಲ್ಲರಂತೆ ಮನುಷ್ಯರೆಂಬು ದನ್ನು ನೀವು ಮರೆತಂತಿದೆ. ನಿಮ್ಮಲ್ಲಿ ಬಂಡವಾಳವಿದೆ. ಬಂಡವಾಳ ಹಾಕಿ ತಿರುಗಿಸಬಹುದಾದ ಉಳಿದೆಲ್ಲ ಯಂತ್ರಗಳಂತೆ ಸೂಳೆಯೂ ಒಂದು ಯಂತ್ರ ಎಂದು ನೀವು ತಿಳಿದಿದ್ದೀರಿ. ಅವಳ ದೇಹಕ್ಕೆ ಅಂಟಿದ ಕಾಮ ಮಾತ್ರ ನಿಮಗೆ ಬೇಕು; ಅವಳ ಹೃದಯದಲ್ಲಿ ಮೊರೆಯುತ್ತಿರುವ ಪ್ರೇಮ ನಿಮಗೆ ತೃಣಸಮಾನ. ಅವಳ ಬಾಳು ಹಾಳಾದರೂ ಚಿಂತೆಯಿಲ್ಲ ನಿಮ್ಮ ಚಪಲ ತೀರಿದರೆ ಸಾಕು. ಎಂತಹ ಸಮಾಜ! ಎಂತಹ ಪಶುವೃತ್ತಿ !"

ಚಂದ್ರಮ್ಮನ ಕೋಪ ಮುಗಿಲು ಮುಟ್ಟಿತ್ತು. ಅವಳ ಆವೇಶ ಭರಿತ ಮಾತುಗಳನ್ನು ಕೇಳಿ ಶ್ರೀನಿವಾಸಮೂರ್ತಿ ಬೆಕ್ಕಸಬೆರಗಾದ. ಅವಳಿಗೆ ಉತ್ತರಕೊಡುವ ಚೈತನ್ಯವೂ ಅವನಲ್ಲಿ ಉಳಿದಿರಲಿಲ್ಲ. ಚಂದ್ರಮ್ಮ ಮತ್ತೆ ಗುಡುಗಿದಳು :

“ಹ್ಞೂಂ....ಇನ್ನು ನೀವು ಇಲ್ಲಿಂದ ಹೊರಡಿ. ನನ್ನೆದುರು ಒಂದು ಗಳಿಗೆಯೂ ನಿಲ್ಲಬೇಡಿ. ನನ್ನ ಹೊಟ್ಟೆಯಲ್ಲಿ ಹತ್ತಿ ಉರಿಯುತ್ತಿರುವ ಕಿಚ್ಚಿಗೆ ಮತ್ತಷ್ಟು ಗಾಳಿ ಬೀಸಬೇಡಿ”

ಎಂದವಳೇ ಬಳಿಯಲ್ಲಿನ ಸೋಫದ ಮೇಲೆ ಕುಳಿತು, ಕೈಗಳ ಮೇಲೆ ತಲೆಹೊತ್ತು, ಗಳಗಳನೆ ಅಳತೊಡಗಿದಳು.

ಶ್ರೀನಿವಾಸಮೂರ್ತಿಯ ಮನಸ್ಸು ನೊಂದಿತು. ಅವನು ಅವಳ ಬಳಿ ಸಾರಿ, ಅವಳ ಹೆಗಲ ಮೇಲೆ ಕೈಯಿಟ್ಟು ಮಮತೆ ತುಂಬಿದ ದನಿಯಲ್ಲಿ ಸಮಾಧಾನ ಮಾಡಲು ಯತ್ನಿಸಿದ—

“ಹಾಗಲ್ಲ ಚಂದ್ರಾ........”

“ನೀವೇನೂ ಹೇಳಬೇಡಿ. ಹೊರಡಿ ಇಲ್ಲಿಂದ. ಇಂದಿಗೆ ನನ್ನ ನಿಮ್ಮ ಋಣಾನುಬಂಧ ಕಡಿಯಿತು”

ಎಂದವಳೆ ಚಂದ್ರಮ್ಮ ಅವನ ಕೈಯನ್ನು ಕೊಡವಿದಳು. ಕೆಣಕಿದ ಫಣಿಯಂತೆ ಅವಳ ಮುಖ ರುದ್ರಗಭೀರವಾಗಿತ್ತು. ಕಣ್ಣುಗಳು ಕಾದ ಕೆಂಡದಂತೆ ಕಿಡಿಕಾರುತ್ತಿದ್ದವು.

ಶ್ರೀನಿವಾಸಮೂರ್ತಿ ಅವಳ ಭಯಂಕರ ರೂಪವನ್ನು ಕಂಡು ಹೆದರಿದ. ಪಾರ್ವತಿಯ ಪ್ರತಿರೂಪವಾದ ಮಹಾಕಾಳಿಯೇ ತನ್ನ ಭೀಕರ ನಾಲಗೆಯನ್ನು ಹೊರಚಾಚಿ ಅವನೆದುರು ಬಂದು ನಿಂತಂತಿತ್ತು. ಅದನ್ನೆದುರಿಸಿ ನಿಲ್ಲಲಾರದೆ ಮೂರ್ತಿ ಅಲ್ಲಿಂದ ಹೊರನಡೆದ.

ಚಂದ್ರಮ್ಮ ಆ ಅಸಹಾಯಕ ಸ್ಥಿತಿಯಲ್ಲಿ ಅದೆಷ್ಟೋ ಗೋಳಿಟ್ಟಳು. ಶ್ರೀನಿವಾಸಮೂರ್ತಿ ಇಮವರೆಗೂ ತನ್ನಲ್ಲಿ ತೋರುತ್ತಿದ್ದ ಪ್ರೇಮವನ್ನು ಅವಳು ನಿಜವೆಂದೇ ಭಾವಿಸಿದ್ದಳು. ಅದು ಕೇವಲ ಕಾಮಪ್ರೇರಿತವಾದುದೆಂದು ಅವಳು ಅರಿತಿರಲಿಲ್ಲ.

ಶ್ರೀನಿವಾಸಮೂರ್ತಿ ತನ್ನ ಕೈ ಬಿಟ್ಟುದು ಅವಳಿಗೆ ಅತೀವ ದುಃಖವೆನಿಸಿತು. ಕೆಲವು ದಿನ ಅವಳಿಗೆ ಜೀವನವೇ ಬೇಡವೆನಿಸಿತು. ಜಗತ್ತೇ ಶೂನ್ಯವಾಗಿ ಕಂಡಿತು. ಅವಳ ಹೃದಯದಲ್ಲಿ ಮೊಳೆತು ಚಿಗುರುತಿದ್ದ ಪ್ರೇಮ ಹಠಾತ್ತನೆ ಒಣಗಿ ನೆಲ ಕಂಡಿತು.

ಆ ನೋವಿನ ಸ್ಥಿತಿಯಲ್ಲಿ ಪ್ರೇಮವಿದ್ದೆಡೆ ವಿನಾಶಕಾರಿಯಾದ ಸೇಡೊಂದು ಹುಟ್ಟಿಕೊಂಡಿತು. ಅವಳು ತನಗೆ ತಾನೇ ಅಂದುಕೊಂಡಳು—ಜನ ನನ್ನಲ್ಲಿನ ಪ್ರೇಮಕ್ಕೆ ಬೆಲೆ ಕಟ್ಟದೆ ಹೋದರು. ಅವರು ಕೊಡುವ ಬೆಲೆಯಾವರೂ ಈ ನನ್ನ ರೂಪಕ್ಕೆ. ಅಂದ ಮೇಲೆ ಈ ರೂಪವನ್ನು ಕಾಮಿಸಿ ಬರುವ ಪಶುಗಳ ನೆತ್ತರನ್ನು ಸಂಪೂರ್ಣವಾಗಿ ಹೀರಿಬಿಡಬೇಕು. ಅವಳ ಮನಸ್ಸು ಮಿತಿಮೀರಿ ರೋಸಿತು. ಅವಳ ಹೃದಯದಲ್ಲಿನ ಸೇಡಿನ ಸಸಿ ಬೆಳೆದು ಬೇರು ಬಿಟ್ಟಿತು. ತನ್ನ ಸಂಗದ ಬೆಲೆಯನ್ನು ಮಿತಿಮೀರಿ ಹೆಚ್ಚಿಸಿದಳು. ಸಾವಿರ ಸಾವಿರ ರೂಪಾಯಿಗಳನ್ನು ಲೂಟಿ ಮಾಡತೊಡಗಿದಳು. ಪಶುಗಳೊಡನೆ ಪಶುವಾಗಿಯೇ ವರ್ತಿಸುವುದನ್ನು ಕಲಿತಳು.

ಶ್ರೀನಿವಾಸಮೂರ್ತಿ ಕೈಬಿಟ್ಟನಂತರ ಒಬ್ಬರಾದ ಮೇಲೊಬ್ಬರಂತೆ ಎಷ್ಟೋ ಶ್ರೀಮಂತರು ಅವಳ ಭಕ್ತರಾಗಿ ತಮ್ಮ ವಿಶಿಷ್ಟ ಆಸ್ತಿಯನ್ನೂ ಅವಳ ಪದತಲದಲ್ಲಿ ಅರ್ಪಿಸಿ ಹೇಳದೆ ಕೇಳದೆ ತಮ್ಮ ಹೆಂಡರುಮಕ್ಕಳನ್ನು ಸಹ ತೊರೆದು ದೇಶಾಂತರ ಓಡಿಹೋದರು. ಅವರೆಲ್ಲರ ದುಸ್ಥಿತಿ ಕಂಡು ಅವಳಿಗೆ ಒಂದಿಷ್ಟೂ ದುಃಖವೆನ್ನಿಸುತ್ತಿರಲಿಲ್ಲ. ಪ್ರತಿಯಾಗಿ ಅವಳ ಹೃದಯದಲ್ಲಿ ಪ್ರಳಯಜ್ವಾಲೆ ಹತ್ತಿ ಉರಿಯುತ್ತಿತ್ತು. ಆ ಭಯಂಕರ ಪ್ರಳಯ ಕಣ್ಣಿಗೆ ಕಾಣುತ್ತಿದ್ದರೂ ಜ್ವಾಲೆಗೆ ಮರುಳಾಗಿ ಮೈಸುಟ್ಟುಕೊಂಡು ಬೀಳುವ ಪತಂಗದ ಹುಳುಗಳಂತೆ ಭಕ್ತವೃಂದ ಅವಳ ಮೋಹಕ್ಕೆ ಸಿಕ್ಕಿ ಬಲಿಯಾಗುತ್ತಿದ್ದರು.

ಭೀಮಣ್ಣನ ಪೌರೋಹಿತ್ಯದಿಂದ ಬಸವರಾಜು ಚಂದ್ರಮ್ಮನ ಪರಮ ಭಕ್ತನಾದ. ಅವಳ ಕಾಯಸಂಗದಲ್ಲಿ ಅವನಿಗೆ ಸ್ವರ್ಗಕ್ಕೆ ಒಂದೇ ಗೇಣು ಎನ್ನಿಸಿತು.

ರುದ್ರಮ್ಮ ಮುನಿಸ್ವಾಮಿಯನ್ನು ಕಟ್ಟಿಕೊಂಡು ಪರಾರಿಯಾದಳು ಎಂಬ ಸುದ್ದಿ ಮುಟ್ಟಿದಾಗ ಬಸವರಾಜು ರೇಗಿದ, ಕೂಗಾಡಿದ. ಪೋಲೀಸಿಗೆ ದೂರು ಕೊಡುವುದಾಗಿ ಹಾರಾಡಿದ.

"ಹೊಲಸು ಮುಂಡೇದು, ಹಾಳಾಗಿಹೋಗಲಿ. ಇನ್ಯಾಕೆ ಅದರ ಸುದ್ದಿ. ಅದನ್ನ ಕಟ್ಕೊಂಡು ಇನ್ನು ನಾವು ಪೋಲೀಸು, ಕೋರ್ಟು,

ಕಛೇರಿ ಅಂತ ತಿರುಗಿದ್ರೆ ನಮಗಾನಾ ಮಾನಾ ಬತ್ತದಾ. ಬೇರೇ ಎಣ್ಣು ತಂದ್ಕೊಳ್ಳಾವಾ ಸುಮ್ಕಿರು."

ನಂಜಪ್ಪನವರು ಸಮಾಧಾನ ಹೇಳಿದರು.

ಚಿಕ್ಕಪ್ಪನಿಗೆ ಎದುರುತ್ತರ ಕೊಡಲಾರದೆ ಮನಸ್ಸಿನಲ್ಲೆ ನೊಂದು ಕೊಂಡು ಸುಮ್ಮನಾದ ಬಸವರಾಜು.

ಶಾಂತಮ್ಮನಿಗಂತೂ ಕೆಲವು ದಿನ ಊರಲ್ಲಿ ಮುಖ ಎತ್ತಿ ತಿರುಗುವುದೇ ಕಷ್ಟವಾಯಿತು.

ಶ್ರೀಮಂತರ ಮನೆಯಲ್ಲಿ ನಡೆದ ಈ ಅತ್ಯಾಚಾರವನ್ನು ಕುರಿತು ಊರಿನವರಿಗೆ ಗಟ್ಟಿಯಾಗಿ ಮಾತನಾಡುವಷ್ಟು ಧೈರ್ಯವಿಲ್ಲದಿದ್ದರೂ ಗುಸಗುಸ ಪಿಸಪಿಸಕ್ಕೇನೂ ಕೊರತೆಯಿರಲಿಲ್ಲ. ವ್ಯಂಗ್ಯನೋಟ, ಕುಹಕ ನಗು ಕಂಡರೂ ಕಾಣದಂತೆ ಹೇಗೋ ನಡೆಯುತ್ತಿತ್ತು. ಅದೂ ಕಾಲಕ್ರಮ ದಲ್ಲಿ ಕಾಲದ ಮುಸುಕಿನಲ್ಲಿ ಮರೆಯಾಯಿತು.

೫

ಭರಮಸಾಗರದಿಂದ ಪರಾರಿಯಾದ ರುದ್ರಮ್ಮ ಮುನಿಸ್ವಾಮಿ ಮಾರನೆಯ ದಿನ ಮುಂಜಾನೆ ಬೆಂಗಳೂರು ಸೇರಿದರು. ರುದ್ರಮ್ಮನಿಗೆ ಬೆಂಗಳೂರಿನ ಪರಿಚಯವಿರದಿದ್ದರೂ ಮುನಿಸ್ವಾಮಿಗೆ ಬೆಂಗಳೂರು ಹಳೆಯ ಊರಾಗಿತ್ತು. ದಂಡಿನ ಪೂರ್ ಹೌಸ್ ರೋಡಿನ ಮಿಲಿಟರಿ ಹೋಟಲಿನ ವೆಂಕಟರಾವ್ ಅವನ ಹಳೆಯ ದೋಸ್ತಿ. ಮುನಿಸ್ವಾಮಿ ಭರಮಸಾಗರದ ನಂಜಪ್ಪನವರಲ್ಲಿ ಹೋಗಿ ಕೆಲಸಕ್ಕೆ ಸೇರುವ ಮೊದಲು ಬೆಂಗಳೂರಿನ 'ಪಯನೀರ್ ಮೋಟಾರ್ ಸರ್ವೀಸಿ'ನಲ್ಲಿ ಡ್ರೈವರ್ ಕೆಲಸ ಮಾಡುತ್ತಿದ್ದ. ವೆಂಕಟರಾಯನ ಹೋಟಲಿನ ಮಾಂಸದ ತುಣುಕಿನ ರುಚಿಗೆ ಜೊಲ್ಲುಸುರಿಸಿ ಕಲಾಸಿಪಾಳ್ಯದಿಂದ ಪೂರ್ ಹೌಸ್ ರೋಡಿಗೆ ಹೋಗುತ್ತಿದ್ದ.

"ಏನೋ ಮುನಿಸ್ವಾಮಿ, ಯಾವಾಗ್ಲೋ ಮದ್ವೆ ಆದೆ? ನಂಗೂ ತಿಳೀದಂತೆ?"

—ಎಂದ ವೆಂಕಟರಾವ್ ಮುನಿಸ್ವಾಮಿ ರುದ್ರಮ್ಮನನ್ನು ಕರೆದುಕೊಂಡು ಹೋಟಲು ಪ್ರವೇಶಿಸಿದಾಗ.

"ಮದ್ವೆ........ಮದ್ವೆ........ಊಂ. ಈಗ ಮೂರ್ತಿಂಗಳಾಯ್ತು" ತಡವರಿಸುತ್ತ ಉತ್ತರಿಸಿದ ಮುನಿಸ್ವಾಮಿ.

ಆ ಮಾತು ಕಿವಿಹೊಕ್ಕ ಕ್ಷಣಕಾಲ ರುದ್ರಮ್ಮನ ಎದೆ ತಳಮುಳಿಸಿತು. ಮುಖ ಬೆವರಿತು.

ವೆಂಕಟರಾಯನ ಸೂಕ್ಷ್ಮದರ್ಶಕ ಯಂತ್ರದಂತಹ ಕಣ್ಣು ಎಲ್ಲವನ್ನೂ ಚೆನ್ನಾಗಿ ಗ್ರಹಿಸಿತು.

ಘಟ್ಟದ ಕೆಳಗಿನ ಕರಿ ಕೊಣೆಯ ಮುನಿಸ್ವಾಮಿಗೆ ಇಷ್ಟು ಲಕ್ಷಣವಾದ ಅದರಲ್ಲೂ ಮೈಸೂರಿನ ಹುಡುಗಿ ಲಗ್ನವಾಗಿರುವುದು ಸುಳ್ಳು, ಇದರಲ್ಲೇನೋ

ಮೋಸವಿರಬೇಕು, ಮುನಿಸ್ವಾಮಿ ಈ ಹುಡುಗಿಯನ್ನು ಹಾರಿಸಿಕೊಂಡು ಬಂದಿದ್ದಾನೆ ಎಂದು ಅವನ ಮನಸ್ಸು ತರ್ಕಿಸಿತು.

ರುದ್ರಮ್ಮನ ಕೌಮಾರ್ಯಸಹಜವಾದ ಸುಂದರ ರೂಪ ವೆಂಕಟರಾಯನ ಬಾಯಲ್ಲೂ ನೀರೂರಿಸಿತು. ಆದರೂ ಅದಾವುದನ್ನೂ ತೋರಗೊಡದೆ ಲಗು ಬಗೆಯಿಂದ ಎದ್ದು ಅವರುಗಳನ್ನು 'ಫ್ಯಾಮಿಲಿ ರೂಮಿ'ಗೆ ಕರೆದೊಯ್ದು ಕುಳ್ಳಿರಿಸಿ ತಿಂಡಿ ಕಾಫಿ ತರಿಸಿ ಕೊಟ್ಟು ಉಪಚರಿಸಿದ.

"ಅಂದಹಾಗೆ........ಮನೆ ಎಲ್ಮಾಡಿದ್ದೀಯಾ ?"

ಅವರು ತಿಂಡಿ ತಿನ್ನುತ್ತಿದ್ದಂತೆಯೇ ಮುನಿಸ್ವಾಮಿಯನ್ನು ಕೇಳಿದ ವೆಂಕಟರಾಯ.

"ಮನೆ. ಅದಕ್ಕೇ ನೋಡು ನಿನ್ನ ಹುಡಕ್ಕೊಂಡು ಬಂದದ್ದು. ಇವತ್ತಾನೇ ಬಂದದ್ದು ಊರಿಂದ. ರೈಲಿಳಿದು ಸೀದಾ ಇಲ್ಲಿಗೇ ಬಂದೆ. ಯಾವುದಾನಾ ಮನೆ ಇದ್ಯಾ ತಾ ?"

ವೆಂಕಟರಾಯನ ಸಂಶಯ ಇನ್ನೂ ಬಲವಾಯಿತು. ಇದು ಮದುವೆ ಯಾದ ಹೆಣ್ಣಲ್ಲ, ಮನೆ ಬಿಟ್ಟು ಹಿಂದೋಡಿ ಬಂದ ಹೆಣ್ಣೆಂದು ಖಾತರಿ ಯಾಯಿತು.

"ನೋಡು, ಮನೆ ಸಿಗೋದೇ ಕಷ್ಟ ಈ ಕಾಲದಲ್ಲಿ. ಎಲ್ಲೆಲ್ಲೂ ಹಾಳು ಸಿಂಧಿ ಜನ ಬಂದು ತುಂಬ್ಕೊಂಡ್ಬಿಟ್ಟವ್ರೆ. ಹತ್ರೂಪಾಯ್ನ ಮನೇಗೆ ಐವತ್ತು ರೂಪಾಯಿ ಬಾಡಿಗೆ ಕೊಡೋಕೆ ತಯಾರಾಗವ್ರೆ" ವೆಂಕಟರಾಯ ಹೇಳಿದ.

"ಹಾಗಂದ್ರಾಗಾಕಿಲ್ಲಪ್ಪ. ನನಗೋಸ್ಕರ ವಸೀ ತೊಂದ್ರೆ ತಕೊಂಡು ಎಲ್ಲಾರ ಒಂದು ಸಣ್ಣ ಮನೆ ನೋಡು. ನಾನೂ ನೋಡ್ತೀನಿ. ಅಲ್ಲೀಗಂಟ ನಿನ್ನ ವೋಟ್ಲನಾಗೇ ಒಂದ್ರೂಂ ಕೊಟ್ಟಿರು. ನಿನ್ನೇ ನಂಬ್ಕೊಂಡು ಬಂದಿ ದೀನಿ"

ಎಂದ ಮುನಿಸ್ವಾಮಿ. ವೆಂಕಟರಾಯನಿಗೆ ಬೇಕಾಗಿದ್ದುದೂ ಅದೇ. ಹೇಗಾದರೂ ಮಾಡಿ ಅವರನ್ನು ಅಲ್ಲಿಯೇ ನಿಲ್ಲಿಸಿಕೊಂಡರೆ ಸಮಯ ಸಾಧಿಸಿ ಆ ಹುಡುಗೀನ 'ಒಂದು ಕೈ ನೋಡಬಹುದು' ಎಂದು.

"ನನ್ಮಾನ ಯಾವುದೂ ರೂಮು ಖಾಲಿ ಇಲ್ಲ. ನೀನೂ ಅಂತ ಸದ್ಯಕ್ಕೆ ನನ್ನ ಆಫೀಸ್ ರೂಮೇ ಬಿಟ್ಕೊಡ್ತೀನಿ. ಬೇಗ ಒಂದು ಮನೆ ನೋಡ್ಕೊಂಡು ಹೊಂಟೋಗಿ."

—ಮನಸ್ಸಿನಲ್ಲಿನ ಕಪಟತನವನ್ನು ಮರೆಮಾಡಿ ನುಡಿದ ವೆಂಕಟರಾಯ. ತತ್ಕಾಲಕ್ಕೆ ಭಾರವಾದ ಹೊರೆಯೊಂದು ಇಳಿದಂತಾಯಿತು ಮುನಿಸ್ವಾಮಿಗೆ.

ವೆಂಕಟರಾಯ ತನ್ನ ಹೋಟಲಿನ ಆಫೀಸು ರೂಮಿನಲ್ಲಿದ್ದ ಸಾಮಾನುಗಳನ್ನೆಲ್ಲಾ ತೆಗೆಸಿ ಅದನ್ನು ಮುನಿಸ್ವಾಮಿಗೂ ರುದ್ರಮ್ಮನಿಗೂ ತೆರವು ಮಾಡಿಸಿಕೊಟ್ಟ.

ರುದ್ರಮ್ಮ ತನ್ನ ನೂತನ ಜೀವನವನ್ನು ಆರಂಭಿಸಿದಳು. ಆ ದಿನಗಳು ಅವಳಿಗೆ ತನ್ನ ಜೀವಮಾನದ ಮಹದಾನಂದದ ದಿನಗಳಾಗಿ ಪರಿಣಮಿಸಿದವು.

ಮುನಿಸ್ವಾಮಿಯೂ ಎಡೆಬಿಡದೆ ಅವಳ ಸಂಗಡಲೇ ಇರುತ್ತಿದ್ದ. ರುದ್ರಮ್ಮ ತನ್ನೊಡನೆ ತಂದಿದ್ದ ಒಡವೆ, ವಸ್ತ್ರ, ಹಣ ಇವುಗಳಿಂದಾಗಿ ಅವರಿಗೆ ಯಾವ ಕೊರತೆಯೂ ಇರಲಿಲ್ಲ.

ಕೆಲವೇ ದಿನಗಳಲ್ಲಿ ವೆಂಕಟರಾಯನಿಗೆ ರುದ್ರಮ್ಮನ ಪೂರ್ವ ವೃತ್ತಾಂತವೆಲ್ಲವೂ ತಿಳಿಯಿತು. ಮುನಿಸ್ವಾಮಿಯ ಬಾಯಿಂದಲೇ ಅವನು ಅವೆಲ್ಲವನ್ನೂ ಹೊರಡಿಸಿದ. ಮೇಲುಮಾತಿನಲ್ಲಿ ಅವನ ಧೀರತನವನ್ನು ಹೊಗಳಿದ. ಮನಸ್ಸಿನಲ್ಲಿ ರುದ್ರಮ್ಮನ ಸಂಗಸುಖಕ್ಕೆ ಮುಂಡಿಗೆ ಹಾಕತೊಡಗಿದ.

ದಿನವುರುಳಿದಂತೆ ರುದ್ರಮ್ಮ–ಮುನಿಸ್ವಾಮಿಯರ ಕೈಲಿದ್ದ ಹಣ ಕರಗಲಾರಂಭವಾಯಿತು. ಒಡವೆವಸ್ತ್ರಗಳನ್ನು ಮಾರಾಟಮಾಡಿಯಾಯಿತು. ಕೊನೆಗೆ ಇದ್ದ ಒಳ್ಳೊಳ್ಳೆಯ ಸೀರೆಗಳೂ ದಾರಿ ಹಿಡಿದು ಹೋದವು. ಮೈಮೇಲಿದ್ದ ಒಂದು ಸೀರೆಯ ತುಂಡಿನ ಹೊರತಾಗಿ ರುದ್ರಮ್ಮನಿಗೆ ಏನೊಂದೂ ಉಳಿಯದಾಯಿತು. ಕೂತುಣ್ಣುವವನಿಗೆ ಕುಡಿಕೆ ಹಣ ಎಲ್ಲಿಯತನಕ ಬಂದೀತು.

ಕಡೆಗೊಂದು ದಿನ ಮುನಿಸ್ವಾಮಿ ಎಲ್ಲಿಯಾದರೂ ಕೆಲಸ ಹುಡುಕಿಕೊಂಡು ಬರುವುದಾಗಿ ಹೇಳಿ ಹೊರಹೊರಟ.

ವೆಂಕಟರಾಯನಿಗೂ ಕಾದುಕಾದು ತಾಳ್ಮೆ ಮೀರಿತ್ತು. ಮುನಿಸ್ವಾಮಿ ರುದ್ರಮ್ಮನನ್ನು ಗಳಿಗೆಯೂ ಬಿಡದೆ ಸದಾ ಅವಳ ಸಂಗಡಲೇ ಇರುತ್ತಿದ್ದುದು ಅವನಿಗೆ ಹೊಟ್ಟೆಯಲ್ಲಿ ಉರಿಹಾಕಿದಂತಾಗಿತ್ತು.

ಒಂದು ದಿನವಾಯಿತು, ಎರಡು ದಿನವಾಯಿತು. ಮುನಿಸ್ವಾಮಿ ಹಿಂದಿರುಗಲಿಲ್ಲ. ರುದ್ರಮ್ಮನಿಗೆ ಗಾಬರಿಯಾಯಿತು. ಇದುವರೆಗಿದ್ದ ಹಮ್ಮು ಮಾಯವಾಗಿ ಆ ಸ್ಥಳದಲ್ಲಿ ಭಯ ಮೂಡಿತು. ಗುರುತು ಪರಿಚಯಗಳಿಲ್ಲದ ಸ್ಥಳದಲ್ಲಿ ಅದರಲ್ಲೂ ಸಾರ್ವಜನಿಕ ವಿಹಾರಕೇಂದ್ರವಾದ ಹೋಟಲಿನಲ್ಲಿ ಹೆಣ್ಣು ಹೆಂಗಸಾದ ತಾನೊಬ್ಬಳೇ ಹೇಗಿರುವುದೆಂಬ ಭೀತಿ ತಲೆದೋರಿತು. ಆ ಭೀತಿಯ ಹಿಂಬದಿಯಲ್ಲೇ ಮುನಿಸ್ವಾಮಿ ತನ್ನ ಕೈ ಬಿಡಲಾರ, ಇಂದು ಬಂದಾನು, ನಾಳೆ ಬಂದಾನು ಎಂಬ ಒಂದು ಭಂಡ ಧೈರ್ಯ ಬಂದು ಹೋಗುತ್ತಿತ್ತು. ಆ ನಿರೀಕ್ಷೆಯಲ್ಲಿಯೇ ದಿನಗಳು ವಾರಗಳಾದವು. ಮುನಿಸ್ವಾಮಿ ಮಾತ್ರ ಬರಲಿಲ್ಲ. ಮುನಿಸ್ವಾಮಿ ಕೈಕೊಟ್ಟನೆಂದು ಈಗ ರುದ್ರಮ್ಮನಿಗೆ ಸಿದ್ಧಾಂತವಾಯಿತು. ಇನ್ನು ತನ್ನ ಗತಿಯೇನೆಂದು ಅವಳ ಎದೆ ಬಡಿದುಕೊಳ್ಳತೊಡಗಿತು. ಕೈಲಿದ್ದ ಹಣ, ಮೈ ಮೇಲಿದ್ದ ಒಡವೆವಸ್ತುಗಳೆಲ್ಲವನ್ನೂ ಮುನಿಸ್ವಾಮಿ ಸುಲಿಗೆಮಾಡಿಯಾಗಿ ಹೋಗಿತ್ತು. ಅವನನ್ನು ನಂಬಿ ಅವಳು ತನ್ನ ವಿಶಿಷ್ಟವನ್ನೂ ಅವನ ಕೈಲಿ ಹಾಕಿಬಿಟ್ಟಿದ್ದಳು. ಈ ರೀತಿ ಅವನು ಮೋಸ ಮಾಡಿಯಾನೆಂದು ಅವಳು ಕನಸುಮನಸಿನಲ್ಲಿಯೂ ನೆನೆಸಿರಲಿಲ್ಲ.

ಮುಂದೇನು ಮಾಡುವುದು ? ವೆಂಕಟರಾಯನ ಹೋಟಲಿನಲ್ಲೇನೋ ಊಟ ಉಪಚಾರ ನಡೆಯುತ್ತಿತ್ತು. ಅವನಾದರೂ ಎಷ್ಟು ದಿನ ಸಾಲ ಕೊಟ್ಟಾನು ? ಆ ಸಾಲ ತೀರಿಸುವ ಮಾರ್ಗವಾವುದು ? ಹಾಳಾದವನು ಎಂತಹ ಕೆಲಸಮಾಡಿ ಹೋದ. ತಾನಾದರೂ ಇಲ್ಲದ ಸುಖ ಬಯಸಿ ಗಂಡನ ಮನೆ ಬಿಟ್ಟು ಬಂದು ಅವನ ಬೆನ್ನುಹತ್ತಿ ಎಂತಹ ಅವಿವೇಕದ ಕೆಲಸ ಮಾಡಿಕೊಂಡೆ.

ರುದ್ರಮ್ಮನಿಗೆ ದುಃಖ ಉಕ್ಕಿ ಬಂತು. ಕಣ್ಣೀರು ಕೋಡಿಕೋಡಿಯಾಗಿ ಹರಿಯುತೊಡಗಿತು. ತನ್ನ ಅವಿವೇಕವನ್ನು ತಾನೇ ಹಳಿದುಕೊಳ್ಳ ಹತ್ತಿದಳು.

ಗಂಡನ ಮನೆಗೇ ಮತ್ತೆ ಹಿಂದಿರುಗುವುದೇ? ತಪ್ಪಾಯಿತೆಂದು ಅವನ ಕಾಲುಗಳ ಮೇಲೆ ಬಿದ್ದು ಬೇಡಿಕೊಳ್ಳುವುದೇ? ತಪ್ಪು! ಇದೇನು ಕ್ಷಮಿಸಲು ಯೋಗ್ಯವಾದ ಸಾಧಾರಣ ತಪ್ಪೆ? ಅಲ್ಲದೆ ಈಗ ಯಾವ ಮುಖ ಹೊತ್ತು ಗಂಡನ ಮನೆಗೆ ಹೋಗುವುದು? ಅದಕ್ಕೆ ಧೈರ್ಯವಾದರೂ ಎಲ್ಲಿ?

ಇಲ್ಲ. ಗಂಡನ ಮನೆಗೆ ಹಿಂದಿರುಗುವಂತಿಲ್ಲ. ಅದು ಸಾಧ್ಯವಿಲ್ಲ. ಅಲ್ಲಿ ತನಗಿನ್ನು ಸ್ಥಳವಿಲ್ಲ.

ಮತ್ತೇನು ಮಾಡುವುದು???

ಆತ್ಮಹತ್ಯ!

ರುದ್ರಮ್ಮನ ಹೃದಯ ಭಯದಿಂದ ನಡುಗಿತು.

ಬಾಳಿನಲ್ಲಿ ಸುಖ ಕಾಣಬೇಕೆಂದು ಬಂದು ಬಾಳನ್ನೇ ಮುಗಿಸುವುದು!

ಎಷ್ಟು ಹೃದಯವಿದ್ರಾವಕ!

ರುದ್ರಮ್ಮ ವಿಚಾರತರಂಗಗಳ ಹೊಡೆತಕ್ಕೆ ಸಿಕ್ಕಿ ತತ್ತರಿಸಿದಳು.

ಅವಳ ಕಣ್ಣೀರಿನಿಂದ ಉರುಳುತ್ತಿದ್ದ ಕಂಬನಿ ಹೃದಯದ ಭಾರವನ್ನು ಕ್ರಮಕ್ರಮವಾಗಿ ಕರಗಿಸಲಾರಂಭಿಸಿತು.

ಇಲ್ಲ. ಸಾಧ್ಯವಿಲ್ಲ. ಆತ್ಮಹತ್ಯೆ ಮಾಡಿಕೊಳ್ಳಲಾರೆ. ಆದದ್ದೆಲ್ಲಾ ಆಗಲಿ ಜೀವದಿಂದಿದ್ದು ಜೀವದ ನೋವುಕಾವುಗಳನ್ನು ಅನುಭವಿಸಲೇ ಬೇಕು. ಕಷ್ಟಕ್ಕೆ, ದುಃಖಕ್ಕೆ ಇಂದಿನ ದುಸ್ಥಿತಿಗೆ ಹೆದರಿ ಜೀವ ಕಳೆದು ಕೊಳ್ಳುವುದು ಹೇಡಿತನ. 'ಈಸಬೇಕು ಇದ್ದು ಜೈಸಬೇಕು' ಎಂದವಳು ಕಡೆಗೂ ನಿರ್ಧರಿಸಿದಳು.

ಯಾರೋ ಅವಳ ಹೆಗಲ ಮೇಲೆ ಕೈಯಿಟ್ಟಂತಾಯಿತು. ಕ್ಷಣಕಾಲ ರುದ್ರಮ್ಮನ ದೇಹಾದ್ಯಂತವೂ ಆವೇಗದಿಂದ ಕಂಪಿಸಿತು. ಕುಳಿತೆಡೆಯಿಂದ ಅವಳು ಥಟ್ಟನೆದ್ದಳು.

ವೆಂಕಟರಾಯ ಅವಳ ಮೃದುವಾದ ಕೈಗಳನ್ನು ತನ್ನ ಕೈಗಳಲ್ಲಿ ಸೇರಿಸಿಕೊಂಡ. ಅವನ ಹಿಡಿತ ಅವಳ ಮೇಲೆ ಒಂದು ಇಂದ್ರಜಾಲಿಕ ಶಕ್ತಿಯನ್ನು ಪ್ರಯೋಗಿಸಿದಂತಾಗಿತ್ತು. ರುದ್ರಮ್ಮ ಅವನ ಹಿಡಿತದಿಂದ

ಬಿಡಿಸಿಕೊಳ್ಳುವುದೊತ್ತಟ್ಟಿಗಿರಲಿ, ಅನು ಅವಳ ಹೃದಯದಲ್ಲಿ ಏನೋ ಒಂದು ಹೊಸ ರೀತಿಯ ಆನಂದತರಂಗವನ್ನು ಎಬ್ಬಿಸಿದಂತಾಗಿತ್ತು. ಅವಳ ಮೈ ಮನವೆಲ್ಲವೂ ಆ ಆನಂದತರಂಗದಲ್ಲಿ ಸಿಲುಕಿ ರೋಮಾಂಚಿತಗೊಂಡಿತು.

"ನಿನ್ನ ಎಲ್ಲ ವಿಚಾರಗಳೂ ನನಗೆ ಗೊತ್ತು. ಮುನಿಸ್ವಾಮಿಯೇ ಹೇಳಿದ. ಅವನೊಬ್ಬ ದೊಡ್ಡ ವಿಶ್ವಾಸಘಾತಕ. ನಿನಗೆ ಮೋಸಮಾಡಿದ. ಹಾಗೆ ಮಾಡುವವನೆಂದು ನನಗೆ ಗೊತ್ತಿತ್ತು. ಆದರೆ ನೀನೇನು ತಿಳಿದು ಕೊಳ್ಳುವಿಯೋ ಎಂದು ನಾನು ಸುಮ್ಮನಿದ್ದೆ..........."

ರುದ್ರಮ್ಮನ ಕಣ್ಣುಗಳಿಂದ ಧಾರೆಧಾರೆಯಾಗಿ ಹರಿಯುತ್ತಿದ್ದ ನೀರನ್ನು ತನ್ನ ಹೆಗಲ ಮೇಲಿದ್ದ ಜರತಾರಿ ಶಲ್ಯದಿಂದ ವೆಂಕಟರಾಯ ಒರೆಸಿ ಮತ್ತೆ ಮಾತು ಮುಂದುವರಿಸಿದ.

"ಅವನು ಬಂದಾನೋ ಏನೋ ಎಂದು ನಾನು ಇಲ್ಲಿಯವರೆಗೂ ನೋಡಿದೆ. ಬರಲಿಲ್ಲ. ನೀನೇನೂ ಯೋಚಿಸಬೇಡ. ನಿನ್ನ ಜವಾಬ್ದಾರಿ ಇನ್ನುಮೇಲೆ ನನಗಿರಲಿ, ಧೈರ್ಯವಾಗಿರು" ವೆಂಕಟರಾಯ ಭರವಸೆ ಯಿತ್ತ.

ನೀರಿನಲ್ಲಿ ಮುಳುಗುತ್ತಿದ್ದವನಿಗೆ ಯಾವುದೋ ಆಸರೆ ಸಿಕ್ಕಿ, ಸಾವಿ ನಿಂದ ಪಾರಾದಂತಾಯಿತು ರುದ್ರಮ್ಮನಿಗೆ.

ಅಂದಿನಿಂದ ರುದ್ರಮ್ಮ ವೆಂಕಟರಾಯನ 'ಇಟ್ಟ ಹೆಣ್ಣಾ'ದಳು.

ಹೊಸ ನೀರು ಬಂದು ಹಳೆಯ ನೀರನ್ನು ಕೊಚ್ಚಿಕೊಂಡು ಹೋಯಿತು. ದಿನಕಳೆದಂತೆಲ್ಲಾ ವೆಂಕಟರಾಯನ ಹೊಸ ಸ್ನೇಹ ರುದ್ರಮ್ಮನ ಸ್ಮೃತಿಪಥದಿಂದ ಮುನಿಸ್ವಾಮಿಯನ್ನು ತೊಡೆದುಹಾಕಿತು.

ಆದರೂ ರುದ್ರಮ್ಮನಿಗೆ ಒಂದು ಕೊರತೆ. ಮುನಿಸ್ವಾಮಿ ದಿನದ ಇಪ್ಪತ್ನಾಲ್ಕು ಗಂಟೆಗಳ ಕಾಲವೂ ರುದ್ರಮ್ಮನ ಜತೆಯೇ ಇದ್ದುಕೊಂಡು ಅವಳಿಗೆ ಬೇಕುಬೇಕೆಂದಾಗಲೆಲ್ಲಾ ಅವಳ ಪಿಪಾಸೆ ತೀರಿಸುತ್ತಿದ್ದ. ಮೇಲಾಗಿ ಅವನು ಅವಿವಾಹಿತ, ಗಟ್ಟುಮುಟ್ಟಾದ ಆಳು. ಅವನ ಬಾಹು ಬಂಧನದಲ್ಲಿ ರುದ್ರಮ್ಮನಿಗೆ ಇಹಲೋಕವನ್ನೇ ಮರೆತುಬಿಡುವಂತಾಗುತ್ತಿತ್ತು.

ವೆಂಕಟರಾಯನಾದರೂ ನಡುಹರೆಯ ತೀರಿದವ. ಮುನಿಸ್ವಾಮಿ ಯಷ್ಟು ಬಲಕಾಯನಲ್ಲ. ಅಲ್ಲದೆ ಅವನು ದಿನದ ಬಹುಭಾಗವನ್ನು ತನ್ನ

ವ್ಯಾಪಾರದಲ್ಲಿ ಕಳೆಯುತ್ತಿದ್ದು ತನಗೆ ಬೇಕಾದಾಗಲೆಲ್ಲೋ ಒಮ್ಮೆ ಬಂದು ಕಾಮತೃಷ್ಣೆ ತೀರಿಸಿಕೊಂಡು ಹೋಗುತ್ತಿದ್ದ. ಮುನಿಸ್ವಾಮಿಯಿದ್ದಾಗ ದಿನವೂ ಹೊರಗಡೆ ಓಡಾಟವಿದ್ದೇ ಇರುತ್ತಿತ್ತು—ಈವತ್ತು ಲಾಲ್‌ಬಾಗು, ನಾಳೆ ಕಬ್ಬನ್‌ಪಾರ್ಕು, ಇನ್ನೊಂದು ದಿನ ಹೆಸರಘಟ್ಟ, ಮತ್ತೊಂದು ದಿನ ಬನ್ನೇರುಘಟ್ಟ ಹೀಗೆ. ಜತೆಗೆ ಸಿನಿಮಾ ನಾಟಕಗಳು ಬೇರೆ. ಈಗ ಅವೆಲ್ಲಕ್ಕೂ ಸೊನ್ನೆ. ಹೋಟಲಿನ ಕೋಣೆಯಾಯಿತು, ಅವಳಾಯಿತು. ಅದೂ ಒಂದು ಬಗೆಯ ತುರಂಗವಾಸದಂತಿತ್ತು ಅವಳಿಗೆ. ತೋರಿಕೆಗೆ ಸಂಭಾವಿತನಂತಿದ್ದ ವೆಂಕಟರಾಯ, ಅವಳನ್ನು ಬಹಿರಂಗವಾಗಿ ಮೆರೆಸಿ ಗೌರವವನ್ನು ಕಳೆದುಕೊಳ್ಳುವಷ್ಟು ಧೈರ್ಯಶಾಲಿಯಾಗಿರಲಿಲ್ಲ. 'ಅಕ್ಕಿಯ ಮೇಲೆ ಆಸೆ ನಂಟರ ಮೇಲೆ ಪ್ರೀತಿ' ಎಂಬಂತೆ ಅವನಿಗೆ ಅತ್ತ ತನ್ನ ಮಾನದ ಮೇಲೆ ದೃಷ್ಟಿಯಾದರೆ ಇತ್ತ ರುದ್ರಮ್ಮನ ಮೇಲೆ ಮೋಹ. ಹೀಗಾಗಿ ಕತ್ತರಿಯಲ್ಲಿ ಸಿಕ್ಕಿಕೊಂಡಂತಾಗಿತ್ತು ರುದ್ರಮ್ಮನ ಸ್ಥಿತಿ. 'ಕೆಟ್ಟದ್ದರಲ್ಲಿ ಮಧ್ಯಸ್ಥ' ಎಂಬಂತೆ ಅವಳು ಇದ್ದುದ್ದರಲ್ಲೇ ಸಮಾಧಾನ ಮಾಡಿಕೊಂಡು ದಿನ ದೂಡಬೇಕಾಗಿತ್ತು.

೬

ರುದ್ರಮ್ಮನ ಮೋಹಕವಾದ ರೂಪು, ಚಿಗುರಿನಂತೆ ಗರಿಗರಿಯಾದ ದೇಹ, ತುಂಬಿಕೊಂಡು ನಿಮಿರಿನಿಂತ ಬಟ್ಟಮೊಲೆಗಳು, ಬಿರಿದ ಕಮಲದಂತೆ ದುಂಡಾದ ಮುಖದಲ್ಲಿ ನೋಡುವವರ ಮನಸ್ಸನ್ನು ಕುಕ್ಕುವ ಕಪ್ಪಾದ ದುಂಬಿಕಣ್ಣುಗಳು, ಸದಾ ನಗುವನ್ನು ಹೊರಸೂಸುವ ರಕ್ತಗೆಂಪಿನ ತುಟಿಗಳು ಎಂತಹವರನ್ನೂ ಬೆರಗುಗೊಳಿಸುತ್ತಿದ್ದವು.

ರುದ್ರಮ್ಮನ ಕಾಮಾತಿರೇಕಪ್ರವೃತ್ತಿಯನ್ನು ತಿಳಿಯಲು ವೆಂಕಟರಾಯನಿಗೆ ಬಹಳ ದಿನ ಬೇಕಾಗಲಿಲ್ಲ. ಅವಳನ್ನು 'ಸಾಕು' ಮಾಡಲು ತನ್ನಿಂದ ಸಾಧ್ಯವಿಲ್ಲವೆಂದು ಅವನರಿತ, ಆದರೂ ಅವನಿಗೆ ಅವಳು ಬೇಕಾಗಿತ್ತು.

ಒಂದೊಂದು ದಿನವಂತೂ ರುದ್ರಮ್ಮ ತನ್ನ ವಿವಿಧ ಕಾಮಕಲೆಗಳಿಂದ ವೆಂಕಟರಾಯನಿಗೆ ಸಾಕುಸಾಕೆನಿಸಿಬಿಡುತ್ತಿದ್ದಳು. ಬೆಕ್ಕಿನ ಕೈಗೆ ಸಿಕ್ಕಿದ ಇಲಿಯಂತಾಗಿಬಿಡುತ್ತಿದ್ದಿತು ವೆಂಕಟರಾಯನ ಜೀವ.

ದಿನ ಕಳೆದಂತೆಲ್ಲ ವೆಂಕಟರಾಯನ ತಲೆಯಲ್ಲಿ ಒಂದು ದೊಡ್ಡ ಸಮಸ್ಯೆ ತಲೆದೋರಿ ಅವನನ್ನು ಮಹತ್ತರ ಯೋಚನೆಗೆ ಈಡುಮಾಡಿತು. ಎಷ್ಟು ದಿನವೆಂದು ಅವನು ಅವಳನ್ನು ಈ ರೀತಿ ಹೋಟಲಿನಲ್ಲಿಟ್ಟಿರುವುದು. ಅವಳನ್ನು ಅಲ್ಲಿಯೇ ಇರಗೊಟ್ಟರೆ ಎಷ್ಟು ದಿನ ತನ್ನ ಮತ್ತು ಅವಳ ಸಂಬಂಧವನ್ನು ಗುಟ್ಟಿನಲ್ಲಿಡಲು ಸಾಧ್ಯ. ಹಾಗಲ್ಲದೆ ಅವಳನ್ನು ಬೇರೆ ಮನೆಮಾಡಿ ಎಲ್ಲಿಯಾದರೂ ಇಟ್ಟರೆ ಮತ್ತಾರನ್ನಾದರೂ ಅವಳು ಕಟ್ಟಿಕೊಂಡು ಓಡಿಹೋಗಿ ತನಗೆ ಕೈಕೊಟ್ಟಾಳೆಂಬ ಹೆದರಿಕೆ ಬೇರೆ! ಅಂತೂ ಅವನಿಗೆ ಯಾವುದೊಂದೂ ಬಗೆ ಹರಿಯದಂತಾಯಿತು.

ರುದ್ರಮ್ಮನಿಗಂತೂ ಹೋಟಲಿನ ಕೋಣೆಯಲ್ಲಿಯೇ ಇದ್ದು ಇದ್ದು ಬೇಸರವಾಗಿ ಹೋಗಿತ್ತು. ಒಂದು ದಿನ ಅವಳು ತನ್ನನ್ನು ಬೇರೆ ಒಂದು ಮನೆಮಾಡಿ ಇಡಬೇಕೆಂದು ವೆಂಕಟರಾಯನನ್ನು ಕೇಳಿಯೇ ಬಿಟ್ಟಳು.

ಇತ್ತ, ತನ್ನ ರುದ್ರಮ್ಮನ ಕಾಮುಜೀವನ ಯಾರಿಗೂ ತಿಳಿಯಕೂಡದು, ಅತ್ತ ಆವಳನ್ನು ಬಿಡಲೂ ಆಗದು. ಈ ಉಭಯ ಸಂಕಟದಲ್ಲಿ ವೆಂಕಟ ರಾಯನಿಗೆ ಏನು ಮಾಡಬೇಕೆಂಬುದು ತಿಳಿಯದೆ ಪರಿತಪಿಸತೊಡಗಿದ. ವಿಷಯವನ್ನು ಆಪ್ತಮಿತ್ರ ಅಬ್ದುಲ್ಲಾ ಸಾಬಿಗೆ ತಿಳಿಸಿ ಆವನ ಸಲಹೆ ಪಡೆಯುವುದೇ ಸರಿಯೆಂದು ನಿರ್ಧರಿಸಿದ ವೆಂಕಟರಾಯ.

ಅಬ್ದುಲ್ಲಾ ಸಾಬಿಗೂ ವೆಂಕಟರಾಯನಿಗೂ ಇಪ್ಪತ್ತು ವರ್ಷಗಳ ಗಾಢ ಸ್ನೇಹ. ವೆಂಕಟರಾಯ ಹೋಟಲಿಡಲು ಸಹಾಯಮಾಡಿದವನೇ ಅಬ್ದುಲ್ಲಾ ಸಾಬಿ.

ಸುತ್ತಲ ಹಳ್ಳಿಗಳಿಂದ ಹಾಲು ತಂದು ಹೋಟಲುಗಳಿಗೆ ವರ್ತನೆ ಹಾಕುವುದು ಅಬ್ದುಲ್ಲಾ ಸಾಬಿಗೆ ವಂಶಪಾರಂಪರ್ಯವಾಗಿ ಬಂದ ಕುಲ ಕಸುಬು. ಬಸ್‌ಸ್ಟ್ಯಾಂಡು ಹೋಟಲು ದುರ್ಗೋಜಿರಾಯನ ಮಿಲಿಟರಿ ಹೋಟಲಿಗೆ ಅವನು ವರ್ತನೆ ಹಾಕುತ್ತಿದ್ದಾಗ ಅವನಿಗೆ ವೆಂಕಟರಾಯನ ಪರಿಚಯವಾಯಿತು. ಆಗ ವೆಂಕಟರಾಯ ಇನ್ನೂ ಇಪ್ಪತ್ತು ವರುಷದ ತರುಣ. ದುರ್ಗೋಜಿರಾಯನ ಹೋಟಲಿನಲ್ಲಿ ಸಪ್ಲೈ ಕೆಲಸಮಾಡಿಕೊಂಡಿದ್ದ. ಅಬ್ದುಲ್ಲಾ ಸಾಬಿಗೂ ವೆಂಕಟರಾಯನಿಗೂ ಇದ್ದ ಪರಿಚಯ ದಿನ ಕಳೆದಂತೆ ಗಾಢಸ್ನೇಹವಾಗಿ ಬೆಳೆಯಿತು.

ದುರ್ಗೋಜಿರಾಯನ ಹೋಟಲೆಂದರೆ ಆಗಿನ ಕಾಲಕ್ಕೆ ಒಳ್ಳೆ ಭರಾಟೆ ವ್ಯಾಪಾರ ನಡೆಯುತ್ತಿತ್ತು. ಹೋಟಲು ವ್ಯಾಪಾರದಲ್ಲಿ ಬರುತ್ತಿದ್ದ ಲಾಭ ವೆಂಕಟರಾಯನ ಕಣ್ಣು ಕುಕ್ಕಿ, ಅವನ ಹೃದಯದಲ್ಲಿ ಆಸೆಯ ಚಿಗುರು ಒಡೆಯಿತು. ತಾನೂ ಸ್ವಂತವಾಗಿಯೇ ಒಂದು ಹೋಟಲನ್ನು ನಡೆಸು ವಂತಿದ್ದರೆ? ನಡೆಸಬಹುದು. ಆದಕ್ಕೆ ತಕ್ಕ ಅನುಭವ ತನಗಿದೆ. ಆದರೆ ಬಂಡವಾಳ?

ಒಂದು ದಿನ ಅವನು ಈ ವಿಚಾರವನ್ನು ಅಬ್ದುಲ್ಲಾ ಸಾಬಿಯೊಂದಿಗೆ ಪ್ರಸ್ತಾಪಿಸಿದ, ಯಾರಾದರೂ ಬಂಡವಾಳ ಹಾಕಿದರೆ ಪಾಲುಗಾರಿಕೆ ವ್ಯಾಪಾರ ಮಾಡಬಹುದೆಂದು.

ಅಬ್ದುಲ್ಲಾ ಸಾಬಿ ತಾನೇ ಬಂಡವಾಳ ಹಾಕುವುದಾಗಿ ಸಮ್ಮತಿಸಿದ. ಹಾಗೆ ಹಾಕಿದ ಬಂಡವಾಳವನ್ನು ಪಾಲುಗಾರಿಕೆಯ ಬದಲು ಎರಡು ವರ್ಷ

ಗಳಲ್ಲಿ ತೀರಿಸಬೇಕೆಂದೂ, ಅವಕ್ಕೆ ನ್ಯಾಯದ ಬಡ್ಡಿ ವೆಂಕಟರಾಯ ಕೊಡ ತಕ್ಕದ್ದೆಂದೂ ಹೋಟಲಿಗೆ ಬೇಕಾದ ಹಾಲನ್ನು ಅಬ್ದುಲ್ಲಾ ಸಾಬಿಯಿಂದಲೇ ವರ್ತನೆ ತೆಗೆದುಕೊಳ್ಳತಕ್ಕುದೆಂದೂ ತೀರ್ಮಾನವಾಯಿತು.

ವೆಂಕಟರಾಯ ಹೋಟಲು ವ್ಯಾಪಾರ ಪ್ರಾರಂಭಿಸುವುದಕ್ಕೂ ಯೂರೋಪಿನಲ್ಲಿ ದ್ವಿತೀಯ ಮಹಾಯುದ್ಧ ಆರಂಭವಾಗಿ ಬೆಂಗಳೂರಿನಲ್ಲಿ ಮಿಲಿಟರಿಯವರು ತುಂಬಿಕೊಳ್ಳುವುದಕ್ಕೂ ಸರಿಯಾಯಿತು. ಆಗ ದುಡ್ಡಿಗೆ ಬೆಲೆಯೇ ಇರಲಿಲ್ಲ; ಇದ್ದ ಬೆಲೆಯೆಲ್ಲಾ ಸಾಮಾನುಗಳಿಗೆ. ಎಂತಹ ಕೀಳು ಪದಾರ್ಥವಾಗಲಿ ಒಂದಕ್ಕೆ ಹತ್ತರ ಬೆಲೆಯಾಗಿ ಮಾರಾಟವಾಗಿ ಹೋಗುತ್ತಿತ್ತು. ಒಂದೊಂದು ಸಲ ದುಡ್ಡಿದ್ದರೂ ಸಾಮಾನುಗಳು ಸಿಗುವುದೇ ದುರ್ಲಭವಾಗುತ್ತಿತ್ತು. ಹೋಟಲಿನವರಿಗಂತೂ ಶುಕ್ರದೆಸೆ ಕೂಡಿಬಂದಂತಿತ್ತು. ಕೊಳಕು ಕೊಬ್ಬನ್ನೇ ಅಪ್ಪಟ ಬೆಣ್ಣೆ ಕಾಯಿಸಿದ ತುಪ್ಪವೆಂದು ಕರೆದು ತಿಂಡಿ ಪದಾರ್ಥಗಳನ್ನು ಮಾಡಿ ಮಾರಾಟ ಮಾಡುತ್ತಿದ್ದರು. ಜನ ಸದ್ಯ ಹೊಟ್ಟೆಗೆ ಏನಾದರೂ ಸಿಕ್ಕಿದರೆ ಸಾಕೆಂದು, ಕೇಳಿದಷ್ಟು ಬೆಲೆ ಕೊಟ್ಟು ಕೊಂಡುಕೊಳ್ಳುತ್ತಿದ್ದರು. ಸಾರ್ವಜನಿಕ ಪೂರೈಕೆಗೆ ಸಾಕಷ್ಟು ಆಹಾರ ಪದಾರ್ಥಗಳು ಸಿಗದಿದ್ದರೂ ಹೋಟಲಿನವರಿಗೆ ಕಾಳಸಂತೆಯಲ್ಲಿ ಬೇಕಾದಷ್ಟು ಅಕ್ಕಿ, ಗೋಧಿ, ರವೆ ಮುಂತಾದ ರೇಷನ್ ಪದಾರ್ಥಗಳ ಸರಬರಾಜಾಗುತ್ತಿತ್ತು. ವೆಂಕಟರಾಯ ಒಂದೇ ವರ್ಷದ ದುಡಿತದಿಂದ ಅಬ್ದುಲ್ಲಾ ಸಾಬಿಯ ಸಾಲವನ್ನು ತೀರಿಸಿಬಿಟ್ಟ. ಅಲ್ಲಿಂದ ಮುಂದೆ ಕೈಲಿ ಹಣ ಸೇರಿದಂತೆ ವೆಂಕಟರಾಯನಿಗೆ ಸಮಾಜದಲ್ಲೂ ಸ್ಥಾನಮಾನಗಳು ಲಭಿಸಿದವು. ಸಂಭಾವಿತ ಮನೆತನದ ಹೆಣ್ಣೊಂದರ ಕೈ ಹಿಡಿದು ಸಂಸಾರವನ್ನು ಪ್ರಾರಂಭಿಸಿದ್ದ.

ವೆಂಕಟರಾಯನಿಗೆ ಸ್ವಾಭಾವಿಕವಾಗಿ ಒಂದೆರಡು ಷೋಕಿಗಳು ಅಂಟಿಕೊಂಡಿದ್ದವು. ಕಣ್ಣಿಗೆ ಲಕ್ಷಣವಾದ ಹೆಣ್ಣು ಕಂಡರೆ ಅವನು ಬಾಯಿ ಚಪ್ಪರಿಸುತ್ತಿದ್ದ; ಜತೆಗೆ ವಾರಕ್ಕೆ ಒಂದೆರಡು ದಿನವಾದರೂ 'ಪೈಕ್ಲಾಸ್ ಬಾಟಲಿ' ಬೇಕೆನಿಸುತ್ತಿತ್ತು ಅವನಿಗೆ. ಅವನ ಈ 'ಸದ್ಗುಣ'ಗಳು ಜನಕ್ಕೆ ತಿಳಿಯದೆಂದು ಅವನೇನೋ ಅಂದುಕೊಂಡಿದ್ದ. ಅಂತೆಯೇ

ಜನಕ್ಕೆ ಇವೆಲ್ಲ ತಿಳಿದಿದ್ದರೂ ತಿಳಿಯದಂತೆಯೇ ನಟಿಸುತ್ತಿದ್ದರು—ಅವನ ಕೈಲಿ ಓಡಾಡುತ್ತಿದ್ದ ದುಡ್ಡಿನಿಂದಾಗಿ.

ರುದ್ರಮ್ಮನ ವಿಚಾರದಲ್ಲಿ ಏನು ಮಾಡುವುದು, ಹೇಗೆ ಮಾಡುವುದು ಎಂದು ಅಬ್ದುಲ್ಲಾ ಸಾಬಿಯೊಂದಿಗೆ ವೆಂಕಟರಾಯ ಆಲೋಚಿಸಿದ. ಸಾಬಿಗೆ ಅಪಾರ ಅನುಭವ! ಇಂತಹ ವಿಚಾರದಲ್ಲೆಲ್ಲಾ ಅಂತೆಯೇ ಅವನೆಂದ:

"ಹೋಟ್ಲೆನಾಗಿಡೋದು ವಸೀನೂ ಚಂದಾಕಿಲ್ಲ. ಬೇರೇ ಮನೆ ಮಾಡಿಡೋದೆ ಭೇಷ್ ಅನ್ನಸ್ತದೆ ನಂಗೆ"

"ನಂಗೂ ಹಾಗೆ ಅನ್ಸುತ್ತೆ. ಆದರೆ ಅವಳು ಮೊದಲ್ನೇ ನಂಬರ್ ಚಿನಾಲಿ. ಗಂಡನ್ನೇ ಬಿಟ್ಟು ಓಡ್ಬಂದಿದಾಳೆ. ಬೇರೆ ಮನೆ ಮಾಡಿಟ್ಟರೆ ನಾನೇನಾರೋ ಅಲ್ಲಿ ಸದಾ ಕಾವಲಿರೋಕಾಗುತ್ತಾ? ನಂಗೂ ಪಂಗನಾಮ ಹಾಕಿದ್ರೆ ಹೆಂಗೆ ಅಂತ ಯೋಚಿಸ್ತಿದೀನಿ" ವೆಂಕಟರಾಯ ಉತ್ತರಿಸಿದ.

"ಅದೂ ಸರಿ ಅನ್ನು. ಇಂಥಾ ಎಂಗ್ಸಿನ ಮನಸೊಳಗೆ ಸೈತಾನ್ ಇರ್ತಾದೆ, ಆ ಸೈತಾನ್ ಅಂಗೆ ಕುಣಸ್ತದೆ. ಇದು ನಾಯಿ ಐತಲ್ಲಾ ಅಂಗೆ. ನೀನು ಅದ್ನ ಎಷ್ಟೆ ಪಸಂದಾಗಿ ಮಡಗಿರು ಪಾಯ್ಖಾನೆ ಕಂಡ್ರೆ ಧುಬಕ್ ಅಂತ ಓಯ್ತದೆ. ಅವರಂಗೇ ಈ ಮನೆ ಬುಟ್ಬಂದಿರೋ ಎಂಗಸ್ರು. ಅವ್ರನ್ನ ನಂಬ್ನೇಬಾರ್ದು."

"ಅದಕ್ಕೇ ನಾನು ನಿನ್ನ ಕೇಳೋದು. ಅದು ನನ್ನ ಕೈ ಬಿಟ್ಟು ಹೋಗದಂತೆ ಏನು ಮಾಡೋಣ ಹೇಳು."

ವೆಂಕಟರಾಯ ಬೀಡಿಕಟ್ಟನ್ನೂ ಬೆಂಕಿಪೆಟ್ಟಿಗೆಯನ್ನೂ ಅವನ ಮುಂದಿಟ್ಟ. ಸಾಬಿ ಒಂದು ಬೀಡಿ ತೆಗೆದು ತನ್ನ ತುಟಿಗಳ ನಡುವೆ ಸೇರಿಸಿ ಅದಕ್ಕೆ ಬೆಂಕಿ ಕಡ್ಡಿ ಗೀರಿ ತೋರಿಸಿ ಹೊಗೆ ಎಳೆಯುತ್ತ ಆಲೋಚನಾ ಮಗ್ನನಾಗಿ ಕುಳಿತ. ವೆಂಕಟರಾಯನೂ ಒಂದು ಬೀಡಿ ಸೇದುತ್ತ ಸಾಬಿಯ ಮುಖವನ್ನೇ ನೋಡತೊಡಗಿದ.

ಬಹಳ ಆಲೋಚಿಸಿದ ನಂತರ ಸಾಬು ಹೇಳಿದ:

"ನೋಡು. ಇವಕ್ಕೆ ಒಂದು ಉಪಾಯ ಐತೆ. ನೀನು ಏಳ್ದಂಗೆ ಅದ್ನ ಬೇರೆ ಎಲ್ಲಾರ ಮನೆ ಮಾಡಿ ಮಡಗಿದ್ರೆ, ಅದು ಯಾವದಾನಾ ಒಂದು ದಿನ ಚಕ್ಕರ್ ಕೊಡ್ತದೆ."

"ಅದ್ಕೆ ನಮ್ದು ಸಾಬರ್ದು ಮೊಹಲ್ಲಾ ಐತಲ್ಲ ಅಲ್ಲಿ ನಿಮ್ದೊ ಜನ ನರಮನ್ಷ ಸುಳಿಯಾಕಿಲ್ಲ. ಅಲ್ಲಿ ಒಂದು ಮನೆ ಮಾಡಿ ಮಡಗ್ಬಡು"

"ಆದ್ರೆ........"

"ನೀನೇನು ಅನುಮಾನ ಮಾಡ್ಬೇಡ. ನಮ್ದೊ ಬೀಬೀ ಐತೆ, ಬಹನ್ ಐತೆ. ಹುಷಾರಾಗಿ ನೋಡ್ಕೋತದೆ."

ವೆಂಕಟರಾಯನಿಗೆ ಅಬ್ದುಲ್ಲಾಸಾಬಿಯ ಸೂಚನೆ ಹಿಡಿಸಿತು. ಅವನಂದ

"ಮನೆ ಯ್ಹಾವ್ದಾನ ಐತಾ ?"

"ಅದರ್ದು ಯೋಚ್ನೆ ನಿಂಗ್ಬೇಡ. ನಮ್ಮನೆ ಬಾಜೂದಲ್ಲಿ ಅಜೀಜ್ ಮನೇ ಖಾಲಿ ಐತೆ"

"ಹಾಗಾದ್ರೆ ಅದ್ನೇ ಗೊತ್ಮಾಡ್ಬಿಡು."

ಆ ಮನೆ ಗೊತ್ತು ಮಾಡಿದ್ದೂ ಆಯಿತು. ಮರುದಿನವೇ ರುದ್ರಮ್ಮನನ್ನು ಅಲ್ಲಿಗೆ ಸಾಗಿಸಿದ್ದೂ ಆಯಿತು.

ಮನೆಯೆಂದರೆ ಒಂದೇ ಕೋಣೆ. ಮಧ್ಯೆ ಒಂದು ಬಿದಿರು ತಡಿಕೆ ಹಾಕಿ ಎರಡು ಕೋಣೆಗಳನ್ನಾಗಿ ಮಾಡಲಾಗಿದ್ದಿತು. ಅದರಲ್ಲೊಂದು ಅಡಿಗೆ ಮನೆ, ಸ್ನಾನದ ಬಚ್ಚಲೂ ಅಲ್ಲಿಯೇ. ಇನ್ನೊಂದು ಮಲಗುವ ಕೋಣೆ. ಮನೆಯ ಎದುರಿಗೆ ಅಂಗಳದಲ್ಲಿ ನಲ್ಲಿ. ಅದೊಂದು ವರಾಂಡವಂತಿದ್ದು ಐದಾರು ಸಂಸಾರಗಳು ಅಲ್ಲಿ ವಾಸಮಾಡುತ್ತಿದ್ದವು. ಎಲ್ಲರೂ ಮುಸಲ್ಮಾನರೇ.

ರುದ್ರಮ್ಮನಿಗೆ ಆ ಸ್ಥಳ-ಸನ್ನಿವೇಶಗಳನ್ನು ನೋಡಿ ಮನಸ್ಸಿಗೆ ಬಹಳ ಅಸಹ್ಯವೆನ್ನಿಸಿತು.

"ಏನ್ಮಾಡೋದು. ಊರಿನಾಗೆಲ್ಲಾ ಹುಡುಕಾಡಿಸ್ದೆ. ಮನೇನೇ ಸಿಕ್ಕಾಕಿಲ್ಲ. ಸದ್ಯಕ್ಕೆ ಇಲ್ಲಿರು, ಬೇರೇ ಮನೆ ಸಿಗೋಗಂಟ"

ಎಂದು ಸಮಾಧಾನ ಹೇಳಿದ ವೆಂಕಟರಾಯ. ಇದ್ದದ್ದರಲ್ಲಿ ಸಮಾಧಾನ ಮಾಡಿಕೊಳ್ಳಲೇ ಬೇಕಾಯಿತು ರುದ್ರಮ್ಮನಿಗೆ. ಸುಖ ಬಯಸಿ ಬಂದವಳು ಅದರ ಬೆನ್ನುಹಿಡಿದು ಬರುವ ಕಷ್ಟಗಳನ್ನೂ ಸಹಿಸ ಬೇಕಾಗಿತ್ತು.

ವೆಂಕಟರಾಯ ಬಹಳ ಅನುಮಾನ ಸ್ವಭಾವದವನು. ಎಲ್ಲರಲ್ಲಿಯೂ ಎಲ್ಲ ವಿಚಾರಗಳಲ್ಲೂ ಇಲ್ಲದ ಅನುಮಾನಪಡುವುದು ಅವನಿಗೆ ರಕ್ತಗತವಾಗಿದ್ದಿತು. ಹೋಟಲಿನ ಯಾವ ಕೆಲಸಗಾರನನ್ನೂ ಅವನು ಎಷ್ಟೇ ನಿಸ್ಪೃಹನಾಗಿರಲಿ ವೆಂಕಟರಾಯ ಎಂದೂ ನಂಬಿದವನಲ್ಲ. ಅದರಿಂದಲೇ ಅವನು ಬೆಳಗಿನ ಆರುಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೂ ಹೋಟಲಿನ ಗಲ್ಲವನ್ನು ಬಿಟ್ಟು ಕದಲುತ್ತಿರಲಿಲ್ಲ. ಅವನ ಪೂರ್ಣ ನಂಬಿಕೆಗೆ ಪಾತ್ರನಾದವನೆಂದರೆ ಅಬ್ದುಲ್ಲಾಸಾಬಿ ಒಬ್ಬನೇ ಒಬ್ಬ. ಅಬ್ದುಲ್ಲಾಸಾಬಿಯೂ ಅಷ್ಟೆ. ವೆಂಕಟರಾಯನಲ್ಲಿ ಮನಸಾರ ವಿಶ್ವಾಸ ವಿಟ್ಟಿದ್ದ. ಅವನ ಸುಖಸಂತೋಷಗಳ ಪೂರೈಕೆಗೆ ಪ್ರತಿಫಲಾಪೇಕ್ಷೆಯೂ ಇಲ್ಲದೆ ತನ್ನ ಕೈಲಾದಷ್ಟು ಶ್ರಮಿಸುತ್ತಿದ್ದ. ಹೋಟಲಿಗೆ ಬೇಕಾದ ಸಾಮಾನು ಸರಂಜಾಮು, ತರಕಾರಿ ಮುಂತಾದುವುಗಳನ್ನೂ ಸಾಬುವೇ ಪೇಟೆಯಿಂದ ಕೊಂಡುತರುತ್ತಿದ್ದ.

ರುದ್ರಮ್ಮನ ವಿಚಾರದಲ್ಲೂ ವೆಂಕಟರಾಯ ಅನುಮಾನಪಡುವುದಕ್ಕೆ ಅವಳ ಆಕರ್ಷಕ ಸೌಂದರ್ಯ, ಚಂಚಲ ಮನೋಭಾವಗಳಿಗಿಂತ ಅವನಲ್ಲಿ ಮನೆ ಮಾಡಿದ್ದ ಅನುಮಾನಪ್ರಕೃತಿಯೇ ಕಾರಣವಾಗಿದ್ದಿತು. ಗಿಣಿ ಎಲ್ಲಿ ತಪ್ಪಿಸಿಕೊಂಡು ಹೋಗುವುದೋ ಎಂದು ಹೆದರಿ ಪಂಜರವನ್ನು ಆದಷ್ಟು ಭದ್ರಮಾಡತೊಡಗಿದ.

ಅಬ್ದುಲ್ಲಾಸಾಬಿಯ 'ಫರ್ಮಾನಿ'ನಂತೆ ಮೊಹಲ್ಲದಲ್ಲಿದ್ದ ಪ್ರತಿಯೊಬ್ಬರೂ ರುದ್ರಮ್ಮನ ಕಾವಲಾಗಿದ್ದರು. ಅವಳನ್ನು ಅತ್ತಿತ್ತ ಅಡ್ಡಾಡಲು ಸಹ ಬಿಡುತ್ತಿರಲಿಲ್ಲ. ಬೀದಿಯ ಕಡೆ ಅವಳು ಸುಳಿಯದಂತೆ ಸಹ ಕಟ್ಟು ಪಾಡಾಗಿ ಹೋಯಿತು.

ರುದ್ರಮ್ಮನನ್ನು ಆ ಮನೆಗೆ ತಂದು ಬಿಡುವ ಮೊದಲೆ ವೆಂಕಟರಾಯ ಉಪಾಯವಾಗಿ ಅವಳ ಬಟ್ಟೆಬರೆಗಳಿದ್ದ ಟ್ರಂಕು, ಹಾಸಿಗೆಗಳನ್ನು ಹೋಟಲುಕೋಣೆಯಲ್ಲಿಯೇ ಇಡಿಸಿಬಿಟ್ಟಿದ್ದ. "ಈ ಮನೆ ಭದ್ರವಿಲ್ಲ. ಹೇಗೂ ಸರಿಯಾದ ಕಡೆ ಬೇರೇ ಮನೆ ಮಾಡಿದ ಮೇಲೆ ತೆಗೆದುಕೊಂಡು ಹೋದರಾಯಿತು" ಎಂದು ಸಬೂಬು ಹೇಳಿದ. ಅದೂ ನಿಜವೆಂದು ಮುಗ್ಧಳಾದ ರುದ್ರಮ್ಮ ನಂಬಿದಳು. ಮೈಮೇಲೆ ಉಟ್ಟಿದ್ದ ಒಂದು ಹಳೆಯ

ಸೀರೆ, ಹಾಸಿಕೊಳ್ಳಲು ಒಂದು ಜಮಖಾನ ಇಷ್ಟರಲ್ಲಿಯೇ ಅವಳು ಆ ಮನೆಗೆ ಬಂದಿದ್ದಳು.

ವೆಂಕಟರಾಯ ಅಲ್ಲಿಗೇ ಬಿಡಲಿಲ್ಲ. ಹೋಟಲಿನಲ್ಲಿ ಹೇಗೂ ಅಡಿಗೆ ಆಗುತ್ತದೆ, ಅಲ್ಲಿಂದಲೇ ದಿನವೂ ಊಟ ತಂದುಬಿಡುತ್ತೇನೆ, ಅಡಿಗೆ ಮಾಡಿಕೊಂಡು ಒದ್ದಾಡುವ ಮುಜುಗರ ಬೇಡವೆಂದು ಮತ್ತೊ ಉಪಾಯ ಹೇಳಿದ. ರುದ್ರಮ್ಮನಿಗೂ ಮೊದಮೊದಲು ಅದು ಸರಿಯೆನ್ನಿಸಿತು.

ಈ ನೂತನ ಸನ್ನಿವೇಶದಲ್ಲಿ ರುದ್ರಮ್ಮನ ವಿನೂತನ ಜೀವನ ಸಾಗತೊಡಗಿತು.

ಮೊದಲ ಕೆಲವು ದಿನ ವೆಂಕಟರಾಯ ರಾತ್ರಿಯೆಲ್ಲಾ ರುದ್ರಮ್ಮನೊಂದಿಗೇ ಠಿಕಾಣಿ ಹಾಕುತ್ತಿದ್ದ. ದಿನವೂ ಎರಡು ಹೊತ್ತು 'ನಾಷ್ಟಾ-ಚಾ', ಎರಡು ಹೊತ್ತು ಊಟ ತಂದುಕೊಡುತ್ತಿದ್ದ.

"ಮೈ ಮೇಲೆ ಒಂದೇ ಸೀರೆ ಇದೆ. ಒಗೆದು ಉಡಲು ಬೇರೆ ಒಂದೆರಡು ಸೀರೆ ಕುಪ್ಪಸಗಳನ್ನು ತಂದುಕೊಡಿ ಎಂದು ರುದ್ರಮ್ಮ ವೆಂಕಟರಾಯನಿಗೆ ದಿನವೂ ಒತ್ತಾಯ ಮಾಡುತ್ತಿದ್ದಳು. ವೆಂಕಟರಾಯನಾದರೋ ಇಂದು ತರುತ್ತೇನೆ ನಾಳೆ ತರುತ್ತೇನೆ, ಪುರುಸತ್ತು ಸಿಗಲಿಲ್ಲ, ಮರೆತುಬಿಟ್ಟೆ ಎಂದು ದಿನ ದೂಡುತ್ತಲೇ ಬಂದ. ಅವಳ ಮೈ ಮೇಲೆ ಒಂದೇ ಒಂದು ಹರಕಲು ಬಟ್ಟೆಯಿದ್ದರೆ ಆವಳು ತನ್ನನ್ನು ಬಿಟ್ಟು ಎಲ್ಲೂ ತಪ್ಪಿಸಿಕೊಂಡು ಓಡಿಹೋಗಲಾರಳೆಂದು ಸೂಕ್ಷ್ಮಬುದ್ಧಿ ಅವನಿಗೆ ವಿವೇಕ ನೀಡಿದಂತಿತ್ತು."

೭

ದಿನಗಳ ಮೇಲೆ ದಿನಗಳುರುಳುತ್ತಿದ್ದವು. ರುದ್ರಮ್ಮನ ಬಾಳು ವಿಚಿತ್ರಗತಿಯಿಂದ ಸಾಗುತ್ತಿತ್ತು.

ದಿನ ಕಳೆದಂತೆಲ್ಲ ರುದ್ರಮ್ಮನಿಗೆ ಆ ಬರಡುಬಾಳು ಬೇಸರವಾಗ ಹತ್ತಿತು, ಅವಳ ಮನಸ್ಸು ಅಸಂತೋಷ, ಅಸಂತೃಪ್ತಿಗಳ ಆಗರವಾಗ ತೊಡಗಿತು. ಮುನಿಸ್ವಾಮಿಯ ಭೀಮಬಾಹುಗಳಲ್ಲಿ ಅವಳಿಗೆ ದೊರೆಯು ತ್ತಿದ್ದ ಸುಖ ಸಂತೃಪ್ತಿ ವೆಂಕಟರಾಯನ ಸಂಗದಲ್ಲಿ ದೊರೆಯುತ್ತಿರಲಿಲ್ಲ. ಬರು ಬರುತ್ತಾ ಅವಳಿಗೆ ವೆಂಕಟರಾಯನ ಸಂಗ ಅಸಹ್ಯವೆನಿಸತೊಡಗಿತು.

ವೆಂಕಟರಾಯನಿಗೆ ರುದ್ರಮ್ಮನನ್ನು ತೃಪ್ತಿಪಡಿಸುವ ಶಕ್ತಿ ಇರಲಿಲ್ಲ ವಾದರೂ ಅವನಿಗೆ ಅವಳು ಬೇಕು. ಅವನು ಅವಳನ್ನು ತೃಪ್ತಿಪಡಿಸುವು ದಕ್ಕೆ ಏನೆಲ್ಲ ಪ್ರಯತ್ನಗಳನ್ನು ಮಾಡುವನು. ಆದರೆ ಅವನ ಪ್ರಯತ್ನ ಗಳೆಲ್ಲವೂ ಕೇವಲ ಮಕ್ಕಳಾಟದಂತೆ ತೋರುತ್ತಿದ್ದವು ರುದ್ರಮ್ಮನಿಗೆ.

ರುದ್ರಮ್ಮನ ಮನದೊಳಗಿನ ಈ ತೆರನಾದ ಅತೃಪ್ತಿ ಮೊದಮೊದಲು ಬೂದಿ ಮುಚ್ಚಿದ ಕೆಂಡದಂತೆ ಹುದುಗಿತ್ತು. ಗಾಳಿ ಬಂದಾಗ ಮುಚ್ಚಿದ್ದ ಬೂದಿ ಹಾರಿ ಕೆಂಡ ಪ್ರಜ್ವಲಿಸುವಂತೆ ಯಾವುದಾದರೂ ಕಾರಣ ಸಿಕ್ಕಾಗ ರುದ್ರಮ್ಮ ಆ ಅಸಂತೃಪ್ತಿಯನ್ನು ವೆಂಕಟರಾಯನ ಮೇಲೆ ನಾನಾರೀತಿಯಲ್ಲಿ ತೋರು ತ್ತಿದ್ದಳು. ಒಮ್ಮೊಮ್ಮೆಯಂತೂ ವೆಂಕಟರಾಯ ನಿಡುವಾದ ಆಸೆಹೊತ್ತು ಅವಳ ಬಳಿ ಬರುತ್ತಿದ್ದರೂ ರುದ್ರಮ್ಮ ಅವನಿಗೆ ಎಡೆಗೊಡದೆ ತಿರಸ್ಕರಿಸಿ ಬಿಡುತ್ತಿದ್ದಳು. ಆರೀತಿ ತೇಜೋಭಂಗವಾದಾಗ ವೆಂಕಟರಾಯ ಅವಳನ್ನು ಹೆದರಿಸಿ, ಹಿಂಸಿಸಿ ಪಶುರೀತಿಯಿಂದ ಭೋಗಿಸುತ್ತಿದ್ದ. ರುದ್ರಮ್ಮನಿಗೆ ಹುಣ್ಣಿನ ಮೇಲೆ ಮೆಣಸಿನಕಾಯಿ ಲೇಪ ಹಚ್ಚಿದಂತಾಗುತ್ತಿತ್ತು.

ಒಂದು ದಿನ ರುದ್ರಮ್ಮ ಮನಸ್ಸಿಗೆ ಬಹಳ ಬೇಸರವಾಗಿದ್ದುದರಿಂದ ವಠಾರದ ಹೊರಬಾಗಿಲವ ಬಳಿ ಬಂದುನಿಂತಳು, ರಸ್ತೆಯಲ್ಲಿ ಚಿಕ್ಕಪುಟ್ಟ

ಮಕ್ಕಳು ಆಟವಾಡುತ್ತಿದ್ದರು. ಅವರ ಆಟವನ್ನು ನೋಡುತ್ತ ರುದ್ರಮ್ಮ ಮೈಮರೆತು ನಿಂತಿದ್ದಳು. ಅಷ್ಟರಲ್ಲಿ ಅಬ್ದುಲ್ಲಾಸಾಬಿಯ ಹೆಂಡತಿ ಚಾಂದಬೀಬಿ ಒಳಗಿನಿಂದ ಹಾಗೆ ಹೊರಬಾಗಿಲಿನಲ್ಲಿ ನಿಲ್ಲಕೂಡದೆಂದು ಗದರಿಸಿದಳು. ಆ ಕೂಗು ಕೇಳಿದರೂ ಕೇಳದವಳಂತೆ ನಿಂತಿದ್ದಳು ರುದ್ರಮ್ಮ. ಅದನ್ನು ನೋಡಿ ಚಾಂದಬೀಬಿಗೆ ಸಿಟ್ಟೇರಿತು. ಅವಳು ಎದ್ದುಬಂದು ರುದ್ರಮ್ಮನನ್ನು ದರದರನೆ ಹಿಂದಕ್ಕೆ ಎಳೆದುಕೊಂಡು ಹೋದಳು. ವಾಚಾಮ ಗೋಚರವಾಗಿ ಬೈದಳು. ರುದ್ರಮ್ಮನೂ ವಟಗುಟ್ಟಿದಳು. ಆದರೂ ಅವಳಿಗೆ ಗೊತ್ತಿತ್ತು, ವೆಂಕಟರಾಯ ಈ ಜನರಿಗೆಲ್ಲ ತನ್ನ ಮೇಲೆ ಕಾವಲಿರುವ ಅಧಿಕಾರ ಕೊಟ್ಟಿರುವನೆಂದು. ಹಾಗಾಗಿ ಅವಳು ನಿರುಪಾಯಳಾಗಿ ತೆಪ್ಪಗಾಗಬೇಕಾಯಿತು.

ಆ ದಿನ ಸಂಜೆ ವೆಂಕಟರಾಯ ಬಂದಾಗ ಚಾಂದಬೀಬಿ ರುದ್ರಮ್ಮನ ಮೇಲೆ ಒಂದಕ್ಕೆ ಹತ್ತಾಗಿ ಚಾಡಿ ಹೇಳಿದಳು. ಮೊದಲೇ ರುದ್ರಮ್ಮ ತನ್ನ ಬಗ್ಗೆ ತೋರುತ್ತಿದ್ದ ಅಸಮಾಧಾನ ವೆಂಕಟರಾಯನ ಹೃದಯದಲ್ಲಿ ಒಂದು ಕಡೆ ಹೊತ್ತಿ ಉರಿಯುತ್ತಿತ್ತು. ಚಾಂದಬೀಬಿಯ ಚಾಡಿಯ ಮಾತು ಅದಕ್ಕೆ ತುಪ್ಪ ಸುರಿದಂತಾಯಿತು. ಅವನು ರುದ್ರಮ್ಮನನ್ನು ಮುಖ ಮುಸುಡಿ ನೋಡದೆ ಸಿಕ್ಕಿದಂತೆ ಥಳಿಸಿದ. ಅವಳಲ್ಲಿ ವಿಚಾರಣೆ ಸಹ ಮಾಡಲಿಲ್ಲ, ಅವಳೇನು ಹೇಳುವಳೆಂಬುದನ್ನು ಸಹ ಕೇಳಲಿಲ್ಲ.

ಈ ಪ್ರಕರಣದಿಂದ ರುದ್ರಮ್ಮ ವೆಂಕಟರಾಯನ ನೆರಳನ್ನು ಸಹ ದ್ವೇಷಿಸುವಂತಾದಳು. ಅಲ್ಲಿಂದ ಮುಂದೆ ವೆಂಕಟರಾಯನ ಉಪಚಾರದ ಮಾತುಗಳೂ ಅವಳ ಬಳಿ ಫಲಿಸಲಾರದೆ ಹೋದುವು.

ರುದ್ರಮ್ಮನೂ ಸಮಯ ಸಾಧಿಸುತ್ತಿದ್ದಳು. ಹೇಗಾದರೂ ಮಾಡಿ ಆ ಬಂಧನದಿಂದ ಒಮ್ಮೆ ಪಾರಾಗಿ ಹೊರಹೋಗಿಬಿಡಬೇಕೆಂದು, ಹಾಗೆ ಪಾರಾಗಿ ಮತ್ತಾವುದಾದರೂ ದಾರಿ ಹಿಡಿಯಬೇಕೆಂದೂ ಯೋಚಿಸುತ್ತಿದ್ದಳು. ಆದರೆ ಸುತ್ತಾ ಬಲವಾದ ಕಾವಲಿದ್ದ ಆ ಚಕ್ರಭೀಮನ ಕೋಟೆಯಿಂದ ತಪ್ಪಿಸಿಕೊಳ್ಳುವುದು ಸುಲಭಸಾಧ್ಯವಾಗಿರಲಿಲ್ಲ. ಅವಳು ಕೂತರೆ ನಿಂತರೆ ಕಾವಲಿನವರ ನೆರಳು ಅವಳ ಮೇಲಿರುತ್ತಿತ್ತು.

ನೆರೆಹೊರೆಯುವರನ್ನೆಲ್ಲ ಪ್ರೀತಿಸುವ ಸೋಗು ತೆಗೆದು ಅವರ ಕಣ್ಣಿಗೆ ಮಣ್ಣೆರಚಿ ಅಲ್ಲಿಂದ ಹೊರಬೀಳುವ ಉಪಾಯ ಯೋಚಿಸಿದಳು ರುದ್ರಮ್ಮ. ಆದರೆ ಆ ಉಪಾಯದಿಂದ ಏನೇನೂ ಪ್ರಯೋಜನವಾಗಲಿಲ್ಲ. ಆ ನೆರೆಯುವರೆಲ್ಲ ಅಬ್ದುಲ್ಲಾ ಸಾಬಿಯ ಊಳಿಗದವರು. ಅವನ ಅಪ್ಪಣೆಯಂತೆ ಅವರೆಲ್ಲ ವೆಂಕಟರಾಯನ ಹಿತಚಿಂತನೆಗಾಗಿ ದುಡಿಯುತ್ತಿದ್ದರು.

ದಿನದಿನಕ್ಕೆ ವೆಂಕಟರಾಯನ ಕ್ರೌರ್ಯ ಹೆಚ್ಚತೊಡಗಿತು. ರುದ್ರಮ್ಮ ಅವನನ್ನು ನಿರಾಕರಿಸಿದಂತೆಲ್ಲ ಅವನು ಅವಳನ್ನು ಹೆಚ್ಚು ಹೆಚ್ಚು ಹಿಂಸಿಸ ಹತ್ತಿದ. ಆ ಹಿಂಸೆ ತಾಳಲಾರದೆ ಒಮ್ಮೊಮ್ಮೆ ರುದ್ರಮ್ಮನಿಗೆ ಬದುಕಿರುವುದಕ್ಕಿಂತ ಸಾಯುವುದೇ ಮೇಲೆಂದೆನಿಸುತ್ತಿತ್ತು. ಹಾಗೆ ಸಾಯುವುದಕ್ಕೂ ಅವಳಿಗೆ ಸ್ವಾತಂತ್ರ್ಯವಿರಲಿಲ್ಲ. ಒಂದು ಗಳಿಗೆಯಾದರೂ ಕಾವಲಿನವರ ಕಣ್ಣು ತನ್ನ ಮೇಲೆ ಇರದಂತೆ ಮಾಡಿಕೊಳ್ಳುವುದು ಸಾಧ್ಯವಿರುತ್ತಿರಲಿಲ್ಲ.

ಇತ್ತೀಚೆಗಂತೂ ವೆಂಕಟರಾಯ ರುದ್ರಮ್ಮನಿಗೆ ಸರಿಯಾಗಿ ಕಾಲ ಕಾಲಕ್ಕೆ ಊಟ ಸಹ ಕಳುಹಿಸುತ್ತಿರಲಿಲ್ಲ. ಒಂದೊಂದು ದಿನ ಒಪ್ಪತ್ತಿನ ಊಟವೂ ಇಲ್ಲದೆ ಉಪವಾಸ ಮಲಗಬೇಕಾಗುತ್ತಿತ್ತು. ಹೊಟ್ಟೆಗೆ ಸರಿಯಾಗಿ ಕೊಡದೆ ಅವಳಿಗೆ ಬುದ್ಧಿ ಕಲಿಸಿ ದಾರಿಗೆ ತರಬೇಕೆಂದು ಹೊಸ ಉಪಾಯ ಹೂಡಿದ್ದ ವೆಂಕಟರಾಯ. ಇನ್ನು ಬಟ್ಟೆಯ ವಿಚಾರ ಹೇಳುವಂತೆಯೇ ಇರಲಿಲ್ಲ. ಅವಳು ಆ ಮನೆಗೆ ಬಂದಾಗ ಉಟ್ಟಿದ್ದ ಹಳೆಯ ಸೀರೆಯ ಹೊರತು ಬೇರೊಂದು ಬಟ್ಟೆ ಅವಳ ಬಳಿ ಇರಲಿಲ್ಲ. ಆ ಉಟ್ಟಿದ್ದ ಹಳೆಯ ಸೀರೆಯೂ ಹತ್ತಾರು ಕಡೆ ಹರಿದು ತೇಪೆ ಕಂಡಿದ್ದಿತು.

ಅಲ್ಪ ಸುಖಕ್ಕೆ ಮನಸೋತು ಗಂಡನನ್ನು ಬಿಟ್ಟು ಓಡಿಬಂದುದಕ್ಕೆ ತನಗೆ ಸರಿಯಾದ ಶಾಸ್ತಿ ಆಯಿತೆಂದು ರುದ್ರಮ್ಮ ಮರುಗಿದಳು. ಅವಳ ಮನಸ್ಸು ಈ ಎಲ್ಲ ಕಷ್ಟಗಳಿಂದಾಗಿ ಪಶ್ಚಾತ್ತಾಪಗೊಂಡಿತ್ತು. ಆದರೆ ಅದು ಯಾವ ಪ್ರಯೋಜನಕ್ಕೆ? ತನಗೂ ತನ್ನ ಗಂಡನಿಗೂ ಈಗ ಎಲ್ಲಿಯ ಸಂಬಂಧ? ಈಗವಳು ಉಗಿದೆಸೆದ ತಂಬುಲವಲ್ಲವೇ?

ವೆಂಕಟರಾಯನ ಆ ಕಬ್ಬಿಣದ ಪಂಜರದಲ್ಲಿ ರುದ್ರಮ್ಮನಿಗೆ ನಿತ್ಯ ನರಕಜೀವನ ಸಾಕುಸಾಕಾಗಿ ಹೋಯಿತು. ಅವಳು ಅಲ್ಲಿಂದ ಹಾರಿ

ಹೋಗಲು ಪಟ್ಟ ಶ್ರಮವೆಲ್ಲವೂ ನಿಷ್ಫಲವಾದುವು. ಆದರೂ ಕಡೆಗೊಂದು ದಿನ ಅವಳು ಆ ಬಂಧನದಿಂದ ತಪ್ಪಿಸಿಕೊಂಡಳು. ಅದು ನಡೆದದ್ದು ಹೀಗೆ.

ಅಪಾಯದ ಮಾರ್ಗಕ್ಕಿಂತ ಉಪಾಯದ ಮಾರ್ಗವೇ ಸರಿಯೆಂದು ಕಡೆಗೆ ನಿರ್ಧರಿಸಿದಳು ರುದ್ರಮ್ಮ, ವೆಂಕಟರಾಯನ ಕಪಿಮುಷ್ಟಿಯಿಂದ ಬಿಡುಗಡೆ ಹೊಂದಲು. ಆದರಿಂದ ಅವಳು ಅವನಲ್ಲಿ ಇಲ್ಲದ ಕಪಟ ಪ್ರೀತಿ ನಟಿಸಹತ್ತಿದಳು. ಅವನು ಬಂದಾಗಲೆಲ್ಲಾ ಅವನಲ್ಲಿ ಅತ್ಯಂತ ಗೌರವ ತೋರತೊಡಗಿದಳು. ತನಗೆ ಸುಖ ದೊರೆಯಲಿ ದೊರೆಯದಿರಲಿ, ಅವನು ಬಯಸಿದ ರೀತಿಯಲ್ಲಿ ಅವನಿಗೆ ತನ್ನ ದೇಹ ನೀಡಲು ಸಿದ್ಧಳಾದಳು, ಬಲಿಗಂಭಕ್ಕೆ ಬಿಗಿದ ಪಶುವಿನಂತೆ. ಇದರಿಂದ ವೆಂಕಟರಾಯನಿಗೆ ನಿಜಕ್ಕೂ ಆನಂದವುಂಟಾಯಿತು. ಅವಳಲ್ಲಿನ ಈ ಪರಿವರ್ತನೆಯಿಂದ ಸ್ವರ್ಗ ಸಾಮ್ರಾಜ್ಯವೇ ಲಭಿಸಿದಂತಾಯಿತು. ಕ್ರಮೇಣ ರುದ್ರಮ್ಮ ಅವನ ವಿಶ್ವಾಸ ಗಳಿಸಿಕೊಂಡಳು. ಅವಳ ಕೃತ್ರಿಮಪ್ರೀತಿಯನ್ನು ನಿಜವೆಂದೇ ನಂಬಿದ ಆ ಪ್ರಾಣಿ!

ಒಂದು ದಿನ ಕುಡಿದು ಮತ್ತನಾಗಿ ಬಂದ ವೆಂಕಟರಾಯ. ರುದ್ರಮ್ಮ ಅವನನ್ನು ಎಂದಿಗಿಂತ ಹೆಚ್ಚಾಗಿಯೇ ಸತ್ಕರಿಸಿದಳು. ಮಿತಿಮೀರಿದ ಕುಡಿತ ಮೈ ಮೇಲಿನ ಪ್ರಜ್ಞೆಯನ್ನೂ ಕಳೆಯುವುದೆಂದು ಅವಳು ಚಿಕ್ಕವಳಿದ್ದಾಗ ಕೇಳಿದ್ದಳು. ಆ ದಿನ ಅವನು ಕುಡಿದಿದ್ದ. ರಾತ್ರಿ ಬಹಳ ಹೊತ್ತಾಗಿದ್ದುದ ರಿಂದ ಸುತ್ತಲ ಎಲ್ಲ ಮನೆಯವರೂ ಗಾಢನಿದ್ರೆಯಲ್ಲಿದ್ದರು ವೆಂಕಟರಾಯ ಬಂದುದನ್ನು ನೋಡಿ ಅವರೆಲ್ಲರೂ ಇವಳ ಮೇಲಿನ ಕಾವಲನ್ನು ಸಡಿಲಿಸಿ ದ್ದರು. ಅಂದ ಮೇಲೆ ತಾನು ಅನಾಯಾಸವಾಗಿ ಅಲ್ಲಿಂದ ತಪ್ಪಿಸಿಕೊಳ್ಳ ಬಹುದು. ಹಾಗೆಂದು ರುದ್ರಮ್ಮ ಬಹಳ ಹೊತ್ತು ಕಾದಳು. ಆದಿನ ವೆಂಕಟರಾಯ ಕುಡಿದಿದ್ದನೇನೋ ನಿಜ. ಆದರೆ ಪ್ರಜ್ಞೆ ಕಳೆದುಕೊಳ್ಳು ವಷ್ಟು ಮಿತಿಮೀರಿ ಕುಡಿದಿರಲಿಲ್ಲ. ಅದರಿಂದಾಗಿ ರುದ್ರಮ್ಮನ ಹಂಚಿಕೆ ನಡೆ ಯಲಿಲ್ಲ. ಮನೆಯ ಒಳಬಾಗಿಲಿಗೆ ಹಾಕಿದ್ದ ಬೀಗದ ಕೈಯನ್ನು ವೆಂಕಟ ರಾಯನ ಉಡಿಯಿಂದ ತೆಗೆದುಕೊಂಡು ಬೀಗಬಿಚ್ಚಿ ಹೊರನಡೆಯುವ ಧೈರ್ಯ ಅವಳಿಗೆ ಬರಲಿಲ್ಲ.

ಬೆಳಗಾಯಿತು. ವೆಂಕಟರಾಯ ಹಸನ್ಮುಖಿಯಾಗಿದ್ದ. ರುದ್ರಮ್ಮನೂ ನಗು ಮುಖ ತೋರಿದಳು. ಮಾತಿನ ಮೋಡಿಯಲ್ಲಿ ಎಂದಿಗಿಂತ ಆ ರಾತ್ರಿ ಹೆಚ್ಚು ತನಗೆ ಸುಖವಾಗಿತ್ತೆಂದು ಅಂದಳು. ಅದೆಲ್ಲಾ ತಾನು ಕುಡಿದ ಬಾಟಲಿಯ ಪ್ರಭಾವ ಎಂದು ನಗುತ್ತ ಉತ್ತರಿಸಿದ ವೆಂಕಟರಾಯ. ಹಾಗಾದರೆ ತಾನೂ ಏಕೆ ಕುಡಿಯಬಾರದು, ಅದರಿಂದ ಇಬ್ಬರಿಗೂ ಹೆಚ್ಚು ಸುಖವಾಗಿರುತ್ತದಲ್ಲವೇ ಎಂದು ರುದ್ರಮ್ಮ ಸೂಚಿಸಿದಳು. ವೆಂಕಟರಾಯನಿಗೆ ಅದು ಸರಿ ಎನ್ನಿಸಿತು. "ಈ ದಿನ ಇಲ್ಲೀಗೇ ಬಾಟ್ಲ ತನ್ನಿ; ಇಬ್ಬರೂ ಚೆನ್ನಾಗಿ ಕುಡಿದು ಭರ್ಜರಿ ಮಜಾ ಮಾಡೋಣ" ಎಂದಳು ರುದ್ರಮ್ಮ ಬಿನ್ನಾಣದಿಂದ. ಆ ಬಿನ್ನಾಣ ನೋಡಿಯೇ ವೆಂಕಟರಾಯನಿಗೆ ಮೋಡಿ ಬಡಿದಂತಾಯಿತು. ಅವಳನ್ನು ಹಾಗೆಯೇ ಬಲವಾಗಿ ತಬ್ಬಿಕೊಂಡು ಅವಳ ತುಟಿಗೆ ತುಟಿ ಸೇರಿಸಿದ. ರುದ್ರಮ್ಮನೂ ಪ್ರತಿಯಾಗಿ ಮುತ್ತಿಟ್ಟು ಅವನನ್ನು ರಂಜಿಸಿದಳು, ಬೀಸಿದ ಗಾಳಕ್ಕೆ ಮೀನು ಸಿಗದೆ ಹೋಗದಿರಲೆಂದು. ವೆಂಕಟರಾಯ ಹೊರಹೊರಡುತ್ತಿದ್ದಾಗ ರುದ್ರಮ್ಮ ಮತ್ತೊಮ್ಮೆ ಅವನಿಗೆ ನೆನಪಿತ್ತಳು. "ಖಂಡಿತ ತರ್‍ತೀನಿ ನನ್ಚಿನ್ನ" ಎನ್ನುತ್ತ ವೆಂಕಟರಾಯ ಹೊರಟುಹೋದ.

ಆ ದಿನ ರುದ್ರಮ್ಮನಿಗೆ ಎಲ್ಲಿಲ್ಲದ ಸಂತೋಷ, ತನ್ನ ಬಿಡುಗಡೆಯ ಹೊತ್ತು ಸಮೀಪಿಸಿತೆಂದು. ಆದರೂ ಆ ಹಿಗ್ಗಿನಲ್ಲಿಯೇ ಒಂದು ಕಳವಳ, ಹೇಳಿದಂತೆ ವೆಂಕಟರಾಯ ಬಾಟಲಿಗಳನ್ನು ತರುವನೋ ಇಲ್ಲವೋ ಎಂದು. ಜತೆಗೆ ಅಲ್ಲಿಂದ ಹೊರಬಿದ್ದ ನಂತರ ಎಲ್ಲಿಗೆ ಹೋಗಬೇಕು, ಏನು ಮಾಡಬೇಕೆಂಬ ಚಿಂತೆ ಬೇರೆ. ಈ ಹೊಯ್ದಾಟದಲ್ಲಿಯೇ ದಿನ ಕಳೆದು ಸಂಜೆಯಾಯಿತು. ಕತ್ತಲೂ ಆವರಿಸಿತು. ಅದರೊಂದಿಗೆ ರುದ್ರಮ್ಮನ ಎದೆಯ ಬಡಿತವೂ ಅತಿಯಾಯಿತು. ಒಂದೊಂದು ಗಳಿಗೆಯೂ ಒಂದೊಂದು ಯುಗವಾಗಿ ತೋರತೊಡಗಿತು.

ವೆಂಕಟರಾಯ ಕೊಟ್ಟ ಮಾತಿಗೆ ತಪ್ಪಲಿಲ್ಲ. ಒಂದು ದೊಡ್ಡ ಬಾಟಲು ವಿಸ್ಕಿ, ನಾಲ್ಕು ಬಾಟಲು ಸೋಡ ಸಮೇತ ಬಂದ. ಜತೆಗೆ ಖಾರಾ, ಸಿಹಿತಿಂಡಿಪೊಟ್ಟಣಗಳು ಹಲವಾರು. ಅದನ್ನೆಲ್ಲಾ ನೋಡಿ

ರುದ್ರಮ್ಮನಿಗೆ ಆನಂದ ಉಕ್ಕಿಬಂದಂತಾಯಿತು. ಲಗುಬಗೆಯಿಂದ ಎದ್ದು ಹೋಗಿ ಬಾಟಲುಗಳನ್ನೂ ತಿಂಡಿ ಪೊಟ್ಟಣಗಳನ್ನೂ ವೆಂಕಟರಾಯನ ಕೈಯಿಂದ ತೆಗೆದುಕೊಂಡಳು. ಕೃತಕ ನಗೆಯೊಂದನ್ನು ಬೀರಿ ಅವನನ್ನು ಮೋಹಕವಾಗಿ ನೋಡಿದಳು. ಅವಳ ಆ ಮಾದಕ ನಗೆ, ಆ ಮೋಡಿಯ ನೋಟ ವೆಂಕಟರಾಯನನ್ನು ರೋಮಾಂಚನಗೊಳಿಸಿತು. ನಿಂತಲ್ಲಿಂದಲೇ ಅವಳ ಮುಂದಲೆಯನ್ನು ನೇವರಿಸಿ ಕೆನ್ನೆಗಳ ಮೇಲೆ ಚುಂಬಿಸಿದ.

ರುದ್ರಮ್ಮ ನಾಚಿಕೆ ನಟಿಸಿ ಅಲ್ಲಿಂದ ದೂರ ಸರಿದು ಕೈಲಿದ್ದ ಬಾಟಲುಗಳನ್ನೂ ತಿಂಡಿಯ ಪೊಟ್ಟಣಗಳನ್ನೂ ಗೋಡೆಯ ಬದಿಗೆ ಒಂದೆಡೆಯಲ್ಲಿ ಓರಣವಾಗಿ ಇಟ್ಟಳು. ವೆಂಕಟರಾಯ ಅವಳನ್ನು ಹಿಂಬಾಲಿಸಿ ಅವಳ ಇಳಿಬಿದ್ದ ನಿಡುಜಡೆಯನ್ನು ಚೆಲ್ಲಾಟದಿಂದ ಎಳೆದು ಅವಳನ್ನು ತನ್ನ ತೋಳಸೆರೆಯಲ್ಲಿ ಬಲವಾಗಿ ಅಪ್ಪಿಕೊಂಡು ಉದ್ರೇಕಗೊಂಡವನಂತೆ ರಂಜಿಸಿದ. ಸಮಯಸಾಧಕಳಾದ ರುದ್ರಮ್ಮನೂ ಅವನನ್ನು ಪ್ರತಿಯಾಗಿ ರಂಜಿಸಿದಳು.

ಆ ರಾತ್ರಿ ವೆಂಕಟರಾಯ ಸಂಪೂರ್ಣವಾಗಿ ರುದ್ರಮ್ಮನ ಮೋಹ ಜಾಲದಲ್ಲಿ ಸಿಕ್ಕಿಬಿದ್ದ. ರುದ್ರಮ್ಮ ಮೇಲಿಂದ ಮೇಲೆ ಕುಡಿಸಿದಳು. ರುದ್ರಮ್ಮನಿಗೆ ವೆಂಕಟರಾಯ ಕುಡಿಸಲು ಪ್ರಯತ್ನಪಟ್ಟಾಗಲೆಲ್ಲ ಅವಳು ಏನಾದರೂ ತಿಂಡಿಯನ್ನು ಬಾಯಿಗೆ ಹಾಕಿಕೊಂಡು ಅದನ್ನು ಅಗಿಯುತ್ತ ವೆಂಕಟರಾಯ ತನಗೆ ಕುಡಿಸಬಂದ ಗ್ಲಾಸನ್ನು ತನ್ನ ತುಟಿಗೆ ಸೋಕಿಸಿದ ಶಾಸ್ತ್ರ ಮಾಡಿ, ಕುಡಿಗಣ್ಣ ನೋಟ ಬೀರಿ ಅದನ್ನು ಮತ್ತೆ ಅವನಿಗೆ ತನ್ನ ಕೈಯಿಂದಲೇ ಕುಡಿಸಿಬಿಡುತ್ತಿದ್ದಳು. ಆ ಮೋಹಿನಿಯ ಕೈಯಿಂದ ಬಂದ ಅಮೃತವನ್ನು ಅವನು ಬೇಡವೆನ್ನಲಿಲ್ಲ. ಹೀಗಾಗಿ ಇಡೀ ಬಾಟಲಿಯ ವಿಸ್ಕಿ ವೆಂಕಟರಾಯನ ಹೊಟ್ಟೆಯನ್ನು ಸೇರಿತು. ಅದರಿಂದ ಮತ್ತನಾಗಿ ಮೈ ಮೇಲಿನ ಪರಿವೆಯಿಲ್ಲದೆ ಒತ್ತೆಡೆಗೆ ಉರುಳಿಕೊಂಡ ವೆಂಕಟರಾಯ.

ರುದ್ರಮ್ಮ ಸಮಾಧಾನದ ನಿಟ್ಟುಸಿರು ಬಿಟ್ಟಳು.

ಒಂದೆರಡು ಗಂಟೆ ಕಳೆಯಿತು. ವೆಂಕಟರಾಯ ಎಚ್ಚರವಿಲ್ಲದೆ ಹಾಗೆಯೇ ಉರುಳಿಕೊಂಡಿದ್ದ. ನೆರೆಯವರೆಲ್ಲ ಅವರವರ ಮನೆಗಳಲ್ಲಿ ಗಾಢನಿದ್ರೆಯಲ್ಲಿದ್ದರು.

ಆ ದಿನ ವೆಂಕಟರಾಯ ರುದ್ರಮ್ಮನನ್ನು ರಂಜಿಸುವ ಆತುರದಲ್ಲಿ, ಎಂದಿನಂತೆ ಒಳಬಾಗಿಲಿಗೆ ಬೀಗ ಹಾಕಿ ಬೀಗದಕೈಯನ್ನು ತನ್ನ ಉಡಿಯಲ್ಲಿ ಸೇರಿಸಿಕೊಂಡಿರಲಿಲ್ಲ. ರುದ್ರಮ್ಮನಿಗೆ ಅವನ ಉಡಿಯಿಂದ ಬೀಗದ ಕೈ ತೆಗೆದುಕೊಂಡು ಬೀಗ ತೆಗೆಯಬೇಕಾದ ಕಷ್ಟವೂ ಬರಲಿಲ್ಲ. ಅವಳು ಸದ್ದು ಮಾಡದೆ ಕಳ್ಳ ಹೆಜ್ಜೆ ಇಡುತ್ತ ಬಾಗಿಲು ತೆರೆದು ಹೊರನಡೆದು ಕತ್ತಲಲ್ಲಿ ಮರೆಯಾದಳು. ವೆಂಕಟರಾಯನ ಕಬ್ಬಿಣದ ಪಂಜರ ಕಡಿದುಬಿದ್ದಿತು.

ಬೆಳಗಾದ ಎಷ್ಟೋ ಹೊತ್ತಿನ ಮೇಲೆ ವೆಂಕಟರಾಯನಿಗೆ ಎಚ್ಚರ ವಾಯಿತು. ಎದ್ದು ನೋಡಿದ. ರುದ್ರಮ್ಮ ಕಾಣಿಸಲಿಲ್ಲ. ಕೂಗಿ ಕರೆದ. ಉತ್ತರವಿಲ್ಲ. ವಠಾರದವರನ್ನೆಲ್ಲಾ ವಿಚಾರಿಸಿದ. ಅವರೆಲ್ಲರೂ ಅದುವರೆಗೆ ರುದ್ರಮ್ಮ ವೆಂಕಟರಾಯನೊಂದಿಗೆ ಇನ್ನೂ ಮಲಗಿರುವಳೆಂದೇ ಭಾವಿಸಿದ್ದರು.

' ಕಡೆಗೂ ಕೈ ಕೊಟ್ಟಳಲ್ಲ ' ಎಂದು ಗೋಳಿಟ್ಟ ವೆಂಕಟರಾಯ.

"ನಸೀಬಿಲ್ಲದ್ದು. ಗಂಡಂಗೇ ಕೈ ಕೊಟ್ಟ ಬೇವಾರ್ಸಿ. ಹಾಳಾ ಗೋಗ್ಲಿ. ಸುಮ್ಕಿರು," ಎಂದು ಸಮಾಧಾನ ಮಾಡಿದ ಅಬ್ದುಲ್ಲಾ ಸಾಬಿ. ಆದರೂ ವೆಂಕಟರಾಯನಿಗೆ ರುದ್ರಮ್ಮನ ಮೇಲಿನ ಗೀಳು ತಪ್ಪಲಿಲ್ಲ. ಅವಳನ್ನು ಹುಡುಕಿಕೊಂಡು ಬೆಂಗಳೂರಲೆಲ್ಲಾ ಅಲೆದ. ಸುತ್ತ ಹತ್ತಾರು ಹಳ್ಳಿಗಳನ್ನೆಲ್ಲಾ ಸುತ್ತಿ ಬಂದ. ತನ್ನ ಹಲವು ಆಪ್ತಸ್ನೇಹಿತರಿಗೂ ಅವಳ ಚಹರೆ ಕೊಟ್ಟು ಹುಡುಕಿಸಿದ. ಯಾರೋ ಬಂದು ಯಾವುದೋ ಹಳ್ಳಿಯಲ್ಲಿ ಅದೇ ತರಹ ಹುಡುಗಿಯನ್ನು ನೋಡಿದೆ ಎಂದು ಹೇಳಿದರೆ ಅಲ್ಲಿಗೂ ಹೋಗಿ ಅಲ್ಲಿಯ ಜನರಿಂದ ಮುಖಕ್ಕೆ ಸಗಣಿ ನೀರು ಹಾಕಿಸಿಕೊಂಡು ಬರುತ್ತಿದ್ದ. ಹೀಗೆ ಹಲವಾರು ಕಡೆ ಮಾನ ಕಳೆದುಕೊಂಡಮೇಲೆ ಋಣಾನುಬಂಧವಿಲ್ಲವೆಂದುಕೊಂಡು ಸುಮ್ಮನಾದ ವೆಂಕಟರಾಯ.

೮

ಸೇರ‍್ಕಳ್ಳೀ ಪುಟ್ಟಿ

ಸೇರುಕಳ್ಳಿ ಪುಟ್ಟಿಯ ಹೆಸರನ್ನು ಕೇಳದ ಜನರಿರಲಿಲ್ಲ ಬೆಂಗಳೂರಿನಲ್ಲಿ. ಅದೆಷ್ಟೋ ಜನ ಅವಳನ್ನು ನೋಡದೆ ಇದ್ದರೂ ಅವಳ ಹೆಸರು ಬೀದಿಯ ಮಾತಾಗಿತ್ತು. ಅವಳು ನಡೆಸುತ್ತಿದ್ದ ಸೂಳೆಗೇರಿಯೇ ಅದಕ್ಕೆ ಕಾರಣ. ಸಮಾಜದಲ್ಲಿ ಗಣ್ಯರಾದವರು, ದೊಡ್ಡ ಮನುಷ್ಯರು ಅನ್ನಿಸಿಕೊಂಡವರು ಅಲ್ಲಿಗೆ ಹೋಗಲು ಹೇಸುತ್ತಿದ್ದರಾದರೂ ಕೀಳುಬಗೆಯ ಗಿರಾಕಿಗಳಿಗೇನೂ ಕೊರತೆಯಿರಲಿಲ್ಲ ಅವಳಿಗೆ. ಮಿಲ್ ಕೂಲಿಗಳು, ಸೌದೆ ಒಡೆಯುವವರು, ಜಟಕಾ ಸಾಬರುಗಳಂತಹ ವಿವಿಧವರ್ಗದವರಿಗೆ ಅವಳ ಮನೆ ಅಮರಾವತಿಯಾಗಿತ್ತು. ಅಲ್ಲಿ ಸಿಕ್ಕಿದಂತೆ ತಿಂದು, ಕುಡಿದು, ಸಿಕ್ಕಿದ ಹುಡುಗಿಯರೊಂದಿಗೆ ಸುಖಪಟ್ಟು ಸಂತುಷ್ಟಿ ಹೊಂದಿ ತಮ್ಮ ಬದುಕನ್ನು ಸಾರ್ಥಕಪಡಿಸಿಕೊಳ್ಳುತ್ತಿದ್ದರು ಆ ಜನ. ಅತಿ ಸಾಮಾನ್ಯರಿಗೂ ಸುಖದಾಯಕವಾಗಿದ್ದ 'ಚೀಪ್‌ರೇಟ್' ವಿಲಾಸಮಂದಿರವಾಗಿತ್ತು ಆ ಮನೆ. ಅದರಿಂದಾಗಿ ಆ ಮನೆಯೊಡನೆ ಪುಟ್ಟಿಯ ಹೆಸರು ಅವರೆಲ್ಲರ ನಾಲಗೆಗಳ ಮೇಲೆ ಸದಾ ಕಾಲವೂ ಸುಳಿಯುತ್ತಿತ್ತು. ಅವರ ಬಾಯಲ್ಲೆಲ್ಲಾ ಸೇರುಕಳ್ಳಿ ಪುಟ್ಟಿಯ ಹೆಸರು ಸಲೀಸಾಗಿ ಹೊರಡುತ್ತಿತ್ತು. ಯಾವುದಾದರೂ ಖುಷಿಯ ಮಾತು ಬಂದಾಗಲೋ, ಜಟಕಾ ಹೊಡೆಯುವವರು ರಸ್ತೆಯಲ್ಲಿ ದಾರಿ ಬಿಡಿಸಿಕೊಳ್ಳುವಾಗಲೋ 'ಏಯ್' ಎಂದು ಕೂಗುವುದರ ಜತೆಗೆ 'ಸೇರುಕಳ್ಳಿ ಪುಟ್ಟಿ' ಎಂಬ ಪದವನ್ನೂ ಸೇರಿಸಿ ಕೂಗುತ್ತಿದ್ದರು. 'ಏಯ್ ಸೇರ‍್ಕಳ್ಳಿ ಪುಟ್ಟಿ' ಎಂಬ ಕೂಗು ಜಟಕಾದವರ ಹಾರನ್ ಆಗಿಹೋಯಿತು ಬೆಂಗಳೂರಲ್ಲಿ. ಹೀಗಾಗಿ ಜನ ಪುಟ್ಟಿಯನ್ನು ಮುಖತಃ ನೋಡದೆ ಇದ್ದರೂ ಅವಳ ಹೆಸರು ಅವರ ಕಿವಿಗಳಲ್ಲಿ ದಿನ ಬೆಳಗಾದರೆ ಮೊರೆಯುತಿತ್ತು.

ಪುಟ್ಟಿಯ ಹುಟ್ಟೂರು ಕಲ್ಕುಂಟೆಗ್ರಾಮ. ಅವಳ ತಂದೆ ಈಡಿಗರ ನಿಂಗಯ್ಯ ಗಣ್ಯನಾಗಿ ಬಾಳುವೆ ಮಾಡುತ್ತ ಕುಲದ ಯಜಮಾನನಾಗಿದ್ದ.

ಪುಟ್ಟಿ ನಿಂಗಯ್ಯನ ಒಬ್ಬಳೇ ಮಗಳು, ಅವನಿಗೆ ಗಂಡುಮಕ್ಕಳಿರಲಿಲ್ಲ. ಅವಳನ್ನೇ ಮಗ–ಮಗಳು ಎಂದು ಬಹು ಮಮತೆಯಿಂದ ಸಾಕುತ್ತಿದ್ದರು ತಂದೆ ತಾಯಿಗಳು. ತಾಯಿ ಕೆಂಚಮ್ಮನಿಗೆ ಮಗಳೆಂದರೆ ಪಂಚಪ್ರಾಣ.

ಹುಡುಗಿ ನೋಟಕ್ಕೆ ಬಹು ಚೆಲುವೆಯಾಗಿದ್ದಳು. ಸುಖಸೌಲಭ್ಯಗಳಲ್ಲಿ ಬೆಳೆದದ್ದರಿಂದ ಮೈ ದಷ್ಟಪುಷ್ಟವಾಗಿ ತುಂಬಿಕೊಂಡಿತ್ತು. ಬೆಳೆದು ದೊಡ್ಡವಳಾದಾಗ ಜನರ ಕಣ್ಣಿಗೆ ಹಬ್ಬವನ್ನುಂಟುಮಾಡುವಂತಹ ರೂಪು ಲಾವಣ್ಯ ಅವಳಲ್ಲಿ ತುಂಬಿಕೊಂಡಿತ್ತು.

ಪುಟ್ಟಿಯನ್ನು ಲಗ್ನವಾಗಲು ಹಲವಾರು ತರುಣರು ನಾನು ತಾನೆಂದು ಮುಂದೆ ಬಂದರು. ಸರಿಯಾದ ಗಂಡಿಗೆ ಮಗಳನ್ನು ಲಗ್ನ ಮಾಡಿಕೊಟ್ಟು ಮಗಳು ಅಳಿಯನನ್ನು ಮನೆಯಲ್ಲೇ ಇಟ್ಟುಕೊಳ್ಳಬೇಕೆಂದು ನಿಂಗಯ್ಯನ ಆಸೆ. ಅದರಿಂದಾಗಿ ಕೈತುಂಬ ತೆರ ಕೊಡುವುದಕ್ಕೆ ಬಂದ ಅದೆಷ್ಟೋ ಗಂಡುಗಳನ್ನು ಅವನು ನಿರಾಕರಿಸಿದ್ದ.

ಬೇಡರಹಳ್ಳಿ ಕಾಳಯ್ಯನ ಮಗ ತಿರುಮಲಯ್ಯನಿಗೂ ಪುಟ್ಟಿಗೂ ಕಂಕಣ ಕೂಡಿಬಂದಿತು. ತಿರುಮಲಯ್ಯ ಮಾವನ ಮನೆಯಲ್ಲೇ ಬಂದು ನೆಲಸಿದ.

ತಿರುಮಲಯ್ಯನೂ ಲಕ್ಷಣವಾದ ಹುಡುಗ. ಚಿಕ್ಕಂದಿನಿಂದಲೂ ಮೈಮುರಿಯ ದುಡಿಮೆ ಮಾಡಿ ಅವನ ಮೈಕಟ್ಟು ಬಲವಾಗಿತ್ತು. ತಿರುಮಲಯ್ಯ ಪುಟ್ಟಿ ಇವರ ಜೋಡಿಯನ್ನು ಕಂಡು "ಜೋಡಿ ಎಷ್ಟು ಭರ್ಜರಿಯಾಗೈತೆ" ಎಂದು ಜನ ಅಚ್ಚರಿಪಡುವಂತಿತ್ತು.

ಪುಟ್ಟಿಯ ಸಂತೋಷಕ್ಕಂತೂ ಪಾರವೇ ಇರಲಿಲ್ಲ. ಅನುರೂಪನಾದ ಗಂಡ ದೊರೆತನೆಂದು ಅವಳು ಉಬ್ಬಿ ನಲಿಯುತ್ತಿದ್ದಳು.

"ಓ ಈಗ ಬೋ ಜಂಭ ಬಂದ್ಬಿಟ್ಟೈತೆ ಪುಟ್ಟೀಗೆ. ಮಾತ್ಕೂಡಾ ಆಡಾಕಿಲ್ಲ, ಒಳ್ಳೆ ಚಂದುಳ್ಳಿ ಗಂಡ ಬಂದ ಅಂತ."

ಎಂದು ಮುಖದಲ್ಲಿ ಹಾಸ್ಯದ ನಗು ಬೀರುತ್ತ ಪುಟ್ಟಿಯ ಗೆಳತಿ ಪಕ್ಕದ ಹಟ್ಟಿಯ ವೆಂಕಟೆ ಚುಡಾಯಿಸುವಳು.

"ಸುಮ್ಕಿರೇ, ಅವರೆಲ್ಲಾ ನಾ ಕೇಳಿಸ್ಕೊಂಡ್ಬಿಟ್ಟಾರು"

— ಬಳಿಯಲ್ಲೆ ಇದ್ದ ಗಂಡನ ಕಡೆಗೆ ಕುಡಿಗಣ್ಣ ನೋಟ ನೋಡುತ್ತ ನಾಚಿಕೊಂಡು ಹೇಳುವಳು ಪುಟ್ಟಿ.

"ಸಾಕು ಬಿಡೇ. ಬೋ ನಿರ್ವಾಕಿಲ್ಲದ ನಾಚ್ಕೆ. ಮುಂದ್ಲೊರ್ಸ ಈಟೊತ್ತಿಗೆ ಕಂಕ್ಳಾಗೆ ಮಗ ಎತ್ಕೊಬೇಕಾಗ್ತದೆ........"

— ಮಾತಿನ್ನೂ ಮುಗಿಸಿರಲಿಲ್ಲ ವೆಂಕಟ. ಅವಳ ಮಾತನ್ನ ಮುಂದುವರಿಸದಂತೆ ಪುಟ್ಟಿ ತಟ್ಟನೆ ನುಡಿದಳು —

"ಥೂ........ಸುಮ್ಕಿರೆ ಎಂಕ್ಟೀ........"

ಪುಟ್ಟಿಯ ಅಧರಗಳು ನಾಚಿಕೆಯಿಂದ ಕೆಂಪಾದವು.

"ನಿಮ್ಮವ್ವನಂಗೆ ನೀನೂ ಒಂದೇ ಎಣ್ಣು ಎರಬೇಡ ಕಣೇ. ಮೊದಲೊಂದು ಗಂಡು, ಆಮೇಕಿಂದೊಂದ್ಹೆಣ್ಣು........"

—ಮತ್ತೆ ವೆಂಕಟೆ ಕೀಟಲೆ ಮಾಡಿದಳು ಪುಟ್ಟಿಯನ್ನು.

"ನಂಗಿನ್ನು ಕ್ವಾಪ ಬತ್ತೈತ್ನೋಡು."

—ಮುಖದ ಮೇಲೆ ಕೋಪ ನಟಿಸಿಯೇ ಮಾತನಾಡಿದಳು ಪುಟ್ಟಿ.

"ಓಹೋಹೋ....ಕ್ವಾಪ ಬೇರೆ ಬತ್ತೈತಾ ಮಾರಾಣೀಗೆ"

ಪುಟ್ಟಿಯ ಕಣ್ಣುಗಳಲ್ಲಿ ಥಟ್ಟನೆ ನೀರಾಡಿದವು, ತನ್ನ ಗಂಡನ ಎದುರಿಗೇ ತನ್ನನ್ನು ಹಾಸ್ಯಮಾಡುತ್ತಿರುವಳಲ್ಲ ಈ ಹಾಳು ವೆಂಕಟೆ ಎಂದು.

ಗೆಳತಿಯ ಕಣ್ಣೀರು ವೆಂಕಟೆಯ ಹಾಸ್ಯಕ್ಕೆ ಪೂರ್ಣವಿರಾಮ ಹಾಕಿತು.

"ಯಾಸಟೇಗ್ ಬುಡು. ನಗಸಾರಕ್ಕೆ ಅಂಗಂದ್ರೆ ಅದ್ಕೂ ಅಳ ಬೇಕಾ"

—ಎನ್ನುತ್ತ ವೆಂಕಟೆ ತನ್ನ ಸೆರಗಿನಿಂದ ಪುಟ್ಟಿಯ ಕಣ್ಣೊರೆಸಿ ಮತ್ತೆ ಹೇಳಿದಳು.

"ಎಲ್ಲಿ ವಸಿ ನಗು ನೋಡಾವಾ"

ಪುಟ್ಟಿಗೆ ನಗುಬಂತು. ನಕ್ಕಳು.

"ಅಣ್ಣ........ಅಂಗೇ........"

—ಎನ್ನುತ್ತ ತಾನೂ ನಕ್ಕು ದೃಷ್ಟಿಯ ನೆಟಿಕೆ ತೆಗೆದು ಅಲ್ಲಿಂದ ಹೊರಟುಹೋದಳು ವೆಂಕಟೆ.

ವೆಂಕಟೆ ಪುಟ್ಟಿಯ ಗೆಳತಿಯಾದರೂ ಅವಳು ಪುಟ್ಟಿಗಿಂತ ನಾಲ್ಕು ವರ್ಷ ದೊಡ್ಡವಳು. ಅವಳಿಗೆ ಮದುವೆಯಾಗಿ ಕಂಕುಳಲ್ಲಿ ಒಂದು ಗಂಡು ಕೂಸಿತ್ತು, ಎರಡು ವರ್ಷದ್ದು. ಈಗ ಮತ್ತೆ ಬಸುರಿ. ಹೆರಿಗೆಗಾಗಿ ತವರಿಗೆ ಬಂದಿದ್ದಳು.

ಸ್ವಾಭಾವಿಕವಾಗಿ 'ನಗಸಾರ'ಕ್ಕಾಗಿಯೇ ಮಾತನಾಡಿದ್ದಳು ವೆಂಕಟೆ. ಆ ಮಾತುಗಳಿಂದ ಪುಟ್ಟಿ ಕೋಪನಾಚಿಕೆಗಳನ್ನು ನಟಿಸಿದ್ದರೂ ಅವ್ಯಕ್ತವಾದ ಆಸೆಯೊಂದು ಅವಳು ನೆಲೆಸಿ ಹೃದಯ ಹೆಮ್ಮೆಯಿಂದ ಉಬ್ಬಿತ್ತು. ತನ್ನ ಗಂಡ ನಿಜವಾಗಿಯೂ 'ಚಂದುಳ್ಳಿ'ಯವ, ಅವನಿಂದ ತನಗಾಗುವ ಮಕ್ಕಳೂ 'ಚಂದುಳ್ಳಿ'ಯದಾಗುತ್ತವೆಂದು ಅವಳ ಆಸೆ ಕುಡಿಯಿತು. ಗೆಳತಿ ಹೋದನಂತರ ಪುಟ್ಟಿ ನಾಚಿಕೆಯನ್ನು ಒತ್ತಟ್ಟಿಗಿಟ್ಟು ಗಂಡನ ಮುಖವನ್ನು ಅಭಿಮಾನದಿಂದ ಕಣ್ತುಂಬ ನೋಡಿದಳು.

ತಿರುಮಲಯ್ಯನಿಗಾದರೋ ವೆಂಕಟೆಯ ಆ 'ನಗಸಾರ'ದ ಮಾತು ಹೃದಯಕ್ಕೆ ಅಂಕುಶ ನೆಟ್ಟಂತಾಯಿತು. ಮನಸ್ಸಿನಲ್ಲಿ ಯಾವುದೋ ಒಂದು ದಾರುಣ ವ್ಯಥೆ ಕಾಣಿಸಿಕೊಂಡಿತು. ಆದರೆ ಅದನ್ನು ತೋರಗೊಡದೆ ಒಂದು ಬಲವಂತದ ನಗು ನಕ್ಕ.

ದಿನಗಳು ಕಳೆದವು. ಒಂದಾದಮೇಲೊಂದರಂತೆ ಪುಟ್ಟಿಯ ಮುಖದ ಮೇಲೆ ಮೊದಲಿದ್ದ ನಗು, ಆನಂದ, ಸಂತೋಷ ಎಲ್ಲವೂ ಮಾಯ ವಾದವು. ಚಿಂತೆಯ ಕಾರ್ಮೋಡ ಸದಾಕಾಲವೂ ಅವಳ ಮುಖವನ್ನು ಆವರಿಸಿರುತ್ತಿತ್ತು. ತನ್ನ ಚಿಂತೆಯ ಕಾರಣವನ್ನು ಯಾರೊಂದಿಗೂ ಅವಳು ಹೇಳಿಕೊಳ್ಳುವಂತಿರಲಿಲ್ಲ. ಹೇಳಿಕೊಳ್ಳಬಹುದಾದಂತಹ ವಿಚಾ ರವೂ ಅದಾಗಿರಲಿಲ್ಲ!

ಪುಟ್ಟಿ ಮದುವೆಯಾಗುವ ಮುನ್ನ ನೆರೆಹೊರೆಯವರ ನಲ್ಮೆಯ ಬಾಳುವೆಗಳನ್ನು ನೋಡಿ ನೋಡಿ ಬಾಳುವೆಯ ಅದೆಷ್ಟೋ ಹೊಂಗನಸು

ಗಳನ್ನು ಕಟ್ಟಿದ್ದಳು. ಸದಾ ಆನಂದದಿಂದ ತುಂಬಿ ತುಳುಕಾಡುವ ತನ್ನ ಮನೆ....ನಲ್ಮೆಯ ಗಂಡ....ಕಿಲಕಿಲನೆ ನಕ್ಕು ನಲಿದಾಡುವ ಮಕ್ಕಳು.... ಮಕ್ಕಳು........

ಅವಳಿಗೆ ನಲ್ಮೆಯ ಗಂಡನೇನೋ ಸಿಕ್ಕಿದ್ದ. ಆದರೆ ಕಿಲಕಿಲನೆ ನಕ್ಕು ನಲಿದಾಡುವ ಮಕ್ಕಳು? ಗಂಡನಿಂದ ತನಗೆ ಮಕ್ಕಳಾಗುವ ಬಗೆ? ಆ ಪ್ರಶ್ನೆ ಅವಳ ಮನಸ್ಸಿನ ಮುಂದೆ ಸುಳಿದಾಗಲೆಲ್ಲ ಅವಳಿಗೆ ತನ್ನ ಗಂಡನ ಮೇಲೆ ರೋಷ ಉಕ್ಕಿಬರುತ್ತಿತ್ತು. ಹಾಗೆಂದು ಬಂದ ರೋಷವನ್ನು ಹೊರತೋರಿಸಿಕೊಳ್ಳುವುದೂ ಅವಳಿಗೆ ಸಾಧ್ಯವಿರಲಿಲ್ಲ. ತನ್ನ ಮಾನಕ್ಕೆ ತಾನೇ ಹೆದರಿಕೊಂಡು ಬಲವಂತವಾಗಿ ಅದನ್ನು ಅದುಮಿಬಿಡುತ್ತಿದ್ದಳು.

ಮಗಳು ದಿನದಿನಕ್ಕೆ ಕೃಶವಾಗುತ್ತಿರುವುದನ್ನು ಗಮನಿಸದಿರಲಿಲ್ಲ ಕೆಂಚಮ್ಮ. ಏನೋ ಕೊರಗುಹತ್ತಿಸಿಕೊಂಡು ಬಿಟ್ಟಿದ್ದಾಳೆ ಮಗಳು ಎಂದು ಅವಳು ಅರಿಯದಿರಲಿಲ್ಲ.

ಒಂದು ದಿನ ನಿಂಗಯ್ಯ–ತಿರುಮಲಯ್ಯ ಮನೆಯಲ್ಲಿಲ್ಲದ ವೇಳೆಯಲ್ಲಿ ತಾಯಿ ಮಗಳನ್ನು ಮಮತೆ ತುಂಬಿದ ದನಿಯಲ್ಲಿ ಕೇಳಿದಳು.

"ಏನಮ್ಮೀ, ಈಚೀಚೆಗೆ ಬೋ ಇಳಿದೋಯ್ತಾ ಇದ್ದೀಯ. ವೊಟ್ಟೆಗೂ ಸರಿಯಾಗಿ ತಿನ್ನಾಕಿಲ್ಲ. ಅದೇನು ಕೊರಗು ಅಚ್ಕೊಂಡಿದ್ದೀಯ ನನ್ಗಾಟಾನೂ ಏಳಬಾರ್ದಾ ?"

"ಏನಿಲ್ಲವ್ವ – ನೆನ್ನೆ ವೊನ್ನೆ ನಿದ್ದೆ ಸರೀಕತ್ಲಿಲ್ಲ. ಮುಖ ಜುಗರಿ ಸ್ಕೊಂಡಂಗದೆ ಅಷ್ಟೆ"

—ಮಾತು ಹಾರಿಸಿ ಹೇಳಿದಳು ಪುಟ್ಟಿ. ಕೆಂಚಮ್ಮ ಅದನ್ನು ನಂಬಲಿಲ್ಲ.

"ನೋಡವ್ವಿ ನೀನು ನನ್ಗಾಟಾನೂ ಏನ್ಸಂಗ್ತಿ ಅಂತ ಏಳ್ದೆ ಇಂಗೆಲ್ಲಾ ಯಸನ ಅಚ್ಕೊಂಡ್ರೆ ಎಂಗೆ. ಎತ್ತಕಳ್ಳು ನೋಯಾಕಿಲ್ವಾ. ನಂಗೆ ನೀನೊಬ್ಬಳಲ್ದೆ ಬೇರೆ ಯಾರವ್ರೆ. ಮನಸ್ಸಿನಾಗೇನೈತೋ ಏಳು."

ತಾಯಿ ಮಗಳ ಮುಖವನ್ನು ನೋಡುತ್ತ ಕಣ್ಣೀರು ಕರೆದಳು. ಅದನ್ನು ನೋಡಿ ಮಗಳಿಗೂ ದುಃಖ ಉಕ್ಕಿಬಂತು. ತಾಯಮಡಿಲಲ್ಲಿ ಮುಖವಿಟ್ಟು ಗಳಗಳನೆ ಅತ್ತುಬಿಟ್ಟಳು.

"ಅಳಬೇಡ ನನ್ಕಂದ, ಏನಾಯ್ತು ಏಳು. ಗಂಡ ಏನಾರಾ ಬೈದ್ನಾ, ಬಡದ್ನ"

—ಎಂದು ಕೆಂಚಮ್ಮ ಮಗಳ ತಲೆಯನ್ನು ನೇವರಿಸಿದಳು.

ಪುಟ್ಟಿ ಆ ದಿನ ತಾಯಿಯೊಂದಿಗೆ ಇದ್ದ ಸಂಗತಿಯೆಲ್ಲವನ್ನೂ ಹೇಳಿಕೊಂಡಳು.

ಮಗಳ ಮಾತುಗಳನ್ನು ಕೇಳಿ ಕೆಂಚಮ್ಮ ಅವಾಕ್ಕಾದಳು.

"ಇಂಗಾ........!"

—ಎಂದು ನಿಟ್ಟುಸಿರು ಕರೆದಳು.

ಅಂದಿನಿಂದ ಮಗಳೊಂದಿಗೆ ತಾಯಿಯೂ ಕೊರಗತೊಡಗಿದಳು. ಮತ್ತೆ ಕೆಲವು ದಿನಗಳು ಕಳೆದವು.

ಒಂದು ದಿನ ಪುಟ್ಟಿ ಗಂಡನೊಂದಿಗೆ ಏಕಾಂತದಲ್ಲಿರುವಾಗ, ಅಷ್ಟು ದಿನವೂ ಮನಸ್ಸಿನಲ್ಲಿಯೇ ಇಟ್ಟುಕೊಂಡು ಕೊರಗುತ್ತಿದ್ದುದನ್ನು ಇನ್ನು ತಡೆಯಲಾರದೆ ಹೊರಗೆಡವಿ ಮಾತನಾಡಿದಳು. ಅವಳ ಮಾತುಗಳಲ್ಲಿ ಕೋಪ ದುಃಖ ಸಮ್ಮಿಶ್ರವಾಗಿದ್ದವು.

"ಇಂಥವ್ರು ಲಗ್ನ ಯಾಕಾಗ್ಬೇಕಾಗಿತ್ತು ?"

ಹೆಂಡತಿಯ ದುಗುಡ ತಿರುಮಲಯ್ಯನಿಗೆ ತಿಳಿಯದೇ ಇರಲಿಲ್ಲ. ಅವಳನ್ನು ಹೇಗೆ ಸಮಾಧಾನ ಮಾಡಬೇಕೆಂದೂ ಅವನಿಗೆ ತೋರಲಿಲ್ಲ.

"ಯಾಕೇ ಮಾತಾಡಾಕಿಲ್ಲ."

"ಏನು ಮಾತಾಡ್ಲಿ ಪುಟ್ಟಿ, ನಿನಗೆ ದ್ರೋಹ ಮಾಡ್ದೆ"

"ಅದ್ಕೇ ನಾನೇಳಿದ್ದು. ಅಂಥವ್ರು ಲಗ್ನ ಯಾಕಾದ್ರಿ ಅಂತ"

"ನಾನ್ಬೇಡ ಅಂದೆ. ಆದ್ರೆ ನಮ್ಮಪ್ಪಯ್ಯ ಬಿಡ್ಲಿಲ್ಲ. ನಿಮ್ಮಪ್ಪನ ಆಸ್ತೀಗೆ ಜೋತುಬಿದ್ದು ನಿನ್ನ ಲಗ್ನ ಆಗ್ಲೇಬೇಕು ಅಂತ ಅಠ ಇಡ್ದ. ಇಲ್ದಿದ್ರೆ ನೇಣಾಕ್ಕೊಂಡು ಸತ್ತೋಯ್ತೀನಿ ಅಂತ ಎದರಸ್ಬುಟ್ಟ"

"ನಿಮ್ಮಪ್ಪನ್ನ ಉಳಸಾಕೆ ನನ್ನ ಕುತ್ಗೆ ಕುಯ್ದ್ರೇನು"

—ಕಿಡಿನುಡಿಯಾಡಿದಳು ಪುಟ್ಟಿ.

ತಿರುಮಲಯ್ಯ ಏನೊಂದೂ ಮಾತನಾಡಲಿಲ್ಲ.

"ನಿಮ್ಮಪ್ಪಯ್ಯನಿಗೆ ಈ ಸಂಗ್ತಿ ಗೊತ್ತಿರ್ನಿಲ್ವಾ."

"ಊಹುಂ"

ತಿರುಮಲಯ್ಯ ತಲೆಯಾಡಿಸಿದ.

ತಿರುಮಲಯ್ಯನೂ ಲೋಕದ ಸ್ವಭಾವ ತಿಳಿದಿದ್ದವನು. ತನ್ನಿಂದ ತನ್ನ ಹೆಂಡತಿಗೆ ಎಂತಹ ಅನ್ಯಾಯವಾಗಿದೆಯೆಂಬುದು ಅವನಿಗೂ ಗೊತ್ತಿತ್ತು. ತನ್ನ ಅಸಹಾಯಕತೆಗಾಗಿ ಅವನಿಗೂ ನಾಚಿಕೆಯಾಯಿತು. ಯಾವ ಅಪರಾಧಕ್ಕಾಗಿ ತನಗೆ ಈ ಶಿಕ್ಷೆ ಎಂದು ದೈವವನ್ನು ಅವನು ಮನಸ್ಸಿನಲ್ಲಿಯೇ ನಿಂದಿಸಿದನು.

"ನೀಕಳ್ತೀರಾ ಬುಡಿ ಎಂಗಸ್ನಂಗೆ."

—ತಿರುಮಲಯ್ಯ ಕಣ್ಣೀರು ಕರೆಯುತ್ತಿರುವುದನ್ನು ಕಂಡು ಪುಟ್ಟಿ ನುಡಿದಳು. ಗಂಡನ ಆ ದುಸ್ಥಿತಿ ಕಂಡು ಅವಳಿಗೂ ಮರುಕ ಮೂಡಿಬಂತು.

'ಎಂಗಸ್ನಂಗೆ?....ಅಂಗಾರೆ....ನಾನೂ ಒಬ್ಬ ಗಂಡಸಾ'

—ಎಂದ ವಿಚಾರಮಗ್ನನಾದ ತಿರುಮಲಯ್ಯನಿಗೆ.

ಹೆಂಡತಿಯ ಸ್ವಭಾವ ತಿರುಮಲಯ್ಯ ಚೆನ್ನಾಗಿಯೂ ಅರಿತಿದ್ದ. ಲಗ್ನವಾಗಿ ಈಗಾಗಲೆ ಆರೇಳು ತಿಂಗಳುಗಳು ಕಳೆದಿದ್ದವು. ಲಗ್ನವಾದ ಹಲವೇ ದಿನಗಳಲ್ಲಿ ಪುಟ್ಟಿ ಮೈನೆರೆದಳು. ಅನಂತರ ಶೋಭನಪ್ರಸ್ತವೂ ನೆರವೇರಿತು.

ಆ ಮೊದಲ ದಿನವೇ ಪುಟ್ಟಿಗೆ ಗಂಡನ ತೋಳುಗಳಲ್ಲಿ ಸುಖಪಡುವ ಆಸೆ, ಆತುರ. ಆದರೆ........

ಪುಟ್ಟಿ ಸಾಮಾನ್ಯಹೆಂಗಸಿನಂತೆ ಸ್ವಲ್ಪದರಲ್ಲಿ ಸುಖಪಡುವವಳಲ್ಲ ಎಂದು ತಿರುಮಲಯ್ಯ ಕಂಡುಕೊಳ್ಳಲು ಕಷ್ಟವಾಗಲಿಲ್ಲ. ಆದರೆ........

ಆದರೆ........

ಹೀಗೆಯೇ ಅವರಿಬ್ಬರ ಬಾಳು ಸಾಗಿತ್ತು.

ತಿರುಮಲಯ್ಯನೂ ಅದೆಷ್ಟೋ ಯೋಚನೆ ಮಾಡಿದ. ಆದರೆ ಅದೊಂದು ಬಗೆಹರಿಯದ ಸಮಸ್ಯೆಯಾಗಿಯೇ ಉಳಿಯಿತು.

ಅಂತೂ ಕೊನೆಗೆ ಯೋಚಿಸಿ ಯೋಚಿಸಿ ಅವನು ನಿರ್ಧರಿಸಿದ. ತನ್ನ ನಿರ್ಧಾರವನ್ನು ಒಂದು ದಿನ ಧೈರ್ಯಮಾಡಿ ಹೆಂಡತಿಗೆ ಹೇಳಿದ—

"ನಿಮಗೆ ನಾಚ್ಕೆ ಆಗಾಕಿಲ್ವ – ನಿಮ್ಮೆಂಡ್ತೀನ ಇನ್ನೊಬ್ಬನ ಸಂಗಾಟ ಮಲಕ್ಕೋ ಅಂತ ಏಳಾಕೆ."

—ಪುಟ್ಟಿ ಗಂಡನ ಮಾತನ್ನು ಕೇಳಿ ಮೂದಲಿಸಿದಳು.

ನಿಜ. ತಿರುಮಲಯ್ಯನಿಗೇನೋ ನಾಚಿಕೆಯಾಯಿತು. ನಾಚಿಕೆಯ ಜತೆಗೆ ಸಂಕಟವೂ ಉಂಟಾಯಿತು. ಅವನು ಹೆಂಡತಿಯೊಂದಿಗೆ ಈ ಮಾತನ್ನು ಹೇಗೆ ಆಡುವುದೆಂದು ಅಳೆದೂ ಸುರಿದು ಕೊನೆಗೆ ನಾಚಿಕೆ ಸಂಕಟಗಳನ್ನು ತಡೆಹಿಡಿದು ನುಡಿದಿದ್ದ. ತನ್ನ ಹೆಂಡತಿ ಗಂಡನ ಸುಖ ಕಾಣ ಬೇಕಾದರೆ ಅದಿಲ್ಲದೆ ಬೇರಾವ ಮಾರ್ಗವೂ ಇಲ್ಲವೆಂದು ಅವನು ಧೃಡ ವಾಗಿ ನಂಬಿದ್ದ.

ಎಷ್ಟೋಹೊತ್ತಿನ ಮೌನದ ನಂತರ ತಗ್ಗಿಸಿದ್ದ ತಲೆಯೆತ್ತಿ ನೋಡಿದ ತಿರುಮಲಯ್ಯ. ಪುಟ್ಟಿ ದಿಂಬಿಗೆ ಮುಖವಿಟ್ಟು ಗಳಗಳನೆ ಅಳುತ್ತಿದ್ದಳು. ತಿರುಮಲಯ್ಯ ಅವಳ ಮುಖವನ್ನು ಬಿಡಿಸಿ ಹೆಗಲ ಮೇಲಿನ ಚೌಕದಿಂದ ಕಣ್ಣೊರೆಸಿದ.

"ಯೋಚ್ನೆಮಾಡು ಪುಟ್ಟಿ. ನೀನಾರಾ ಸುಖವಾಗಿರಬೇಡ್ವ – ನಂಗಂತೂ ಆ ಅದೃಷ್ಟ ಅಣೇಲಿ ಬರೀಲಿಲ್ಲ."

ತಿರುಮಲಯ್ಯ ಮತ್ತೆ ಹೇಳಿದ ಅನುಕಂಪದ ಧ್ವನಿಯಲ್ಲಿ.

ಆ ದಿನ ಅವರು ಮತ್ತೆ ಯಾವ ಮಾತೂ ಆಡಲಿಲ್ಲ.

ಪುಟ್ಟಿ ಮಾತ್ರ ಗಂಡ ಹೇಳಿದಂತೆ ಯೋಚನೆ ಮಾಡಿದಳು. ಅವಳಿಗೆ ಗಂಡ ಹೇಳಿದ ಮಾರ್ಗದ ಹೊರತು ಬೇರೆ ಯಾವ ಉಪಾಯವೂ ಹೊಳೆಯಲಿಲ್ಲ. ಕೊನೆಗೆ ಅವಳು ಅದೇ ನಿರ್ಧಾರಕ್ಕೆ ಬಂದಳು.

ಗಂಡಸಿಗಿಂತ ಹೆಂಗಸಿಗೆ ಕಾಮಚಾಪಲ್ಯ ಹೆಚ್ಚು. ಗಂಡಸಿಗಿರು ವಷ್ಟು ಸಂಯಮಶಕ್ತಿ ಅವಳಿಗಿಲ್ಲ. ಅವಳಾದರೂ ದುರ್ಬಲಳು. ಅವಳಿಗೆ ಸಂಗಸುಖ ಬೇಕೇ ಬೇಕು. ಅದಿಲ್ಲದ ಅವಳ ಜೀವನ ಬರಡು, ಬರಿಭಾರ.

ಪುಟ್ಟಿ ಅದೇ ತಾನೆ ಯೌವನದ ಮೊದಲ ಪಾವಟಿಗೆಯ ಮೇಲೆ ಕಾಲಿಟ್ಟವಳು. ಅವಳ ಅಂಗಾಂಗಗಳೆಲ್ಲವೂ ಗಂಡಸಿನ ಸಂಗಕ್ಕಾಗಿ ಹಾತೊರೆಯುತ್ತಿದ್ದವು.

ಒಂದು ದಿನ ಪುಟ್ಟಿ ಬಟ್ಟೆ ಒಗೆಯಲು ಕೆರೆಗೆ ಹೋಗಿದ್ದಾಗ ಮಾದಯ್ಯನ ಮಗ ಸೋಮಪ್ಪ ಸಿಕ್ಕಿದ.

"ಏನ್ಪುಟ್ಟಿ, ಚೆಂದಾಕಿದ್ದೀಯಾ ?"

—ಪುಟ್ಟಿಯನ್ನು ನೋಡಿ ಸೋಮಪ್ಪ ಕೇಳಿದ.

"ಏನೋ ಇಂಗಿವ್ನಣ್ಣ ಭೂಮಿಗ್ಭಾರವಾಗಿ"

—ಪುಟ್ಟಿ ಉತ್ತರಿಸಿದಳು.

"ಯಾಕಿಂಗೇಳ್ತೀಯ. ನಿಂಗೇನ್ಕಮ್ಮಿಯಾಗೈತೆ. ಭಂಗಾರದಂತ ಗಂಡ ಅವ್ನೆ."

ಅವನಿಗೇನು ಗೊತ್ತು ಪುಟ್ಟಿಯ ದುಃಖ. ಭಂಗಾರದಂತಹ ಗಂಡನೇನೋ ಇದ್ದಾನೆ. ಆದರೆ ಪ್ರಯೋಜನವೇನು ?

ಪುಟ್ಟಿ ಯಾವ ಮಾತೂ ಆಡದಿರಲು ಮತ್ತೆ ಕೇಳಿದ ಸೋಮಪ್ಪ—

"ಏನು ಬೋ ಇಳದೋಗ್ಬಿಟ್ಟಿದೀಯಲ್ಲಾ ?"

"ಏನೇಳ್ಲಿ ಸೋಮಪ್ಪ. ನಂಗೆ ಬಾಳೇ ಬೇಡಾಗೈತೆ."

"ಯಾಕೆ, ಏನಾಗೈತೆ ಅಂಥಾದ್ದು. ಬಾಳೇ ಬೇಡಾಗೂ ಅಂಥಾದ್ದು"

ಪುಟ್ಟಿ ಏನು ತಾನೆ ಹೇಳಿಯಾಳು ! ಹೇಗೆ ತಾನೇ ಹೇಳಿಯಾಳು !

ಪುಟ್ಟಿ ಸೋಮಪ್ಪನನ್ನು ಚಿಕ್ಕಂದಿನಿಂದಲೂ ಬಲ್ಲವಳು. ಪುಟ್ಟಿ ಹುಡುಗಿಯಾಗಿದ್ದಾಗ ಅವನೊಂದಿಗೆ ಅದೆಷ್ಟೋ ಆಟ ಆಡಿದ್ದಳು. ಆಗ ಇಬ್ಬರಲ್ಲಿಯೂ ಸಲಿಗೆ ಇತ್ತು.

ಪುಟ್ಟಿಯ ರೂಪಕ್ಕೆ ಮನಸೋತು ಅವಳನ್ನು ಮದುವೆಯಾಗಲು ಸೋಮಪ್ಪ ಆಸೆಪಟ್ಟಿದ್ದ. ಸಾಲ ಮಾಡಿಯಾದರೂ ನಿಂಗಯ್ಯನಿಗೆ ಕೈ ತುಂಬ ತೆರ ಕೊಟ್ಟು ಅವಳನ್ನು ಪಡೆಯಬೇಕೆಂದು ಹಂಬಲಿಸಿದ್ದ. ತನ್ನ ತಂದೆಯೊಂದಿಗೂ ಆ ಆಸೆಯನ್ನು ತೋಡಿಕೊಂಡಿದ್ದ.

"ಆಗಾಕಿಲ್ಲ. ನಿಂಗಯ್ಯನ ಸೆಂಟಸ್ತಿಗೆ ನಮಗೆ ಬ್ಯಾಡ"

—ಒಂದೇ ಮಾತಿನಲ್ಲಿ ಹೇಳಿಬಿಟ್ಟ ಮಾದಪ್ಪ.

"ಅದ್ಯಾಕಪ್ಪ ?"

—ಕನಿಕರ ಮೂಡುವಂತೆ ಕೇಳಿದ ಸೋಮಪ್ಪ.

ಆದರೆ ಮಾದಪ್ಪನಿಗೇನೂ ಕನಿಕರ ಹುಟ್ಟಲಿಲ್ಲ. ಅವನಂದ—

"ಆ ಮನುಷ್ಯಂಗೇನ ಮಗಳ್ನ ಸ್ನೇಹ ಮಾಡ್ಕೋ ಅಂತೀಯ– ನಮ್ಗೇನೂ ಆಗಾಕೆ. ಎಷ್ಟ ಬಡವರ್ನ ಮುಳಗ್ಸವ್ನೆ ಅವ್ನು. ಅವರ ಉಸಿರೆಲ್ಲಾ ಅವನಿಗೆ ತಟ್ಟಾಕಿಲ್ವಾ?"

ಸೋಮಪ್ಪನಿಗೂ ಗೊತ್ತಿತ್ತು ಸಿಂಗಯ್ಯ ಬಡಜನರ ಚೂರಗಲ ಜಮೀನುಗಳನ್ನೆಲ್ಲಾ ಮೋಸದಿಂದ ತನ್ನದಾಗಿ ಮಾಡಿಕೊಂಡ ವಿಚಾರ; ಶಾನುಭೋಗ ಸುಬ್ಬಣ್ಣನಿಗೆ ಲಂಚದ ರುಚಿ ತೋರಿಸಿ ಬರವಣಿಗೆ ಬಾರದ ಆ ಹಳ್ಳಿಯ ಜನರಿಗೆ ಮೋಸಮಾಡಿದ್ದ ವಿಚಾರ.

ಸಿಂಗಯ್ಯ ಮೊದಲಿಗೆ ಅಂತಹ ಆಸ್ತಿವಂತನೇನೂ ಆಗಿರಲಿಲ್ಲ. ಅವರಪ್ಪನ ಪಿತ್ರಾರ್ಜಿತವಾದ ಆಸ್ತಿ ಮುಕ್ಕಾಲು ಎಕರೆ ಹೊಲ, ಊರಲ್ಲಿ ಒಂದು ಹಳೆಯ ಮನೆ, ಲೇವಾದೇವಿಯಲ್ಲಿ ಒಂದುಸಾವಿರ ರೂಪಾಯಿ ಮಾತ್ರ. ಅಷ್ಟರಿಂದಲೇ ಸಿಂಗಯ್ಯ ಬಡಾಯಿಸಿಕೊಂಡ. ಲೇವಾದೇವಿಯ ಹಣವನ್ನು ಬಡ್ಡಿಗೆ ಬಡ್ಡಿ ಸೇರಿಸಿ ಬೆಳೆಸಿದ. ಹಲವು ವರ್ಷ ಕಳೆದು ಕೈಯಲ್ಲಿ ಹಣ ಹೆಚ್ಚಿದಂತೆಲ್ಲ ಅವರಿವರ ಜಮೀನುಗಳನ್ನು ಆಧಾರವೋ ಭೋಗ್ಯವೋ ಮಾಡಿಕೊಂಡು ಹಣ ಕೊಡತೊಡಗಿದ. ಈ ಆಧಾರಪತ್ರ ಇಲ್ಲವೇ ಭೋಗ್ಯಪತ್ರ ಬರೆಯುವಾಗ ಶಾನುಭೋಗ ಸುಬ್ಬಣ್ಣ ತನ್ನ ಕೈವಾಡ ತೋರಿಸಿ ಕ್ರಯಪತ್ರ ಮಾಡಿಬಿಡುತ್ತಿದ್ದ. ಅದು ಹೀಗೆಯೇ 'ರಿಜಿಸ್ಟ್ರಿ ಆಪೀಸಿ'ನಲ್ಲಿ ರಿಜಿಸ್ಟರಾಗಿಬಿಡುತ್ತಿತ್ತು. ಎಷ್ಟೋ ವರ್ಷಗಳ ನಂತರ ಆ ಬಡಪಾಯಿ ಹಳ್ಳಿಗರಿಗೆ ತಾವು ಬರೆದು, ಇಲ್ಲ ಬರೆಸಿಕೊಟ್ಟದ್ದು ಆಧಾರ ಪತ್ರವೂ ಅಲ್ಲ ಭೋಗ್ಯಪತ್ರವೂ ಅಲ್ಲ, ಅದು ಕ್ರಯಪತ್ರವೆಂದು ಗೊತ್ತಾಗು ತ್ತಿದ್ದಿತು. ಹಾಗೆ ಮೋಸಕ್ಕೆ ಒಳಗಾದ ಹಲವಾರು ಜನ ಸಿಂಗಯ್ಯನ ಬಳಿಗೆ ಹೋಗಿ ಗೋಳಿಟ್ಟು 'ನೀ ಇಂಗೆ ಮಾಡಬೋಜೇನಣ್ಣ' ಎಂದು ಹೇಳಿ ಕೊಂಡಾಗ ಅವನು ಅವರನ್ನು ನಿರ್ದಾಕ್ಷಿಣ್ಯವಾಗಿ ಛೀಮಾರಿ ಹಾಕಿ ಅಟ್ಟಿಬಿಡುತ್ತಿದ್ದ. ಕತ್ತು ಕತ್ತರಿಸಿಕೊಟ್ಟಹಾಗಿರುತ್ತಿತ್ತು ಅವರ ಪಾಡು.

ಮಾದಪ್ಪನಿಗೂ ಇಂತಹದೊಂದು ಹೊಡೆತ ಬಿದ್ದಿತ್ತು. ದೇವರ ತೋಟವನ್ನು ಗುತ್ತಿಗೆಗೆ ತೆಗೆದುಕೊಳ್ಳುವುದಕ್ಕೆ ಅವನಿಗೆ ಕೊಂಚ ಹಣ ಬೇಕಾಗಿತ್ತು. ಸಿಂಗಯ್ಯನ ಅಡಕೆ ತೋಟಕ್ಕೆ ಸೇರಿಕೊಂಡಿದ್ದ ಅರ್ಧ ಎಕರೆಯಷ್ಟಿದ್ದ ತನ್ನ ಸ್ವಂತ ತೋಟವನ್ನು ಭೋಗ್ಯಮಾಡಿ ಅವನಿಂದ

ಆರು ನೂರು ರೂಪಾಯಿ ಸಾಲ ಮಾಡಿದ್ದ. ಎಂದಿನಂತೆ ಶಾನುಭೋಗ ಪತ್ರ ಬರೆದ. ಅವನು ಓದಿ ಹೇಳಿದಾಗ ಅದನ್ನು ಭೋಗ್ಯಪತ್ರ ಎಂದು ಓದಿದನಾದರೂ ಅದಾದ ಒಂದು ವರ್ಷದ ನಂತರ ಮಾದಪ್ಪ ಸಿಂಗಯ್ಯನಿಗೆ ಹಣ ಹಿಂದಿರುಗಿಸಹೋದಾಗ ಅವನ ತೋಟ ಕ್ರಯವಾಗಿ ಹೋಗಿದೆ ಯೆಂದೂ ತಾನು ಬರೆದುಕೊಟ್ಟಿರುವುದು ಕ್ರಯಪತ್ರವೆಂದೂ ಅವನಿಗೆ ತಿಳಿಯಿತು.

"ಇಲ್ಲ, ನಾನು ಕ್ರಯಮಾಡಿಲ್ಲ. ಬರ್ಕೊಟ್ಟಿರೋದು ಭೋಗ್ಯಪತ್ರ"

—ಎಂದು ವಾದಿಸಿದ ಮಾದಪ್ಪ.

"ನಿನ್ತಾವ ಸುಳ್ಳೇಳ್ಬೇಕಾ ನಾನು. ಬೇಕಾರೆ ಬರದೋನ್ನೇ ಕರೆಸಿ ಕೇಳಪ್ಪ"

—ನಿರ್ವಿಕಾರವಾಗಿ ಸಿಂಗಯ್ಯ ಉತ್ತರಕೊಟ್ಟ.

ಶಾನುಭೋಗನನ್ನು ಕರೆಸಿ ಕೇಳಿದ್ದಾಯಿತು.

"ನನಗೆ ನೆನಪಿರೋ ಮಟ್ಟಿಗೆ ಬರೆದಿರುವುದು ಕ್ರಯಪತ್ರ. ಬೇಕಾದರೆ ರಿಜಿಸ್ಟ್ರಾರ್ ಕಛೇರಿಯಲ್ಲಿ ಕಾಪಿ ತೆಗೆದುಕೊಂಡು ನೋಡಬಹುದು"

—ಶಾನುಭೋಗ ಸಲೀಸಾಗಿ ಹೇಳಿಬಿಟ್ಟ.

"ನೀವು ಭೋಗ್ಯಪತ್ರ ಅಂತಾನೇ ಓದಿದಿರಿ, ಶಾನುಭೋಗರೆ. ವಸಿ ನೆಪ್ಪು ಮಾಡ್ಕೊಳ್ಳಿ"

—ಮಾದಪ್ಪ ಮತ್ತೆ ವಾದಿಸಿದ.

"ನೆನಪೇನು ಮಾಡ್ಕೋಳ್ಳೋದು. ಹತ್ತು ವರ್ಷದ ಹಿಂದಲ ರಿಕಾರ್ಡು ಬೇಕಾದ್ರೂ ಹೇಳ್ತೀನಿ. ನನಗೆ ಚೆನ್ನಾಗಿಯೂ ನೆನಪಿದೆ. ನೀವು ಹೋದ ವರ್ಷ ತಾನೆ ಬರೆಸಿದ ಪತ್ರ. ಅದು ಕ್ರಯಪತ್ರ."

"ಅನುಮನಸ ಯಾಕೆ ಮಾದಪ್ಪ. ಬೇಕಾದರೆ, ರಿಜಿಸ್ಟ್ರಿ ಆಪೀಸ್ಗೊ ಓಗಿ ನೋಡು. ನಿಂಗೇ ಗೊತ್ತಾಯ್ತದೆ."

—ಶಾನುಭೋಗ ಹೇಳಿದುದನ್ನು ಸಮರ್ಥಿಸಿಕೊಳ್ಳುವಂತೆ ಸಿಂಗಯ್ಯ ಮಾತನಾಡಿದ.

ಮಾದಪ್ಪ 'ರಿಜಿಸ್ಟ್ರಿ' ಆಫೀಸಿಗೂ ಹೋಗಿ ಬಂದ. ಸಿಂಗಯ್ಯ,

ಶಾನುಭೋಗ ಇಬ್ಬರೂ ಸೇರಿ ಮಾಡಿದ ಮೋಸ ಅವನಿಗೆ ಚೆನ್ನಾಗಿಯೂ ವ್ಯಕ್ತವಾಯಿತು.

ಅಷ್ಟಕ್ಕೇ ಪ್ರಕರಣವನ್ನು ಬಿಡಲಿಲ್ಲ ಮಾದಪ್ಪ. ಎಷ್ಟಾದರೂ ಎದೆಯ ರಕ್ತವನ್ನು ಬಸಿದು ಸಂಪಾದಿಸಿದ್ದ ಆಸ್ತಿಯಲ್ಲವೆ. ಅದನ್ನು ಬಿಟ್ಟುಕೊಡಲು ಅವನಿಗೆ ಹೇಗೆ ತಾನೇ ಮನಸ್ಸು ಬಂದೀತು. ಊರಿನ ಯಜಮಾನರುಗಳ ಮುಂದೆಹೋಗಿ ಗೋಳಿಟ್ಟ, ನಡೆದ ವಿದ್ಯಮಾನಗಳನ್ನೆಲ್ಲಾ ತಿಳಿಸಿದ.

"ಮನೆ ಪಂಚಾಯ್ತಿ ಮಾಡಸ್ತೀಯೋ, ಮಾರಿಚಾವಡಿ ಪಂಚಾಯ್ತಿ ಮಾಡಸ್ತೀಯೋ"

—ಯಜಮಾನ ಗೌಡ ಕೇಳಿದ.

"ಮಾರಿಚಾವಡಿ ಪಂಚಾಯ್ತೀನೇ ಇರ್ಲಿ. ಸುತ್ತಹಳ್ಳಿ ಹದಿನಾರು ಕಟ್ಟೆ ಯಜಮಾನ್ರುಗೋಳೂ ಬತ್ತಾರೆ."

—ಮಾದಪ್ಪ ಉತ್ತರಿಸಿದ.

"ಖರ್ಚು ಬೋ ಆಯ್ತದಲ್ಲೋ, ಮಾರಿಗೆ ಕುರಿ ಕೊಡ್ಬೇಕು, ಪೂಜೆ ಪುನಸ್ಕಾರ. ಬಂದೋರ್ಗೆಲ್ಲಾ ಉಪಚಾರ ಬೇರೆ."

"ಪರ್ವಾಗಿಲ್ಲ ಯಜಮಾನಪ್ಪ, ನಾನು ಸಿದ್ಧವಾಗಿವ್ನಿ. ಏಟು ಖರ್ಚಾದ್ರೂ ಸರಿ. ಆ ದೇವಿ ಮುಂದೆ ನಾನು ಸುಳ್ಳೇಳಿದ್ರೆ ನನ್ಮನೆ ಹಾಳಾಗ್ಲಿ. ಅವನು ಸುಳ್ಳೇಳಿದ್ರೆ ಅವನ ಮನೆ ಹಾಳಾಗ್ಲಿ"

ಖಡಾಖಂಡಿತವಾಗಿ ಹೇಳಿದ ಮಾದಪ್ಪ.

ಯಜಮಾನ ಗೌಡ ನಿಂಗಯ್ಯನಿಗೂ ವಿಚಾರ ತಿಳಿಸಿ ಸುತ್ತಹಳ್ಳಿ ಹದಿನಾರು ಕಟ್ಟೆ ಯಜಮಾನ್ರನ್ನೂ ಕರೆಸಿದ. ಗೊತ್ತಾದ ದಿನ ಮಾರಿ ಚಾವಡಿಯಲ್ಲಿ ಪಂಚಾಯ್ತಿ ಸೇರಿತು.

"ಏನಪ್ಪ ನಿಂಗಯ್ಯ, ನೀನೂ ದೊಡ್ಮನಸ. ದೇವರೆದರ್ಗೆ ಸುಳ್ಳು ಪಮಾಣ ಮಾಡಬಾರ್ದು. ಇಲ್ಲಿ ನಿಜ ಏಳ್ಬಡು."

—ಯಜಮಾನ ಗೌಡ ನಿಂಗಯ್ಯನನ್ನು ಕುರಿತು ಹೇಳಿದ.

"ನಾನ್ಯಾಕೆ ಸುಳ್ಳು ಏಳ್ಲಿ. ಬರದೋರೂ ಅವ್ರೆ ಊರಲ್ಲೆ, ಶಾನು

ಭೋಗರು. ಬೇಕಾರೆ ಅವರ್ನೂ ಕೇಳಕೊಳ್ಳಿ. ಬರೆದಿರೋದು ಖಂಡಿತ ವಾಗೂ ಕ್ರಯಪತ್ರ"

—ಎಂದ ನಿಂಗಯ್ಯ.

"ನೀಯೇನೇಳ್ತೀಯೋ ಮಾದಯ್ಯ"

—ಮಾದಯ್ಯನನ್ನೂ ಕೇಳಿದ ಯಜಮಾನ.

ಪತ್ರ ಬರದೋನು ಶಾನುಭೋಗ. ಅವನ ಒಳಆಕ್ಕೊಂಡು ಭೋಗ್ಯ ಪತ್ರ ಅಂತ ಏಳಿ ಕ್ರಯಪತ್ರ ಬರೆಸಿಬಿಟ್ಟವ್ನೆ ಈ ನಿಂಗಯ್ಯ. ಇಬ್ರೂ ಸೇರ್ಕೊಂಡು ನಂಗ್ಮೋಸಾ ಮಾಡಿಬಿಟ್ಟವ್ರೆ. ನಾನು ಭೋಗ್ಯ ಅಂತಲೇ ನಿಂಗಯ್ಯನತ್ರಾವು ಆಣ ತಕೊಂಡಿರೋದು. ಇದು ಸತ್ಯವಾದ ಮಾತು."

—ಮಾದಯ್ಯ ಹೇಳಿದ.

"ನೀನು ಪತ್ರ ಓದಸ್ನಿಲ್ವ, ಬರೆದ ಮೇಕೆ"

—ಪಂಚಾಯುತರಲ್ಲೊಬ್ಬ ಕೇಳಿದ.

"ಓದಸ್ದೆ. ಶಾನುಭೋಗ ಭೋಗ್ಯಪತ್ರ ಅಂತ್ಲೆ ಓದ್ದ."

ಅಲ್ಲಿಗೆ ಮುಗೀತು ಆ ಮೊದಲ ವಿಚಾರಣೆ.

"ಇಬ್ರೂ ಅವರವರ ನೇರಕ್ಕೇ ಏಳ್ತಾಅವ್ರೆ. ಯಾರನ್ನ ನಂಬ್ಬೇಕೋ ಯಾರನ್ನ ಬಿಡಬೇಕೋ ಗೊತ್ತಾಗಾಕಿಲ್ಲ. ಇನ್ನು ಎಲ್ಲಾ ನಡೀರಿ ಅಮ್ಮನ ಗುಡೀಗೆ. ಅಲ್ಲೇ ಇತ್ಯರ್ಥ ಆಗ್ಲಿ"

—ಎಂದು ಎಲ್ಲರನ್ನೂ ಕರೆದುಕೊಂಡು ಮಾರಿಗುಡಿಯೊಳಕ್ಕೆ ಹೋದ ಯಜಮಾನಪ್ಪ.

ದೇವಿಗೆ ಪೂಜೆ ಪುನಸ್ಕಾರಗಳೆಲ್ಲಾ ನಡೆದವು. ಕುರಿಯೊಂದನ್ನು ಬಲಿಕೊಟ್ಟದ್ದಾಯಿತು.

"ಮಂಗಳಾರತಿ ಮಾಡಬಹುದೇ?"

—ಪೂಜಾರಿ ಕೇಳಿದ.

"ಎಲ್ಲರೂ ಬಂದವ್ರಾ"

—ಎನ್ನುತ್ತ ಸುತ್ತಲೂ ನೋಡಿದ ಯಜಮಾನ ಗೌಡ.

"ಊ್ಞಂ ಬಂದವ್ರೆ"

—ಎಂದ ಮಾದಯ್ಯ.

"ಮಂಗಳಾರತಿ ಮಾಡಬೋದೇನಪ್ಪ"

—ನಿಂಗಯ್ಯನನ್ನು ಕುರಿತು ಯಜಮಾನ ಕೇಳಿದ.

"ಊ್ಣಂ ಮಾಡಿ"

—ನಿಂಗಯ್ಯನೆಂದ.

ಮಂಗಳಾರತಿಯಾಯಿತು. ಪೂಜಾರಿ ಎಲ್ಲರ ಮುಂದೂ ಮಂಗಳಾರತಿ ತಟ್ಟೆ ಹಿಡಿದ. ಎಲ್ಲರೂ ಭಕ್ತಿಯಿಂದ ಸ್ವೀಕರಿಸಿದರು.

"ಸರಿ ಇಸಟ್ಟು ಇಬ್ರೂ ದೇವರ ಮುಂದೆ ನಿಂತು ಪರ್ಮಾಣ ಮಾಡಿ"

—ಯಜಮಾನ ಗೌಡ ಮಾದಯ್ಯ ನಿಂಗಯ್ಯ ಇಬ್ಬರನ್ನೂ ಕುರಿತು ಹೇಳಿದ.

ಮಾದಯ್ಯ ಮೊದಲು ಪ್ರಮಾಣ ಮಾಡಿದ, ತನ್ನ ತೋಟವನ್ನು ಭೋಗ್ಯ ಮಾಡಿದ್ದೆನೆಂದು. ಅನಂತರ ನಿಂಗಯ್ಯನೂ ಪ್ರಮಾಣ ಮಾಡಿದ, ತೋಟ ತನಗೆ ಕ್ರಯವಾಗಿದೆಯೆಂದು.

ಮಾರೀಗುಡಿ ಪಂಚಾಯ್ತಿ ಅಲ್ಲಿಗೆ ಮುಗಿದಂತಾಯಿತು

ಮಾದಯ್ಯನ ಮುಖ ಬೆಳ್ಳಗಾಯಿತು.

ನಿಂಗಯ್ಯ ಮೀಸೆ ಹುರಿ ಮಾಡಿದ. ತೋಟ ಅವನದಾಯಿತು.

ಇಂತಹ ಸುಳ್ಳು ಪ್ರಮಾಣ ಮಾಡಿದ ಮೋಸಗಾರನ ಮಗಳನ್ನು ತನ್ನ ಮನೆಗೆ ತಂದುಕೊಳ್ಳಲು ಮಾದಯ್ಯ ಖಂಡಿತ ಒಪ್ಪಲಿಲ್ಲ. ಸೋಮು ವಿಧಿಯಿಲ್ಲದೆ ಸುಮ್ಮನಾಗಬೇಕಾಯಿತು. ಆದರೂ ಅವನಿಗೆ ಪುಟ್ಟಿಯ ಮೇಲಿನ ಮೋಹ ಬಿಡಬೇಕಾದರೆ ಬಹಳ ಕಾಲ ಹಿಡಿಯಿತು. "ಅಂಥ ಚಂದುಳ್ಳಿ ಉಡುಗೀನ ಲಗ್ನ ಆಗೋಕೆ ನಂಗೆ ನಸೀಬಿಲ್ಲವಲ್ಲ" ಎಂದು ಮನಸ್ಸಿನಲ್ಲೇ ಕೊರಗಿದ.

ಇದ್ದುದರಲ್ಲಿ ಧೈರ್ಯಮಾಡಿಕೊಂಡು ತಂದೆಯೊಂದಿಗೆ ಹಾಗೂ ಹೇಳಿದ್ದ.

"ಆ ಉಡುಗೀನ ಲಗ್ನ ಆದರೆ ನಮ್ಮ ತ್ವಾಟಾನೂ ನಮಗೇ ಸಿಕ್ತದೆ" ಎಂದು.

"ಆ ತ್ವಾಟಾನೂ ಬೇಡ, ಅವನ ಹುಡುಗೀನೂ ಬ್ಯಾಡ"

—ಖಡಾಖಂಡಿತವಾಗಿ ಹೇಳಿಬಿಟ್ಟ ಮಾದಪ್ಪ.

೯

ಈ ಎಲ್ಲ ನೆನಪೂ ಮರುಕಳಿಸಿ ಸೋಮಪ್ಪ ನಿಂತಲ್ಲಿಯೇ ನಿಂತಿದ್ದ.

ಪುಟ್ಟಿ ಬಟ್ಟೆಗಳನ್ನೆಲ್ಲಾ ನೀರಿನಲ್ಲಿ ನೆನೆಸಿ ಪಕ್ಕದ ಕಲ್ಲಿನ ಮೇಲಿಟ್ಟು ತಲೆಯೆತ್ತಿ ನೋಡಿದಳು.

ಸೋಮಪ್ಪ ಹಾಗೆಯೇ ನಿಂತಿರುವುದು ಅವಳ ಕಣ್ಣಿಗೆ ಬಿತ್ತು. ಸುತ್ತಲೂ ಒಮ್ಮೆ ದೃಷ್ಟಿ ಹೊರಳಿಸಿದಳು. ಬೇರೆ ಯಾರೂ ಇರದಿರುವುದನ್ನು ನೋಡಿ ಅವಳಿಗೆ ಕೊಂಚ ದಿಗಿಲೆನಿಸಿತು. ಒಂದು ತೆರನಾದ ಸಮಾಧಾನವೂ ಆಯಿತು. ಅವಳ ಮನಸ್ಸಿನಲ್ಲಿ ಏನೇನೋ ಯೋಚನೆಗಳು ಬಂದು ಹೋದವು.

"ನಿನ್ನೋಡಿದರೆ ಏನೋ ಮನಸ್ಸಿಗೆ ಯೋಚ್ನೆ ಅಂಟಿಸಿ ಕೊಂಡಂಗೈತೆ"

—ಸೋಮಪ್ಪ ಕೆಣಕುವ ಧ್ವನಿಯಲ್ಲಿ ಕೇಳಿದ.

ಪುಟ್ಟಿ ಯಾವ ಮಾತೂ ಆಡಲಿಲ್ಲ. ಅವಳ ಮೌನ ಕಂಡು ಮತ್ತೆ ಕೇಳಿದ ಸೋಮಪ್ಪ—

"ಯಾಕೆ ಮಾತಾಡಾಕಿಲ್ವಾ?"

"ಏನು ಮಾತಾಡ್ಲಣ್ಣ?"

—ಸೋಮಪ್ಪನ ಮುಖ ನೋಡುತ್ತ ಹೇಳಿದಳು ಪುಟ್ಟಿ.

"ಅದೇ. ಏನು ಯೋಚ್ನೇಲಿ ಕೊರಗ್ತಿದೀ ಅಂತ.

"ಯೋಚ್ನೆ ಏನ್ಸಂತಣ್ಣ. ಮನಸ್ಸಿಗ್ಯಾಕೋ ಸಂತೋಸ ಇಲ್ಲ. ಅಷ್ಟೆ"

"ಅದೇನೇಳ್ಬೇಕ್ಬಾ. ಸಂತೋಸ ಇಲ್ದೆ ಓಗಿರೋದು"

ಹೇಗೆ ಹೇಳುವುದು? ಏನೆಂದು ಹೇಳುವುದು? ಪುಟ್ಟಿಯ ಮನಸ್ಸು

ಕಸವಿಸಿಯಾಯಿತು. ಅವಳ ಹೃದಯ ಯಾವುದೋ ಆಸೆಯಿಂದ ಮಿಡಿಯಿತು. ಮತ್ತೇ ಮೌನ.

"ನೋಡು ಪುಟ್ಟಿ ನಿನ್ನ ನಾನೇ ಲಗ್ನ ಆಗ್ಬೇಕು ಅಂತ ಬಾಳಾ ಆಸೆ ಪಟ್ಟಿದ್ದೆ. ಏನೋ ಋಣಾನುಬಂದ ಇಲ್ದೆ ಓಯ್ತು"

—ಸೋಮಪ್ಪನೂ ಯಾವುದೋ ಆಸೆಗೆ ಪೀಠಿಕೆ ಹಾಕತೊಡಗಿದ. ಅಷ್ಟರಲ್ಲಿಯೇ ಯಾರೋ ಕೆಲಜನ ಕೆರೆಯ ಕಡೆಗೆ ಬರುತ್ತಿರುವುದು ಕಂಡಿತು.

"ಯಾರೋ ಬತ್ತಾಅವ್ರೆ ಪುಟ್ಟಿ. ನಾನಿನ್ನು ಒತ್ತೀನಿ. ಬಡವನ್ನ ಮರೀಬ್ಯಾಡ"

—ಎಂದು ಹೊರಡಲನುವಾದ ಸೋಮಪ್ಪ.

'ಅಯ್ಯೋ ಹೊರಟುಹೋಗುತ್ತಾನಲ್ಲ' ಎನ್ನಿಸಿತು ಪುಟ್ಟಿಗೆ. ಅವನ ಸಾಮೀಪ್ಯ ಅವಳಿಗೆ ಏನೋ ಒಂದು ಹೊಸ ತೆರನಾದ ಆನಂದ ತಂದಿತ್ತು. ಆಸೆ ತುಂಬಿದ ಕಣ್ಣುಗಳಿಂದ ಅವನನ್ನು ದಿಟ್ಟಿಸಿ ನೋಡಿದಳು. ನಾಲ್ಕು ಕಣ್ಣುಗಳೂ ಒಂದಾದುವು. ಸೋಮಪ್ಪನ ಹೃದಯದಲ್ಲಿಯೂ ವಿದ್ಯುತ್ಸಂಚಾರವಾದಂತಾಯಿತು.

"ಬರ್ಲಾ"

—ಹೋಗಲೂ ಆಗದೆ, ನಿಲ್ಲಲೂ ಆಗದೆ ಸೋಮಪ್ಪ ತಡವರಿಸಿದ.

ಕೆರೆಯ ಕಡೆಗೆ ಬರುತ್ತಿದ್ದ ಜನ ಸಮೀಪವಾಗುತ್ತಿದ್ದರು.

"ಮಸಿ ನಿನ್ತಾವ ಮಾತಾಡ್ಬೇಕಣ್ಣ. ನಾಳೆ ಪುರಸತ್ತಾದರೆ ಹೊತ್ತಾರೆ ತೋಟದ್ಕಡೆ ಬತ್ತೀಯಾ?"

—ಪುಟ್ಟಿ ಉಸಿರು ಹಿಡಿದುಕೊಂಡು ಹೇಳಿದಳು.

"ನಿನ್ಗಂಡ........"

"ಅದೆಲ್ಲಾ ಆಮೇಕಿಂದ ಏಳ್ತೀನಿ. ನಾಳೆ ಬಾ. ಮರೀಬ್ಯಾಡ."

ಬರುತ್ತಿದ್ದ ಜನ ಹತ್ತಿರವಾದುದನ್ನು ಕಂಡು ಪುಟ್ಟಿ ನೆನೆಸಿದ ಸೀರೆಯೊಂದನ್ನು ಕುಕ್ಕತೊಡಗಿದಳು.

ಸೊಮಪ್ಪ ಸರಸರನೆ ಮರೆಯಾದ. ಅವನು ಹಾಗೆ ಹೋದುದನ್ನೂ ಅಲ್ಲಿಯೇ ಒಬ್ಬಂಟಿಗಳಾಗಿದ್ದ ಪುಟ್ಟಿಯನ್ನೂ ನೋಡಿ ಅದೇತಾನೆ ಕೆರೆಯ

ಬಳಿಗೆ ಬಂದ ಹೆಂಗಸರು ಒಬ್ಬರ ಮುಖವನ್ನೊಬ್ಬರೂ ನೋಡುತ್ತ ತಮ್ಮತಮ್ಮಲ್ಲಿ ಮುಗುಳ್ನಗೆ ನಕ್ಕರು. ಅವರು ಹಾಗೆ ನಕ್ಕುದನ್ನು ಕಂಡರೂ ಪುಟ್ಟಿ ಏನೂ ಅರಿಯದವಳಂತೆ ತನ್ನ ಕೆಲಸದಲ್ಲಿ ತಾನು ನಿರತಳಾದಳು.

ಆ ದಿನ ಸೋಮಪ್ಪನಿಗೆ ಹಿಡಿಸಲಾರದಷ್ಟು ಸಂತೋಷ ಉಂಟಾಯಿತು. ಪುಟ್ಟಿ ತನ್ನನ್ನು ಪ್ರೇಮಿಸುತ್ತಿರುವಳೆಂದು ಅವನಿಗೆ ಚೆನ್ನಾಗಿಯೂ ಗೊತ್ತಾಯಿತು. ಎಷ್ಟು ಬೇಗ ದಿನ ಕಳೆದು ಮರುದಿನದ "ಹೊತ್ತಾರೆ" ಯಾದೀತು ಎಂದು ಅವನ ಮನಸ್ಸು ಕಾತರಿಸಿತು. ಆದರೂ ಒಂದು ದಿಗಿಲು. ಪುಟ್ಟಿಯ ಗಂಡ........

ಮಾರನೆಯ ದಿವಸ ಬೆಳಗ್ಗೆ ಸೋಮಪ್ಪ ಬರುವುದಕ್ಕೆ ಮೊದಲೇ ಪುಟ್ಟಿ ತೋಟಕ್ಕೆ ಬಂದಳು. ಸೋಮಪ್ಪ ಬರುವನೋ ಇಲ್ಲವೋ ಎಂದು ಅವಳ ಮನಸ್ಸು ತುಯ್ದಾಡುತ್ತಿರುವಾಗಲೇ ತೋಟದ ಬಾಗಿಲಿನ ಮುಳ್ಳು ತಡಿಕೆ ಸರಿಸಿ ಸೋಮಪ್ಪ ಒಳಬಂದ. ಅವನ ಮುಖ ಕಂಡು ಪುಟ್ಟಿಗೆ ಆನಂದ ಉಕ್ಕಿ ಬಂತು.

"ಬತ್ತೀಯೋ ಇಲ್ಲ ಚಕ್ಕರ್ ಕೊಟ್ಬಿಡ್ತೀಯೋ ಅಂತಿದ್ದೆ"

—ಅತಿಯಾದ ಸಲಿಗೆಯಿಂದ ಮುಗುಳುನಗೆ ಹರಿಸುತ್ತ ಹೇಳಿದಳು ಪುಟ್ಟಿ.

"ಉಂಟಾ? ನೀಯೇಳಿದ ಮೇಕೆ ಬರದೇ ನಿಲ್ಲೋಕೆ ಮನಸ್ಸು ಬತ್ತದಾ"

—ಸೋಮಪ್ಪ ಪ್ರೀತಿಯ ಧ್ವನಿಯಲ್ಲಿ ಹೇಳಿದ.

ಅವರಿಬ್ಬರೂ ತೋಟದ ಗುಡಿಸಿಲಿನ ಮುಂಭಾಗದಲ್ಲಿದ್ದ ಮೆಟ್ಟುಗಲ್ಲಿನ ಮೇಲೆ ಹೋಗಿ ಕುಳಿತರು.

ತನಗಾಗಿರುವ ಅನ್ಯಾಯವನ್ನು ಹೇಗೆ ನಾಚಿಕೆಬಿಟ್ಟು ಸೋಮಪ್ಪನೊಂದಿಗೆ ಹೇಳಿಕೊಳ್ಳುವುದು ಎಂದು ಯೋಚಿಸಿದಳು ಪುಟ್ಟಿ.

"ಏನೋ ಮಾತಾಡ್ಬೇಕು ಅಂದಲ್ಲ. ಅದೇನು?"

—ಅವಳ ಮೌನವನ್ನು ಒಡೆಯುವುದಕ್ಕೆ ಕೇಳಿದ ಸೋಮಪ್ಪ. ದೊರೆತಿರುವ ಸದವಕಾಶವನ್ನು ಸದುಪಯೋಗಪಡಿಸಿಕೊಳ್ಳುವುದಕ್ಕಾಗಿ

ಅವಳ ಸಮೀಪಕ್ಕೆ ಸರಿದು, ಮೈಗೆ ಮೈ ಸವರುವಂತೆ ಕುಳಿತು, ಅವಳ ಕೈಯನ್ನು ತನ್ನ ಕೈಯಲ್ಲಿ ಹಿಡಿದು ಮೃದುವಾಗಿ ಅದುಮಿದ.

ಸೋಮಪ್ಪನ ಆ ಸ್ಪರ್ಶದಿಂದ ಪುಟ್ಟಿಯ ಮೈ ಪುಲಕಿತವಾಯಿತು. ಅವಳು ಆರ್ತಳಂತೆ ಸೋಮಪ್ಪನ ಮುಖ ನೋಡಿದಳು.

ಅಷ್ಟರಲ್ಲಿಯೇ ತೋಟದ ಬಾಗಿಲ ಕಡೆ ಸದ್ದಾಯಿತು. ತಿರುಮಲಯ್ಯ ತೋಟದೊಳಕ್ಕೆ ಬರುತ್ತಿದ್ದ. ಸೋಮಪ್ಪನ ಎದೆ ಡವಗುಟ್ಟಿತು. ಅವನು ಎದ್ದು ಮರೆಯಾಗಲು ಯತ್ನಿಸಿದ.

"ಬಂದರೆ ಬತ್ತಾನೆ ಬುಡು"

—ಪುಟ್ಟಿ ಸೋಮಪ್ಪನನ್ನು ಹೋಗಗೊಡದೆ, ಅವನು ಏಳಲೂ ಸಹ ಅವಕಾಶಕೊಡದೆ ಹಾಗೆಯೇ ಅವನ ಕೈಯನ್ನು ಅದುಮಿ ಹಿಡಿದಳು.

ಇವರಲ್ಲೇನೋ ಮೋಸವಿರಬೇಕೆಂದು ಸೋಮಪ್ಪನಿಗೂ ಭಯ ವಾಯಿತು. ಆದರೆ ತಿರುಮಲಯ್ಯ ಅವರುಗಳನ್ನು ನೋಡಿದರೂ ನೋಡ ದವನಂತೆ ಬೇರೆಕಡೆಗೆ ಹೊರಟುಹೋದುದನ್ನು ಕಂಡು ಸೋಮಪ್ಪನಿಗೆ ನಿಜಕ್ಕೂ ಆಶ್ಚರ್ಯವಾಯಿತು.

ಪುಟ್ಟಿ ತನ್ನ ಬಾಳ ದುಗುಡವನ್ನು ಸೋಮಪ್ಪನಲ್ಲಿ ತೋಡಿ ಕೊಂಡಳು.

ಅಂದಿನಿಂದ ಪುಟ್ಟಿ ಸೋಮಪ್ಪ ಪ್ರತಿದಿನವೂ ತಪ್ಪದೆ ತೋಟದಲ್ಲಿ ಸಂಧಿಸುತ್ತಿದ್ದರು. ತೋಟದಲ್ಲಿದ್ದ ಆ ತೆಂಗಿನ ಗರಿಯಿಂದ ಕಟ್ಟಿದ ಗುಡಿಸಲೇ ಅವರ ವಿಲಾಸಕ್ಷೇತ್ರವಾಯಿತು. ತಿರುಮಲಯ್ಯ ಅವರ ಸಂತೋಷಕ್ಕೆ ಯಾವ ರೀತಿಯ ಅಡ್ಡಿಯನ್ನೂ ಮಾಡಲಿಲ್ಲ.

ಮೊದಲದಿನದ ದೃಶ್ಯಕಂಡು ತಿರುಮಲಯ್ಯನಿಗೇನೋ ಬಹಳ ದುಃಖ ವಾಯಿತು. ತೋಟದ ಬಾವಿಯ ಹಾಸುಗಲ್ಲಿನ ಮೇಲೆ ಒಬ್ಬನೇ ಕುಳಿತು ಗಳಗಳನೆ ಅತ್ತ. ಹಾಳು ಬದುಕಿಗಿಂತ ಸಾವೇ ಮೇಲೆಂದು ಯೋಚಿಸಿದ. ಹಾಗೆ ಯೋಚಿಸಿ ಭಾವಿಯ ಕಡೆ ಇಣಿಕಿನೋಡಿದ. ಅದರಲ್ಲಿ ತುಂಬಿದ್ದ ನೀರು ಅವನಿಗೆ ಭಯ ಹುಟ್ಟಿಸಿತು. ಸಾಯುವ ಧೈರ್ಯ ಬರಲಿಲ್ಲ. ಬದುಕು ಎಂತಹುದಾದರೂ ಸರಿಯೆ, ಬದುಕಿರಬೇಕೆಂಬ ಆಸೆ ಅವನಲ್ಲಿ ಮೂಡಿತು. ಸಾಯುವ ಯೋಚನೆ ಬಿಟ್ಟುಬಿಟ್ಟ.

ದಿನ ಕಳೆದಂತೆ ತಿರುಮಲಯ್ಯನ ಮನಸ್ಸು ಶಾಂತಗೊಂಡಿತು. ಹೆಂಡತಿ ಏನು ಮಾಡಿಕೊಂಡರೂ ತನ್ನಷ್ಟಕ್ಕೆ ತಾನು ಇದ್ದುಬಿಡುತ್ತಿದ್ದ.

ಪುಟ್ಟಿ ಲಗಾಮು ಕಳಚಿದ ಕುದುರೆಯಂತಾದಳು.

ಸೋಮಪ್ಪನಿಗೆ ಪುಟ್ಟಿಯ ಕಾಯಸಂಗ ಅಮೃತ ಸವಿದಂತಾಯಿತು.

ಹಿಡಿತ ತಪ್ಪಿದ ಹೆಂಗಸು ಒಮ್ಮೆ ಕಾಮದ ರುಚಿ ಕಂಡರಾಯಿತು. ಅದರಲ್ಲಿ ಆಸಕ್ತಿ ಹೆಚ್ಚುತ್ತ ಹೋಗುತ್ತದೆ ಅವಳಿಗೆ. ಅದರಲ್ಲೂ ಆಗತಾನೆ ಯೌವ್ವನದ ಹೊಸ್ತಿಲನ್ನು ತುಳಿದ ಹೆಣ್ಣುಹುಡಿಗೆಯರ ಬಗೆಗೆ ಹೇಳ ಬೇಕಾದುದೇ ಇಲ್ಲ–ಹೆಂಡ ಕುಡಿದ ಕೋತಿಗೆ ಚೇಳು ಕಚ್ಚಿಸಿದಂತಾಗುತ್ತದೆ.

ಸೋಮಪ್ಪನ ಸಹವಾಸ ಪುಟ್ಟಿಯಲ್ಲಿ ಸುಪ್ತವಾಗಿದ್ದ ಕಾಮ ವನ್ನು ಕೆರಳಿಸಿತು. ಅವಳಿಗೆ ಅದೆಷ್ಟು ಸುಖಪಟ್ಟರೂ ತೃಪ್ತಿಯೆಂಬುದೇ ಉಂಟಾಗುತ್ತಿರಲಿಲ್ಲ. 'ಇನ್ನೂ.... ಇನ್ನೂ....' ಎಂದು ಅವಳ ಮನಸ್ಸು ಸದಾ ಕಾತರಿಸುತ್ತಿತ್ತು.

ಸೋಮಪ್ಪ ಒಬ್ಬನೇ ಸಾಲದಾದ ಪುಟ್ಟಿಗೆ. ದಿನ ಕಳೆದಂತೆ ಅವಳು ಇನ್ನೂ ಹಲವು ಊರ 'ಹೈಕಳ' ಸಹವಾಸ ಬೆಳೆಸಿದಳು–ಒಬ್ಬರಿಗೆ ಮತ್ತೊಬ್ಬರ ಅರಿವು ಕೊಡದಂತೆ.

ಪುಟ್ಟಿಯ ಈ ಕಾಮಕ್ರೀಡೆ ತಿರುಮಲಯ್ಯನ ಹೊರತಾಗಿ ಊರಲ್ಲಿ ಬೇರೆ ಯಾರಿಗೂ ಮೊದಮೊದಲು ತಿಳಿದಿರಲಿಲ್ಲ. ಆದರೆ ಪುಟ್ಟಿಯ ಸಹವಾಸ ಮಾಡಿದವರಿಗೆ ಅವರವರ ಪರಿಚಯ ಆಗಲು ಬಹಳ ದಿನ ಹಿಡಿಯಲಿಲ್ಲ. ಅವರವರಲ್ಲೇ ದಿನದಿನಕ್ಕೆ 'ಮಚ್ಚರ' ಬೆಳೆಯತೊಡಗಿತು.

ಮಗಳ ವ್ಯವಹಾರ ಸಿಂಗಯ್ಯನಿಗೂ ಗೊತ್ತಾಯಿತು. ಅವನು ಮಗಳನ್ನು 'ಛೀಮಾರಿ' ಮಾಡಿದ. ಅವಳು ಅಪ್ಪನಿಗೂ ಒರಟು ಜವಾಬು ಕೊಟ್ಟಳು. ಕೆಂಚಮ್ಮ ಗಂಡನೊಂದಿಗೆ ಅವನೊಬ್ಬನೇ ಇರುವಾಗ ಏಕಾಂತ ದಲ್ಲಿ ತಿರುಮಲಯ್ಯನ ವಿಚಾರವಾಗಿ ಎಲ್ಲವನ್ನೂ ಸೂಕ್ಷ್ಮವಾಗಿ ಹೇಳಿದಳು.

"ಅವಳ್ತಾನೆ ಏನು ಮಾಡ್ತಾಳು. ಪರ್ರಾಯದ ಹುಡುಗಿ."

—ಮಗಳ ಪರವಾಗಿ ಮಾತನಾಡಿ ಕಣ್ಣೀರು ಮಿಡಿದಳು ತಾಯಿ.

"ಅಂಗಾ........"

—ಎಂದು ತಲೆಯ ಮೇಲೆ ಕೈಯ್ಯಿಟ್ಟುಕೊಂಡು ಕುಳಿತ ನಿಂಗಯ್ಯ.

"ಆಳೋ ಗಂಡಸು ಸರೀಗಿದ್ರೆ ಎಂಗಸು ಯಾಕೆ ಆಳಾಯ್ತಾಳೆ."

—ಕೆಂಚಮ್ಮ ಹೇಳಿದಳು.

ನಿಂಗಯ್ಯ ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟ. ತನ್ನ ಒಬ್ಬಳೇ ಮುದ್ದುಮಗಳ ಗತಿ ಹೀಗಾಯಿತಲ್ಲ ಎಂದು ಚಿಂತಿಸಿದ.

"ಊರೋರ್ಗೆ ಈ ಸಂಗ್ತಿ ತಿಳಿದರೆ ನಾಳೆ ಮುಖಹೊತ್ತು ಬಾಳೋ ಕಾಯ್ತದ ಜನದ ಎದರ್ಗೆ, ಕೆಂಚೀ"

—ಮಾನಕ್ಕೆ ಹೆದರಿ ಎದೆಗುಂದಿ, ನಾಳೆಯ ಯೋಚನೆಯಿಂದ ಹಲುಬುತ್ತ ಕಿರುದನಿಯಲ್ಲಿ ಕೇಳಿದ ನಿಂಗಯ್ಯ.

ಕೆಂಚಮ್ಮನಿಗೆ ಏನು ಸಮಾಧಾನ ಹೇಳಲೂ ತೋಚಲಿಲ್ಲ.

"ಮೊದ್ಲೇ ಜನ ನಮ್ಮೇಲೆ ಇಸ ಕಾರ್ತಾ ಅವ್ರೆ. ಇನ್ನು ಈ ವಿಸ್ಯ ಜೇರೆ ಗೊತ್ತಾದ್ರೆ ಊರಾಗೆ ಇರೋಕೆ ಬುಡ್ತಾರ. ಮಾನ ಮೂರ್ಕಾಸು ಮಾಡ್ದೆ ಬುಟ್ಟಾರಾ"

—ನಿಂಗಯ್ಯನ ಮುಖದಲ್ಲಿ ಭಯ ಕಾಣಿಸಿಕೊಂಡಿತು.

"ಅವಳಿಗೇ ಏಳೋಣ. ಇಚಾರ ಬೀದೀಗೆ ಜೀಳ್ದಂತೆ ಗುಟ್ಟಾಗಿ ನಡಸ್ಕೋ ಅಂತ"

—ತತ್ಕಾಲಕ್ಕೆ ನಿಂಗಯ್ಯನನ್ನು ಸಮಾಧಾನ ಮಾಡಿದಳು ಕೆಂಚಮ್ಮ.

ಎಷ್ಟೇ ಗುಟ್ಟಾಗಿಡಲು ಪ್ರಯತ್ನಿಸಿದರೂ ಕೆಟ್ಟ ನಡತೆ ಹೇಗಾದರೂ ಬಯಲಿಗೆ ಬಂದುಬಿಡುತ್ತದೆ.

ಮಾದಪ್ಪನಿಗೆ ಮಗ ಸೋಮಪ್ಪನ ದಾರಿಗೆಟ್ಟ ಜೀವನ ಮೊದಲು ಕಿವಿಗೆ ಬಿತ್ತು. ಅವನೂ ಊರಲ್ಲಿ ತನ್ನ ಮಾನ ಎಲ್ಲಿ ಹೋಗುತ್ತದೋ ಎಂದು ಹೆದರಿದ. ಮಗನಿಗೂ ಬೈದು ಬೆದರಿಕೆ ಹಾಕಿದ. ಆದರೇನು. ರುಚಿ ಕಂಡಿದ್ದ ಸೋಮಪ್ಪ ಅಪ್ಪನ ಬೈಗಳು ಬೆದರಿಕೆಗಳಿಗೆ ಸೊಪ್ಪುಹಾಕ ಲಿಲ್ಲ. ಪುಟ್ಟಿಯ ಸಹವಾಸ ಬಿಡಲಿಲ್ಲ.

ಮಗನಿಗೆ ಬೇಗ ಮದುವೆ ಮಾಡಿಬಿಡುವುದೇ ಆ ಅನಿಷ್ಟ ಸಹವಾಸ ದಿಂದ ಬಿಡಿಸಲು ತಕ್ಕ ಮದ್ದು ಎಂದು ಯೋಚಿಸದೇ ಇರಲಿಲ್ಲ ಮಾದಪ್ಪ.

ಮಳವಳ್ಳಿ ಚನ್ನಪ್ಪನ ಮಗಳು ಗಿರಿಯಮ್ಮ ಸೋಮಪ್ಪನ ಕೈಹಿಡಿದಳು.

ಗಿರಿಯಮ್ಮ ಪುಟ್ಟಿಗಿಂತ ಲಕ್ಷಣವಾದ ಹುಡುಗಿ. ಪ್ರೈಮರಿ ಸ್ಕೂಲಿಗೆ ಹೋಗಿ 'ವಸಿ ಓದು ಬರಾವ'ನ್ನೂ ಕಲಿತಿದ್ದವಳು. ಜತೆಗೆ ದೊಡ್ಡ ಊರಿನಲ್ಲಿ ಬೆಳೆದವಳು. ಒಂದಿಷ್ಟು 'ನಾಗರೀಕ'ವೂ ಅಂಟಿಕೊಂಡಿತ್ತು. ಮಾದಪ್ಪನ ಭಾಷೆಯಲ್ಲಿ ಹುಡುಗಿ 'ನಾಣ್ಯ'ವಾಗಿ ಇದ್ದಳು.

ಮದುವೆಗೆ ಮೊದಲು "ನಾನೊಲ್ಲೆ" ಎಂದಿದ್ದ ಸೋಮಪ್ಪ ಹುಡುಗಿಯನ್ನು ನೋಡಿದ ಕೂಡಲೇ ಹಲ್ಲುಕಿರಿದು "ಹ್ಞಾಂ" ಎಂದ. ಮದುವೆಯಾದ ಮೇಲೂ ಹೆಂಡತಿಯ ಮೇಲಿನ ಮೋಹದಿಂದ ಮಾವನ ಮನೆಯಲ್ಲೇ ಉಳಿದುಕೊಂಡ. ಕೊಂಚಕಾಲ ಅವನು ಅಲ್ಲಿರುವುದೇ ಸರಿಯೆನ್ನಿಸಿತು ಮಾದಪ್ಪನಿಗೆ. ಪುಟ್ಟಿಯ ಮೇಲಿನ ಗೀಳು ಪೂರ್ತಿಯಾಗಿ ಸೋಮಪ್ಪನನ್ನು ಬಿಟ್ಟುಹೋಗುವುದಕ್ಕೆ ಅದು ಅಗತ್ಯವಾಗಿತ್ತು.

ಸೋಮಪ್ಪ ಪುಟ್ಟಿಯನ್ನು ಕೈ ಬಿಟ್ಟರೂ ಅವಳಿಗೆ ಅಂತಹ ನಷ್ಟವೇನೂ ಆಗಲಿಲ್ಲ. ಇತರ 'ಹೈಕಳ' ಸಂಗ ಹೇಗೂ ಅವಳಿಗೆ ಇದ್ದೇ ಇತ್ತು!

ಮಾದಪ್ಪನಿಗೆ ತಿಳಿಯದಂತೆಯೇ ಬರುಬರುತ್ತಾ ಊರಿನ ಬೇರೆ ಹಲವರಿಗೂ ಪುಟ್ಟಿಯ ಕಥೆ ತಿಳಿದುಹೋಯಿತು.

೧೦

ಕಿತಾಪತಿ ಕಪನಪ್ಪನಿಗೆ ಇಂತಹ ಸುದ್ದಿ ಕಿವಿಮುಟ್ಟಿದರೆ ಸಾಕು, ಅವನಿಗೆ ಕಲ್ಲುಸಕ್ಕರೆ ಮೆದ್ದಂತೆ. ಇರುವ ವಿಚಾರಕ್ಕೆ ಇನ್ನಷ್ಟು ಇಲ್ಲದ ವಿಚಾರಗಳನ್ನೂ ಸೇರಿಸಿ ಬಣ್ಣಕಟ್ಟಿ ಹೇಳುವುದು ಅವನ ಸ್ವಭಾವದಲ್ಲಿ ಹುಟ್ಟಿ ಬಂದ ರೋಗ. ಅಂತಹ ಸುದ್ದಿಯನ್ನು ಹರಡುವಾಗ ಕಪನಪ್ಪನಿಗೆ ಒಂದು ಬಗೆಯ ಉತ್ಸಾಹ ಮೂಡಿ ಬರುತ್ತಿತ್ತು.

"ದಿಟವಾ ನೀ ಯೇಳೋ ಮಾತು ?"

ಕಪನಪ್ಪ ಹೇಳಿದ ಪುಟ್ಟಿಯ ಕಥೆಯನ್ನು ತೆರೆದ ಬಾಯಿ, ಆರಳಿದ ಕಿವಿಗಳಿಂದ ಕೇಳಿದ ಯಜಮಾನಗೌಡ ಪ್ರಶ್ನೆ, ಹಾಕಿದ

"ಊರ್ಮಾತಗೈತೆ ಯಜಮಾನಪ್ಪ. ಇನ್ನು ಇದ್ನ ಇಂಗೇ ಬಿಟ್ರೆ ಊರಾಗಿರೋ ಎಣ್ಣ್ಮಕ್ಕೆಲ್ಲಾ ಅವಳ್ದಾರೀನೆ ಇಡದುಬುಟ್ಟಾರು. ಈಗ್ಲೇ ಇದ್ಕೇನಾರ ತಕ್ಕದ್ಮಾಡಬೇಕು"

—ಯಜಮಾನಗೌಡನ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ನುಡಿದ ಕಪನಪ್ಪ.

ಕಪನಪ್ಪನಿಗೂ ನಿಂಗಯ್ಯನನ್ನು ಕಂಡರೆ ಆಗುತ್ತಿರಲಿಲ್ಲ. ಅವರವರಿಗೆ ಹೇಳಿಕೊಳ್ಳುವಂತಹ ವೈಮನಸ್ಯವಿರದಿದ್ದರೂ ಕಪನಪ್ಪನಿಗೂ ಶಾನುಭೋಗ ಸುಬ್ಬಣ್ಣನಿಗೂ ಎಣ್ಣೆ-ಸೀಗೆಕಾಯಿಯ ದ್ವೇಷವಿತ್ತು. ನಿಂಗಯ್ಯನಿಗೂ ಶಾನುಭೋಗನಿಗೂ ಇದ್ದ ಗೆಳೆತನ ಕಂಡುಕೊಂಡಿದ್ದ ಕಪನಪ್ಪ ನಿಂಗಯ್ಯನ ಮೇಲೂ ದ್ವೇಷ ತೀರಿಸಿಕೊಳ್ಳಲು ಸಮಯ ಕಾಯುತ್ತಿದ್ದ. ಈಗ ತಾನಾಗಿಯೇ ದೊರೆತ ಈ ಸಂದರ್ಭವನ್ನು ಅವನು ಚೆನ್ನಾಗಿ ಉಪಯೋಗಿಸಿಕೊಳ್ಳಲು ಯತ್ನಿಸಿದ. ನಿಂಗಯ್ಯನನ್ನು ಬಗ್ಗುಬಡಿದರೆ ಶಾನುಭೋಗನ ಬಲವನ್ನು ಮುರಿದಂತಾಗುವುದೆಂದು ಅವನು ಭಾವಿಸಿದ. ಸಾಧ್ಯವಾದರೆ

ನಿಂಗಯ್ಯನನ್ನು ಆ ಊರಿನಿಂದಲೇ ಓಡಿಸಿಬಿಟ್ಟರೆ ಶಾನುಭೋಗ ಸತ್ತಂತೆಯೇ ಸರಿ ಎಂದೂ ಅವನು ಲೆಖ್ಖಾಚಾರ ಹಾಕಿದ.

"ಏನ್ಮಾಡೋದಪ್ಪ ಅಂಗಾರೆ ಇದ್ಕೆ ?"

—ಯಜಮಾನಗೌಡ ಕಳವಳದಿಂದ ಕೇಳಿದಾಗ ಕಪನಪ್ಪ ಸಲಹೆ ಮಾಡಿದ,

"ಮಾರಿಗುಡಿ ಪಂಚಾಯ್ತಿ ಸೇರಿಸಿ ಇಂಥೋರ್ನ ಊರ್ನಿಂದ್ಲೇ ಓಡಿಸ್ಬೇಕು."

"ಪಂಚಾಯ್ತಿ ಸೇರಿಸಿದ್ರೆ ಊರಿನ ಮಾನ ಓಯ್ತದಲ್ಲಪ್ಪ ಸುತ್ತ ಳ್ಳೀಗೂ ಪುಕಾರು ಓಗಿ."

"ಇದ್ನ ಇಚಾರ್ಣೆ ಮಾಡದೆ ಬುಟ್ಬುಟ್ರೆ ಊರಿನ ಮಾನ ಉಳ್ಕೊಂತದೆ ಅಂತ ತಿಳ್ಕೊಂಡಿದೀಯಾ ಯಜಮಾನಪ್ಪ."

"ಅಂಗಲ್ಲ."

"ಇನ್ನೇನು ಮತ್ತೆ "

"ನಿಂಗಯ್ಯನನ್ನು ಕರೆಸಿ ಇವೇಕ ಏಳಿ ನೋಡೋಣ."

"ಅದ್ರಾಗೆ ಕಾಸಿನ ಪರ್ಯೋಜನಾನೂ ಇಲ್ಲ. ಸುಳ್ಳು ಪರ್ಮಾಣ ಮಾಡಿ ಮಾದಪ್ಪನ ತ್ಲಾಟ ಎಗರಿಸ್ಕೊಂಡೋನು ತನ್ನ ಮಗಳು ಆದರ ಗಿತ್ತಿ ಅಂದರೆ ಒಪ್ಕೊಂಡಾನ."

"ಇಲ್ಲ ಅನ್ನು"

"ಅದ್ಕೇ ನಾಯೇಳಿದ್ದು–ಮಾರಿಗುಡಿ ಪಂಚಾಯ್ತೀನೇ ಮಾಡಿಬುಡಿ ಅಂತ."

"ಅಲ್ಲಾನೆ ಅವನು ಒಪ್ಕೊಂತಾನೆ ಅನ್ನೊದು ಏನ್ಗೊತ್ತು. ಸುಳ್ಳು ಪರ್ಮಾಣ ಮಾಡೋದು ಅವನ ಜನ್ಮಕ್ಕೆ ಅಂಟಿಬಂದದೆ"

"ಅವನ ಪರ್ಮಾಣ ಯಾರಿಗ್ಬೇಕು. ತಪ್ಪು ಮಾಡ್ದೋರ ಪರ್ಮಾಣ ಕೋರ್ಟ್ನೋರೂ ಒಪ್ಪಾಕಿಲ್ಲ. ಕಂಡೋರೂ ಕೇಳ್ದೋರೂ ಅವ್ರೆ. ಅವರ ಸಾಕ್ಸಿ ತಗೊಂಡು ಇಚಾರ್ಣೆ ಮಾಡಿ ಇತ್ಯರ್ತ ಮಾಡ್ಬೇಕು."

"ಅಂತೂ ಊರಿನ ಮಾನ ಕಳ್ಕೊಳೋ ಪರ್ಸಂಗ ಅನ್ನು."

—ಮತ್ತೆ ಹಲುಬಿದ ಯಜಮಾನ ಗೌಡ.

ಕಪನಪ್ಪ ಮಾರಿಗುಡಿ ಪಂಚಾಯ್ತಿ ಸೇರಿಸುವುದಕ್ಕೆ ಹಾಗೂ ಹೀಗೂ ಒಪ್ಪಿಸಿದ ಯಜಮಾನ ಗೌಡನನ್ನು.

ನಿಂಗಯ್ಯನಿಗೆ ಈ ಸಮಾಚಾರ ತಿಳಿದಾಗ ಅವನು ಭೂಮಿಗೆ ಇಳಿದು ಹೋದ.

ಸುತ್ತಹಳ್ಳಿ ಹದಿನಾರುಕಟ್ಟೆ ಮನೆ ಯಜಮಾನರಿಗೆಲ್ಲಾ ಆಹ್ವಾನ ಹೋಯಿತು. ಗೊತ್ತಾದ ದಿನ ಮಾರಿಗುಡಿಯಲ್ಲಿ ಪಂಚಾಯ್ತಿ ಸೇರಿತು. ನಿಂಗಯ್ಯ ಪಂಚಾಯ್ತಿ ಮುಂದೆ ಬರಲು ತಕರಾರು ಮಾಡಿದ. ಆದರೆ ಜನರ ಮುಂದೆ ಅವನ ಬೇಳೆ ಬೇಯಲಿಲ್ಲ.

ಪುಟ್ಟಿಯನ್ನೂ ಪಂಚಾಯಿತರ ಮುಂದೆ ನಿಲ್ಲಿಸಿದರು. ಅವಳು ನಾಚಿಕೆಬಿಟ್ಟು ಒಂಟೋಂಟಾಗಿಯೇ ಮಾತನಾಡಿದಳು.

ಪುಟ್ಟಿಯ ಮೇಲಿನ ತಪ್ಪು ಸ್ಥಿರಪಟ್ಟಿತು. ಇನ್ನು ಅವಳು ಆ ಊರಿನಲ್ಲಿ ಇರಕೂಡದೆಂದು ಪಂಚಾಯಿತಿ ತೀರ್ಮಾನವಾಯಿತು.

ಪಂಚಾಯಿತಿ ಪ್ರಸಂಗದಿಂದ ನಿಂಗಯ್ಯನ ಮಾನ ಬೀದಿಯ ಪಾಲಾಯಿತು. ಅಪಮಾನ ಸಹಿಸಲಾರದಾದ ಅವನು. ಮಾರನೆಯ ದಿನ ಅವನ ಹೆಣ ದನದ ಕೊಟ್ಟಿಗೆಯಲ್ಲಿ ನೇತಾಡುತ್ತಿತ್ತು.

ನಿಂಗಯ್ಯ ಸತ್ತನಂತರ ಅವನ ಮನೆಯವರು ಒಂದು ದಿನವೂ ಆ ಊರಿನಲ್ಲಿ ಇರಲು ಸಾಧ್ಯವಾಗಲಿಲ್ಲ. ಊರಿನ ಜನ ಕೆರೆ ನೀರು ಮುಟ್ಟಲು ಸಹ ಅವರನ್ನು ಬಿಡುತ್ತಿರಲಿಲ್ಲ. ಸಿಹಿನೀರು ಭಾವಿಯ ಬಳಿಗಂತೂ ಸುಳಿಯ ಗೊಡುತ್ತಿರಲಿಲ್ಲ. ನಿಂಗಯ್ಯನ ಜಮೀನು ಮನೆ–ಮಠಗಳನ್ನು ಕೊಳ್ಳಲು ಕೂಡ ಯಾರೂ ಮುಂದೆ ಬರಲಿಲ್ಲ. ಹೀಗಾಗಿ ತಿರುಮಲಯ್ಯ ಮನೆಯಲ್ಲಿದ್ದ ಪಾತ್ರೆ ಅಲ್ಪಸ್ವಲ್ಪ ಹಣ–ಕಾಸು ಪದಾರ್ಥಗಳ ಸಂಗಡ ಹೆಂಡತಿಯನ್ನೂ ಅತ್ತೆಯನ್ನೂ ಜತೆಯಲ್ಲಿ ಕರೆದುಕೊಂಡು ಊರು ಬಿಡಬೇಕಾಯಿತು.

ಊರು ಬಿಡುವಾಗ ತಿರುಮಲಯ್ಯನಿಗೆ ಎಲ್ಲಿಗೆ ಹೋಗಬೇಕೆಂಬುದೇ ಒಂದು ದೊಡ್ಡ ಸಮಸ್ಯೆಯಾಯಿತು. ತಂದೆಯ ಮನೆಗೆ ಹೋಗಲು ಅವನಿಗೆ ಮುಖವಿರಲಿಲ್ಲ. ಹೋದರೂ ಅಲ್ಲಿಯವರು ಇವರನ್ನು ಕೂಡುವುದಿಲ್ಲವೆಂದು ಅವನು ತಿಳಿದಿದ್ದ. ಅವರಿಗೂ ತಿಳಿದುಹೋಗಿತ್ತು ಇವರ ಕಥೆ. ಆ ಹಳ್ಳಿಯೂ ಕಲ್ಕುಂಟೆ ಗ್ರಾಮದ ಸುತ್ತುಗಟ್ಟಿಗೆ ಸೇರಿತ್ತು.

'ಕೆಟ್ಟು ಪಟ್ಟಣ ಸೇರು' ಎನ್ನುವಂತೆ ಬೆಂಗಳೂರಿಗೆ ಹೋಗುವುದೇ ಸರಿಯೆಂದು ತೀರ್ಮಾನಿಸಿದ ತಿರುಮಲಯ್ಯ. ಅದರಂತೆ ತನ್ನ ಪರಿವಾರದ ಸಮೇತ ಬೆಂಗಳೂರು ತಲಪಿದ.

ರೈಲಿಳಿದ ಕೂಡಲೆ ತೋಟದಪ್ಪನ ಛತ್ರದಲ್ಲಿ ಕೊಠಡಿಯೊಂದನ್ನು ಬಾಡಿಗೆಗೆ ತೆಗೆದುಕೊಂಡು ಎಲ್ಲರೂ ಅಲ್ಲಿ ಉಳಿದುಕೊಂಡರು. ಮೂರು ದಿನ ಅಲ್ಲಿದ್ದು, ನಂತರ ಪೂರ್ಣಯ್ಯನ ಛತ್ರಕ್ಕೆ ತಮ್ಮ ಬಿಡಾರವನ್ನು ವರ್ಗಾಯಿಸಿದರು. ಆ ಕಾಲಕ್ಕೆ ಪೂರ್ಣಯ್ಯನ ಛತ್ರ ಇನ್ನೂ ಧಾತೃವಿನ ಔದಾರ್ಯವನ್ನು ಕಳೆದುಕೊಂಡಿರಲಿಲ್ಲ.

ಅಡಿಗೆ ಬೇಯಿಸಿಕೊಳ್ಳಲು ಊರಿಂದ ತಂದ ಪಾತ್ರೆಗಳಿದ್ದವು. ಊಟದ ಸಾಮಾನುಗಳನ್ನು ಕೊಳ್ಳಲು ಕೈಯ್ಯಲ್ಲಷ್ಟು ಹಣವೂ ಇತ್ತು. ಆದರೆ ಬೆಂಗಳೂರು ಜೀವನದಲ್ಲಿ ಆ ಹಣ ಎಷ್ಟುದಿನ ತಾನೆ ಬಂದೀತು. ಹಾಲು, ಮೊಸರು, ಸೌದೆ, ಸೊಪ್ಪು ಮೊದಲುಗೊಂಡು ಎಲ್ಲವನ್ನೂ ಕೊಳ್ಳಬೇಕು. ಕಾಸು ಬಿಚ್ಚದೆ ಯಾವುದೂ ದೊರೆಯುವಂತಿರಲಿಲ್ಲ.

ತಿರುಮಲಯ್ಯ ಚಾಕರಿ ಶಿಕಾರಿಗೆ ಹೊರಟ. ಎಂತೆಂಥಹವರೋ ಕೆಲಸ ಸಿಕ್ಕದೆ ಮಣ್ಣು ಮುಕ್ಕುತ್ತಿರುವ ಬೆಂಗಳೂರಿನಲ್ಲಿ ಇವರಿಗೆ ಯಾತರ ಕೆಲಸ ಸಿಕ್ಕೀತು! ಅಲೆಯುವುದು, ಮುಖ ಬೆವರಿಸಿಕೊಂಡು ಛತ್ರಕ್ಕೆ ಹಿಂದಿರುಗುವುದು, ಮಾಡಿದ್ದ ಅಡಿಗೆಯನ್ನು ಉಂಡು ಮತ್ತೆ ಅಲೆಯುವುದು. ಇಷ್ಟರಲ್ಲಿಯೇ ದಿನ ದೂಡುತ್ತಿತ್ತು. ಅವನ ಪಾಲಿಗೆ ಬೆಂಗಳೂರು 'ಭಂಗ'ದೂರಾಯಿತು.

ಹೀಗಿರುವಲ್ಲಿ ಒಂದು ದಿನ ಅವನಿಗೆ ಡಾಫರ್ ಗೋಪಾಲಿಯ ಪರಿಚಯವಾಯಿತು.

೧೧

ಗೋಪಾಲಿ

ಆ ಕಸಬು ಚೆನ್ನಾಗಿಯೂ ಒಗ್ಗಿತ್ತು ಗೋಪಾಲಿಗೆ!

ಅನುಭವದಿಂದ ಒಗ್ಗಿಸಿಕೊಂಡಿದ್ದ.

ಉಳಿದ ಅದೆಷ್ಟೋ ಕಸುಬುಗಳಿಗಿಂತ ಅದು ಸುಖವಾಗಿಯೇ ಕಂಡಿತ್ತು ಅವನಿಗೆ.

ರಸಕವಳ, ರಸಿಕರ ಪಾರ್ಟಿ, ಮರ್ಯಾದೆ, ಜೊತೆಗೆ ಕಣ್ಣಿಗೆ ಬೇಕಾದ ಹುಡುಗಿಯರು, ಕೈತುಂಬ ಝಣ ಝಣ ಹಣ!

ಯಾರಿಗುಂಟು ಯಾರಿಗಿಲ್ಲ ಇಂತಹ ಭಾಗ್ಯ!

ಅದೊಂದು ಪರೋಪಕಾರ, ಜನಸೇವೆ, ಎಂದೇ ಭಾವಿಸಿದ್ದ ಅವನು.

"ಏನೋ, ತಲೆಹಿಡಿಯೋ ಕಸುಬು ಹಿಡಿದುಬಿಟ್ಟೆ?"

—ಎಂದು ಅವನ ಗೆಳೆಯರು ಗೇಲಿಮಾಡಿ ಕೇಳಿದಾಗ

"ಎಲ್ಲಪ್ಪ ಬಂತು. ನಾನು ತಲೆಹಿಡಿಯೋನಲ್ಲ. ಏನಿದ್ದರೂ ಕಾಲು ಹಿಡಿಯೋದು ನನ್ನ ಕಸುಬು"

—ನಗುತ್ತ ಉತ್ತರಿಸಿದ್ದ.

ಎಂದರೆ ಅವನು ಕಾಲು ಹಿಡಿಯುತ್ತಿದ್ದನೆಂದಲ್ಲ. ಎಷ್ಟೋ ಜನ ಅವನ ಕಾಲೇ ಹಿಡಿಯುತ್ತಿದ್ದರು.

ಅವರು ಅಂತಿಂಥವರಲ್ಲ.

ಅವರ ಹೆಸರುಗಳ ಪಟ್ಟಿ ನೋಡಿದರೆ 'ಅಬ್ಬಾ ಇವರೂ ಗೋಪಾಲಿಯ ಕೃಪೆಯನ್ನು ಬೇಡುವವರೇ!' ಎಂದು ಅಚ್ಚರಿಯಾಗುತ್ತಿತ್ತು.

ನಿಜ. ಆ ಕಸುಬು ಕೇಳಿದವರೆಲ್ಲ ಒಂದೇ ಪ್ರಕಾರವಾಗಿ ಮೂಗು

ಮುರಿಯುತ್ತಿದ್ದರು. ಅಸಹ್ಯದಿಂದ ವಾಕರಿಸಿಕೊಳ್ಳುತ್ತ ಮುಖ ಸಿಂಡರಿಸಿ ಕೊಳ್ಳುತ್ತಿದ್ದರು.

ಕಸುಬಿಗೆ ಇಳಿಯುವ ಮುನ್ನ ಗೋಪಾಲಿಗೂ ಹಾಗೆಯೇ ಇತ್ತು—ನಿರುದ್ಯೋಗದ ಭಯಂಕರ ಅಲೆಯ ಹೊಡೆತಕ್ಕೆ ಸಿಕ್ಕಿ ಝುರ್ಝುರಿತನಾಗಿ ದಿಕ್ಕುತೋರದೆ ಆ ಕಸುಬಿನ ದಡಮುಟ್ಟುವ ಮುನ್ನ.

ಅದೆಷ್ಟೋ ಜನರಿಗೆ ತನ್ನ ನೆರವು ಬೇಕು.

ಹಿಡಿಕೂಳು ಕಾಣದ ಅದೆಷ್ಟೋ ಅನಾಥರಿಗೆ, ಪಾಪಿಪರದೇಶಿಗಳಿಗೆ, ಸಮಾಜಬಾಹಿರರಿಗೆ ತನ್ನಿಂದ ಅನ್ನ ಸಿಗಬೇಕು ಎನ್ನಿಸಿತು ಅವನಿಗೆ.

ಎಂತಲೇ ಅವನು ಆ ಕಸುಬನ್ನು ಅಪ್ಪಿಕೊಂಡ – ನಗುವವರು ಬೇಕಾದಷ್ಟು ನಗಲಿ, ಹಾಸ್ಯಮಾಡುವವರು ಹಾಸ್ಯಮಾಡಿಕೊಳ್ಳಲಿ ಎಂದು ನಿರ್ವಿಕಾರನಾಗಿದ್ದ.

ನಗುವವರು ಎಷ್ಟು ತಾನೆ ನಗುತ್ತಾರೆ? ಸುಸ್ತಾಗುವವರೆಗೂ ನಗುತ್ತಾರೆ. ಹಾಸ್ಯ ಮಾಡುವವರೂ ಅಷ್ಟೆ.

ಕಡೆಗೆ, ಆ ರೀತಿ ನಗುವವರೂ ಹಾಸ್ಯ ಮಾಡುವವರೂ ಒಂದಲ್ಲೊಂದು ದಿನ ಅವನ ಸಹಾಯ ಕೋರಿಬರಬಹುದು. ಹಾಗೆ ಬಂದವರೂ ಇಲ್ಲದೆ ಇರಲಿಲ್ಲ. ಎಷ್ಟೋ ಮಂದಿ.

ಗೋಪಾಲಿಗೆ ನಿಜವಾದ ಜಗತ್ತು ಪರಿಚಯವಾದದ್ದು ಆ ಕಸುಬಿನಲ್ಲಿ.

ಎಂತಹ ಗೋಳು! ಎಷ್ಟು ಭಯಾನಕ!

ಹಿಡಿಕೂಳಿಗಾಗಿ ಯಾವ ನರಕಕ್ಕೆ ಬೇಕಾದರೂ ಇಳಿಯಲು ಸಿದ್ಧರಾಗಿರುತ್ತಿದ್ದ ಆ ಬಡಪಾಯಿ ಜನ! ತಮ್ಮ ದೇಹ ಹರಿದು ಚಿಂದಿಯಾದರೂ ಸರಿಯೆ, ಹುಳುಬಿದ್ದು ಕೊಳೆತು ನಾರಿದರೂ ಸರಿಯೆ, ತುತ್ತು ಅನ್ನ ಸಿಕ್ಕಿದರೆ ಸಾಕು!

ಅಬ್ಬಾ! ಪೈಶಾಚಿಕ! ನರಕಸದೃಶ!

ಹೌದು. ಅವರೊಂದಿಗೆ ಭೋಗಿಸಲು ಬರುತ್ತಿದ್ದ ಜನರೂ ಅಂತಹವರೇ ಸರಿ! ಕಾಸು ಕೊಟ್ಟು ಹೇಸಿಗೆಯಲ್ಲಿ ಬಿದ್ದು ಒದ್ದಾಡುವವರು!

“ ಥುತ್ ” ಎನ್ನಿಸುತ್ತಿತ್ತು ಗೋಪಾಲಿಗೆ ಅದನ್ನು ಕಂಡು.

ಆದರೂ ಅವರಿಂದಲೇ ಆ ಅನಾಥಜೀವಗಳಿಗೆ ಒಂದಿಷ್ಟು ಅನ್ನ ಸಿಗುತ್ತದಲ್ಲ ಎಂದವನು ಸಮಾಧಾನ ಮಾಡಿಕೊಳ್ಳುತ್ತಿದ್ದ.

ಗೋಪಾಲಿಯಂಥವರು ಇಲ್ಲದಿದ್ದರೆ ಅವರ ಗತಿ ?

ಎಂತಲೇ ಗೋಪಾಲಿ ನಿಜಕ್ಕೂ ಪರೋಪಕಾರಿ.... ಜನಸೇವಕ....

ಅವನಿಂದ ಲೆಖ್ಖವಿಲ್ಲದಷ್ಟು ಮನೆಗಳ ಉದ್ಧಾರ !

ಗೋಪಾಲಿ ಮನಃಶಾಸ್ತ್ರವನ್ನು ಅನುಭವದಿಂದ ಅಭ್ಯಾಸ ಮಾಡಿಕೊಂಡಿದ್ದ. ಮುಖ ನೋಡಿದ ಕೂಡಲೆ “ ಇವನ ಯೋಗ್ಯತೆ ಇಷ್ಟು ” ಎಂದು ತೂಕ ಮಾಡಿಬಿಡುವ ಅದ್ಭುತ ಶಕ್ತಿ ಅವನಲ್ಲಿತ್ತು. ಹಾಗೆಯೇ ಹೆಂಗಸಿನ ಮುಖ ನೋಡಿದರೂ ಅಷ್ಟೆ, ‘ ಗಿಟ್ಟುತ್ತೆ — ಇಲ್ಲ ’ ಎಂದು ನಿರ್ಧರಿಸಿಬಿಡುತ್ತಿದ್ದ. ಈ ಕಲೆ ನಿಜವಾಗಿಯೂ ಅವನ ಕಸುಬಿಗೆ ಬಹಳ ಉಪಯೋಗಕರವಾಗಿತ್ತು.

ಗೋಪಾಲಿ ಸಾವಿರ ಜನರ ಗುಂಪಿನಲ್ಲಿರಲಿ ಅವನನ್ನು ಪತ್ತೆ ಮಾಡುವುದು ಅಷ್ಟೇನೂ ಕಷ್ಟದ ಕೆಲಸವಲ್ಲ. ನಾನಿಲ್ಲಿದ್ದೇನೆ ಎಂದು ಸಾರುತ್ತಿತ್ತು ಅವನ ಕರಿಯ ಲಾಂಗ್ ಕೋಟು. ವಯಸ್ಸಿಗೆ ತಕ್ಕ ವ್ಯಕ್ತಿತ್ವ ಇರದಿದ್ದರೂ ಮೀರಿದ ಬುದ್ಧಿಶಕ್ತಿ ಅವನಲ್ಲಿ ನೆಲೆಮಾಡಿತ್ತು. ಕುಳ್ಳಗೆ ಪೀಚಾಗಿದ್ದರೂ ಅವನು ಮಾತಿನಲ್ಲಿ ಎಲ್ಲರ ಬಾಯನ್ನೂ ಕಟ್ಟಿಬಿಡುತ್ತಿದ್ದ.

ಒಮ್ಮೊಮ್ಮೆ ಅವನು ಲಾಂಗ್‌ಕೋಟಿನ ಜತೆಗೆ ಫಳಫಳ ಹೊಳೆಯುವ ಕಲಾಬತ್ತಿನ ಪೇಟ ಹಾಕಿಕೊಳ್ಳುತ್ತಿದ್ದ. ಅಂದು ಯಾರೋ ‘ ದೊಡ್ಡ ಮನುಷ್ಯ ’ ರೋ ಮಿನಿಸ್ಟರೋ, ಡೆಪ್ಟಿಕಮಿಷನರೋ, ಮಠಾಧಿಪತಿಗಳೋ ಅವನ ಆಶ್ರಯದಲ್ಲಿ ಇದ್ದಾರೆಂದು ಬಲ್ಲವರು ಸುಲಭವಾಗಿ ತಿಳಿಯಬಹುದಾಗಿತ್ತು.

ಮಿನಿಸ್ಟರು ! ಡೆಪ್ಟಿಕಮಿಷನರು !! ಮಠಾಧಿಪತಿಗಳು !!!

ಛೆ.... ಛೆ.... ಎಲ್ಲಾದರೂ ಉಂಟೆ ?

ಏಕೆ ? ಅವರೂ ಮನುಷ್ಯರಲ್ಲವೆ ? ಎಷ್ಟಾದರೂ ಅವರದೂ ಉಪ್ಪು, ಖಾರ ತಿಂದ ಶರೀರವಲ್ಲವೇ ? ಆಶ್ಚರ್ಯವೇಕೆ ?

ಹಾಗೆಯೇ ಕೆಲವು ದೊಡ್ಡ ಮನುಷ್ಯರ ಹೆಂಗಸರು....ಪಾಪ! ತಮ್ಮ ಗಂಡಂದಿರಿಂದ ತೃಪ್ತಿ ದೊರಕದೆ ಬಳಲಿದವರು! ಇಂತಹ ಜನರೂ ಇದ್ದರು ಗೋಪಾಲಿಯ 'ಕಾರವಾನಿ'ನಲ್ಲಿ.

ಎಲ್ಲರಿಗೂ ಅವರವರ ಇಷ್ಟಾರ್ಥಸಿದ್ಧಿ ದೊರಕಿಸಿ ಕೊಡುವುದೇ ಗೋಪಾಲಿಯ ಕಸುಬು—

ಆದರೂ ಬಲು ಗುಟ್ಟಿನ ಮನುಷ್ಯ ಗೋಪಾಲಿ. ಅವನ ಎದೆಯಲ್ಲಿ ಏನಿದೆ ಎಂಬುದನ್ನು ಅವನ ಅತ್ಯಂತ ಆಪ್ತಮಿತ್ರರೂ ಹೇಳಲಾಗುತ್ತಿರಲಿಲ್ಲ. ಹೃದಯ, ರಕ್ತನಾಳಗಳು ಇವೆ ಎಂದೆನ್ನಬಹುದು ಶರೀರಶಾಸ್ತ್ರ ಓದಿದವರು. ಆದರೆ ಎಂತಹ ಹೃದಯ! ಎಂತಹ ರಕ್ತನಾಳಗಳು! ಹೆದರಿಕೆಯಿಂದ ಅವನ ಹೃದಯ ಒಮ್ಮೆಯಾದರೂ ಬಡಿದುಕೊಂಡಿರಲಿಲ್ಲ. ಇನ್ನು ಅವನ ರಕ್ತನಾಳಗಳಲ್ಲಿ ಪ್ರವಹಿಸುತ್ತಿರುವುದು ಅದೆಂತಹ ರಕ್ತವೊ!

ಅಂತೂ ಎಲ್ಲರಿಗೂ ಬೇಕಾಗಿದ್ದ ವ್ಯಕ್ತಿ ಗೋಪಾಲಿ.

ದೊಡ್ಡ ಮಾರ್ಕೆಟ್ ಚೌಕ ಅವನ ವಿಹಾರಕ್ಷೇತ್ರ. ವಿಕ್ಟೋರಿಯಾ ಆಸ್ಪತ್ರೆಯ ಎದುರು ಸಿಟಿ ಬಸ್‌ಸ್ಟಾಂಡ್ ಬಳಿಯಲ್ಲಿ ಹಾಕಿರುವ ಕಲ್ಲು ಬೆಂಚೊಂದು ಅವನ ಬಿಸಿನೆಸ್ ಆಫೀಸು. ಮೀನುಗಳಿಗಾಗಿ ಅವನು ಗಾಳ ಎಸೆಯಬೇಕಾಗಿರಲಿಲ್ಲ. ಅವನನ್ನು ಹುಡುಕಿಕೊಂಡು ಅವು ತಾನಾಗಿಯೇ ಬರುತ್ತಿದ್ದವು. ಬರೀ ಗಂಡುಗಳು ಮಾತ್ರವೇ ಅಲ್ಲ, ಹೆಣ್ಣುಗಳೂ ಇರುತ್ತಿದ್ದುವು ಅವನ ಬಲೆಯಲ್ಲಿ.

ಪೋಲೀಸಿನವರಿಗೆ ಗೋಪಾಲಿಯ ಬಿಸಿನೆಸ್ ಎಂತಹುದೆಂಬುದು ಚೆನ್ನಾಗಿ ಗೊತ್ತಿದ್ದರೂ ಅವರು ಮಾತ್ರ ಅವನ ತಂಟೆಗೆ ಬರುವ ಪಾಪಕ್ಕೆ ಹೋಗುತ್ತಿರಲಿಲ್ಲ. ಅವರಾಗಿಯೇ ಕೈಯೊಡ್ಡಿ ಕೇಳದಿದ್ದರೂ ಅನುಕಂಪ ದಿಂದ ಗೋಪಾಲಿಯೇ ಔದಾರ್ಯ ತೋರಿಸುತ್ತಿದ್ದ; ಅಯ್ಯೋ ಪಾಪ! ಅವರಿಗೆ ಬರುವ ಸಂಬಳ ಸಾಲದೆಂದು. ಆದರೂ ಒಮ್ಮೊಮ್ಮೆ ಹೊಸಬರು ಪೋಲೀಸರು ಅವನಿಗೆ ಕಿರುಕುಳ ಕೊಡುತ್ತಿದ್ದರು. ಅವರೊಂದಿಗೂ ಹೇಗೆ ನಡೆದುಕೊಳ್ಳಬೇಕೆಂದು ಗೋಪಾಲಿಗೆ ಗೊತ್ತಿತ್ತು. ಹಾಗೆ ನಡೆದುಕೊಂಡು ಬಿಡುತ್ತಿದ್ದ. ಅವರೂ ತೆಪ್ಪಗಾಗುತ್ತಿದ್ದರು.

ಅವನು ಜೀವನದಲ್ಲಿ ಎಂತೆಂತಹ ಜನರನ್ನು ಕಂಡಿದ್ದ! ಕಡುಬಡವರಿಂದ ಭಾಗ್ಯವಂತರವರೆಗೂ.

ಎಲ್ಲರಲ್ಲಿಯೂ ಅವನು ಒಂದೇ ರೀತಿಯ ಆತ್ಮೀಯತೆಯಿಂದ ನಡೆದುಕೊಳ್ಳುತ್ತಿದ್ದ—'ಸೋಷಿಯಲೈಸ್‌ಡ್ ಪಿಂಪ್' (Socialised Pimp) ಎನ್ನುತ್ತಿದ್ದರು ಅವನನ್ನು ಬಲ್ಲ ಗೆಳೆಯರು.

ಒಂದು ದಿನ ಸುಬ್ಬಲಕ್ಷ್ಮಿ ಸಂಗೀತ ಶಂಕರಯ್ಯನ ಹಾಲಿನಲ್ಲಿ. ಸಂಗೀತವೆಂದರೆ ಪಂಚಪ್ರಾಣ ಗೋಪಾಲಿಗೆ. ಅದರಲ್ಲೂ ಕೋಕಿಲಗಾನಂ ಈಶ್ವೈವಾಣಿಯು ಸಂಗೀತವೆಂದರೆ ಕೇಳಬೇಕೆ. ಊರಲೆಲ್ಲಾ ಆ ಸಂಗೀತದ ಮಾತೇ ನಡೆದಿತ್ತು. ಜನ ಗುಂಪುಗುಂಪಾಗಿ ಹೋಗುತ್ತಿದ್ದರು, ಶಂಕರಯ್ಯ ಹಾಲಿನ ಕಡೆಗೆ. ಗೋಪಾಲಿಗೂ ಹೋಗಬೇಕೆನ್ನಿಸಿತು. ಅವನೂ ಹೊರಟ ಆ ದಿನ ತನ್ನ ವ್ಯಾಪಾರಕ್ಕೆ ರಜ ಕೊಟ್ಟು.

ಅರ್ಧದಾರಿ ಹೋಗುವುದಕ್ಕಿಲ್ಲ, ಅಪಶಕುನವಾಯಿತು.

'ಥತ್' ಎಂದುಕೊಂಡ ಗೋಪಾಲಿ ಮನಸ್ಸಿನಲ್ಲಿ.

ಬೇಸರವಾದಾಗ 'ಥತ್' ಎನ್ನುವುದು ಅವನಿಗೆ ಮೊದಲಿನಿಂದಲೂ ಬೆಳೆದುಬಂದಿತ್ತು.

ಗುಂಡಮ್ಮ ಎದುರಿಗೆ ಬಂದಾಗ ಅವನು ಹಾಗೆಯೇ ಅಂದುಕೊಂಡ ತನ್ನಲ್ಲೇ.

ರಸ್ತೆಯಲ್ಲಿ ಎಷ್ಟು ಜನ ಬರುವುದಿಲ್ಲ, ಎಷ್ಟು ಜನ ಹೋಗುವುದಿಲ್ಲ ಗುಂಡಮ್ಮನಂಥವರು. ಆದರೆ ಪರಿಚಯವಿರುವ ಅಂಥವರು ಎದುರಿಗೆ ಬಂದರೆ ಅದು ನಿಜವಾಗಿಯೂ ದೊಡ್ಡ ಅಪಶಕುನ.

ಗುಂಡಮ್ಮನೇ ಮಾತನಾಡಿಸಿದಳು ಗೋಪಾಲಿಯನ್ನು.

"ಏನಪ್ಪ, ನಿನ್ನೇ ಹುಡಕ್ಕೊಂಡು ಹೊರಟಿದ್ದೆ. ಎದುರಿಗೇ ಸಿಕ್ಕಿದೆಯಲ್ಲ"

ಅಪಶಕುನ ಅಂತಿಂತಹ ಅಪಶಕುನವಲ್ಲ, ಕಾಡಲು ತಾನೇ ಹುಡುಕಿಕೊಂಡು ಬಂದ ಅಪಶಕುನ ಎಂದುಕೊಂಡ ಗೋಪಾಲಿ. ಹಾಳು ಕಸುಬು ಕಟ್ಟಿಕೊಂಡು ಸಂಗೀತಕ್ಕೂ ತನಗೂ ಋಣಾನುಬಂಧವಿಲ್ಲ ಎಂದು ಗೊಣಗಿ

ಕೊಂಡ. ಹಾಗೆ ಅತಿಬೇಸರವಾದ ಹಲವೇ ಸಂದರ್ಭಗಳಲ್ಲಿ ಅವನಿಗೆ ಆ ಕಸುಬು ‘ ಹಾಳು ಕಸುಬಾ ’ಗಿ ಕಾಣುತ್ತಿತ್ತು.

“ಏನು ಸಮಾಚಾರ ಗುಂಡಮ್ಮ ?”

—ಬೇಸರದ ಧ್ವನಿಯಲ್ಲೇ ಕೇಳಿದ ಗೋಪಾಲಿ.

“ಎಲ್ಲೋ ಹೊರಟ್ಹಾಗಿದೆ.”

—ಅವನ ಬೇಸರವನ್ನು ಗ್ರಹಿಸಿ ಕೇಳಿದಳು ಗುಂಡಮ್ಮ. ‘ಸರಿ ಇದು ಎರಡನೆ ಅಪಶಕುನ ’ ಗೋಪಾಲಿ ಅಂದುಕೊಂಡ.

“ಬೇಜಾರಾಯ್ತು. ಹಾಗೇ ಸಂಗೀತಕ್ಕೆ ಹೋಗೋಣ ಅಂತ ಹೊರಟೆ ”

“ಸಂಗೀತದ ಮನೆ ಹಾಳಾಯ್ತು”

—ಥಟ್ಟನೆ ನುಡಿದಳು ಗುಂಡಮ್ಮ.

ಎಷ್ಟಾದರೂ ಲೋಕವ್ಯವಹಾರ ಬೇಡವಾದ ವಿರಕ್ತೆ ಅಲ್ಲವೆ ಅವಳು !

ಸರಿ, ‘ಬಿಟ್ಟುಹೋಗುವ ಅಪಶಕುನವಲ್ಲ ಇದು ’ ಎಂದು ಗೋಪಾಲಿ ನಿರ್ಧರಿಸಿದ. ಇನ್ನು ಕರ್ತವ್ಯದ ಕಡೆಗೆ ಗಮನವಿತ್ತು ಕೇಳಿದ :

“ಅದಾಯ್ತು. ಏನು ಸಮಾಚಾರ ಹೇಳು ”

“ಇವತ್ತು ಆ ಹುಡುಗಿ ಗಂಡ ಊರಲ್ಲಿರೋಲ್ವಂತೆ. ಎಲ್ಲೋ ಸರ್ಕೀಟು ಹೋಗ್ತಾನಂತೆ.”

“ಯಾವ ಹುಡುಗಿ ?”

ಎಷ್ಟೋ ಹುಡುಗಿಯರು ಗೋಪಾಲಿಗೆ. ಯಾವ ಹುಡುಗಿ ಎಂದು ನೆನಪು ಮಾಡಿಕೊಳ್ಳುವುದು.

“ಅದೇ ಆ ಆಪೀಸರ ಹೆಂಡತಿ ”

“ಹೂಂ–ಹೂಂ–ಕರಿಗಿರಿರಾಯರ........”

—ಜ್ಞಾಪಿಸಿಕೊಂಡ ಗೋಪಾಲಿ.

“ಹೌದು. ಅವಳೇ.”

“ತಂಗಮಣಿ ಅಲ್ಲವೇ ಅವಳ ಹೆಸರು ?”

“ಯಾಕೆ, ಮರೆತುಹೋಗಿತ್ತೇನು ?”

ಎಕ್ಸೈಜ್ ಕಂಟ್ರಾಕ್ಟರು ಚಂದ್ರಣ್ಣ ಅದೇ ದಿನ ಮಧ್ಯಾಹ್ನ 'ಯಾವುದಾದರೂ ಹೊಸ ಹುಡುಗಿ ಇದ್ಯೇನಯ್ಯ' ಎಂದು ಕೇಳಿದ್ದ. ಅವನು ಇನ್ನೂ ತಂಗಮಣಿಯನ್ನು ನೋಡಿರಲಿಲ್ಲ. ಚಂದ್ರಣ್ಣನ ನೆನಪು ಬಂದು ಗೋಪಾಲಿ ಹೇಳಿದ.

"ಆಗ್ಲಿ. ಇವತ್ತು ರಾತ್ರಿಗೆ ಒಬ್ಬರನ್ನ ಕರ್ಕೊಂಡ್ಬರ್‍ತೀನಿ"

"ಹಾಗೇ........"

—ಕೈಯೆತ್ತಿ ಮೊಳ ತೋರಿಸಿದಳು ಗುಂಡಮ್ಮ.

"ಆಗ್ಲಿ, ತರ್‍ತೀನಿ"

—ಎಂದ ಗೋಪಾಲಿ, ಅರ್ಥಮಾಡಿಕೊಂಡು.

"ನನ್ನ ಮರೆತುಬಿಡಬೇಡಪ್ಪ"

—ಗುಂಡಮ್ಮ ಅರ್ಥಪೂರ್ಣವಾಗಿ ಹೇಳಿದಳು.

"ಎಲ್ಲಾದರೂ ಉಂಟೆ."

—ಗೋಪಾಲಿಯೆಂದ ನಸುನಕ್ಕು.

ಗುಂಡಮ್ಮನಂಥವರನ್ನು ಗೋಪಾಲಿ ಮರೆಯುವುದು ಸಾಧ್ಯವೇ ಇರಲಿಲ್ಲ. ಅವರು ಅವನ 'ಬಿಸಿನೆಸ್ಸಿ'ನ ಆಧಾರಸ್ತಂಭದಂತಿದ್ದರು. ಎಂತಹ ಕೆಲಸವಾದರೂ ಅಂತಹವರಿಂದ ಕೈಗೂಡುತ್ತಿತ್ತು.

ಗುಂಡಮ್ಮ ಅತ್ತ ಹೋದಳು. ಗೋಪಾಲಿ ಇತ್ತ ಹಿಂದಿರುಗಿದ, ಶಂಕರಯ್ಯಹಾಲಿನ ದಿಕ್ಕಿಗೆ ಒಂದು ನಿಟ್ಟುಸಿರುಬಿಟ್ಟ.

ಕೋಟೆ ಆಂಜನೆಯಸ್ವಾಮಿ ದೇವಸ್ಥಾನದ ಮುಂದೆ ಕರಿಗಿರಿರಾಯ ಗೋಪಾಲಿಗೆ ಎದುರಿಗೇ ಸಿಕ್ಕಬೇಕೆ.

'ಏನಪ್ಪ ಇದು. ಇವನು ಊರಲ್ಲೇ ಇದಾನೆ, ಗುಂಡಮ್ಮ ಸರ್ಕೀಟು ಹೋಗ್ತಾನೆ ಅಂತ ಹೇಳಿದಳು'

—ಎಂದು ಗೋಪಾಲಿ ಮನಸ್ಸಿನಲ್ಲೆ ಕಳವಳಗೊಂಡ.

ಕರಿಗಿರಿರಾಯ ಗೋಪಾಲಿಯ ಮುಖ ನೋಡಿದವನೇ—

"ಎಲ್ಲಯ್ಯ ಹೊರಟ್ಹೋಗಿದ್ದೆ ಇವತ್ತು, ನಿನ್ನ ಆಪೀಸ್ನೂ ಬರಖಾಸ್ತು ಮಾಡಿಕೊಂಡು, ಇಷ್ಟು ಜೇಗನೇ"

—ಎಂದ ದೇಶಾವಾರದ ನಗೆ ಬೀರುತ್ತ.

"ಏನೋ ಬೇಜಾರಾಗಿತ್ತು. ಶಂಕರಯ್ಯಹಾಲಿನಲ್ಲಿ ಸಂಗೀತಾನಾದ್ರೂ ಕೇಳೋಣ ಅಂತ ಹೊರಟಿದ್ದೆ. ಅದೂ ಯಾಕೋ ಬೇಕಾಗಲಿಲ್ಲ. ವಾಪಸು ಬಂದುಬಿಟ್ಟೆ."

—ಗೋಪಾಲಿ ಸ್ವಾಭಾವಿಕವಾಗಿ ಹೇಳಿದ.

"ಅಷ್ಟೊಂದು ಲೋಕೋಪಕಾರದ ಹೊಣೆ ಹೊತ್ತಿರೋ ನಿನಗ್ಯಾಕಯ್ಯ ಸಂಗೀತಾ ಸಾಹಿತ್ಯ. ಅದಕ್ಕೆಲ್ಲಾ ಪುರುಸತ್ತೆಲ್ಲಯ್ಯ ಸಿಗತ್ತೆ"

—ಕರಿಗಿರಿರಾಯ ಚುಡಾಯಿಸಿದ.

"ಏನು ಲೋಕೋಪಕಾರವೋ ಬಿಡಿ ರಾಯರೆ........"

ಗೋಪಾಲಿಯ ಬೇಸರದ ನುಡಿ ಕೇಳಿ ಕರಿಗಿರಿರಾಯ ಹೇಳಿದ—

"ಹಾಗಂದ್ರೆ ಹೇಗಪ್ಪ. ನಿನ್ನೇ ನಂಬ್ಕೊಂಡಿರೋ ನಮ್ಮಂತವರ ಗತಿಯೇನು."

"ಬಿಡಿ ರಾಯರೆ. ಏನ್ಮಾತೋ"

"ಇಲ್ಲಪ್ಪ ಗೋಪಾಲಿ. ಇವತ್ತು ನಿನ್ನೇ ಹುಡಕ್ಕೊಂಡು ಬಂದಿದೀನಿ, ಮನೇಲೂ ಚಕ್ಕರ್ ಹಾಕಿ, ಸರ್ಕೀಟು ಹೋಗ್ತೀನಿ ಅಂತ. ಯಾವ್ದಾದ್ರೂ ಇದ್ಯೇನಪ್ಪ."

ಇಂತಹದೇನೂ ಹೊಸದಾಗಿರಲಿಲ್ಲ ಗೋಪಾಲಿಗೆ. ಗಂಡ ಒಂದು ಕಡೆ, ಹೆಂಡತಿ ಮತ್ತೊಂದು ಕಡೆ ಸುಖ ಕಾಣುವುದು.

ಒಮ್ಮೊಮ್ಮೆ ಅವನಿಗೂ ಮರುಕವೆನಿಸುತ್ತಿತ್ತು ಇವರುಗಳನ್ನು ಕಂಡು.

"ಯಾಕೆ ಮನೇಲೇನಾದ್ರೂ ವಿರಸವೇ ರಾಯರೆ ?"

—ಗೋಪಾಲಿ ಲೋಕಾಭಿರಾಮವಾಗಿ ಕೇಳಿದ.

"ವಿರಸವೇನೂ ಇಲ್ಲಪ್ಪ, ರಸವಿಲ್ಲ ಅಷ್ಟೆ–ದಿನಾ ಮಾಡಿದ ಊಟಾನೇ ಮಾಡ್ತೀರೋದು."

ಗೋಪಾಲಿ ಮುಗುಳು ನಗೆ ನಕ್ಕ. ಹೌದು, ರುಚಿ ಮನುಷ್ಯನಿಗೆ ಹುಟ್ಟಿಬಂದದ್ದಲ್ಲವೇ! ಕಲೆಯಂತೆಯೇ ಕಾಮದಲ್ಲಿಯೂ ಅದು ಬೇಕಲ್ಲವೇ!

"ಏನು ನಗ್ತೀಯಲ್ಲಾ"

—ತಾವೂ ನಗುತ್ತ ಕರಿಗಿರಿರಾಯರು ಕೇಳಿದರು.

"ಏನಿಲ್ಲ, ನಿಮ್ಮ ಮಾತು ಕೇಳಿ ನಗುಬಂತು"

—ಎಂದು ಗೋಪಾಲಿ ಮನಸ್ಸಿನಲ್ಲೇ,

"ಅಯ್ಯೋ ಹುಚ್ಚಪ್ಪ, ನಿನಗೊಬ್ಬನಿಗೇ ಅಲ್ಲ ಮಾಡಿದ ಊಟಾನೇ ದಿನಾ ಮಾಡಿ ಮಾಡಿ ಬಾಯಿಕೆಟ್ಟುಹೋಗಿರುವುದು. ನಿನ್ನ ಹೆಂಡತೀಗೂ ಹಾಗೇ ಆಗಿದೆ. ನಡೀಲಿ....ನಡೀಲಿ....ಎಲ್ಲಾ ಶಿವನ ಲೀಲೆ" ಅಂದು ಕೊಂಡ.

"ಏನಪ್ಪ. ಯಾವದಾನಾ ಗಿಟ್ಟಸ್ತೀಯ ?"

—ಕಾತರತೆಯಿಂದ ಮತ್ತೆ ಮುಖ್ಯ ವಿಷಯಕ್ಕೆ ತಿರುಗಿಸಿದರು ಕರಿಗಿರಿರಾಯರು ಗೋಪಾಲಿಯನ್ನು.

"ಹಾಗಾದರೆ ರಾತ್ರಿ ಎಲ್ಲಿ ಸಿಕ್ತೀರಾ ?"

—ಇವನಿಗೆ ಒಂದು ದಿಕ್ಕು ತೋರಿಸಿದರೆ ಇವನ ಹೆಂಡತಿಗೂ ಇನ್ನೊಂದು ದಿಕ್ಕು ತೋರಿಸುವುದು ಸುಲಭಸಾಧ್ಯವಾಗುತ್ತದೆಯೆಂದು ಯೋಚಿಸಿ ಗೋಪಾಲಿ ಕೇಳಿದ.

"ನೀನು ಬಾ ಅಂದಲ್ಲಿಗೆ ಬರ್ತೀನಿ ಮಾರಾಯ."

"ಬೊಂಬಾಯಿ ಆನಂದಭವನದ ಹತ್ತಿರ ಬಂದು ಇರಿ. ರಾತ್ರಿ ಎಂಟೂವರೆ ಘಂಟೆಗೆ ಸರಿಯಾಗಿ"

"ಅಂದಹಾಗೆ ಮಾಲಿನ ವಿಚಾರಾನೇ ಹೇಳಲಿಲ್ಲವಲ್ಲಯ್ಯ."

"ನಿಮಗ್ಯಾಕೆ ಕರ್ಕೊಂಡ್ಹೋದ್ರೆ ಆಯ್ತೋ ಇಲ್ವೋ"

"ಹಾಗಲ್ಲ. ಈಗಾಗ್ಲೆ ನಾನು ನೋಡಿರೋದನ್ನೇ ನೀನು ಮತ್ತೆ ನೋಡಸಿದ್ರೆ ಅಂತ."

"ಇಲ್ಲ. ಜೇರೆ ಒಂದು ಬಂದಿದೆ ಕೊಯಮತ್ತೂರು ಕಡೇದು. ತಮಿಳರ ಹುಡುಗಿ ಎಂಕ್ಟಿ ವಠಾರಕ್ಕೆ."

"ಯಾವ – ಪುಟ್ಟೆಂಕ್ಟಿ ವಠಾರಕ್ಕೆ ?"

"ಹೌದು"

"ಚನ್ನಾಗಿದ್ಯೇನಯ್ಯ ಹುಡುಗಿ"

—ಹಲ್ಲುಗಿರಿಯುತ್ತ ಕೇಳಿದರು ಕರಿಗಿರಿಯರು.

“ನೋಡಿ, ನಿಮ್ಮ ಮನಸ್ಸಿಗೆ ಒಪ್ಪಿದರೆ ಹೂ ಅನ್ನಿ.”

“ಆಗ್ಲಪ್ಪ ಬರ್ತೀನಿ - ಎಂಟೂವರೆ ಘಂಟೆಗೆ ಸರಿಯಾಗಿ, ಆನಂದ ಭವನದ ಹತ್ತಿರಕ್ಕೆ. ಯಾವುದೋ ಅಂತೂ ಒಂದು ಬದಲಾವಣೆ ಇದ್ರೆ ಸರಿ”

—ಎಂದು ಹೇಳಿ ಕರಿಗಿರಿರಾಯರು ಹೊರಟುಹೋದರು.

ಗೋಪಾಲಿಯೂ ಚಂದ್ರಣ್ಣನನ್ನು ಅರಸುತ್ತಹೋದ.

ಆ ರಾತ್ರಿ ಗಂಡ ಒಂದು ಕಡೆ ಹೆಂಡತಿ ಇನ್ನೊಂದು ಕಡೆ ಅವರವರು ಅಪೇಕ್ಷೆಪಟ್ಟಂತೆ ಸುಖ ಅನುಭವಿಸಲು ಏರ್ಪಾಡುಮಾಡಿ ಪುಣ್ಯಕಟ್ಟಿಕೊಂಡ ಗೋಪಾಲಿ. ಕರಿಗಿರಿರಾಯನಿಗೆ ಪುಟ್ವೆಂಕ್ಟಿ ವಠಾರದಲ್ಲಿ ತಮಿಳರ ಹುಡುಗಿ ಜತೆ ಕೂಡಿಸಿಕೊಟ್ಟ, ಅವನ ಹೆಂಡತಿ ತಂಗಮಣಿಗೆ ಚಂದ್ರಣ್ಣನ ಸಹವಾಸ ದೊರಕಿಸಿಕೊಟ್ಟ.

ಇನ್ನೊಂದು ಸಾರಿ ನಡೆದ ವಿಚಾರ ಗೋಪಾಲಿಯನ್ನೇ ಬೆರಗುಗೊಳಿಸಿತ್ತು.

ಅದು ಆ ಕಾಲೇಜು ಹುಡುಗಿಯ ವಿಷಯ. ಅವಳ ಹೆಸರು ಸುಮತಿ. ಮಹಾರಾಣಿ ಕಾಲೇಜಿನಲ್ಲಿ ಓದುತ್ತಿದ್ದಳು. ವಯಸ್ಸು ಹದಿನೆಂಟು - ಇಪ್ಪತ್ತಕ್ಕೆ ಮೀರಿರಲಿಲ್ಲ. ಗರಿಗರಿಯಾಗಿದ್ದಳು ನವಿಲಿನಂತೆ. ರೆಕ್ಕೆ ಬಲಿತು ಬಹಳ ದಿನವಾಗಿತ್ತು. ಆದರೆ ಇನ್ನೂ ಮದುವೆಯಾಗಿರಲಿಲ್ಲ.

ಅವರಪ್ಪ ದೊಡ್ಡ ಆಫೀಸರಾಗಿದ್ದು ರಿಟೈರ್ ಆದಮೇಲೆ ಕಾರು ಬೇಡವೆಂದು ಮಾರಿಬಿಟ್ಟಿದ್ದರು. ಆಗಿನ್ನೂ ಸಿಟಿ ಬಸ್ಸು ಬಂದಿರಲಿಲ್ಲ. ಗರುಡಾಚಾರರ ಬಸ್ಸುಗಳು ಅಲ್ಲೊಂದು ಇಲ್ಲೊಂದು ಓಡಾಡುತ್ತಿದ್ದವು. ಬಸವನಗುಡಿಯಿಂದ ಹುಡುಗಿ ಕಾಲೇಜಿಗೆ ನಡೆದುಕೊಂಡೇ ಹೋಗುತ್ತಿದ್ದಳು.

ಏನು ಶ್ರೀಮದ್ಗಾಂಭೀರ್ಯ ಅವಳದು. ದಾರಿಯಲ್ಲಿ ಕಾಲೇಜು ಹುಡುಗರು ಅಡ್ಡಗಟ್ಟಿ ಚುಡಾಯಿಸಿ ಪೀಡಿಸಿದರೆ ಅವರುಗಳನ್ನು ನುಂಗಿ ಹಾಕುವಂತೆ ದುರುದುರನೆ ನೋಡಿ ಬಳಸಿಕೊಂಡು ಹೊರಟುಹೋಗುತ್ತಿದ್ದಳು.

ಒಂದು ದಿನ. ಕೈಯಲ್ಲಿ ಒಂದು ಮಣ ಪುಸ್ತಕಗಳನ್ನು ಎದೆಗೆ ಆನಿಸಿಕೊಂಡು ಹೊರಲಾರದೆ ಹೊತ್ತು ನಡೆದಿದ್ದಳು ಕಾಲೇಜಿನ ಕಡೆಗೆ.

ಗೋಪಾಲಿ ಎದುರುಗಡೆಯಿಂದ ಬರುತ್ತಿದ್ದವನು ಕ್ಷಣಹೊತ್ತು ಆವಳನ್ನು ದಿಟ್ಟಿಸಿ ನೋಡಿದ. ಅವಳನ್ನು ಎಲ್ಲೋ ನೋಡಿದ ನೆನಪು ಅವನಿಗೆ.

"ಓ, ಚನ್ನಾಗಿದ್ದೀರಾ?"

—ಹುಡುಗಿಯೇ ಮಾತನಾಡಿಸಿದಳು ಗೋಪಾಲಿಯನ್ನು.

"ಹೀಗಿದೀನಮ್ಮ"

—ಎಂದ ಗೋಪಾಲಿ. ಅವನಿಗಿನ್ನೂ ಹುಡುಗಿಯ ನೆನಪು ಸರಿಯಾಗಿ ಹತ್ತಲಿಲ್ಲ.

"ಯಾಕೆ, ಮರೆತುಬಿಟ್ಟಿರಾ?"

"ಇಲ್ಲ. ನೆನಪು ಮಾಡ್ಕೊಳ್ತಾ ಇದ್ದೀನಿ."

"ಅಜಂತಾದಲ್ಲಿ ನನ್ನನ್ನು ನೋಡಿರಲಿಲ್ಲವೆ? ನಿಮ್ಮ ಸ್ನೇಹಿತರು ಅರಸೀಕೆರೆ ನಾರಾಯಣಮೂರ್ತಿ ಅವರ ಜತೆಯಲ್ಲಿ.?

"ಹೌದು ಹೌದು. ನೋಡಿದ್ದೆ. ನೆನಪಿಗೆ ಬಂತು?"

ಹೌದು. ಗೋಪಾಲಿ ಅವಳನ್ನು ಅಜಂತಾದಲ್ಲಿ ನೋಡಿದ್ದ.

ಅಜಂತ! ಹೆಸರಿಗೆ ತಕ್ಕಂತೆ ಅದೊಂದು ಕಲೆಯ ಆಗರವಾಗಿತ್ತು. ವಿಲಾಸದ ವೈಕುಂಠವಾಗಿತ್ತು. ಹೊರಗಿನಿಂದ ನೋಡುವವರಿಗ ಬೋರ್ಡಿಂಗ್ ಲಾಡ್ಜಿಂಗ್ ಹೋಟಲು. ಆದರೆ ಒಳಗೆ ನಡೆಯುವುದು ಭಯಂಕರ ಸೂಳೆಗಾರಿಕೆ. ಅಲ್ಲಿ ಗಿಡಗಮೂಗಿನ ಧೋಂಡೂಶಾಸ್ತ್ರಿಗೆ ಅನ್ನದ ವ್ಯಾಪಾರಕ್ಕಿಂತ ಹುಡುಗಿಯರ ವ್ಯಾಪಾರದಲ್ಲಿಯೇ ಹೆಚ್ಚು ಲಾಭ. ಶಾಸ್ತ್ರಿ ಹೇಳಿಕಳುಹಿಸಿದಾಗ ಗೋಪಾಲಿಯೂ ಅಲ್ಲಿಗೆ ಹೋಗಿ ಹುಡುಗಿಯರನ್ನು ಒದಗಿಸಿಕೊಡುತ್ತಿದ್ದ.

ಅಲ್ಲಿಯೇ ಈ ಕಾಲೇಜು ಹುಡುಗಿಯ ಪರಿಚಯವಾದದ್ದು. ನಾರಾಯಣಮೂರ್ತಿಯೇ ಪರಿಚಯ ಮಾಡಿಸಿದ್ದ. ಗೋಪಾಲಿಗೆ ಚೆನ್ನಾಗಿಯೂ ನೆನಪಿಗೆ ಬಂತು.

ನಾರಾಯಣಮೂರ್ತಿ ಯಾವ ನಕ್ಷತ್ರದಲ್ಲಿ ಹುಟ್ಟಿದ್ದನೋ ಹೆಣ್ಣು ಎಂದರೆ ಪ್ರಾಣ ಬಿಡುತ್ತಿದ್ದ. ಎಷ್ಟು ಹೆಣ್ಣುಗಳಾದರೂ ಸಾಲದು ಅವನಿಗೆ. ಹಾಳು ಷೋಕಿ. ಜತೆಗೆ ಬಾಟಲಿ ಬಾಂಧವ್ಯ ಬೇರೆ. ತಿಂಗಳಿಗೆ ಹದಿನೈದು ದಿವಸ ಬೆಂಗಳೂರಿನಲ್ಲಿಯೇ ಬಿದ್ದಿರುತ್ತಿದ್ದ. ಅಪ್ಪನಿಗೆ ಒಬ್ಬನೇ ಮಗನಾಗಿ ಹುಟ್ಟಿದುದಕ್ಕೆ ಸಾರ್ಥಕವಾಗಿತ್ತು. ಸದ್ಯ, ಮಗ ಈ ವಿದ್ಯೆಗಳಲ್ಲಿ ಪದವೀಧರನಾಗುವುದನ್ನು ನೋಡುವುದಕ್ಕೆ ಮೊದಲೇ ಅಪ್ಪ ಕೊಬರಿ ತೆಂಗಿನ ಕಾಯಿಯ ಹೋಲ್‌ಸೇಲ್ ವ್ಯಾಪಾರದಲ್ಲಿ ಮಗನಿಗೆ ಹೇರಳವಾದ ಆಸ್ತಿ ಮಾಡಿಟ್ಟು ಕಣ್ಣು ಮುಚ್ಚಿಕೊಂಡಿದ್ದ. ತಾಯಿಯೂ ತೀರಿಕೊಂಡಿದ್ದಳು. ಇನ್ನು ಹೆಂಡತಿ ಹೇಳಿದಂತೆ ಕೇಳಿಕೊಂಡು ಮನೆಯಲ್ಲಿ ಬಿದ್ದಿರುವ ಹಳ್ಳಿಯ ಹುಡುಗಿ.

"ನಾರಾಯಣಮೂರ್ತಿ ಮತ್ತೆ ಈ ಕಡೆ ಏನಾದರೂ ಬಂದಿದ್ದನೇ ?"

—ಮಾತಿಗೆ ಸುಮ್ಮನೆ ಕೇಳಿದ ಗೋಪಾಲಿ, ನಾರಾಯಣಮೂರ್ತಿಯನ್ನು ಆ ನಂತರ ಎಷ್ಟೋ ಸಲ ನೋಡಿದ್ದರೂ ಸಹ.

"ಇಲ್ಲ. ನಾನವರನ್ನು ಮೊದ್ಲೂ ನೋಡಿರಲಿಲ್ಲ. ಈಚೆಗೂ ನೋಡಲಿಲ್ಲ. ಅದೊಂದೇ ದಿನ."

"ಅಂದ್ರೆ ?"

—ಆಶ್ಚರ್ಯ ವ್ಯಕ್ತಪಡಿಸಿದ ಗೋಪಾಲಿ. ಹುಡುಗಿ ಹೇಳಿದಳು :

"ನಾನಂಥವಳಲ್ರೀ."

'ಅಂಥವಳಲ್ಲ! ಇನ್ನೆಂಥವಳು?' ಗೋಪಾಲಿ ತಲೆ ಕೆರೆದುಕೊಂಡು ಯೋಚಿಸತೊಡಗಿದ.

"ನೋಡಿ, ನಮ್ಮ ಲೆಕ್ಚರರ್ರು ಮಿಸ್. ಸುಶೀಲ ಅಂತ ಒಬ್ರಿದಾರೆ. ಅವರೇ ಸುಮ್ಮನೆ ಕರ್ಕೊಂಡ್ಹೋಗಿಬಿಟ್ಟಿದ್ದರು"

ಅಯ್ಯೋ ಪಾಪ! ಎಂತಹ ಕೆಲಸಮಾಡಿದರು. ಸೀತಾ, ಸಾವಿತ್ರಿಯರಿದ್ದ ನಾಡಿನಲ್ಲಿ ಇಂತಹ ಸುಮತಿ ಸುಶೀಲೆಯರು! ಹೇಗಾದರೂ ಇರಲಿ. ಹೆಸರಾದರೂ 'ಸುಮತಿ' 'ಸುಶೀಲೆ' ಎಂದಿದೆಯಲ್ಲ! ಅಷ್ಟೆ ಸಾಕು.

"ನಿಮ್ಮ ಇಚಾರಾನೆಲ್ಲಾ ನಾರಾಯಣಮೂರ್ತಿಗಳು ಹೇಳಿದರು"
—ಹುಡುಗಿಯೇ ಮತ್ತೆ ಕಿರುನಗೆ ನಗುತ್ತ ಶುರುಮಾಡಿದಳು.

"ಹು........ಹು........"

—ಎಂದು ತಡವರಿಸಿದ ಗೋಪಾಲಿ, ತಾನೂ ನಗು ತಂದುಕೊಂಡು.

ಗೋಪಾಲಿಯ ವಿಚಾರವೆಲ್ಲ ಆ ಹುಡುಗಿಗೆ ಗೊತ್ತಿತ್ತು. ನಾರಾಯಣ ಮೂರ್ತಿ ಹೇಳಿದ್ದ. ಗೊತ್ತಿದ್ದೂ ಅವಳಾಗಿಯೇ ಮಾತನಾಡಿಸಿದ್ದಳು ಗೋಪಾಲಿಯನ್ನು.

ಗೋಪಾಲಿಗೆ ಅರ್ಥವಾಯಿತು.

"ನಾನು ಹಾಗೆಲ್ಲಾ ಸಿಕ್ಕಿದಂತೆ........"

—ಹುಡುಗಿ ಅರ್ಧ ಆಡಿಬಿಟ್ಟ ಮಾತಿನಿಂದ ಇನ್ನೂ ಖಾತ್ರಿ ಯಾಯಿತು ಗೋಪಾಲಿಗೆ.

"ಸರಿ. ಈಗ ನನ್ನಿಂದ ಏನಾಗಬೇಕು ಹೇಳಿ. ಸಂಕೋಚ ಪಟ್ಕೋಬೇಡಿ."

—ಹುಡುಗಿಯ ಬಾಯಿಂದಲೇ ಅವಳ ಇಷ್ಟಾರ್ಥ ಹೊರಡಿಸಲು ಗೋಪಾಲಿ ಹೇಳಿದ.

"ಏನೋ ಬಹಳ ದಿನವಾಗಿತ್ತು. ಹಾಗೇ ಮಾತಾಡಿಸ್ದೆ."

ಚಾಲ್ಲೂಕಿನ ಹುಡುಗಿ. ಕಾಲೇಜಿನಲ್ಲಿ ಕಲಿಯುತ್ತಿರುವವಳಲ್ಲವೆ ಎಷ್ಟಾದರೂ!

"ಆಗಲಿ, ನನಗೆ ಗೊತ್ತಾಯಿತು ನಿಮ್ಮ ಮನಸ್ಸು. ನಾನೂ ನನ್ನ ಕಸುಬಿನಲ್ಲಿ ಬಹಳ ನುರಿತವನು. ಎಲ್ಲಾ ಬಹು ಜಾಗರೂಕತೆಯಿಂದಲೇ ಏರ್ಪಾಡು ಮಾಡಿಕೊಡ್ತೀನಿ."

"ಏನೋ, ಅದೂ ಒಂದು ರಿಕ್ರಿಯೇಷನ್ ಇದ್ಹಾಗೆ ಅಷ್ಟೆ"

ಗೋಪಾಲಿಗೆ ಅವಳ ಮಾತನ್ನು ಕೇಳಿ ನಗು ತಡೆಯಲಾಗಲಿಲ್ಲ. ಹುಡುಗಿಯೂ ನಕ್ಕಳು.

"ಹಾಗಾದರೆ ಎಲ್ಲಿ ಕಾಣ್ತೀರಿ ಮತ್ತೆ?"

"ನೀವೇ ಹೇಳಿ ನಿಮಗನುಕೂಲವಾದ ಯಾವುದಾದರೂ ಒಂದು ಸ್ಥಳವನ್ನು"

—ಅವಳನ್ನೇ ಕೇಳಿದ ಗೋಪಾಲಿ.

"ಕತ್ತಲಾದ್ಮೇಲೆ ಕಬ್ಬನ್ ಪಾರ್ಕ್."

"ಯಾರನ್ನ ಕರೆತರ್ತೀರಿ ?"

—ಕುತೂಹಲವಿತ್ತು ಅವಳ ಮಾತಿನಲ್ಲಿ.

"ನೋಡ್ಬೇಕು, ಯಾರ್ನಾದ್ರೂ"

"ಯಾರಾದ್ರೂ ಆಗುತ್ತೆ. ಅಂತೂ ವಿಷಯ ಮಾತ್ರ ಗೋಪ್ಯವಾಗಿರಲಿ."

"ಆ ಚಿಂತೆ ನಿಮಗೆ ಬೇಡ."

"ತಪ್ಪಿಸಬೇಡಿ ಇವತ್ತು........ಪ್ರೋಗ್ರಾಂನ....ಅಕ್ಷಿ"

—ಹುಡುಗಿ ಬಹಳ ಕಾತರಗೊಂಡಿದ್ದಳು.

"ಇಲ್ಲ. ಖಂಡಿತ ತಪ್ಪಿಸೋಲ್ಲ"

"ಥ್ಯಾಂಕ್ಸ್"

—ಎಂದವಳೇ ಕರ್‌ಚೀಫಿನಲ್ಲಿ ಸುತ್ತಿದ್ದ ಹತ್ತು ರೂಪಾಯಿಯ ನೋಟೊಂದನ್ನು ಗೋಪಾಲಿಯ ಕೈಯಲ್ಲಿಟ್ಟು, ಒಮ್ಮೆ ಅವನ ಮುಖವನ್ನು ನೋಡಿ ನಕ್ಕು ಅಲ್ಲಿಂದ ಸರಸರನೆ ಹೊರಟುಹೋದಳು.

'ಭಲೇ ಹುಡುಗಿ!' ಎನ್ನಿಸಿತು ಗೋಪಾಲಿಗೆ. ಎಷ್ಟೋ ಹುಡುಗಿಯರನ್ನು ಅವನು ನೋಡಿದ್ದ ನಿಜ. ಹೊಟ್ಟೆಗಾಗಿ ಕಂಗೆಟ್ಟು, ಕಾಸುಕೊಟ್ಟವರಿಗೆ ತಮ್ಮ ದೇಹದ ಮೇಲಿನ ಸ್ವಾತಂತ್ರ್ಯವನ್ನು ಬಿಟ್ಟುಕೊಟ್ಟಿದ್ದ ಹುಡುಗಿಯರನ್ನು ಅವನು ನೋಡಿದ್ದ. ಗಂಡಂದಿರಿಂದ ತಾವು ಬಯಸಿದ್ದ ಸುಖ ದೊರೆಯದೆ ಕಳ್ಳಬಾಳಿನಲ್ಲಿ ಬೀದಿಯವರಿಗೆ ಮನಸೋತಿದ್ದ ಹುಡುಗಿಯರನ್ನು ನೋಡಿದ್ದ. ತರುಣರ ಮರುಳುಮಾತುಗಳಿಗೆ ಒಳಗಾಗಿ ವಯಸ್ಸು ಕಳೆದ ತಮ್ಮ ಪತಿದೇವರುಗಳನ್ನು ಬಿಟ್ಟೋಡಿ ಬಂದಿದ್ದ ಹುಡುಗಿಯರನ್ನು ನೋಡಿದ್ದ. ಝುಗಝುಗಿಸುವ ಒಡವೆವಸ್ತುಗಳು, ಝಣಝಣಿಸುವ ಹಣ ಇವುಗಳಿಗೆ ಬಾಯಿಬಿಟ್ಟು ತಮ್ಮ ಕುಲಶೀಲಗಳನ್ನು ಬಲಿಗೊಟ್ಟ ಅನುಕೂಲಸ್ಥರ ಮನೆಯ ಹುಡುಗಿಯರನ್ನೂ ನೋಡಿದ್ದ. ಆದರೆ ಇಂತಹ ಹುಡುಗಿಯನ್ನು! ತಾನೇ ಕೈಯಿಂದ ಹಣಕೊಟ್ಟು!

ಆಗಲೇ ಹೊತ್ತು ಹನ್ನೆರಡಕ್ಕೆ ಬಂದಿತ್ತು.

ಇನ್ನು ಯಾರನ್ನಾದರೂ ಹುಡುಕಬೇಕು ಸಂಜೆಯ ಹೊತ್ತಿಗೆ, ಆ ಕಾಲೇಜು ಹುಡುಗಿಗೆ. ಗಿರಾಕಿಗಳಿಗೇನೂ ಕಡಿಮೆಯಿರಲಿಲ್ಲ ಗೋಪಾಲಿಗೆ. ಅಂತಹ ಹತ್ತು ಹುಡುಗಿಯರು ಬಂದರೂ ಒದಗಿಸಿಕೊಡುವ ಚೈತನ್ಯವಿತ್ತು ಅವನಲ್ಲಿ. ಆದರೆ ಆ ಹುಡುಗಿಗೆ, ಮಾನವನ್ನು ಮುಷ್ಟಿಯಲ್ಲಿ ಮುಚ್ಚಿಕೊಂಡಿರುವ ಆ ಹುಡುಗಿಗೆ. ಅವರಿವರನ್ನು ಕರೆತಂದರೆ ಪುಕಾರಾದೀತು. ಇನ್ನು ಅವಳು ಕಾಲೇಜಿಗೆ ಹೋಗುವ ದಾರಿಯನ್ನೇ ಕಾದು ಹಿಂಸೆ ಕೊಟ್ಟಾರು ಪೋಲೀ ಜನ. ಹುಡುಗಿ ದೊಡ್ಡ ಮನುಷ್ಯರ ಮನೆಯವಳಿದ್ದ ಹಾಗಿದೆ. ಯಾರನ್ನು ನೋಡೋಣ.

—ಮನಸ್ಸಿನಲ್ಲಿ ವಿಚಾರಮಾಡುತ್ತ ದಾರಿ ತುಳಿದ ಗೋಪಾಲಿ.

'ಅವರು ಸರಿಯಿಲ್ಲ, ಇವರ ಬುದ್ಧಿ ನೆಟ್ಟಗಿಲ್ಲ, ಅವರ ಬಾಯಿ ಭದ್ರವಿಲ್ಲ' ವಿಚಾರ ಸಾಗಿತ್ತು.

ಗೋಪಾಲಿಯೇನೂ ಆ ಹೆಣ್ಣಿಗೆ ವರ ಹುಡಕಲು ಹೊರಟಿರಲಿಲ್ಲ. ಆದರೂ ಮರ್ಯಾದಸ್ಥರ ಮಾನ ಕಾಪಾಡಿಕೊಂಡು ಹೋಗುವುದು ತನ್ನ ಕಸುಬಿನ ಧರ್ಮ ಎಂದು ಅವನು ಪರಿಗಣಿಸಿದ್ದ.

ಯೋಚಿಸುತ್ತ ನಡೆದಿದ್ದಂತೆಯೇ ಗೋಪಾಲಿಗೆ ಭೀಮಸೇನರಾಯರ ನೆನಪು ಬಂತು.

ಭೀಮಸೇನರಾಯರನ್ನು ಬಹಳ ದಿನಗಳಿಂದಲೂ ಬಲ್ಲ ಗೋಪಾಲಿ. ಅವರು ಜರತಾರಿಪೇಟ ಹಾಕಿಕೊಂಡು ಕಾರಿನಲ್ಲಿ ಕುಳಿತು ಆಠಾರಾ ಕಛೇರಿಗೆ ಹೋಗುತ್ತಿದ್ದಾಗ ದಿನವೂ ಅವರ ಭೇಟಿಯಾಗುತ್ತಿತ್ತು ಗೋಪಾಲಿಗೆ. ರಸಿಕ ಮನುಷ್ಯ. ಹೆಣ್ಣುಗಳ ಬಗೆಗೆ ಕೊಂಚ ಆದರ ಹೆಚ್ಚೆಂದೇ ಹೇಳಬೇಕು. ಅವರ ವಯಸ್ಸಿನಲ್ಲಿ ಎಷ್ಟೋ ಹೆಂಗಸರ ಸಂಗ ಮಾಡಿದ್ದರು. ಆದರೂ ಜನರ ಎದುರಿಗೆ ಬಹಳ ಮರ್ಯಾದೆ ನಟಿಸುತ್ತಿದ್ದರು. ನಾಲ್ಕುಜನ ಸೇರುವ ಕಡೆ ಅವರು ಹೋಗುತ್ತಿರಲಿಲ್ಲ. ಏನಿದ್ದರೂ ಎಲ್ಲಾ ಬಹಳ ಗುಪ್ತವಾಗಿಯೇ. ಅದನ್ನು ಬಲ್ಲ ಗೋಪಾಲಿ ಬಹಳ ಹುಷಾರಾಗಿಯೇ ಅವರ ಕೆಲಸ ಮಾಡಿಕೊಡುತ್ತಿದ್ದ, ಯಾರಿಗೂ ಏನೊಂದೂ ತಿಳಿಯದಂತೆ. ಈಚೆಗೆ ಅವರು ರಿಟೈರ್ ಆದ ಮೇಲೆ ಅವರ

ಭೇಟಿ ಅಷ್ಟಾಗಿ ಆಗುತ್ತಿರಲಿಲ್ಲ. ಎಲ್ಲೋ ಒಂದೆರಡು ಸಾರಿ ಮಾತ್ರ ಕಾಣಿಸಿಕೊಂಡಿದ್ದರು - ಅದೂ ಅವರಿಗೆ ಚಪಲ ಹುಟ್ಟಿದಾಗ.

ಈಗ ನಾಲ್ಕೈದು ದಿನಗಳ ಹಿಂದೆ ಗೋಪಾಲಿಯನ್ನು ಹುಡುಕಿ ಕೊಂಡು ಬಂದಿದ್ದರು ಭೀಮಸೇನರಾಯರು.

"ಏನಪ್ಪ ಯಾವುದಾದರೂ ಬ್ರೇನ್ ಟಾನಿಕ್ ಕೊಡಸ್ತೀಯೇನಪ್ಪ. ಯಾಕೋ ಬಹಳ ಇರಸುಮುರಸಾಗಿದೆ"

—ಎಂದು ಕೇಳಿದರು ನಗುನಗುತ್ತ.

'ಬ್ರೇನ್ ಟಾನಿಕ್' ಎನ್ನುವುದು ಅವರ 'ಕೋಡ್ ವರ್ಡ್.'

"ಅದಕ್ಕೇನು ರಾಯರೆ, ತಮ್ಮ ಸೇವೇಗೆ ಸದಾ ಸಿದ್ಧವಾಗಿದ್ದೀನಿ."

"ನೋಡು ನನಗೆ ಲೊಡ್ಡುಗಿಡ್ಡು ಬೇಡ. ಏನಿದ್ದರೂ ಫ್ರೆಷ್ಷಾಗಿರ ಬೇಕು."

ಮುದುಕರಿಗೂ ಎಂತಹ ಹುಚ್ಚು. ಹರೆಯದ ತರುಣಿಯರೇ ಬೇಕು ಅವರಿಗೂ.

"ಅಂತಹದು ಯಾವುದೂ ಇಲ್ವಲ್ಲ ರಾಯರೆ. ಎಲ್ಲಾ ಕೊಂಚ ಸರ್ವಿಸ್ ಆದೋವೆ."

"ಏ........ಸುಖವಿಲ್ಲಪ್ಪ ಅವು - ಫ್ಲೇವರ್ರೆಲ್ಲಾ ಎವಾಪರೇಟಾಗಿ ಹೋಗಿರುತ್ತೆ ಅವಕ್ಕೆ. ನೋಡು, ಕಾಲೇಜು ಗೀಲೇಜು ಕಡೆ ಸುತ್ತಿರ್ತೀ ಯಲ್ಲ, ಅಂಥಾದ್ಯಾವುದ್ರೂ ಇದ್ರೆ."

"ಪ್ರಯತ್ನ ಪಡ್ತೇನೆ....ಸಿಕ್ಕಿದರೆ ನಿಮಗೆ ಸಮಾಚಾರ ಕೊಡೋದು ಹ್ಯಾಗೆ."

"ಮಧ್ಯಾಹ್ನದ ಹೊತ್ತು ಪಿಂಜರಾಪೋಲ್ ಕ್ಲಬ್ನಲ್ಲಿರ್ತೀನಿ ; ಸಾಯಂ ಕಾಲದ ವೇಳೆ ಉತ್ತರಾದಿ ಮಠದಲ್ಲಿ."

"ಪಿಂಜರಾಪೋಲ್ ಕ್ಲಬ್ಬೇನೋ ಸರಿ. ಉತ್ತರಾದಿ ಮಠಕ್ಕೂ ಹೋಗ್ತೀರಾ ?"

"ವಯಸ್ಸಾಯ್ತಲ್ಲಪ್ಪ. ಇನ್ನಾದರೂ ರಾಮ-ಕೃಷ್ಣ ಅಂತ ಅನ್ನ ಬೇಡವೇ, ಹರಿಕಥೆ ಪುರಾಣ ಕೇಳ್ಕೊಂಡು."

"ಹಾಗೆ ಅಧ್ಯಾತ್ಮ ಹಿಡಿದರೂ ತಮಗಿನ್ನೂ ಈ ಭವಾತ್ಮ ಬಿಟ್ಟಿಲ್ಲ ಅನ್ನಿ."

"ಹ್ಯಾಗೆ ಬಿಡತ್ತಪ್ಪ....ಹ್ಯಾಗೆ ಬಿಡತ್ತಪ್ಪ....ಮೊದಲಿಂದಲೂ ಹಾಳು ಅಭ್ಯಾಸ ಆಗಿರೋದು."

"ಸರಿ ಅನ್ನಿ. ಅಂತೂ 'ಪುರಾಣ ಹೇಳೋದಕ್ಕೆ ಬದನೇಕಾಯಿ ತಿನ್ನೋದಕ್ಕೆ' ಅಲ್ಲವೆ?"

"ಪುರಾಣದಲ್ಲಿ ಹೇಳಿದ್ಹಾಗೆ ಜನ ನಡೆದರೆ ಈ ಲೋಕ ಭೂಲೋಕ ಆಗೋಲ್ಲ ಕಣಪ್ಪ....ಭುವರ್ಲೋಕ ಆಗ್ಹೋದೀತು. ಅದೆಲ್ಲಾ ಇರ್ಲಿ. ಯಾವಾಗ ಬಂದು ನೋಡ್ತೀಯಪಾ? ಅದನ್ಹೇಳು."

"ನಾಲ್ಕೈದು ದಿನದಲ್ಲಿ ಯಾವುದಾನ್ನಾರೂ ತಲಾಷ್ ಮಾಡ್ತೀನಿ."

ಭೀಮಸೇನರಾಯರಿಗೇನೋ ಹಾಗೆಂದು ಹೇಳಿಕಳುಹಿಸಿದ್ದ ಗೋಪಾಲಿ. ಆದರೆ ಆ ಬಗ್ಗೆ ಅವನು ಅಷ್ಟಾಗಿ ಮುತುವರ್ಜಿ ವಹಿಸಿರಲಿಲ್ಲ. ಬೇರೆ ಕೆಲಸಗಳಲ್ಲಿ ಅವನಿಗೆ ಪುರಸತ್ತೇ ಸಿಕ್ಕಿರಲಿಲ್ಲ. ಈ ದಿನ ಆಕಸ್ಮಿಕವಾಗಿ ಈ ಹುಡುಗಿ ತಾನಾಗಿಯೇ ಬಂದು ಬಲೆಗೆ ಬೀಳಬೇಕೆ? ಎಂತಲೇ ಅವಳಿಗೆ ಯಾರನ್ನು ಹೊಂಚುವುದು ಎಂದು ಯೋಚಿಸುತ್ತಿರುವಾಗಲೇ ಭೀಮಸೇನರಾಯರು ನೆನಪಿಗೆ ಬಂದರು.

ಹುಡುಗಿ ಹೇಳಿದ್ದಳು ನಿಜ ಯಾರಾದ್ರೂ ಆದೀತು ಎಂದು. ಆದರೆ ಭೀಮಸೇನರಾಯರು ವಯಸ್ಸು ಕಳೆದವರು. ಅವಳು ಒಪ್ಪಿಕೊಂಡಾಳೋ ಇಲ್ಲವೋ........

ಒಪ್ಪಿಕೊಳ್ಳದೆ ಏನು? ಘಾಸಿಯಾಗಿದೆ ಪಾಪ........

ಭೀಮಸೇನರಾಯರೇನೂ ಮುದುಕರಂತೆ ಕಾಣುತ್ತಿಲ್ಲ. ಗಟ್ಟಿಮುಟ್ಟಾಗಿಯೇ ಇದ್ದಾರೆ. ಎಷ್ಟಾದರೂ ಸುಖದಲ್ಲಿ ಬೆಳೆದವರು. ಅವರೇ ಸರಿ....

—ಎಂದುಕೊಂಡು ಪಿಂಜರಾಪೋಲ್ ಕ್ಲಬ್ ಕಡೆಗೆ ಹೊರಟ ಗೋಪಾಲಿ.

ಭೀಮಸೇನರಾಯರಿಗೆ ಬಹಳ ಸಂತೋಷವಾಯಿತು ಗೋಪಾಲಿಯ ಮಾತುಗಳನ್ನು ಕೇಳಿ. ಕಿಸೆಯಿಂದ ಎರಡು ಹತ್ತುರೂಪಾಯಿ ನೋಟು

ಗಳನ್ನು ತೆಗೆದು ಅವನ ಕೈಯಲಿಟ್ಟರು. ಇಂತಹ ವಿಚಾರಗಳಲ್ಲಿ ರಾಯರು ಬಹಳ ಧಾರಾಳವಾಗಿ ನಡೆದುಕೊಳ್ಳುತ್ತಿದ್ದರು.

"ಎಲ್ಲಪ್ಪ ಬಂದಿರ್ಲಿ ?"

—ರಾಯರು ಕೇಳಿದರು.

"ಸಾಯಂಕಾಲ ಐದೂವರೆ ಆರಕ್ಕೆ ಮಾರ್ಕೆಟ್ ಹತ್ತಿರ ಬಂದುಬಿಡಿ. ಅಲ್ಲಿಂದ ಕರ್ಕೊಂಡು ಹೋಗ್ತೇನೆ. ಹುಡುಗಿ ಕಬ್ಬನ್‌ಪಾರ್ಕಿನಲ್ಲಿ ವೇಟ್ ಮಾಡ್ತಿರ್ತಾಳೆ."

"ಬೇಡ ಬೇಡ. ಆ ಬೆಳಕು ಹೊತ್ನಲ್ಲಿ ಮಾರ್ಕೆಟ್ ಹತ್ತಿರದಿಂದ ನಾವಿಬ್ರೂ ಒಟ್ಟಿಗೇ ಹೋದರೆ ಗುರುತು ಕಂಡ ಜನ ಏನಾದ್ರೂ ತಿಳ್ಕೊಂಡಾರು."

"ಇದು ಒಳ್ಳೆ ಮರ್ಯಾದೆ, ರಾಯರೆ. ಮಾಡೋದೇ ಕೆಟ್ಟ ಕೆಲಸ ವಂತೆ........"

—ಕುಚೋದ್ಯ ಮಾಡಿದ ಗೋಪಾಲಿ. ಅವನಿಗೆ ರಾಯರೆಂದರೆ ಮೊದಲಿನಿಂದಲೂ ಕೊಂಚ ಸಲಿಗೆ.

"ಹಾಗೆಲ್ಲಾ ಅನ್ಬಾರ್ದಪ್ಪ. ನೋಡು ದೊಡ್ಡೋರು ಹೇಳಿದಾರೆ– 'ಮಾಡೋದು ಅನಾಚಾರ ಆದ್ರೂ, ಮನೆ ಮುಂದೆ ಬೃಂದಾವನ ಇರ್ಲಿ', 'ಆಚಾರ ಕೆಟ್ಟರೂ ಆಕಾರ ಕೆಡಸ್ಕೋಬೇಡ' ಅಂತ. 'ಮರ್ಯಾದೆ' ಅನ್ನೋದು ಒಂದು ವೇಷ ಕಣಯ್ಯ. ಹಾಗಂತ ಅದನ್ನ ಬಿಡ್ಲೂಬಾರ್ದು. ಜನರ ಕಣ್ಣಿಗೆ ಮಣ್ಣೆರಚಿ ನಮ್ಮ ಕಾರ್ಯ ನಾವು ಸಾಧಿಸಿಕೊಳ್ಳೋಕೆ ಈ 'ಮರ್ಯಾದೆ' ಅನ್ನೋ ಕವಚ ಬಹಳ ಸಹಾಯ ಮಾಡುತ್ತೆಪ್ಪ"

"ಅಂತೂ ಆಷಾಢಭೂತಿ ವಿದ್ಯ ಇರಬೇಕು ಅನ್ನಿ."

"ಇದ್ದೇ ಇರ್ಬೇಕಪ್ಪ, ಇದ್ದೇ ಇರ್ಬೇಕು. ಅದಿಲ್ಲದೆ ಮನುಷ್ಯ ಬಾಳೋಕೇ ಸಾಧ್ಯವಿಲ್ಲ. ರಾಜಕೀಯಃ, ಸಾಮಾಜಿಕ ಯಾವುದು ತಗೋ ಅದರಲ್ಲಿ ಆಷಾಢಭೂತಿತನಕ್ಕೇ ಫಸ್ಟ್‌ಪ್ಲೇಸು."

"ಸೊಗಿದ್ದಲ್ಲೇ ಭೋಗ ಅಂದ್ಹಾಗಾಯ್ತು"

"ಅಡ್ಡಿಯೇನು ಅದರಲ್ಲಿ. ನಿಜವಾಗಿರೋರ್ನ ಯಾರಯ್ಯ ಕೇಳ್ತಾರೆ, ಅದರಲ್ಲೂ ಈ ಕಾಲದಲ್ಲಿ. ಧರ್ಮದ ಹೆಸರಿನಲ್ಲಿ ಅಧರ್ಮ, ನ್ಯಾಯದ

ಹೆಸರಿನಲ್ಲಿ ಅನ್ಯಾಯ, ದೇಶಸೇವೆ ಹೆಸರಿನಲ್ಲಿ ದರೋಡೆ, ಜನ ಸೇವೆ ಹೆಸರಿನಲ್ಲಿ ಸ್ವಾರ್ಥಸಾಧನೆ.... ಹೀಗೇ.... ಎಲ್ಲಾ ಸೋಗು "

"ಸರಿ ಸರಿ. ಅದಿರ್ಲಿ. ನೀವೆಲ್ಲಿ ಬಂದಿರ್ತೀರಾ ಅದನ್ನ ಹೇಳಿ. ನಾನೇ ಅಲ್ಲಿಗ್ಬರ್ತೀನಿ."

"ಎಲ್ಲಿ ಬಂದಿರ್ಲಿ ?........ಹು....ಹು....ವೈ. ಎಂ. ಸಿ. ಎ. ಹತ್ರ ಬಂದಿರ್ತೀನಿ. ಅಲ್ಲಾದ್ರೆ ಯಾರೂ ಅಷ್ಟಾಗಿ ಜನ ಇರೋಲ್ಲ. ಕಬ್ಬನ್ ಪಾರ್ಕೂ ಅಲ್ಲೀಗೆ ಹತ್ರ. ಇಬ್ರೂ ಒಟ್ಟಿಗೆ ಹೋಗಬಹುದು."

ರಾಯರ ಅಪ್ಪಣೆ ಪಡೆದು ಗೋಪಾಲಿ ಹಿಂದಿರುಗಿದ.

ಆ ದಿನ ಸಾಯಂಕಾಲ ಗೋಪಾಲಿ ಹೋಗುವುದಕ್ಕೆ ಮೊದಲೇ ಭೀಮಸೇನರಾಯರು ವೈ. ಯಂ. ಸಿ. ಎ. ಹತ್ತಿರ ಬಂದು ಕಾದಿದ್ದರು. ವೈ. ಯಂ. ಸಿ. ಎ. ರೆಸ್ಟೋರೆಂಟಿನಲ್ಲಿ ಇಬ್ಬರೂ ಫಲಾಹಾರ ಮುಗಿಸಿ ಕೊಂಡು ಕಬ್ಬನ್‌ಪಾರ್ಕ್ ಕಡೆಗೆ ಹೊರಟರು - ಅದೂ ಇದೂ ಮಾತ ನಾಡುತ್ತ

ಆದೇತಾನೆ ಸಂಜೆಯ ಮಬ್ಬುಗತ್ತಲು ಹರಡುತ್ತಿತ್ತು. ಕಾಗೆಗಳು 'ಕಾ ಕಾ' ಎಂದು ಅರಚುತ್ತ ಗುಂಪುಗುಂಪಾಗಿ ಗೂಡಿಗೆ ಸೇರುತ್ತಿದ್ದುವು. ರಸ್ತೆಯಲ್ಲಿ ಅಲ್ಲೊಂದು ಇಲ್ಲೊಂದು ಮೋಟಾರು ಗಾಡಿಗಳು 'ಭೋಂ.... ಭೋಂ' ಎಂದು ಹಾರನ್ ಶಬ್ದಮಾಡುತ್ತ ಓಡುತ್ತಿದ್ದವು. ಎಲ್ಲೋ ದೂರದಲ್ಲಿ ಒಂದೆರಡು ಬೈಸಿಕಲ್ಲುಗಳು ಹೋಗುತ್ತಿದ್ದವು.

ಇಂಜನಿಯರಿಂಗ್ ಕಾಲೇಜು ಚೌಕದಿಂದ ಅವರು ಬಲಕ್ಕೆ ತಿರುಗಿ ಕಬ್ಬನ್‌ಪಾರ್ಕ್ ಪ್ರವೇಶಿಸುತ್ತಿದ್ದಂತೆಯೇ ಅಲ್ಲೊಂದು ಇಲ್ಲೊಂದು ಬೀದಿ ದೀಪಗಳು ಅಂಟಿಕೊಂಡು ಮಿನುಗುಟ್ಟಿದುವು.

ರಾಯರ ಮನಸ್ಸಿನಲ್ಲಿ ಏನೋ ಒಂದು ಆತುರ, ಒಂದು ಹರ್ಷ: ಬಹಳ ದಿನಗಳಾಗಿ ಹೋಗಿದ್ದವು ಅವರು ಅಂತಹ ಬೇಟೆಗೆ ಹೋಗಿ.

ಕಬ್ಬನ್‌ಪಾರ್ಕಿನಲ್ಲಿ ಕಾಲಿಡುತ್ತಿದ್ದಂತೆಯೇ ಅವರಿಗೆ ಅದೂ ಇದೂ ವಿಷಯದ ಮಾತು ಬೇಡವಾಗಿ ತಾವು ಈಗ ಹೋಗುತ್ತಿರುವ ವಿಷಯದ ಬಗ್ಗೆ ಕಾತರತೆ ಹೆಚ್ಚಿ ಗೋಪಾಲಿಯನ್ನು ಕೇಳಿದರು :

"ಯಾರಯ್ಯ ಹುಡುಗಿ ಅದು ?"

"ಯಾರೂ ಅಂತ ಗೊತ್ತಿಲ್ಲ ರಾಯರೆ. ಇವತ್ತು ಅವಳೇ ಸಿಕ್ಕಿದ್ದಳು. ನಿಮ್ಮ ಅದೃಷ್ಟ."

"ನಿನಗೆ ಹ್ಯಾಗಯ್ಯಾ ಸಿಕ್ತಾಳೆ. ಕಳ್ಳಾಟ ಮಾಡ್ತೀಯಲ್ಲಾ ನನ್ನ ತ್ರಾಸೂ."

"ಇಲ್ಲ ರಾಯರೆ. ಖಂಡಿತವಾಗಿಯೂ ಗೊತ್ತಿಲ್ಲ. ಹಿಂದೆ ಒಂದ್ಸಲ ಮಾತ್ರ ಅವಳನ್ನು ನೋಡಿದ್ದೆ, ಅಜಂತ ಹೋಟ್ಲಲ್ಲಿ, ಅರಸೀಕೆರೆ ನಾರಾಯಣಮೂರ್ತಿ ಅಂತ ನನ್ನ ಸ್ನೇಹಿತ ಒಬ್ಬ ಇದಾನೆ, ಅವನ ಜತೇಲಿ."

"ಅಂತೂ ಸೆಕೆಂಡ್‌ಹ್ಯಾಂಡೂ ಅನ್ನು."

"ಮದುವೆಯಾದ ಹೆಂಡ್ತೀರೇ ಈಗಿನ ಕಾಲ್ದಲ್ಲಿ ಫಸ್ಟ್‌ಹ್ಯಾಂಡ್ ಆಗಿರೋದು ಅಪರೂಪ ರಾಯರೆ."

"ನೀನು ಬಿಡು, ಮಾತ್ನಲ್ಲಿ ಘಾಟಿ. ಹೋಗ್ಲಿ ಹುಡುಗಿ ಹೆಸರೇನಯ್ಯ."

"ಅದೂ ನಾನು ವಿಚಾರಿಸಲಿಲ್ಲ, ರಾಯರೇ."

"ಇದು ಒಳ್ಳೆ ಚೆನ್ನಾಯಿತಪ್ಪ. ಹುಡುಗಿ ಯಾವ್ಳೋಳು ಅಂತ ಗೊತ್ತಿಲ್ಲ, ಹೆಸರು ಕೂಡ ಗೊತ್ತಿಲ್ಲ. ಒಳ್ಳೆ ಕಸುಬುದಾರ ಕಣಯ್ಯ ನೀನು. ಹುಡುಗೀನಾದರೂ ನೋಡಿದಿಯೋ ಇಲ್ವೋಪ್ಪ. ಅಥವಾ ಸುಮ್ಮನೆ ಕುಹಕ ಮಾಡೋಕೆ ನನ್ನ ಕರಕೊಂಡ್ಬಂದಿದೀಯೊ "

—ನಡೆಯುತ್ತಿದ್ದವರು ಹಾಗೆಯೇ ನಿಂತು ಕೊಂಚ ಅಸಹನೆ ಬೆರೆತ ಧ್ವನಿಯಲ್ಲೇ ಕೇಳಿದರು.

"ಛೆ....ಛೆ.... ಉಂಟೇ ರಾಯರೆ ನಿಮ್ಮ ಹತ್ರ ಕುಹಕ?"

"ಮತ್ತಿನ್ನೇನು. ಯಾವುದೂ ನನ್ಗೊತ್ತಿಲ್ಲ, ನನ್ಗೊತ್ತಿಲ್ಲ ಅಂತಿದೀಯ."

"ಕೋಪ ಮಾಡ್ಕೋಬೇಡಿ. ಹುಡುಗಿ ಪೂರ್ವೋತ್ತರ ನಾನು ವಿಚಾರಿಸಲಿಲ್ಲ. ಅಷ್ಟೆಲ್ಲಾ ವಿಚಾರಿಸೋಕೆ ಇವತ್ತು ಟೈಂ ಸಿಗಲಿಲ್ಲ. ಬರಿ ಪ್ರೋಗ್ರಾಂ ಮಾತ್ರ ಫಿಕ್ಸ್ ಮಾಡಿಬಿಟ್ಟೆ. ಇನ್ನೊಂದು ಕ್ಷಣ, ನೀವೇ ಹುಡುಗೀನ ಕಣ್ಣಾರೆ ನೋಡೋರಂತೆ. ಅವಳ ಪೂರ್ವೋತ್ತರ ನೀವೇ ವಿಚಾರಸ್ಕೊಳೋರಂತೆ."

"ಹುಡುಗಿ ಚೆನ್ನಾಗಿದ್ದಾಳೇನಯ್ಯಾ."

—ಎಂದು ಕೇಳಿದರು ಮೃದುವಾದ ಧ್ವನಿಯಲ್ಲಿ.

"ಏ-ಒನ್, ರಾಯರೆ. ಕಾಲೇಜು ಹುಡುಗಿ"

"ಯಾವ ಜನಾನಯ್ಯ"

"ಬ್ರಾಹ್ಮಣರ ಹುಡುಗಿ ಇದ್ದಾಗಿದೆ."

ನಿರ್ದಿಷ್ಟ ಸ್ಥಳ ಸಮೀಪಿಸುತ್ತಿತ್ತು. ಅವರು ಮಾತು ನಿಲ್ಲಿಸಿ ಮೌನವಾಗಿ ಮುಂದೆ ನಡೆದರು.

ಪಬ್ಲಿಕ್ ಲೈಬ್ರೆರಿ ಕಟ್ಟಡದ ಬಲ ಬದಿಯಲ್ಲಿರುವ ವೃಕ್ಷವಾಟಿಕೆಯೊಳಗೆ ಕಲ್ಲು ಬೆಂಚೊಂದರ ಮೇಲೆ ಹುಡುಗಿ ಕಾಯುತ್ತ ಕುಳಿತಿದ್ದಳು. ಗೋಪಾಲಿ ರಾಯರನ್ನು ಹೊರಗಡೆಯೇ ನಿಲ್ಲಿಸಿ ತಾನೊಬ್ಬನೇ ಹೋಗಿ ಅವಳನ್ನು ಮೊದಲು ಮಾತನಾಡಿಸಿಕೊಂಡು ಬಂದ. ಆನಂತರ ರಾಯರನ್ನೂ ಅಲ್ಲಿಗೆ ಕರೆದುಕೊಂಡು ಹೋದ.

ರಸ್ತೆಯ ಮಗ್ಗುಲಿನ ದೀಪಸ್ತಂಭಗಳಿಂದ ಹೊರಟ ಮಂದವಾದ ಬೆಳಕು ವೃಕ್ಷವಾಟಿಕೆಯೊಳಗೆ ಪಸರಿಸಿಕೊಂಡಿತ್ತು. ಆ ಬೆಳಕಿನಲ್ಲಿ ಒಬ್ಬರ ಮುಖವನ್ನು ಮತ್ತೊಬ್ಬರು ಸುಸ್ಪಷ್ಟವಾಗಿ ನೋಡಲು ಸಾಧ್ಯವಿತ್ತು.

ರಾಯರು ಹುಡುಗಿಯ ಮುಖವನ್ನೊಮ್ಮೆ ನೋಡಿದರು. ಹುಡುಗಿಯೂ ರಾಯರ ಮುಖವನ್ನು ನೋಡಿದಳು.

ಅವರು ತಂದೆ-ಮಗಳು ಎಂಬ ವಿಚಾರ ಅವರ ಮಾತುಗಳಿಂದಲೇ ತಿಳಿದ ಗೋಪಾಲಿ ಅಲ್ಲಿ ಒಂದು ಕ್ಷಣಕಾಲವೂ ನಿಲ್ಲದೆ ಹೇಗೋ ಅಲ್ಲಿಂದ ನುಸುಳಿಕೊಂಡು ಪರಾರಿಯಾದ.

ಭೀಮಸೇನರಾಯರು ಮಗಳಿಗೆ ಓದು ಬಿಡಿಸಿ, ತುಮಕೂರಿನ ದೊಡ್ಡ ಮನುಷ್ಯರೊಬ್ಬರ ಮಗನಿಗೆ ಮದುವೆ ಮಾಡಿಕೊಟ್ಟು, ಗಂಡನ ಮನೆಗೆ ಸಾಗಹಾಕಿದ ವಿಷಯ ಎಷ್ಟೋ ದಿನಗಳಾದ ಮೇಲೆ ಗೋಪಾಲಿಗೆ ತಿಳಿದು ಬಂದಿತು.

ರಾಯರಂತೂ ಆ ಪ್ರಕರಣ ನಡೆದಂದಿನಿಂದ ಗೋಪಾಲಿಗೆ ತಮ್ಮ ಮುಖವನ್ನು ಸಹ ತೋರಿಸಲಿಲ್ಲ.

ಇನ್ನೊಮ್ಮೆ ನಡೆದ ಸಂಗತಿ ಇನ್ನೂ ವಿಚಿತ್ರವಾಗಿತ್ತು.

ಅದು ಆ 'ಬೋಳಿಭಕ್ತ' ಕಿಟ್ಟಾಶಾಸ್ತ್ರಿಯ ಕಥೆ.

ಶಾಸ್ತ್ರಿ ಹದಿನಾರಾಣೆ ವೈದಿಕ. ಪೌರೋಹಿತ್ಯ ಮಾಡುವುದು ತಾತ ಮುತ್ತಾತಂದಿರ ಕಾಲದಿಂದಲೂ ಮನೆತನಕ್ಕೆ ಬಂದಿದ್ದ ವೃತ್ತಿ. ಕಾರ್ಕೋಟಕನ ಅನುಗ್ರಹಕ್ಕೆ ಒಳಗಾಗಿದ್ದ ನಳಮಹಾರಾಜನ ನೆನಪು ತಂದುಕೊಡುತ್ತಿದ್ದ ಶಾಸ್ತ್ರಿ. ಅದೇ ಅಡ್ಡದೇಹ, ಗುಜ್ಜುಗೊರಲು, ದೊಡ್ಡಹೊಟ್ಟೆ. ಆದರೆ ಗೂನುಬೆನ್ನೊಂದು ಮಾತ್ರ ಇರಲಿಲ್ಲ. ಮುಖದ ಮೇಲಿನ ಸಿಡುಬು ಕಲೆಗಳು ನಾನು ಹೆಚ್ಚು ತಾನು ಹೆಚ್ಚೆಂದು ಸ್ಪರ್ಧೆ ನಡೆಸಿದಂತಿದ್ದುವು. ಹಣೆಗೆ ಆ ಕೊನೆಯಿಂದ ಈ ಕೊನೆಯವರೆಗೆ ದಪ್ಪವಾಗಿ ಹಚ್ಚಿದ್ದ ಅಡ್ಡಗಂಧ ಲಾಯರ್ ಆಫೀಸ್ ಬೋರ್ಡಿನಂತೆ ಇವನು 'ಶಾಸ್ತ್ರಿ'ಯಲ್ಲದೇ ಬೇರೇನಾದರೂ ಸಾಧ್ಯವಿಲ್ಲವೆಂದು ಸಾರುತ್ತಿತ್ತು. ನುಣ್ಣಗೆ ಬೋಳಿಸಿದ ತಲೆಯ ಹಿಂಭಾಗದಲ್ಲಿ ಚೋಟುದ್ದದ ನಾಲ್ಕು ಕೂದಲೆಳೆಗಳು ಗಾಳಿಗೆ ತೂಗಾಡುತ್ತಿದ್ದವು, ಪಟಕ್ಕೆ ಕಟ್ಟಿದ ಬಾಲಂಗೋಚಿಯಂತೆ.

ಅವನಿಗೂ ಹೆಂಗಸರ ಹುಚ್ಚು.

ಪಾಪ ಏನು ಮಾಡಿಯಾನು. ವರ್ಷದ ಮುನ್ನೂರ ಅರವತ್ತೈದು ದಿವಸವೂ ಅವನಿಗೆ ಬೀಳುತ್ತಿದ್ದ ಊಟ ಅಂತಹುದು. ದಿನವೂ ಹಾಲು–ತುಪ್ಪ, ಬೇಕುಬೇಕಾದ ತಿಂಡಿತಿನಸುಗಳು, ಬ್ರಾಹ್ಮಣರ ಮನೆಯ ನಿಮಂತ್ರಣದ ಊಟಗಳೆಂದರೆ ಕೇಳಬೇಕೆ ಅಂತಹ ಊಟ ತಿಂದೂ ತಿಂದೂ ಕೊಬ್ಬು ಬೆಳೆದುಹೋಗಿತ್ತು. ಇನ್ನು ಕೊಬ್ಬು ಕರಗಿಸುವುದಾದರೂ ಹೇಗೆ? ಸ್ತ್ರೀಸಂಗವೇ ಅದಕ್ಕೆ ಉತ್ತರವಾಗಿತ್ತು.

ಆದರೆ ಹೆಚ್ಚು ಕಾಸು ಖರ್ಚಾಗಬಾರದು, ಸುಖ ಮಾತ್ರ ಬೇಕು. ಕೈತುಂಬ ಸಂಪಾದನೆ ಆಗುತ್ತಿದ್ದರೂ ಅದೇನೋ ಹಾಳು ಜಿಪುಣ ಸ್ವಭಾವ ಅವನದು.

ಹೆಂಗಸರು ಬೇಕೆಂದರೆ ಧಾರಾಳವಾಗಿ ಹಣ ಸುರಿಯದೆ ಸಿಗುತ್ತಾರೆಯೆ? ಅವರಿಗೆ, ಅವರ ಏಜಂಟರಿಗೆ ಎಲ್ಲರಿಗೂ ಹಣ ತೆರಬೇಕು. ಜತೆಗೆ ಹೂವು, ಹಣ್ಣು, ತಿಂಡಿ, ತೀರ್ಥ ಎಲ್ಲಕ್ಕೂ ಹಣ–ನೀರಿನಂತೆ ಖರ್ಚುಮಾಡಬೇಕು. ಅವರಲ್ಲೂ ಕಣ್ಣಿಗೆ ಲಕ್ಷಣವಾಗಿರುವ ಹೆಂಗಸರು ಬೇಕೆಂದರೆ ಇನ್ನೂ ತೀರಿತು.

ಶಾಸ್ತ್ರಿಯ ವಿಚಾರ ಹಾಗಲ್ಲ. ಅವನಿಗೆ ಲಕ್ಷಣಗಿಕ್ಷಣ ಏನೂ ಬೇಡ. ಎಂಥದಾದರೂ ಸರಿಯೆ. ಕೊನೆಗೆ ಬೋಳಿಯಾದರೂ ಆದೀತು. 'ಅವಳ ತಲೆ ಹೇಗಿದ್ದರೇನು, ಅದನ್ನು ಕಟ್ಕೊಂಡು ನಮಗೇನಯ್ಯ, ಮಾರ್ಕೆಟ್‌ಗೆ ಹೋಗಿ ಹೂವಿಗೆ ಕಾಸಿಡೋದೇ ತಪ್ಪಿತು' ಎನ್ನುತ್ತಿದ್ದ. ಅಂತೂ ದುಡ್ಡೂ ಉಳಿದು ಸುಖವೂ ಸಿಕ್ಕಿದರೆ ಸಾಕು. ಹೀಗಾಗಿ ಅವನ ಪಾಲಿಗೆ ಸಿಕ್ಕುತ್ತಿದ್ದವರೆಲ್ಲ ಹೆಚ್ಚಿಗೆ. ಯಾರೂ ಕಣ್ಣೆತ್ತಿ ಸಹ ನೋಡದ ಬೋಳಿಯರೆ. ಅವನ ಅದೃಷ್ಟ ನೋಡಿಯೇ ಅವನಿಗೆ 'ಬೋಳಿಭಕ್ತ' ಎಂದು ನಾಮಕರಣ ಮಾಡಿದ್ದ ಗೋಪಾಲಿ.

ಏಳೆಂಟು ದಿವಸಗಳಿಂದ ಗಂಟುಬಿದ್ದಿದ್ದ ಶಾಸ್ತ್ರಿ ಗೋಪಾಲಿಗೆ.

ಅವನ ಹೆಂಡತಿ ತುಂಬು ಬಸುರಿಯಂತೆ. ಅತ್ತೆ ಬೇರೆ ಮನೆಗೆ ಬಂದುಬಿಟ್ಟಿದ್ದಳಂತೆ ಮಗಳ ಬಾಣಂತನಕ್ಕೆ.

ಶಾಸ್ತ್ರಿಯ ಕೆಲಸಕ್ಕೆ ಗುಂಡಮ್ಮನನ್ನು ಹುಡುಕಿಕೊಂಡು ಗೋಪಾಲಿ ಮೂರು ನಾಲ್ಕು ಸಾರಿ ಹೋಗಿದ್ದರೂ ಅವಳು ಗೋಪಾಲಿಗೆ ಸಿಕ್ಕಿರಲಿಲ್ಲ. ಅವಳೇನು ಒಂದು ಕಡೆ ನಿಂತಿರುವವಳೆ! ಹತ್ತಾರು ಕಡೆ ಸುತ್ತುವವಳು! ಸ್ನೇಹಿತರೂ ಬಹಳ!

ಕಡೆಗೂ ಒಂದುದಿನ ಗುಂಡಮ್ಮನನ್ನು ಕಂಡ ಗೋಪಾಲಿ.

"ನಾನೇ ನಿನ್ನ ಹತ್ರ ಬರಬೇಕು ಅಂತಿದ್ದನಲ್ಲೋ ಗೋಪಾಲಿ. ಅಷ್ಟರಲ್ಲೆ ನೀನೇ ಬಂದೆ"

—ಎಂದಳು ಗುಂಡಮ್ಮ ಅವನನ್ನು ಕಂಡು.

"ಯಾಕೆ, ಆ ತಂಗಮಣಿ ಮತ್ತೆ ಏನಾದರೂ ಹೇಳಿ ಕಳುಹಿಸಿದ್ದಾಳೇನು?"

"ಅವಳಲ್ಲಪ್ಪ"

"ಮತ್ತೆ ಯಾರು"

"ಇನ್ನೊಬ್ಬಳಪ್ಪ, ನಮ್ಮ ಜಾತಿಯೋಳು."

"ಏನು ಹೊಯ್ಸಳ ಕರ್ಣಾಟಕರೋಳೆ?"

ಗುಂಡಮ್ಮ ಹೊಯ್ಸಳ ಕರ್ನಾಟಕ ಮತದವಳು ಎನ್ನುವುದು ಗೋಪಾಲಿಗೆ ಗೊತ್ತಿತ್ತು.

"ಅಲ್ಲವಪ್ಪ."

"ಮತ್ತೆ ನಮ್ಮ ಜಾತಿಯೋಳು ಅಂತೀಯ ?"

"ಅಷ್ಟೂ ಗೊತ್ತಾಗೊಲ್ವೆ ನಿನಗೆ"

—ಎಂದು ನಗುತ್ತ ರುಬ್ಬುಗುಂಡಿನಂತಿದ್ದ ತನ್ನ ತಲೆಯಮೇಲೆ ಕೈಯಾಡಿಸಿ ಸೂಚಿಸಿದಳು ಗುಂಡಮ್ಮ. ಗೋಪಾಲಿಯೂ ನಕ್ಕ.

"ಏನೋ ಪಾಪ ಬಹಳ ಚಪಲ ಪಡ್ತಾಇದಾಳೆ, ನನ್ನ ಸ್ನೇಹಿತೆ ಯಪ್ಪ."

"ಏನು ವಯಸ್ಸು ?"

"ವಯಸ್ಸೇನೋ ಆಗಿದೆ-ಐವತ್ತರ ಹತ್ತಿರ ಹತ್ತಿರ."

"ಅಷ್ಟು ವಯಸ್ಸಾಗಿದ್ದರೂ ಇನ್ನೂ ಚಪಲಾನೆ."

"ವಯಸ್ಸಾಗಿರೋ ಗಂಡಸರಿಗೇನೂ ಚಪಲ ಇಲ್ವೇನೋ ಪಾಪ."

"ಇದೆ ಅನ್ನು."

"ಅವರ ಹಾಗೇ ಇವಳೂನೂ. ಗಂಡ ಇದ್ದಾಗ ಚೆನ್ನಾಗಿ ಸುಖ ಪಟ್ಟೋಳು. ಪಾಪ ಈಗ ನಾಲ್ಕೈದು ವರ್ಷ ಆಯ್ತು ಅವನು ತೀರ್ಕೊಂಡು. ಹಳ್ಳೀಲಿರೋಳು. ಭಯ ಭೀತಿ. ಯಾರ ಕಣ್ಣಿಗೆ ಎಲ್ಲಿ ಬೀಳುತ್ತೋ ಅಂತ."

"ಈಗೇನು ಬೆಂಗಳೂರಿಗೆ ಬಂದಿದಾಳೇನು."

"ಹ್ಞೂ, ನಾಲ್ಕುದಿನದಿಂದ ಬಂದು ಹೋಗ್ತಿದಾಳೆ. ಅವಳ್ನೂ ಕರ್ಕೊಂಡು ಲಾಲ್‌ಬಾಗು, ಮ್ಯೂಜಿಯಮ್ಮೂ ಎಲ್ಲಾ ತೋರಸ್ಕೊಂಡ್ಬಂದೆ."

"ಅದಕ್ಕೆ ನಾನು ಮೂರ್ನಾಲ್ಕು ಸಾರಿ ನಿನ್ನ ಹುಡುಕ್ಕೊಂಡು ಬಂದಿದ್ದರೂ ನೀನು ಸಿಕ್ಲಿಲ್ಲ."

"ನೀನು ಹುಡುಕ್ಕೊಂಡು ಬಂದಿದ್ದೆಯೇನು ?"

"ಹೌದು."

"ಯಾಕೆ ?"

"ನನಗೂ ನಿನ್ನಿಂದ ಒಂದು ಕೆಲಸ ಆಗಬೇಕಾಗಿತ್ತು"

"ಅದು ಆಮೇಲಾಗ್ಲಿ. ಮೊದಲು ಇವನ್ನ ನೋಡಪ್ಪ"

"ವಯಸ್ಸಾಗಿದೆ ಅಂತೀಯಲ್ಲ"

"ಆದ್ರೇನು ಗುಂಡುಗುಂಡಗೆ ಚೆನ್ನಾಗಿದ್ದಾಳಪ್ಪ. ವಯಸ್ಸಾಗಿರೋದು ಕಾಣೋಲ್ಲ. ಏನು ಒಂದು ಮೂವತ್ತು ಮುವತ್ತೈದು ಹೇಳಬಹುದು ಅಷ್ಟೆ."

"ಹಾಗಾದ್ರೆ ಯಾವತ್ತು ಏರ್ಪಾಡು ಮಾಡ್ತೀಯ ?"

"ನೀನು ಯಾವತ್ತು ಹೇಳಿದ್ರೆ ಆವತ್ತು. ಈವತ್ತಾದ್ರೆ ಈವತ್ತೆ. ನಾಳೆಯಾದ್ರೆ ನಾಳೇನೆ."

"ಸ್ಥಳ"

"ಗವೀಪುರದ ಛತ್ರ"

"ಆಗ್ಲಿ ನಾಳೆ ಸಾಯಂಕಾಲ ಏರ್ಪಾಡು ಮಾಡಿಬಿಡು. ನಾನು ಒಬ್ಬರ್ನ ಕರ್‍ಕೊಂಡ್ಬರ್‍ತೀನಿ."

"ಊ್ಹ್ಣ. ಅದಾಯಿತಲ್ಲ. ಇನ್ನು ನೀನು ಬಂದ ಕೆಲಸ ಏನು ಹೇಳು."

"ಅದು ಇನ್ನೊಮ್ಮೆ ಆಗಲಿ. ನಾಳೆ ಹೇಳ್ತೀನೆ."

"ಹಾಗೇ ಮಾಡು"

—ಎಂದಳು ಗುಂಡಮ್ಮ. ಗೋಪಾಲಿ ಶಾಸ್ತ್ರಿಗಾಗಿಯೇ ತಾನು ಬಂದಿದ್ದ ಗುಟ್ಟುಬಿಟ್ಟುಕೊಡದೆ, ಅಲ್ಲಿಂದ ಹೊರಟು ಮಾರ್ಕೆಟ್ ಬಳಿಗೆ ಬಂದು ಸೇರಿದ.

ಸಂಜೆಗೆ ಯಥಾಪ್ರಕಾರ ಹಲ್ಲುಕಿರಿದು, ತಲೆಕೆರೆಯುತ್ತ ಗೋಪಾಲಿಯ ಎದುರಿಗೆ ಕಾಣಿಸಿಕೊಂಡ ಶಾಸ್ತ್ರಿ.

"ನಿನ್ನ ಕೆಲಸ ಮಾಡ್ಕೊಂಡ್ಬಂದಿದೀನಪ್ಪ. ನಾಳೆ ಸಂಜೆ ಇದೇ ಹೊತ್ತಿಗೆ ಇಲ್ಲಿಗೆ ಬಂದ್ಬಿಡು. ಕರ್‍ಕೊಂಡ್ಹೋಗ್ತೀನಿ."

ಶಾಸ್ತ್ರಿಯ ಮುಖದಲ್ಲಿ ಆನಂದ ಉಕ್ಕಿ ಹರಿಯಿತು. ಸೊಂಟಕ್ಕೆ ಸುತ್ತಿದ್ದ ಪಂಚೆಯನ್ನು ಸಡಿಲಿಸಿ ಅದರೊಳಗಿಂದ ಎರಡು ರೂಪಾಯಿಯ ಬೆಳ್ಳಿಯ ನಾಣ್ಯ ತೆಗೆದು ಗೋಪಾಲಿಯ ಕೈಯಲ್ಲಿಟ್ಟು,

"ನಾಳೆ ಇನ್ನೂ ಒಂದು ರೂಪಾಯಿ ಬರೋದಿದೆ ಅದ್ನೂ ಕೊಡ್ತೀನಪ್ಪ"

—ಎಂದ ಆ ಕಡೆ ಈ ಕಡೆ ದೃಷ್ಟಿ ಹಾಯಿಸುತ್ತ.

"ಅದೆಲ್ಲಿಂದ ನಾಳೆ ಇನ್ನೂ ಒಂದು ರೂಪಾಯಿ ಬರೋದಿದೆ."

—ಬೇಕೆಂತಲೇ ಕೇಳಿದ ಗೋಪಾಲಿ, ಸತ್ತೋರ್ನ ಸ್ವರ್ಗಕ್ಕೇರ್ಸ್ಸೋ ಸಿಗೋ ಲಂಚ ಅದು ಎಂದು ಅವನಿಗೆ ಗೊತ್ತಿದ್ದರೂ.

"ಅದೇ ಆ ವೆಂಕಟಕೃಷ್ಣಯ್ಯನೋರ ಮನೇಲಿ ಅವರ ತಂದೆ ವೈದೀಕ ಇದೆ. ನನಗೇ ನಿಮಂತ್ರಣಕ್ಕೂ ಹೇಳಿದ್ದಾರೆ. ಒಂದ್ಮೂರ್ನಾಕು ರೂಪಾಯಿ ದಕ್ಷಿಣೆ ಗಿಟ್ಟುತ್ತೆ. ಅವರಲ್ಲಿ ಒಂದು ರೂಪಾಯಿ ಕೊಡ್ತೀನಿ."

"ಅಲ್ಲಯ್ಯ ನಿಮಂತ್ರಣದ ಊಟಮಾಡಿ ಈ ಕೆಲಸಕ್ಕೆ ಹೋಗಬಹುದೇನಯ್ಯ?"

"ಅದು ಮಧ್ಯಾಹ್ನ, ಇದು ರಾತ್ರಿ. ಏನೂ ದೋಷ ಇರಲ್ಲಪ್ಪ"

"ಸರಿಯಪ್ಪ. ಅವರನ್ನು ಆ ಸ್ವರ್ಗಕ್ಕೆ ಸೇರಿಸಿ ನೀನು ಈ ಸ್ವರ್ಗಕ್ಕೆ ಹೋಗಬೇಕು ಅನ್ನು."

"ಹಾಸ್ಯ ಮಾಡಬೇಡವಯ್ಯ."

"ಹಾಸ್ಯದ ಮಾತೇನು ಬಂತಪ್ಪ ಇದರಲ್ಲಿ.- ಇದ್ದದ್ದು ಇದ್ದಹಾಗೇ ಹೇಳ್ದೆ."

"ನಾಳೆ ಖಂಡಿತವೇನಪ್ಪ?"

"ಕಣಿ ಕೇಳು ಹೋಗು."

"ಸರಿ ಹಾಗಾದ್ರೆ"

ಎನ್ನುತ್ತ ಶಾಸ್ತ್ರಿ ಹೊರಟುಹೋದ. 'ಸಮಾಜದ ಕಣ್ಣಿಗೆ ಮಣ್ಣೆರಚಿ ಸಂಭಾವಿತರೆಂದು ಕರೆಸಿಕೊಂಡು ಈ ಕಳ್ಳಬಾಳು ಬಾಳೋ ಇವರಿಗಿಂತ ಜನರ ಕಣ್ಣಿಗೆ ಬಿದ್ದು 'ಡಾಫರ್' ಅನ್ನಿಸ್ಕೊಂಡಿರೋ ನಮ್ಮ ಸಾಚಾತನಾನೇ ಎಷ್ಟೋ ಮೇಲು' ಎಂದುಕೊಂಡ ಗೋಪಾಲಿ.

ಮರುದಿನ ಸಂಜೆಯಾಗುತ್ತಲೂ ಗಡಿಬಿಡಿಯಿಂದಲೇ ಬಂದ ಶಾಸ್ತ್ರಿ. ಅವನ ಆವಾಂತರ ತಡೆಯಲಾರದೆ ಗೋಪಾಲಿ ಎದ್ದು ಹೊರಟ. ಅವನನ್ನು ಕರೆದುಕೊಂಡು ಮತ್ತೆ ಸೊಂಟಕ್ಕೆ ಕೈಹಾಕಿ ಒಂದು ರೂಪಾಯಿ ತೆಗೆದು ಅವನ ಕೈಗೆ ಹಾಕಿದ. ಗೋಪಾಲಿ ಶಾಸ್ತ್ರಿಯ ಕೈಯಲ್ಲಿದ್ದ ಸಣ್ಣ ಗಂಟನ್ನು ನೋಡಿ—

"ಏನೋ ಅದು ಗಂಟು, ಕೈಯಲ್ಲಿ?"

—ಎಂದ.

"ಏನಿಲ್ವೋ. ಆ ನಿಮಂತ್ರಣದೋರ ಮನೇಲಿ ಒಂದಿಷ್ಟು ಸೀ ತಿಂಡಿ ತಂಗೊಂಡ್ಬಂದೆ—ಎರಡು ಕಜ್ಜಾಯ, ಎರಡು ರವೆಉಂಡೆ ಅಷ್ಟೆ"

"ಓಹೋ ಈ ಹೊಸ ಅಮ್ಮಾವ್ರಿಗೆ ತಿನ್ನಸೋಕೆ ಅನ್ನು."

"ಮತ್ತೇ ನೋಡು ಹಾಸ್ಯ ಮಾಡ್ತೀಯಲ್ಲ."

"ಅವರು ನಿನಗೆ ಸೀ ತಿನ್ನಿಸಿದರೆ ನೀನೂ ಅವರಿಗೆ ಸೀ ತಿನ್ನಿಸ ಬೇಡವೆ."

"ಏನಾದ್ರೂ ಹೇಳ್ಕೋಪ್ಪ, ನಿನ್ನ ಹತ್ರ ಮಾತ್ನಾಡೋಕಾಗೋಲ್ಲ"

"ಅಲ್ವಯ್ಯ. ಈಗ ಸತ್ತುಹೋದೋರ್ನೆಲ್ಲಾ ನೀವು ಸ್ವರ್ಗಕ್ಕೆ ಸೇರಿಸ್ತಿದೀರಲ್ಲ, ನೀವು ಸತ್ರೆ ನಿಮ್ಮನ್ನ ಯಾರಯ್ಯ ಸೇರಿಸ್ತಾರೆ."

"ನಮ್ಮಂಥೋರು ನಮ್ಮನ್ನೂ ಸ್ವರ್ಗಕ್ಕೆ ಸೇರಿಸ್ತಾರೆ."

"ಅಂದ್ರೆ ನಿಮ್ಮ ಹೆಸರು ಹೇಳಿ ನಿಮಂತ್ರಣ ಮಾಡಿ, ನಿಮಂತ್ರಣದ ತಿಂಡೀನ ರಂಡೇರಿಗೆ ತಗೊಂಡ್ಹೋಗಿ ಕೊಟ್ಟು, ಅವರೊಂದಿಗೆ ಸುಖ ಅನು ಭವಿಸ್ತಾರೆ ಅಂತ ಹೇಳು."

"ಸಾಕು ಸುಮ್ನಿರಯ್ಯ."

"ಸಾರ್ಥಕವಾಯ್ತು. ಸನಾತನಧರ್ಮ ನಿಮ್ಮಿಂದಲಾದ್ರೂ ಉಳ್ಕೊಂಡಿದೆಯಲ್ಲ!"

"ಯಾಕೆ. ನನಗೆ ಮಂತ್ರ ಹೇಳೋಕೆ ಬರೋದಿಲ್ಲ ಅಂತ್ಲೇ ನಿನ್ನ ಅಭಿಪ್ರಾಯ."

"ಬರುತ್ತೇಪ್ಪ ಬರುತ್ತೆ. ನಿನಗೆ ಯಾವುದು ಬರೋದಿಲ್ಲ ಹೇಳು"

"ಮತ್ತೆ ಸನಾತನಧರ್ಮಕ್ಕೆ ಆಗಿರೋ ಮುಕ್ಕೇನು."

"ಏನೂ ಇಲ್ಲ. ಅದನ್ನೇ ಹೇಳಿದೆನಲ್ಲ ಉಳ್ಕೊಂಡಿದೆ ಅಂತ, ಉಳಿಸಿ ದೀರಿ ಅಂತ."

ಮಾತು ಸಾಗುತ್ತಿದ್ದಂತೆ ದಾರಿಯೂ ಸವೆಯುತ್ತಿತ್ತು. ಅವರು ಗವೀಪುರದ ಛತ್ರದ ಬಾಗಿಲಿಗೆ ಬಂದು ನಿಂತರು. ಗೋಪಾಲಿಯನ್ನು ಕಂಡ ಕೂಡಲೇ ಗುಂಡಮ್ಮ ಧಾವಿಸಿ ಬಂದು ಅವರನ್ನು ಛತ್ರದ ಕೋಣೆ

ಯೊಂದಕ್ಕೆ ಕರೆದುಕೊಂಡು ಹೋದಳು. ಗುಂಡಮ್ಮ ಆ ವೇಳೆಗಾಗಲೇ ರಂಗಮ್ಮನನ್ನು ಕರೆತಂದಿದ್ದಳು.

ರಂಗಮ್ಮನನ್ನು ನೋಡಿದ ಕೂಡಲೇ ಶಾಸ್ತ್ರಿಯ ಮುಖ ಬಿಳಿಚಿಕೊಂಡಿತು. ರಂಗಮ್ಮನೂ ತಲೆ ತಗ್ಗಿಸಿದಳು. ಆದರೂ ಚಾಣಾಕ್ಷ ಶಾಸ್ತ್ರಿ ಅದೊಂದನ್ನೂ ತೋರಗೊಡದೆ ರಂಗಮ್ಮನನ್ನು ಕುರಿತು ಧೈರ್ಯವಾಗಿ

"ಏನು ಅತ್ತೆಮ್ಮನವರೇ, ದೇವಸ್ಥಾನಕ್ಕೆ ಬಂದಿದ್ದಿರಾ?"

ರಂಗಮ್ಮ ಏನೊಂದೂ ಉತ್ತರವೀಯಲಿಲ್ಲ. ತಗ್ಗಿಸಿದ ತಲೆಯನ್ನು ಅವಳು ಮೇಲಕ್ಕೆತ್ತಲಿಲ್ಲ.

ಗೋಪಾಲಿ–ಗುಂಡಮ್ಮ ಮುಖ ಮುಖ ನೋಡಿಕೊಂಡರು.

ಪಾಪ ಗುಂಡಮ್ಮನಿಗೆ ತಿಳಿದಿರಲಿಲ್ಲ ರಂಗಮ್ಮ, ಶಾಸ್ತ್ರಿಯ ಅತ್ತೆಯೆಂದು, ಗೋಪಾಲಿಗಂತೂ ಆಕೆಯ ಅಳಿಯನನ್ನೇ ತಾನು ಕರೆ ತಂದಿರುವೆನೆಂದು ಮೊದಲೇ ತಿಳಿಯದು.

"ನಡೀರಿ. ದೇವಸ್ಥಾನಕ್ಕೆ ಹೋಗಿ ಗಂಗಾಧರೇಶ್ವರ ಸ್ವಾಮಿಗೆ ತೆಂಗಿನಕಾಯಿ ಒಡಸಿ ಮಂಗಳಾರತಿ ಮಾಡಿಸಿಕೊಂಡು ಮನೇಗೆ ಹೋಗೋಣ" ಶಾಸ್ತ್ರಿ ಚಡಪಡಿಸುತ್ತ ಹೊರಹೊರಟ.

ರಂಗಮ್ಮನೂ ಗುಂಡಮ್ಮನನ್ನು ಸಿಗಿದು ಹಾಕುವವಳಂತೆ ದುರ ದುರನೆ ನೋಡಿ ತುಟಿಪಿಟಕ್ಕೆನ್ನದೆ ಅಳಿಯನನ್ನು ಹಿಂಬಾಲಿಸಿದಳು.

೧೨

ಇಂತಹವೆಷ್ಟೋ ಘಟನೆಗಳು ನಡೆದುಹೋಗಿದ್ದವು ಗೋಪಾಲಿಯ ಜೀವನದಲ್ಲಿ. ಗಂಡ - ಹೆಂಡಿರನ್ನು, ಮಾವ - ಸೊಸೆಯರನ್ನು, ಅಣ್ಣ - ತಂಗಿಯರನ್ನು, ಕಡೆಗೆ ತಾಯಿ – ಮಕ್ಕಳನ್ನು ಸಹ ಅವನಿಗರಿವಿಲ್ಲದಂತೆ ಭೇಟಿ ಮಾಡಿಸಿದ್ದ ನಿದರ್ಶನಗಳೂ ಇದ್ದವು. ಪಾಪ ಅವನೇನು ತಾನೆ ಮಾಡಿಯಾನು. 'ಹಾಳು ಕಸುಬಿಗೆ ಬೆಂಕಿ ಹಾಕಿತು' ಎಂದು ತಲೆ ಕೆರೆದು ಕೊಳ್ಳುತ್ತಿದ್ದ ಅಂತಹ ಸಂದರ್ಭಗಳಲ್ಲಿ. ಹಾಗೆಂದು ಆ ಕಸುಬನ್ನೂ ಬಿಡುವಂತಿರಲಿಲ್ಲ. ಅದೇ ಅವನ ಜೀವನಾಧಾರವಾಗಿತ್ತು. ಅವನು ಬಿಟ್ಟರೂ ಇತರರು ಅವನನ್ನು ಬಿಡುವಂತೆಯೂ ಇರಲಿಲ್ಲ.

ಅದೊಂದು ಮಧ್ಯಾಹ್ನ. ತನ್ನ ಕಛೇರಿಯ ಕಲ್ಲುಬೆಂಚಿನ ಮೇಲೆ ನಿದ್ದೆಮಾಡುತ್ತ ಕುಳಿತಿದ್ದ ಗೋಪಾಲಿ.

ರಾಜಣ್ಣ ಬಂದು 'ಗೋಪಾಲಿ, ಏ....ಗೋಪಾಲಿ' ಎಂದು ಮೂರು ನಾಲ್ಕುಸಾರಿ ಬೊಬ್ಬೆಹಾಕಿದ ಮೇಲೆಯೇ ಅವನಿಗೆ ಎಚ್ಚರವಾದುದು. ಬೆಚ್ಚಿಬಿದ್ದು ಮುಚ್ಚಿದ್ದ ಕಣ್ಣನ್ನು ಬಿಚ್ಚಿದ ಗೋಪಾಲಿ.

"ಏನು ನಿದ್ದೇ ಮಾಡ್ತೀಯೋ ಈ ಹಾಳು ಹಗಲಿನಲ್ಲಿ. ಅದರಲ್ಲೂ ಈ ಧಡಬಡ ಗದ್ದಲದಲ್ಲಿ"

—ಎಂದು ಒದರಾಡಿದ ರಾಜಣ್ಣ.

"ಯಾರು ರಾಜಣ್ಣನೇನೋ ?"

—ಇನ್ನೂ ನಿದ್ದೆಯ ಜೊಂಪು ಹೋಗಿರಲಿಲ್ಲ ಗೋಪಾಲಿಗೆ.

"ಏನು ಮಾಡೋದಪ್ಪ. ರಾತ್ರಿ ಹೊತ್ತಂತೂ ಆ ಹಾಳಾದೋರು ಗಿರಾಕಿಗಳು ನಿದ್ದೆಗೇ ಬಿಡೋಲ್ಲ. ಅವನ್ನ ಕಟ್ಕೊಂಡು ಗಲ್ಲಿ ಗಲ್ಲಿ ಸುತ್ತೋದೇ ಆಗುತ್ತೆ. ಇನ್ನ ಇಷ್ಟು ಹೊತ್ನಲ್ಲಾದ್ರೂ ಒಂದಿಷ್ಟು ನಿದ್ದೆ ಮಾಡಬಾರದೇನಪ್ಪ"

"ಮಂಗ್ಳೂರ್ಕಡೆಯಿಂದ ಮೂರ್ಜನ ಹುಡುಗೀರ್ನ ಕರ್‍ಕೊಂಡ್ಬಂದೀದಾನೆ ಯಾವನೋ ಒಬ್ಬ."

ಆ ಮಾತು ಕೇಳಿ ಗೋಪಾಲಿ ಬೆನ್ನು ನೆಟ್ಟಗೆ ಮಾಡಿ ಕುಳಿತು ಮತ್ತೆ ಕೇಳಿದ:

"ಏನು ? ಮೂರ್ಜನ ಹುಡುಗೀರ್ನೇ ?"

"ಹೌದೋ ಮಾರಾಯ. ಯಾಕಿನ್ನೂ ನಿನಗೆ ನಿದ್ದೆಯ ಅಮಲು ಇಳೀಲಿಲ್ವೆ."

"ಇಳೀತಪ್ಪ ಇಳೀತು........ಹುಡುಗೀರು ಚೆನ್ನಾಗಿದ್ದಾರೇನಯ್ಯ ?"

"ಅವರ ಚೆನ್ನಾಚಾರ ಕಟ್ಕೊಂಡು ನಮಗೇನು ?"

"ಒಳ್ಳೆ ಅಡ್ಡಕಸಬಿ ಮಾತಾಡಿದ ಹಾಗೆ ಮಾತಾಡ್ತೀಯಲ್ಲೋ."

"ಯಾಕೆ ?"

"ನೀನಿನ್ನೂ ಹುಡುಗ. ನಿನಗೇನೂ ಗೊತ್ತಾಗಲ್ಲ."

"ಅಂದರೆ ?"

"ಅಂದರೆ........ನಿನಗೆ ಅರ್ಥ ಆಗೋಹಾಗೆ ಹೇಳಬೇಕು ಅನ್ನು. ನಮ್ದೂ ಒಂದು ಕೈ ನೊದಲು ನೋಡ್ಕೊಳ್ಳೋಣ ಅಂತ ಕೇಳ್ದೆ. ತಿಳೀತೆ ?"

"ನಿನಗೂ ಹುಡುಗೀರ ಷೋಕಿ ಇದೆ ಅನ್ನೂ "

"ಜೇನುಗೂಡು ಬಿಚ್ಚೋನು ಜೇನುತುಪ್ಪ ನೆಕ್ದೇ ಇರೋಕಾಗುತ್ತೇನೋ," ನಗುತ್ತ ಅಂದ ಗೋಪಾಲಿ.

"ಹ್ನು. ಹುಡುಗೀರು ಒಳ್ಳೆ ಪರಮಾಯಿಷಿಯಾಗಿದ್ದಾರೆ."

—ರಾಜಣ್ಣ ಹೇಳಿದ.

"ಮಂಗಳೂರು ಕಡೆಯೋರು ಅಂದ ಮೇಲೆ ಲಕ್ಷಣವಾಗಿಯೇ ಇರಬೇಕು."

"ಲಕ್ಷಣವಾಗಿಯೇನೋ ಇದಾರೆ. ಆದರೆ........"

"ಏನು ಆದರೆ........?"

"'ಆಸ್ತಿ' ಎಷ್ಟೆಷ್ಟು ಇಟ್ಕೊಂಡಿದಾರೋ ?"

"ಅದಕ್ಕೆಲ್ಲಾ ನಮ್ಮ ಪಂಡಿತರಿದ್ದಾರೆ, ಬಿಡು ಈಗೆಲ್ಲಿಳಕೊಂಡಿದ್ದಾರೆ ಅವರು ?"

"ದುಡ್ಡಿಗೆ ಲಾಟ್ರಿ ಹೊಡೆದಿರೋ ಹಾಗೆ ಕಾಣುತ್ತೆ. ಪೂರ್ಣಯ್ಯನ ಛತ್ರದಲ್ಲಿ ಇಳಕೊಂಡಿದಾರೆ."

"ಹೇಗೆ ಪತ್ತೆ ಮಾಡಿದ್ಯೋ ಅವರ್ನ ?"

"ಚಿಕ್ಕ ಲಾಲಬಾಗ್ನಲ್ಲಿ ಕೂತಿದ್ದೆ. ಬೆಳಗ್ಗೆ ಮೈಸೂರು ಗಾಡೀಲಿ ಅವರು ಬಂದ್ಹಾಗಿದೆ. ಗಂಟುಮೂಟೆ ಹೊತ್ಕೊಂಡು ಏನೋ ಗುಸಗುಸ ಮಾತಾಡ್ತ ಛತ್ರದ ಕಡೆಗೆ ಹೋಗ್ತಾ ಇದ್ರು. ನನಗೂ ಅನುಮಾನ ಬಂದು ಅಷ್ಟು ದೂರ ಅವರ್ನ ಹಿಂಬಾಲಿಸ್ದೆ."

"ಏನಂತ ಮಾತಾಡ್ತಿದ್ರು ?"

"ಆ ಜೊತೇಲಿ ಬಂದಿದ್ದಾತ ಹೇಳ್ತಾ ಇದ್ದ 'ಬೆಂಗಳೂರು ದೊಡ್ಡೂರು. ಒಳ್ಳೆ ಗಿರಾಕಿಗಳೂ ಸಿಕ್ತಾರೆ' ಅಂತ."

"ಹಾಗಾದರೆ ಕಸುಬಿನೋರೇ ಅಂದ್ಹಾಗಾಯ್ತು."

"ಅಡ್ಡಿಯಿಲ್ಲದೆ. ಅದಕ್ಕೇ ನಾನು ಹೇಳಿದ್ದು–ಎಷ್ಟೆಷ್ಟು 'ಆಸ್ತಿ' ಇಟ್ಕೊಂಡಿದಾರೋ ಅಂತ."

"ಜತೇಲಿ ಬಂದಿರೋನೂ ನಮ್ಮ ಬಳಗದೋನೇ ಏನೋ"

"ಆದರೂ ಪರವಾಗಿಲ್ಲ. ಬಕ್ರ ಇದ್ದ ಹಾಗಿದಾನೆ. ಬೆಂಗಳೂರೂ ಅಷ್ಟಾಗಿ ಗೊತ್ತಿರೋ ಮಟ್ಟು ಕಾಣೆ. ದಾರೀಲಿ ಸಿಕ್ಕಿದೋರ್ನ ಛತ್ರ ಎಲ್ಲಿದೆ ಅಂತ ಕೇಳ್ತಾ ಇದ್ದ. ಅವನ್ನ ಸೀನು ಬುಟ್ಟೀಗೆ ಹಾಕ್ಕೊಳ್ಳೋದು ಏನೂ ಕಷ್ಟವಾಗಲ್ಲ."

"ನಮಗೆ ಬಂದದ್ರಲ್ಲಿ ಅವನಿಗೂ ಒಂದು ಪಾಲು ಕೊಟ್ರಾಯ್ತು ಬಿಡು."

"ಅಷ್ಟೆ."

"ಸರಿ. ನಡಿ ಹೊರಡೋಣ. ಪಾಪ ದುಡ್ಡಿದ್ಯೋ ಇಲ್ವೊ, ಊಟ ಮಾಡಿದಾರೋ ಇಲ್ವೋ ನೋಡಿ ಒಂದು ವ್ಯವಸ್ಥೆ ಮಾಡೋಣ."

ರಾಜಣ್ಣ ಗೋಪಾಲಿಯ ಒಬ್ಬ ಶಿಷ್ಯ. ಅವನಂತಹ ನಾಲ್ಕಾರು ಜನನನ್ನು ಈ ಕೆಲಸಕ್ಕಾಗಿಯೇ ನೇಮಿಸಿಕೊಂಡಿದ್ದ ಗೋಪಾಲಿ.

ಅವರಿಗೂ ಒಂದಷ್ಟು ಸಂಭಾವನೆ ಕೊಡುತ್ತಿದ್ದ ಅವರ ಕೆಲಸಕ್ಕೆ. ಪಾಪ ನಿರುದ್ಯೋಗಿ ಹುಡುಗರು. ಅವನಿಗೆ ಸಹಾಯವಾಗಿ ತಮ್ಮ ಜೀವನವನ್ನೂ ನಡೆಸಿಕೊಳ್ಳುತ್ತಿದ್ದರು.

ಗೋಪಾಲಿ ರಾಜಣ್ಣನ ಸಂಗಡ ಪೂರ್ಣಯ್ಯನ ಛತ್ರದ ಕಡೆ ಹೊರಟ. ದಾರಿಯಲ್ಲಿ ಸೇಂದಿ ಕಂಟ್ರಾಕ್ಟರ್ ಸಣ್ಣಯ್ಯಪ್ಪ ಸಿಕ್ಕಿ ಗೋಪಾಲಿಯನ್ನು ಮಾತನಾಡಿಸಿದ:

"ಏನೋ ಗೋಪಾಲಿ, ಯಾವುದಾನಾ ಒಸ ಮಾಲೈತೇನೋ ?"

"ಹ್ಞ. ಬಂದಿದೆ ಒಂದೆರಡು ಮಂಗ್ಳೂರ್ಕಡೇಯಿಂದ."

"ಅಂಗಾರೆ ಯಾವಾಗ ಏರ್ಪಾಡು ಮಾಡಿಕೊಡ್ತಿ ?"

"ನೀವು ಯಾವಾಗ ಅಂದ್ರೆ ಆವಾಗ"

"ಈವತ್ತು ಚಂಜೇಗೆ ?"

"ಈವತ್ತು ಆಗಲ್ಲ. ನಾಳೆ ಇಟ್ಕೊಳ್ಳಿ."

"ನಾಳೆ ನಂಗೆ ಪುರಸತ್ತು ಸಿಕ್ಕಾಕಿಲ್ಲಪ್ಪ. ನಮ್ಮ ಯಾಪಾರದ ಸಂಗದೋರು ದಿವಾನ ಸಾಯೇಬರಿಗೆ ಟೀಪಾರ್ಟಿ ಮಡಗವ್ರೆ."

"ಹಾಗಾದ್ರೆ ನಾಡಿದ್ದು ಆಗಬಹುದಲ್ಲ."

"ಆಗಬೋದು, ಆಗಬೋದು"

—ಎನ್ನುತ್ತ ಕಿಸೆಯಿಂದ ಐದು ರೂಪಾಯಿನ ಹತ್ತು ನೋಟುಗಳನ್ನು ತೆಗೆದು ಗೋಪಾಲಿಯ ಕೈಲಿ ಹಾಕುತ್ತ—

"ಎಲ್ಲಾ ಏರ್ಪಾಟು ಮಾಡಬುಡು. ಅಜಂತ ಓಟೆಲ್ನಾಗೆ, ಓದ್ದಪ ಮಾಡ್ದಂಗೆ ಒಂದು ರೂಂ ಬಾಡಿಗೆಗೆ ತಗೊ. ನಾನು ಚಂಜೆ ಕಡೇ ಬಂದು ಬುಡ್ತೀನಿ"

—ಎಂದು ಹೇಳಿ ಗೋಪಾಲಿಯ ಮುಖವನ್ನೊಮ್ಮೆ ದೃಷ್ಟಿಸಿ ನೋಡಿ, ಅರ್ಥಪೂರ್ಣವಾದ ಹುಸಿನಗೆ ನಕ್ಕು ಗುಜ್ಜಾನೆ ಮರಿಯಂತಿದ್ದ ದೇಹವನ್ನು ತೂಗಾಡಿಸುತ್ತ ಹೊರಟುಹೋದ ಸಣ್ಣಯ್ಯಪ್ಪ.

ಗೋಪಾಲಿ ಅವನು ಕೊಟ್ಟ ನೋಟುಗಳನ್ನು ಕಿಸೆಗೆ ಸೇರಿಸುತ್ತ ರಾಜಣ್ಣನನ್ನು ಕುರಿತು ಹೇಳಿದ—

"ನೋಡೋ ಮರಿ. ನಾವಿನ್ನೂ ಮಾಲಗಳ್ನ ನೋಡಿ ಮಾತಾಡ್ಸಿಲ್ಲ. ಆಗಲೇ ಅಡ್ವಾನ್ಸ್ ಗಿರಾಕಿ"

"ನಂಗೂ ಗೊತ್ತು ಕಣೋ ಗೋಪಾಲಿ ಈ ಸಣ್ಣಯ್ಯಪ್ಪ. ನಮ್ಮ ಚಿಕ್ಕಪ್ಪನ ಮನೇ ಹತ್ರಾನೇ ಇವರ ಮನೇನೂ, ಮಲ್ಲೇಶ್ವರದಲ್ಲಿ. ಒಳ್ಳೆ ಭಂಗಾರದ ಬೊಂಬೆ ಇದ್ದ ಹಾಗಿದಾಳೆ ಇವನ ಹೆಂಡತಿ. ಅವಳದೂ ಇದೇ ಬಾಳು. ಆ ಲಾಂಗ್‌ಕೋಟು ಲಾಯರಿ ಲಿಂಗಪ್ಪನ್ನ ಖಾಯಮ್ಮಾಗಿ ಇಟ್ಕೊಂಡಿದಾಳಂತೆ."

"ಸರಿ. ಗಂಡನ ಹಾಗೆ ಹೆಂಡ್ತಿ ಅನ್ನು. ಅವನು ಯಾವೊನೋ ಅವನು, ಆ ಲಾಂಗ್‌ಕೋಟು ಲಾಯರಿ ಲಿಂಗಪ್ಪ ಅನ್ನೋನು. ನಾನು ನೋಡ್ದೆ ಇರೋನು ಈ ಊರಲ್ಲಿ?"

"ನೀನೂ ನೋಡಿದೀಯಪ್ಪ ಬಳೇಪೇಟೇಲಿ ಅವನ ಆಪೀಸು."

"ಅವನೇನೋ....ಆ ಕರಿ ಕೋಣೆಯ. ಹೋದ ವರ್ಷ ಅವನು ಹೆಂಡ್ತಿ ಯಾರ ಜೊತೇಲೋ ಓಡಿಹೋದ್ಲಲ್ಲ. ಅವನ್ನೇನೊ ನೀನು ಹೇಳೋದು."

"ಹೌದು ಮತ್ತೆ."

"ಸರಿ ಸರಿ. ಗೊತ್ತಾಯ್ತು ಬಿಡು."

"ಅಲ್ಲ. ಈ ಸಣ್ಣಯ್ಯಪ್ಪ ಒಳ್ಳೆ ಕೆಲಸ ಅಂದ್ರೆ ಬಿಡಿಕಾಸು ಬಿಚ್ಚಲ್ಲ. ಹುಡುಗೀರ್ಗೆ ಅಂದರೆ ಎಷ್ಟು ಧಾರಾಳ ತೋರಸ್ತಾನೆ?"

"ಕಾಲಾನೆ ಹಾಗಿದ್ಯಪ್ಪ. ಗಂಡಸರಿಗೆ ಹೆಂಗಸರ ಷೋಕು. ಹೆಂಗಸರಿಗೆ ಗಂಡಸರ ಷೋಕು."

ಮಾತಾಡುತ್ತ ದಾರಿ ಸಾಗುತ್ತಿದ್ದಂತೆಯೇ ಅವರು ಛತ್ರದ ಸಮೀಪಕ್ಕೆ ಬಂದರು. ಮಂಗಳೂರಿನ ಹುಡುಗಿಯರ ಸಂಗಡ ಬಂದಿದ್ದಾತ ಛತ್ರದ ಹೊರ ಪಡಸಾಲೆಯಲ್ಲಿ ಕಂಬಕ್ಕೆ ಒರಗಿ ಕುಳಿತು ಪುಟ್ಟಿಯ ಗಂಡ ತಿರುಮಲಯ್ಯನ ಕೂಡ ಏನೋ ಮಾತು ನಡೆಸಿದ್ದ.

ರಾಜಣ್ಣ ದೂರದಿಂದಲೇ ಗೋಪಾಲಿಗೆ ಅವನ ಗುರುತುಮಾಡಿ ತೋರಿಸಿದ.

ಗೋಪಾಲಿ ರಸ್ತೆಯಲ್ಲಿ ಹೋಗುತ್ತಿರುವವನಂತೆ ನಟಿಸುತ್ತ ಇದ್ದ

ಕ್ಕಿದ್ದಂತೆ ಛತ್ರದ ಮೆಟ್ಟಿಲ ಬಳಿ ನಿಂತು ಆ ಮಂಗಳೂರಿನಾತನನ್ನು ಕುರಿತು—

"ಏನ್ರೀ. ಯಾವಾಗ ಬಂದ್ರಿ ಮಂಗಳೂರಿಂದ ಎಂದ."

ಮಂಗಳೂರಿನವ ತಬ್ಬಿಬ್ಬಾಗಿ ಗೋಪಾಲಿಯ ಮುಖ ನೋಡ ಹತ್ತಿದ.

"ಯಾಕೆ ಗುರುತು ಹತ್ತಲಿಲ್ಲವೆ ? ಇಷ್ಟುಬೇಗ ಮರೆತು ಬಿಟ್ಟಿರಾ ?" ಗೋಪಾಲಿ ಕೇಳಿದ.

"ಯಾ......,.ಯಾರೋ ಗೊತ್ತಾಗಲಿಲ್ಲ." ಮಂಗಳೂರಿನವನು ಉತ್ತರಿಸಿದ.

"ಅರೇ. ಮಂಗಳೂರಲ್ಲಿ ನನ್ನ ನೋಡಿರಲಿಲ್ಲವೇ ನೀವು, ಹೋದ ವರ್ಷ, ಜಯಾಕೆಫೇಲಿ, ವಿಶ್ವನಾಥಮಲ್ಯ ಅವರ ಜತೇಲಿ, ಗೋಪಾಲಿ ಅಂತ"

ಯಾವ ಮಲ್ಯನೋ ಯಾವ ಗೋಪಾಲಿಯೋ ಅವನಿಗೇನೂ ನೆನಪು ಬರಲಿಲ್ಲ. ನೋಡಿದ್ದರಲ್ಲವೇ ನೆನಪಿಗೆ ಬರುವುದು. ಆದರೂ ಅವನೂ ಬುದ್ಧಿವಂತ. ಎಷ್ಟಾದರೂ ಕಸುಬಿನವನೇ ಅಲ್ಲವೆ ಗುರುತು ಪರಿಚಯ ಗಳಿಲ್ಲದ ಇಷ್ಟು ದೊಡ್ಡ ಊರಿನಲ್ಲಿ ತಾನಾಗಿಯೇ ಪರಿಚಯಮಾಡಿ ಕೊಳ್ಳಲು ಬರುತ್ತಿರುವ ಒಬ್ಬಾತನನ್ನು ಬಿಡಬಾರದೆಂದು ಅವನು ಯೋಚಿ ಸಿರಬೇಕು. ಅವನಂದ—

"ಹೌದಲ್ರೀ ಮಾರಾಯ್ರೆ. ಥಟ್ಟನೆ ಹಾಳು ನೆನಪಿಗೆ ಬರಲಿಲ್ರಿ. ನೀವಾದರೂ ಮರೆತಿಲ್ಲವಲ್ಲ"

"ಒಂದು ಸಾರಿ ನೋಡಿದೋನ್ನ ಮತ್ತೆ ಎಷ್ಟುದಿನ ಆದ್ರೂ ಮರೆ ಯೋದು ನನ್ನ ಸ್ವಭಾವದಲ್ಲಿಲ್ರಿ."

—ಎಂದ ಗೋಪಾಲಿ. 'ಭೇ. ನೀನೂ ನನ್ನ ಹಾಗೆಯೇ ಘಾಟಿ ಇದ್ದೀಯ' ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತ.

"ಏನು ಚೆನ್ನಾಗಿದ್ದೀರ ?"

—ಮತ್ತೆ ಗೋಪಾಲಿಯೇ ಮಾತಿಗೆ ಪ್ರಾರಂಭಿಸಿದ. ಆ ಮಂಗಳೂರಿ ನವ ಮೌನವಾಗಿದ್ದುದನ್ನು ಕಂಡು.

“ಹೀಗಿದ್ದೀನ್ರೀ ಮಾರಾಯ್ರೆ.”

“ಈಗೇನು ಬೆಂಗಳೂರಿಗೆ ಬಂದದ್ದು ?”

“ಹಾಗೇ ಈ ಪ್ರಾಂತ ನೋಡಿರ್ಲಿಲ್ರಿ. ನೋಡ್ಕೊಂಡು ಹೋಗೋಣ ಅಂತ ಬಂದಿವಿ.”

“ಬಹಳ ಒಳ್ಳೇದು. ಏನು ಒಬ್ಬರೇ ಬಂದಿದೀರಾ ?”

“ಇಲ್ರಿ ಮೂರು ಹೆಣ್ಣುಮಕ್ಕಳೂ ಬಂದಿದಾರ್ರೀ ಜತೆಯಾಗೆ.”

“ಎಲ್ಲಿಳಕೊಂಡಿದೀರಿ.”

“ಇಲ್ಲೆ ಛತ್ರದಾಗೇ ಮಾರಾಯ್ರೆ. ಈವತ್ತು ಮುಂಜಾನೆ ಗಾಡೀಲಿ ತಾನೆ ಬಂಡವಲ್ರಿ ಮಾರಾಯ್ರೆ.”

“ಅಲ್ಲ. ಬರೋದಕ್ಕೆ ಮುಂಚೆ ನಮಗೊಂದು ಪತ್ರಾನಾರು ಹಾಕ ಬಾರದಿತ್ತೇನು ಮಾರಾಯ್ರೆ ?”

—ಗೋಪಾಲಿ ಕೇಳಿದ, ‘ಮಾರಾಯ್ರೆ’ ಎನ್ನುವಾಗ ಬಂದ ನಗು ವನ್ನು ಪ್ರಯತ್ನಪೂರ್ವಕವಾಗಿ ತಡೆದುಕೊಂಡು.

“ನಿಮ್ಮ ವಿಳಾಸ ನಮಗೆ ಅರಿವಿರಲಿಲ್ಲ. ಮಾರಾಯ್ರೆ”

“ಒಳ್ಳೇದು ಅಕಸ್ಮಾತ್ತಾಗಿ ಈ ಭೇಟಿನಾದ್ರೂ ಆಯ್ತಲ್ಲ.”

ತುಸುಹೊತ್ತು ಯಾರೂ ಮಾತನಾಡಲಿಲ್ಲ. ಅನಂತರ ಗೋಪಾ ಲಿಯೇ ಅವನನ್ನು ಕರೆದ:

“ಬರ್ರಿ. ಹಾಗೇ ವಂದಷ್ಟು ಕಾಫೀನಾರ ಕುಡಿದು ಬರೋರಂತೆ.”

ಮಂಗಳೂರಿನವನಿಗೂ ಹೊಟ್ಟೆಯಲ್ಲಿ ತಾಳ ಕುಟ್ಟುತ್ತಿತ್ತು. ಮರು ಮಾತನಾಡದೆ ಗೋಪಾಲಿಯನ್ನು ಹಿಂಬಾಲಿಸಿದ. ಮೂವರೂ ಬಳೇ ಪೇಟೆ ಅಣ್ಣಯ್ಯಪ್ಪನ ಕಾಫಿಕ್ಲಬ್ಬಿಗೆ ಹೋದರು. ಆ ಕಾಲಕ್ಕೆ ಬಳೇಪೇಟೆ ಅಣ್ಣಯ್ಯಪ್ಪನ ಕಾಫಿ ಕ್ಲಬ್ಬಿನ ಮಸಾಲೆ ದೋಸೆ ಎಂದರೆ ಬೆಂಗಳೂರಿಗೆಲ್ಲಾ ಬಹಳ ಹೆಸರಾಗಿದ್ದಿತು. ದೋಸೆಗೆ ಹಾಕುವ ತುಪ್ಪದ ಘಮಘಮ ವಾಸನೆ ರಸ್ತೆಯಲ್ಲಿ ಓಡಾಡುತ್ತಿದ್ದ ಜನರ ಮೂಗಿನ ಹೊಳ್ಳೆಗಳನ್ನೂ ಬಿರಿಸುತ್ತಿತ್ತು. ಎಲ್ಲವೂ ಚೆನ್ನಾಗಿದ್ದ ಕಾಲ ಅದು. ಜನಕ್ಕೆ ಜೀವನಾಧಾರವಾಗಿದ್ದ ಪದಾರ್ಥಗಳ ಬೆಲೆಗಳು ಈಗಿನಂತೆ ಬೆಟ್ಟಕ್ಕೇರಿರಲಿಲ್ಲ. ಅಪ್ಪಟ ತುಪ್ಪದಲ್ಲಿ

ಮಾಡಿದ ಮಸಾಲೆ ದೋಸೆ ಕೇವಲ ಒಂದಾಣೆ ಬೆಲೆಗೆ ಸಿಗುತ್ತಿತ್ತು. ಇತರ ಪದಾರ್ಥಗಳ ಬೆಲೆಯೂ ಅಷ್ಟೆ. ಬಹಳ ಸುಲಭವಾಗಿತ್ತು.

ಗೋಪಾಲಿ ಮೂವರಿಗೂ ಒಂದೊಂದು ಮಸಾಲೆ ದೋಸೆಗೆ ಆರ್ಡರ್ ಮಾಡಿ ಒಂದೊಂದು ಪ್ಲೇಟು ಕೇಸರಿಭಾತು ತರುವಂತೆ ಮಾಣಿಗೆ ಹೇಳಿದ. ಕೇಸರಿಭಾತು ತಿಂದು ಮುಗಿಸಿದ್ದಾಯಿತು. "ದೋಸೆ ಇನ್ನೂ ಬೇಯ್ತಾ ಇದೆ ಸಾರ್" ಎಂದ ಮಾಣಿ. "ಇನ್ನೇನಿದ್ಯೋ ಈವತ್ತು ಮಾಡಿದ್ದು" ಗೋಪಾಲಿ ಕೇಳಿದ.

"ಆಂಬೊಡೆ, ಮಸಾಲ್ವಡೆ, ಪಕೋಡ, ಬೊಂಬಾಯಿ ಬೋಂಡ ಖಾರಾಸೇವು, ಖಾರದವಲಕ್ಕಿ, ಖಾರಾಬೂಂದಿ, ಓಂಪುಡಿ, ಬಜ್ಜಿ, ಬಾಸುಂದಿ, ಸೀಬೂಂದಿ, ಮೈಸೂರು ಪಾಕು, ಜಿಲೇಬಿ, ಜಾಂಗೀರು, ರಸಗುಲ್ಲ, ಜಾಮೂನೂ........"

ಬಡಬಡ ಎಂದು ತಡಬಡೆಯಿಲ್ಲದೆ ಉಸಿರು ಹಿಡಿದುಕೊಂಡು ಒದರ ತೊಡಗಿದ ಮಾಣಿ.

"ಅರೆರೆರೆ........ನಿದಾನವಾಗಿ ಹೇಳೋ, ಒಳ್ಳೆ ಮೇಲ್ ಟ್ರೇನ್ ಹೋದ್ಹಾಗೆ ಹೋಗ್ತಿದೀಯಲ್ಲೋ, 'ಫೀಮೇಲ್' ಟ್ರೇನ್ ಹೋದ್ಹಾಗೆ ಹೋಗೋ"

—ಎಂದು ಗೋಪಾಲಿ ನಗುತ್ತ ಸ್ಪೀಡಿನಿಂದ ಹೋಗುತ್ತಿದ್ದ ಮಾಣಿಯ ನಾಲಿಗೆಗೆ ಬ್ರೇಕ್ ಹಾಕಿದ.

"ಏನು ಬೇಕ್ಸಾರ್" ಮಾಣಿ ಉಸಿರಾಡುತ್ತ ಕೇಳಿದ

"ಏನೂ ಬೇಡ. ಒಂದೊಂದು ಪ್ಲೇಟು ಚೌಚೌ ತಂದುಕೊಟ್ಬಿಡು."

—ಗೋಪಾಲಿಯೆಂದ.

ಮಾಣಿ ಪ್ಲೇಟುಗಳಲ್ಲಿ ಚೌಚೌ ತಂದಿರಿಸಿದ. ಚೌಚೌ ಬಾಯಿಗೆ ಎಸೆದುಕೊಳ್ಳುತ್ತ ಮಂಗಳೂರಿನವನನ್ನು ಕುರಿತು ಗೋಪಾಲಿ ಕೇಳಿದ :

"ಅಂದಹಾಗೆ, ನಿಮ್ಮ ಹೆಸರು ಎಂಥದೋ ನೋಡಿ, ಗಂಟಲಲ್ಲಿದೆ ಬಾಯಿಗೆ ಬರದು."

"ವೈಕುಂಠಯ್ಯ ಅಂತ."

"ಹೌದು ಹೌದು ವೈಕುಂಠಯ್ಯ. ಈಗ ಚೆನ್ನಾಗಿ ನೆನಪಿಗೆ ಬಂತು....ಆ್ಞ....ನಿಮ್ಮ ಸಂಗಡ ಬಂದಿದ್ದಾರಲ್ಲ ಹೆಣ್ಣುಮಕ್ಕಳು ಅವರು ನಿಮಗೇನಾಗಬೇಕು."

"ಏನೂ ಇಲ್ಲ. ಪರಿಚಯ ಅಷ್ಟೆ."

"ಅವರೂ ಬೆಂಗಳೂರು ನೋಡೋದಕ್ಕೆ ಬಂದಿದ್ದಾರೇನು ?"

"ಉ್ಞ....ಇಲ್ಲಾ........"

"ಸಂಕೋಚ ಏನೂ ಮಾಡ್ಕೋಬೇಡಿ. ಇರೋ ವಿಚಾರ ಧಾರಾಳ ವಾಗಿ ಹೇಳಿ. ಪರವಾಗಿಲ್ಲ. ನಾವೂ ನಿಮ್ಮೋರೆ ಅಂತ ತಿಳ್ಕೋಳಿ"

—ಎಂದ ಗೋಪಾಲಿ ಮಂಗಳೂರಿನವನು ತಡವರಿಸುತ್ತಿದ್ದುದನ್ನು ನೋಡಿ.

"ಅಂಥದೇನೂ ಇಲ್ಲ ಮಾರಾಯ್ರೆ. ನಾನೇ ಈಗ ನಿಮ್ಮ ಹತ್ರ ವಿಷಯಾನೆಲ್ಲಾ ಮಾತಾಡೋಣ್ವೆ ಅಂತ ಯೋಚಿಸ್ತಿದ್ದೆ. ಆದರೆ ನೀವೇನು ತಿಳಕೋತೀರೋ ಅಂತ ಸುಮ್ಮನಾದೆ. ಇರೋ ಸಂಗ್ತಿ ಹೀಗೆ. ಅವರು ಇಲ್ಲಿ ನಾಲ್ಕುಕಾಸು ಸಂಪಾದನೇಗೆ ಬಂದಿದ್ದಾರೆ. ನಾನೂ ಅವರ ಪರವಾಗಿ ಬಂದಿದೇನೆ."

"ಹಾಗೆ ಹೇಳಿ. ನೀವೇನೂ ಯೋಚನೆ ಮಾಡಬೇಡಿ. ನಾನೂ ಸಹ........ಒಡೆದು ಹೇಳಬೇಕಾದ್ದಿಲ್ಲ. ಗಿರಾಕಿಗಳ್ನ ಹೊಂದಿಸಿ ಕೊಡ್ತೇನೆ. ನನ್ನಿಂದ ಎಷ್ಟು ಸಹಾಯ ಬೇಕೋ ಅಷ್ಟೂ ಮಾಡ್ತೇನೆ"

"ಗೊತ್ತಾಯ್ತು ಬಿಡ್ರಿ........"

ಅಷ್ಟರಲ್ಲಿ ದೋಸೆಗಳು ಬಂದವು. ದೋಸೆ ತಿಂದು ಕಾಫಿ ಕುಡಿದದ್ದಾಯಿತು. ಗೋಪಾಲಿ ಜೇಬಿನಿಂದ ಐದು ರೂಪಾಯಿನ ನೋಟೊಂದನ್ನು ತೆಗೆದು ರಾಜಣ್ಣನ ಕೈಗೆ ಕೊಟ್ಟು—

"ತಗೋ ರಾಜಣ್ಣ. ಬಿಲ್ ಎಷ್ಟಾಗಿದೆಯೋ ಕೊಟ್ಟು ಬಾಕಿ ಚಿಲ್ರೆ ತಗೊಂಡು ಬಾ"

—ಎಂದ. ರಾಜಣ್ಣ ನೋಟಿನೊಂದಿಗೆ ಕ್ಯಾಷಿಯರ್ ಕುಳಿತಿದ್ದೆಡೆಗೆ ಹೋದ. ಮಾಣಿ "ಮೂರ್ಜನ ಹದಿನೈದೂ ಪುಂಕ್ಕಾಲಾಣೆ" ಎಂದು ಕಿವಿ ಬಿರಿಯುವಂತೆ ಕಿರಿಚಿದ.

ಗೋಪಾಲಿ ವೈಕುಂಠಯ್ಯ ಇಬ್ಬರೂ ಕುಳಿತೆಡೆಯಿಂದ ಎದ್ದು ಹೊರಡಲನುವಾದರು. ಅಷ್ಟರಲ್ಲಿ ವೈಕುಂಠಯ್ಯ ಗೋಪಾಲಿಗೆ ಹೇಳಿದ—

"ಏನಾದ್ರೂ ವಂದಷ್ಟು ತಿಂಡಿ ಕಟ್ಟಿಸ್ಕೊಳಿ. ಹಾಗೆ ಹುಡುಗಿಯ ರನ್ನೂ ಬಂದು ನೋಡ್ಕೊಂಡು ಹೋಗ್ತೀರಂತೆ."

"ಏ ರಾಜಣ್ಣಾ, ಎರಡು ರೂಪಾಯಿನ ತಿಂಡಿ ಕಟ್ಟಿಸು. ಸೀ-ಖಾರ ಬೇರೆ ಬೇರೆ"

—ಎಂದು ರಾಜಣ್ಣನಿಗೆ ಕೂಗಿ ಹೇಳಿದ ಗೋಪಾಲಿ.

"ಈತ ಯಾರು?"

—ರಾಜಣ್ಣನ ಬಗ್ಗೆ ವೈಕುಂಠಯ್ಯ ವಿಚಾರಿಸಿದ.

"ನಮ್ಮ ಕೆಲಸಗಳಿಗೆ ಬಹಳ ಸಹಾಯಕನಾಗಿದ್ದಾನೆ."

ವೈಕುಂಠಯ್ಯ ಸಮಾಧಾನ ಸೂಚಿಸುತ್ತ "ಹಾಗಾದರೆ ಪರವಾಗಿಲ್ಲ" ಎಂದ.

"ನೀವು ಯಾವುದಕ್ಕೂ ಏನೂ ಭಯಪಡಬೇಡಿ ನಾನಿರೋವಾಗ"

—ಮತ್ತೆ ಗೋಪಾಲಿ ಆಶ್ವಾಸನವಿತ್ತ.

"ಭಯದ ಮಾತಿಲ್ಲ ಮಾರಾಯ್ರೆ. ನಾವು ಬಂದಿರೋದು ಇದೇ ಮೊದಲು ಬಾರಿ ಬೆಂಗಳೂರಿಗೆ. ಪರಸ್ಥಳ. ಒಗ್ಗೋವರಿಗೂ ಹಾಗಿರತ್ತೆ."

"ನಾನು ಎಲ್ಲಾ ಒಗ್ಗಿಸಿಕೊಡ್ತೀನಿ ಸುಮ್ಮನಿರಿ. ಇಲ್ಲಿ ಸ್ಥಳ, ಇಲ್ಲಿ ಹವ, ಇಲ್ಲಿ ನೀರು, ಇಲ್ಲಿ ಜನ, ಇಲ್ಲಿ ಕಸುಬು ಎಲ್ಲಾ ಒಗ್ಗಿಸಿ ಕೊಡ್ತೀನಿ"

"ಭಾರಿ ಉಪ್ಕಾರ ಆದಂಗಾಯ್ತು ಮಾರಾಯ್ರೆ ನಿಮ್ಮ ಕಡೇ ಇಂದ"

—ಎಂದು ಹೇಳಿ ವೈಕುಂಠಯ್ಯ ತನ್ನ ಕೃತಜ್ಞತೆಯನ್ನು ವ್ಯಕ್ತ ಪಡಿಸಿದ. ರಾಜಣ್ಣ ತಿಂಡಿಪೊಟ್ಟಣಗಳನ್ನು ಕಟ್ಟಿಸಿಕೊಂಡು ಬಂದ. ಮೂವರೂ ಛತ್ರದ ಕಡೆಗೆ ಹೊರಟರು.

ವೈಕುಂಠಯ್ಯ ಗೋಪಾಲಿ, ರಾಜಣ್ಣ ಇಬ್ಬರನ್ನೂ ಮಂಗಳೂರು ಹುಡುಗಿಯರಿದ್ದ ಕೋಣೆಗೆ ಕರೆದುಕೊಂಡು ಹೋದ. "ದಯ ಮಾಡ್ರಿ.... ದಯ ಮಾಡ್ರಿ" ಎಂದು ದೇಶಾವಾರದ ನಗೆ ಬೀರುತ್ತ ಪರಸ್ಪರ ಪರಿಚಯ

ಮಾಡಿಸಿದ. ಆ ಹೆಣ್ಣುಮಕ್ಕಳೂ ತಮ್ಮ ಕಷ್ಟಸುಖಗಳನ್ನು ನಿಸ್ಸಂಕೋಚವಾಗಿ ಗೋಪಾಲಿಯಲ್ಲಿ ತೋಡಿಕೊಂಡರು.

"ನೋಡ್ರಿ ಈಕೆಯ ಹೆಸರು ಶಕುಂತಲ ಅಂತ, ಈಕೆ ಮಾಲತಿ, ಇನ್ನೊಬ್ಬಾಕೆ ಮಾಲಿನಿ"

—ಎಂದು ಅವರವರ ಹೆಸರುಗಳನ್ನು ವೈಕುಂಠಯ್ಯನೇ ಹೇಳಿದ.

"ಸರಿ. ಶಕುಂತಲೆಗೊಬ್ಬ ದುಶ್ಯಂತನ್ನ ಹೊಂಚಬೇಕು, ಮಾಲತಿಗೊಬ್ಬ ಮಾಧವನನ್ನು ನೋಡಬೇಕು, ಇನ್ನು ಮಾಲಿನಿಗೆ........ಸದ್ಯಕ್ಕೆ ನಾನೇ ಇದ್ದೀನಲ್ಲ' ಎಂದು ತನಗೆತಾನೇ ಮುಗುಳು ನಗೆ ನಕ್ಕು—

"ಪಾಪ, ಬೆಳಗಿನಿಂದ ಉಪವಾಸ ಇದ್ದೀರೇನೋ ಕೊಂಚ ತಿಂಡಿ ತಗೋಳಿ"

ಎಂದು ಹೇಳಿ ರಾಜಣ್ಣನನ್ನು ಕುರಿತು,

"ಹೋಗು ರಾಜಣ್ಣ. ಹೋಟಲಿನಿಂದ ಕೆಟಲಿನಲ್ಲಿ ಮೂರು ಕಪ್ಪು ಕಾಫಿ ತಂದ್ಬಿಡು" ಎಂದ. ರಾಜಣ್ಣ ಎದ್ದು ಕಾಫಿ ತರಲು ಹೋದ.

"ಏನೋ, ನೀವು ದೇವರು ಸಿಕ್ಕಿದ ಹಾಗೆ ಸಿಕ್ಕಿದಿರಿ"

—ಶಕುಂತಲ ಗೋಪಾಲಿಯ ಮುಖ ನೋಡುತ್ತ ಹೇಳಿದಳು.

"ಬಿಡಿ, ಅದೆಲ್ಲಾ ಏನು ಮಹಾ. ಮನುಷ್ಯರಿಗೆ ಮನುಷ್ಯರು ಆಗದೆ ಇರೋಕಾಗುತ್ಯೆ."

"ಏನು ಮನುಷ್ಯರೋ. ಮನುಷ್ಯರು ಮನುಷ್ಯರನ್ನೆ ಹುರಿದು ತಿನ್ತಿರೋ ಈ ಕಾಲದಲ್ಲಿ ನಿಮ್ಮಂತಹವರು ಇರೋದು ಅಪರೂಪ. ಎಲ್ಲಾ ನಮ್ಮ ಸುದೈವ"

—ಎನ್ನುತ್ತ ಹೋಟಲಿನಿಂದ ತಂದ ತಿಂಡಿಪೊಟ್ಟಣಗಳನ್ನು ಬಿಚ್ಚಿ ಹಂಚತೊಡಗಿದಳು ಶಕುಂತಲ. ಗೋಪಾಲಿಗೂ ವೈಕುಂಠಯ್ಯನಿಗೂ ಕೊಂಚ ಕೊಂಚ ಕೊಡಹೋದಳು.

"ನಮ್ಮದೆಲ್ಲಾ ಆಗಿದೆ. ನೀವು ತಗೋಳಿ"

—ಎಂದ ಗೋಪಾಲಿ.

"ಪರವಾಗಿಲ್ಲ ಕೊಂಚ ತಗೋಳಿ, ನಮ್ಮ ಜೋತೆಲೂ"

—ಎಂದು ಶಕುಂತಲ ಬಲವಂತ ಮಾಡಿದಳು. ಇತರರಿಗೂ ಕೊಟ್ಟು ತಾನೂ ತೆಗೆದುಕೊಂಡಳು. ತಿಂಡಿ ತಿನ್ನುತ್ತಿದ್ದಂತೆಯೇ ಮಾತೂ ಸಾಗಿತು. ಮಂಗಳೂರಿನಲ್ಲಿ ಸಾಕಷ್ಟು ವರಮಾನವಿಲ್ಲದ್ದರಿಂದ ತಾವು ಬೆಂಗಳೂರಿಗೆ ಬಂದರೆಂದೂ, ತಮ್ಮ ಬಿಸಿನೆಸ್ಸಿನಲ್ಲಿ ಸಹಾಯ ಮಾಡಬೇಕೆಂದೂ ವೈಕುಂಠಯ್ಯನೂ ಹುಡುಗಿಯರೂ ಗೋಪಾಲಿಗೆ ಬೇಡಿಕೆ ಹಾಕಿದರು. ಗೋಪಾಲಿ ತನ್ನ ಕೈಲಾದಷ್ಟು ಸಹಾಯ ಮಾಡುವುದಾಗಿ ಭರವಸೆಯಿತ್ತ.

ಅವರು ತಿಂಡಿ ಮುಗಿಸುವ ಹೊತ್ತಿಗೆ ರಾಜಣ್ಣ ಕಾಫಿ ತಂದ. ಮೂವರು ಹುಡುಗಿಯರೂ ಕಾಫಿ ಕುಡಿದರು.

ಆಡಬೇಕಾದ ಮಾತುಗಳನ್ನೆಲ್ಲಾ ಆಡಿದ ಮೇಲೆ ಗೋಪಾಲಿ ಕುಳಿತೆಡೆಯಿಂದ ಎದ್ದು—

"ನಾನು ಸಂಜೆಗೆ ಬರ್ತೇನೆ. ಸದ್ಯಕ್ಕೆ ಹೋಟಲಿನಲ್ಲಿ ರೂಮು ಮಾಡಿ ಕರೆದುಕೊಂಡು ಹೋಗ್ತೇನೆ. ಅಲ್ಲಿಯೇ ಊಟಕ್ಕೆ ಏರ್ಪಾಡು ಮಾಡ್ತೇನೆ"

ಎಂದು ಹೇಳಿ ರಾಜಣ್ಣನನ್ನೂ ಸಂಗಡ ಕರೆದುಕೊಂಡು ಅಲ್ಲಿಂದ ಹೊರಹೊರಟ.

೧೩

ಶ್ವೇತವರಾಹಮೂರ್ತಿ

ವೈಕುಂಠಯ್ಯ ಹುಡುಗಿಯರನ್ನು ಛತ್ರಕ್ಕೆ ಕರೆದುಕೊಂಡು ಬಂದಾಗಲೇ ತಿರುಮಲಯ್ಯನಿಗೆ ಅವರ ಬಗ್ಗೆ ಸಂದೇಹ ಮೂಡಿತ್ತು. ಈಗ ಗೋಪಾಲಿಯೊಂದಿಗೆ ಅವರು ಆಡಿದ್ದ ಮಾತುಗಳನ್ನು ಅವನು ಹೊಂಚಿ ಕೇಳಿದ್ದ. ಅವರು ಕಸುಬಿನವರೇ ಎನ್ನುವುದರಲ್ಲಿ ಇನ್ನು ಸಂದೇಹ ಉಳಿಯಲಿಲ್ಲ.

"ರಾಯರೇ........ರಾಯರೇ........"

ತನ್ನನ್ನು 'ರಾಯರೇ' 'ರಾಯರೇ' ಎಂದು ಕೂಗಿದವರಾರೆಂದು ಗೋಪಾಲಿ ಹಿಂದಿರುಗಿ ನೋಡಿದ.

ತಿರುಮಲಯ್ಯ ಅವನನ್ನು ಹಿಂಬಾಲಿಸಿದ್ದ.

ಹೌದು. ಈಗ ಕೊಂಚ ಹೊತ್ತಿನ ಮುಂಚೆ ತಾನು ಛತ್ರದ ಬಳಿಗೆ ಮೊದಲು ಬಂದಾಗ ಅವನನ್ನು ನೋಡಿದ್ದ. ವೈಕುಂಠಯ್ಯನೊಂದಿಗೆ ಅವನು ಮಾತಾಡುತ್ತ ಕುಳಿತಿದ್ದುದನ್ನು ಗಮನಿಸಿದ್ದ.

"ಏನು ? ಯಾರು ನೀವು ?", ಗೋಪಾಲಿ ಕೇಳಿದ.

"ಇಲ್ಲ....... ನಿಮ್ಮ ಹತ್ರ ಕೊಂಚ ಮಾತನಾಡಬೇಕಿತ್ತು ರಾಯರೆ."

—ತಿರುಮಲಯ್ಯ ಉಗುಳು ನುಂಗುತ್ತ ಹೇಳಿದ.

ಮಂಗಳೂರಿನ ಹುಡುಗಿಯರ ಬಗ್ಗೆ ಇವನೇನಾದರೂ ಬೇರೆ ಸಂಗತಿಗಳನ್ನು ಹೇಳಬಹುದೇ ಎಂದು ಗೋಪಾಲಿ ಯೋಚಿಸಿದ. ಅವರ ವಿಚಾರದಲ್ಲಿ ಎಚ್ಚರಿಕೆಯಿಂದಿರುವಂತೆ ಅವನು ತಿಳಿಸಬಹುದೋ ಏನೋ ಎಂದು ತನ್ನಲ್ಲೇ ಗುಣಾಕಾರ ಹಾಕತೊಡಗಿದ.

"ಏನು ಹೇಳಿ ?" ಗೋಪಾಲಿ ಕೇಳಿದ.

ಅಪರಿಚಯಸ್ಥನೊಂದಿಗೆ ತನ್ನ ಸ್ಥಿತಿ ಹೇಗೆ ಹೇಳಿಕೊಳ್ಳುವುದೆಂದು ತಿರುಮಲಯ್ಯ ತುಸು ಹೊತ್ತು ಹಿಂಜರಿದ.

"ಪರವಾಗಿಲ್ಲ ಅದೇನು ಹೇಳಿ ಸಂಕೋಚ ಇಟ್ಕೊಕೋಬೇಡಿ."

—ಗೋಪಾಲಿ ಒತ್ತಾಯಮಾಡಿದ.

"ನನ್ನ ಹೆಂಡ್ತೀನೂ........"

—ಎಂದವನೇ ಮುಂದೆ ಮಾತನಾಡಲಾರದೆ ತಲೆತಗ್ಗಿಸಿ ನಿಂತು ಕೊಂಡ ತಿರುಮಲಯ್ಯ.

"ಏನು ನಿಮ್ಮ ಹೆಂಡ್ತಿ ?"

—ಅರ್ಥವಾದರೂ ಅರ್ಥವಾಗದವನಂತೆ ಗೋಪಾಲಿ ಪ್ರಶ್ನಿಸಿದ. ಅವನಿಗೆ 'ಹೆಂಡ್ತಿ' ಎಂದಕೂಡಲೆ ಗಂಗಾಧರಮೂರ್ತಿಯ ನೆನಪು ಬಂತು.

ಗಂಗಾಧರಮೂರ್ತಿ ಟೀ ಬೋರ್ಡ್ ಆಫೀಸಿನಲ್ಲಿ ಗುಮಾಸ್ತೆಯ ಕೆಲಸಕ್ಕಿದ್ದ. ನೋಡಲು ಕೆಂಪಗೇನೋ ಇದ್ದ, ಆದರೆ ಶತವಿಕಾರದ ಮುಸುಡಿ. ಅದನ್ನು ನೋಡಿಯೇ 'ಶ್ವೇತವರಾಹಮೂರ್ತಿ' ಎಂಬ ಅಡ್ಡ ಹೆಸರನ್ನಿಟ್ಟಿದ್ದ ಗೋಪಾಲಿ ಅವನಿಗೆ ಕಾಲಕ್ರಮದಲ್ಲಿ ಗಂಗಾಧರಮೂರ್ತಿ ಎಂಬ ಹೆಸರು ತಪ್ಪಿಹೋಗಿ ಎಲ್ಲರೂ ಅವನನ್ನು ಶ್ವೇತವರಾಹಮೂರ್ತಿ ಎಂದೇ ಕರೆಯುತ್ತಿದ್ದರು.

ಚಂದ್ರಶೇಖರಯ್ಯನವರ ಬಂಗಲೆಯ ಔಟ್‌ಹೌಸಿನಲ್ಲಿ ಬಾಡಿಗೆಗಿದ್ದ ಶ್ವೇತವರಾಹಮೂರ್ತಿ. ಅವನಿಗಿನ್ನೂ ಲಗ್ನವಾಗಿರಲಿಲ್ಲ. ತಂದೆ ತಾಯಿ ಹಳ್ಳಿಯಲ್ಲಿದ್ದರು. ಆಗಾಗ ಬಂದು ಮಗನ ಮನೆಯಲ್ಲೂ ಇರುತ್ತಿದ್ದರು.

ಇನ್‌ಷೂರೆನ್ಸ್ ಕಂಪನಿಯೊಂದರ ಮ್ಯಾನೇಜರಾಗಿದ್ದರು ಚಂದ್ರ ಶೇಖರಯ್ಯನವರು. ಮನೆಯ ತುಂಬ ಹೆಣ್ಣುಮಕ್ಕಳು. ಮೊದಲನೆಯವಳು ಜಯಲಕ್ಷ್ಮಿ, ಎರಡನೆಯವಳು ವಿಜಯಲಕ್ಷ್ಮಿ, ಮೂರನೆಯವಳು ಸುಜಯಲಕ್ಷ್ಮಿ. ಅಂತೆಯೇ ಮನೆಯಲ್ಲಿಯೂ ಲಕ್ಷ್ಮಿ ತಾಂಡವವಾಡು ತ್ತಿದ್ದಳು. ಆಧುನಿಕ ಸಂಪ್ರದಾಯ. ಹೆಣ್ಣುಮಕ್ಕಳು ಗಣೇಜೇತಾಳ ಗಳಂತೆ ಬೆಳೆದಿದ್ದರೂ ಇನ್ನೂ ಯಾರಿಗೂ ಲಗ್ನವಾಗಿರಲಿಲ್ಲ. ಎಲ್ಲರನ್ನೂ ಓದಿಸಿ ಪದವೀಧರರನ್ನಾಗಿ ಮಾಡಬೇಕೆಂಬುದೆ ಚಂದ್ರಶೇಖರಯ್ಯನವರ ಆಸೆ. ಅದರಿಂದಾಗಿ ಅವರು ಲಗ್ನದ ಯೋಚನೆಯನ್ನೆ ಮಾಡುತ್ತಿರಲಿಲ್ಲ.

ಆದರೆ ಹೆಂಡತಿ ವಿಶಾಲಾಕ್ಷಮ್ಮ ಬಿಡಬೇಕಲ್ಲ. ಸರಿಯಾದ ಕಡೆ ವರಗಳನ್ನು ಹುಡುಕಿ ಹೆಣ್ಣುಮಕ್ಕಳಿಗೆ ಮದುವೆ ಮಾಡಿಬಿಡಬೇಕೆಂದು ಅವರು ದಿನವೂ ಒತ್ತಾಯ ಹಾಕುತ್ತಿದ್ದರು. ಮೊದಲನೆಯವಳಾದ ಜಯಳಿಗೆ ಆಗಲೆ ಇಪ್ಪತ್ತೆರಡು ವರ್ಷ ವಯಸ್ಸು ದಾಟಿತ್ತು. ಎರಡನೆಯವಳು ಅವಳಿಗಿಂತ ಎರಡು ವರ್ಷ ಚಿಕ್ಕವಳು. ಮೂರನೆಯವಳು ಎರಡನೆಯವಳಿಗಿಂತ ಎರಡು ವರ್ಷ ಕಿರಿಯವಳು....ಹೀಗೆಯೇ ಎರಡು ವರ್ಷಕ್ಕೊಮ್ಮೆ ಬೆಳೆ ತೆಗೆದಿದ್ದರು ಚಂದ್ರಶೇಖರಯ್ಯನವರು. ತಂದೆಯ ಆಶೋತ್ತರಕ್ಕೆ ತಕ್ಕಂತೆ ಹುಡುಗಿಯರೂ ಕಷ್ಟಬಿದ್ದು ಚೆನ್ನಾಗಿ ಓದುತ್ತಿದ್ದರು. ಜಯ ಆನರ್ಸ್‌ನಲ್ಲಿದ್ದಳು. ವಿಜಯ ಇಂಟರ್ ಮುಗಿಸಿ ಬಿ.ಎಸ್.ಸಿಗೆ ಓದುತ್ತಿದ್ದಳು. ಸುಜಯ ಸೀನಿಯರ್ ಇಂಟರ್ ಪರೀಕ್ಷೆಗೆ ಕಟ್ಟುವವಳಿದ್ದಳು.

ಚಂದ್ರಶೇಖರಯ್ಯನವರು ಹೆಂಡತಿಯ ಒತ್ತಾಯದಿಂದ ವರಾನ್ವೇಷಣಕ್ಕೆ ತೊಡಗಿದರು. ಅವರು ಒಪ್ಪಿದ ವರ ಅವರ ಹೆಂಡತಿ ವಿಶಾಲಾಕ್ಷಮ್ಮ ಒಪ್ಪುತ್ತಿರಲಿಲ್ಲ. ವಿಶಾಲಾಕ್ಷಮ್ಮ ಒಪ್ಪಿದುದನ್ನು ಚಂದ್ರಶೇಖರಯ್ಯ ಒಪ್ಪುತ್ತಿರಲಿಲ್ಲ. ಹುಡುಗಿಯರಂತೂ ನಮಗೆ ಮದುವೆಯೇ ಬೇಡವೆನ್ನುತ್ತಿದ್ದರು.

"ಎಲ್ಲಾದ್ರೂ ಉಂಟೆ, ಹೆಂಗಸರಾಗಿ ಹುಟ್ಟಿ ನೀವು ಮದುವೆ ಆಗದೆ ಬೀದಿ ಬಸವಿಗಳಾಗ್ತೀರ"

—ಎಂದು ವಿಶಾಲಾಕ್ಷಮ್ಮ ಛೀಮಾರಿ ಹಾಕುತ್ತಿದ್ದರು.

"ಇಲ್ಲ, ಗಂಡಸಿನ ಗುಲಾಮಳಾಗಿದ್ದುಕೊಂಡು ಅವನ ಚರಣಸೇವೆ ಮಾಡಬೇಕೇನೋ."

—ಜಯ ವಾದಿಸುತ್ತಿದ್ದಳು.

"ಹಾಗಲ್ಲ. ಹೊಸಗೆ ಮೂಗ್ದಾರ ಹಾಕುವ ಹಾಗೆ ಅವನಿಂದ ತಾಳಿ ಬಿಗಸ್ಕೊಂಡು, ಅವನು ಹೇಳಿದ್ದಾಗ ಕೇಳ್ಕೊಂಡು, ಅವನು ತಂದ್ದಾಕ್ಕಿದ್ದು ತಿಂದ್ಕೊಂಡು ಮನೆ ಹೊಸಲೊಳಗೆ ಬಿದ್ದಿರಬೇಕು. ಅಲ್ಲವೆ?"

—ಎಂದು ಮಾತು ಸೇರಿಸುತ್ತಿದ್ದಳು ವಿಜಯ.

"ಅಲ್ಲಲ್ಲ. ಅವನಿಗೆ ಮಕ್ಕಳು ಹೆತ್ಕೊಂಡು, ಅವುಗಳ ಕೊಳಕು ಒರಸ್ಕೊಂಡು ಬಾಳು ಸಾಗಿಸಬೇಕು ಅನ್ನು. ಅದೆಲ್ಲಾ ನ್ಕೈಯ್ಯಾಗಲ್ಲಮ್ಮ"

—ಎನ್ನುತ್ತಿದ್ದಳು ಸುಜಯ, ಇನ್ನೂ ಒಂದು ಹೆಜ್ಜೆ ಮುಂದುವರಿದು.

ಈಗಿನ ಕಾಲದ ಹುಡುಗಿಯರು ಎಷ್ಟು ಬುದ್ಧಿವಂತರು ಎಂದು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಿದ್ದರು ವಿಶಾಲಾಕ್ಷಮ್ಮ. ಅವರ ಕಾಲಕ್ಕೆ ಹೆಣ್ಣುಮಕ್ಕಳಿಗೆ ಇಷ್ಟೊಂದು ಬುದ್ಧಿಯಿರಲಿಲ್ಲ. ಅಪ್ಪ ಅಮ್ಮ ಏನು ಹೇಳುವರೋ ಅದೇ ವೇದವಾಕ್ಯವಾಗಿರುತ್ತಿತು. ಅವರ ಮಾತಿಗೆ ಪ್ರತಿಹೇಳುವಷ್ಟು ಧೈರ್ಯವೂ ಇರಲಿಲ್ಲ ಅವರಲ್ಲಿ. ಆದರೆ ಕಾಲ ನಾಗರೀಕವಾದಂತೆಲ್ಲಾ ಈ ಪದ್ಧತಿ ಬದಲಾಗಿ ಮಕ್ಕಳು ಹೇಳಿದಂತೆ ತಂದೆ ತಾಯಿಗಳು ನಡೆಯುವಂತಾಯಿತು.

ವಿಶಾಲಾಕ್ಷಮ್ಮ ತಮ್ಮ ಮಕ್ಕಳಂತೆ ಓದಿದವರೂ ಅಲ್ಲ; ಈ ನಾಗರೀಕತೆ ಕಲಿತವರೂ ಅಲ್ಲ. ಅದರಿಂದಾಗಿ ಅವರು ವಾದಕ್ಕೆ ಪ್ರತಿವಾದ ಹೂಡುವ ಗೋಜಿಗೆ ಹೋಗುತ್ತಿರಲಿಲ್ಲ. 'ಸರಿಯಾದ ಗಂಡನ್ನು ತಂದು ಎದುರಿಗೆ ನಿಲ್ಲಿಸಿದರೆ ತಮ್ಮಷ್ಟಕ್ಕೆ ತಾವೇ ಒಪ್ಪಿಕೊಳ್ಳುತ್ತಾರೆ. ಒಪ್ಪಿಕೊಳ್ಳದೆ ಏನು' ಎಂದು ತಮ್ಮಷ್ಟಕ್ಕೆ ತಾವು ಮನೆಗೆಲಸಗಳಲ್ಲಿ ನಿರತರಾಗಿಬಿಡುತ್ತಿದ್ದರು.

ವರಾನ್ವೇಷಣವಂತೂ ಭರದಿಂದಲೇ ಸಾಗುತ್ತಿತ್ತು. ಇದನ್ನು ಕಂಡು ಜಯ ತಂದೆಯೊಂದಿಗೆ ತಾನು ಬಿಲ್‌ಖುಲ್ ಮದುವೆಯಾಗುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿಬಿಟ್ಟಳು. ಅದಕ್ಕೆ ಚಂದ್ರಶೇಖರಯ್ಯನವರು ಯಾವ ಉತ್ತರವನ್ನೂ ಕೊಡದೆ ಸುಮ್ಮನೆ ನಗೆಯಾಡಿಬಿಟ್ಟರು.

ಕೊನೆಗೂ ಜಯಳಿಗೆ ವರ ನಿಷ್ಕರ್ಷೆಯಾಗಿ ಬಿಟ್ಟಿತು. ಸಾಹುಕಾರ್ ಸೋಮಯ್ಯನವರ ಮಗ ಶ್ರೀಕಂಠಯ್ಯ ಜಯಳ ಕೈ ಹಿಡಿಯಲು ಒಪ್ಪಿದ. ಜ್ಯೇಷ್ಠಮಾಸದಲ್ಲಿ ಲಗ್ನವೂ ನಿರ್ಧರಿಸಲ್ಪಟ್ಟಿತು. ಜಯ ಗಂಡಿನ ಮನೆಗೆ ಹೋಗಿ ಗಂಡನ್ನು ನೋಡಿ ನಿರಾಕರಿಸಿದಳು. ಆದರೆ ತುಂಬುಗುಣದ ಸೋಮಯ್ಯನವರು ಚಂದ್ರಶೇಖರಯ್ಯನವರ ಸಂಬಂಧ ಬಿಡಬಾರದೆಂದು ತಾವೇ ತಮ್ಮ ಹೆಂಡತಿ-ಮಗನನ್ನು ಕರೆದುಕೊಂಡು ಹುಡುಗಿಯ ಮನೆಗೆ ಬಂದು ಹುಡುಗಿಯನ್ನು ನೋಡಿಕೊಂಡು ಹೋದರು.

ಶ್ರೀಕಂಠಯ್ಯ ಎಂ. ಎ. ಕಲಿತವನು. ಸರ್ಕಾರದಲ್ಲಿ ಪ್ರೊಬೇಷನರಿ ಅಮಲ್ದಾರನಾಗಿ ನೇಮಕವಾಗಿದ್ದ. ಜತೆಗೆ ತಂದೆಯ ವಿಪುಲವಾದ ಆಸ್ತಿಗೆ

ಏಕಮಾತ್ರ ಹಕ್ಕುದಾರನಾಗಿದ್ದ. ಚಂದ್ರಶೇಖರಯ್ಯ ವಿಶಾಲಾಕ್ಷಮ್ಮ ಇಂತಹ ಬಾಂಧವ್ಯ ದೊರೆತುದು ತಮ್ಮ ಪುಣ್ಯವೆಂದೇ ಹಿರಿಹಿರಿ ಹಿಗ್ಗಿದರು.

ಹುಡುಗನಿನ್ನೂ ತರುಣ, ಮೈಕೈ ತುಂಬಿಕೊಂಡು ನೋಡಲು ಧೃಢ ಕಾಯನಾಗಿದ್ದ, ನೋಡಿದವರ ಮನ ಸೆಳೆಯುವಂತಿದ್ದ. ಇಂತಹ ಗಂಡ ದೊರೆತರೆ ಯಾರು ಬೇಡವೆಂದಾರು ? ಜಯ ಒಲ್ಲೆನೆನ್ನಲು ಸಾಧ್ಯವೇ ಇಲ್ಲ ವೆಂದು ಚಂದ್ರಶೇಖರಯ್ಯನವರು ದೃಢನಿಶ್ಚಯದಿಂದಿದ್ದರು.

ಒಂದು ಭಾನುವಾರ. ಆಫೀಸಿಗೆ ರಜವಿದ್ದುದರಿಂದ ಚಂದ್ರಶೇಖ ರಯ್ಯನವರು ವಿರಾಮವಾಗಿ ಕುಳಿತು ಯಾವುದೋ ಇಂಗ್ಲಿಷ್ ಕಾದಂಬರಿಯ ಹಾಳೆಗಳನ್ನು ಮಗುಚಿಹಾಕುತ್ತಿದ್ದರು. ವಿಶಾಲಾಕ್ಷಮ್ಮ ಆಗಲೇ ಮದುವೆಯ ಸಾಮಾನುಗಳನ್ನು ತಯಾರಿಸುವ ಗಡಿಬಿಡಿಯಲ್ಲಿ ಅಡಿಗೆಮನೆಯಲ್ಲಿದ್ದರು.

ಜಯ ತಂದೆಯ ಬಳಿಗೆ ಬಂದು ಬಳಿಯಲ್ಲಿದ್ದ ಕುರ್ಚಿಯೊಂದರಲ್ಲಿ ಕುಳಿತುಕೊಳ್ಳುತ್ತ ದಿಟ್ಟತನದಿಂದ ಹೇಳಿದಳು :

"ಅಪ್ಪ, ನನಗೆ ಈ ಮದುವೆ ಬೇಡ. ನಾನು ಮದುವೆ ಮಾಡಿ ಕೊಳ್ಳೋಲ್ಲ. ಹಾಗೇ ಇರ್ತೀನಿ."

"ಎಲ್ಲಾದರೂ ಉಂಟೆ ಜಯ. ಜನ ನಮ್ಮನ್ನ ಏನನ್ತಾರೆ. ಹೀಗೆಲ್ಲಾ ಹಠ ಹಿಡೀಬಾರ್ದು. ಹೆಂಗಸು ಎಷ್ಟು ದಿನ ಸುಮ್ಮನೆ ಇರೋ ಕಾಗುತ್ತೆ. ಮದುವೆ ಮಾಡ್ಕೊಳ್ಳಲೇ ಬೇಕು."

—ಮಗಳಿಗೆ ಸಮಾಧಾನದ ಮಾತುಗಳನ್ನಾಡಿದರು ಚಂದ್ರಶೇಖ ರಯ್ಯನವರು.

ಹೇಳಲೋ ಬೇಡವೋ ಎಂದು ಜಯ ತುಸುಹೊತ್ತು ಯೋಚಿಸಿ ಕಡೆಗೆ ಧೈರ್ಯಮಾಡಿದಳು—

"ನನ್ನನ್ನು ಮದುವೆಯಾಗಲೇ ಬೇಕು ಅಂತ ನೀನು ನಿರ್ಬಂಧ ಪಡಿಸುವುದಾದರೆ ಅದಕ್ಕೆ ನಾನು ಬೇಡವೆನ್ನುವುದಿಲ್ಲ. ಆದರೆ ಮಾತ್ರ ಈ ವರನನ್ನು ನಾನು ಒಲ್ಲೆ."

ಮಗಳ ಮಾತನ್ನು ಕೇಳಿ ಚಂದ್ರಶೇಖರಯ್ಯನವರಿಗೆ ಆಶ್ಚರ್ಯ ವಾಯಿತು. ಅವರೆಂದರು :

"ಯಾಕೆ, ಏನಾಗಿದೆ. ದೊಡ್ಡ ಮನೆತನ. ಐಶ್ವರ್ಯವಂತರು. ಹುಡುಗನೂ ಲಕ್ಷಣವಾಗಿದ್ದಾನೆ. ದೊಡ್ಡ ಅಧಿಕಾರದಲ್ಲಿದ್ದಾನೆ. ಮುಂದೆ ಇನ್ನೂ ಉನ್ನತ ಅಧಿಕಾರಕ್ಕೆ ಬರುತ್ತಾನೆ."

"ಅದೆಲ್ಲಾ ಇರಬಹುದು. ಆದರೆ ನನಗೆ ಇಷ್ಟವಿಲ್ಲ."

"ಕಾರಣ ?"

"ನನಗೆ ಇಷ್ಟವಿಲ್ಲದ್ದೇ ಕಾರಣ."

"ಹಾಗಾದರೆ ನಿನ್ನ ಇಷ್ಟದಲ್ಲಿ ಏನಿದೆಯೆಂಬುದನ್ನಾದರೂ ಅಷ್ಟು ಹೇಳಿಬಿಡು. ಮದುವೆಯಾಗಲೇಬೇಕು ಅಂತ ನಾನು ನಿರ್ಬಂಧಪಡಿಸುವು ದಾದರೆ ಬೇಡವೆನ್ನುವುದಿಲ್ಲ ಎಂದು ಈಗತಾನೇ ನೀನೇ ಹೇಳಿದೆಯಲ್ಲ."

"ಹೌದು. ಈಗಲೂ ಬೇಡವೆನ್ನುವುದಿಲ್ಲ."

"ಅಂದರೆ ? ನಿನ್ನ ಮಾತೇ ನನಗೆ ಅರ್ಥವಾಗುವುದಿಲ್ಲ."

"ಅಂದರೆ ನನಗೆ ಇಷ್ಟವಾದವನನ್ನು ನಾನು ಲಗ್ನವಾಗಲು ನೀವು ಸಮ್ಮತಿಸುವುದಾದರೆ ಆಗಬಹುದು."

"ನಿನಗೆ ಇಷ್ಟವಾದವನನ್ನು ? ಹಾಗೆ ನಿನಗೆ ಇಷ್ಟವಾಗಿರುವವನು ಯಾರು ?"

"ನೀವು ಒಪ್ಪಿಕೊಳ್ತೀರಾ ?"

"ಒಪ್ಪಿಕೊಳ್ಳೋದು ಬಿಡೋದು ಅನಂತರದ ಮಾತು. ಅವನು ಯಾರು ಅದನ್ನು ಮೊದಲು ಹೇಳು."

"ನಮ್ಮ ಔಟ್ ಹೌಸಿನಲ್ಲಿರುವ ಗಂಗಾಧರಮೂರ್ತಿಯವರನ್ನ"

"ಗಂಗಾಧರಮೂರ್ತೀನೇ !"

"ಹೌದು."

ಚಂದ್ರಶೇಖರಯ್ಯನವರ ಕೈಯಲ್ಲಿದ್ದ ಪುಸ್ತಕ ಕುಸಿದಿತ್ತು. ಅವರು ತಮ್ಮ ಎರಡೂ ಕೈಗಳನ್ನು ತಲೆಯ ಹಿಂಬದಿಗೆ ಸೇರಿಸಿ ಕುಳಿತ್ತಿದ್ದ ಆರಾಮ ಕುರ್ಚಿಯಲ್ಲಿ ಒರಗಿದರು. ಮುಖದ ಮೇಲೆ ಮೂಕ ಸಂಕಟ ಮುಸುಕಾಡಿತು. ಬಾಯಿಂದ ಯಾವ ಮಾತೂ ಹೊರಡದಂತಾಯಿತು. ಕೋಣೆಯನ್ನೆಲ್ಲ ತುಸುಹೊತ್ತು ಸ್ಮಶಾನ ಮೌನ ಆವರಿಸಿತು.

ಜಯ ತಂದೆಯ ಮುಖವನ್ನೇ ನೋಡುತ್ತ ಕುಳಿತಿದ್ದಳು, ಅವರೇನು ಹೇಳುವರೆಂಬ ಕಾತರತೆಯಿಂದ. ಆದರೆ ತಂದೆ ಯಾವ ಮಾತೂ ಆಡದೆ ಮೌನವಾಗಿದ್ದುದನ್ನು ಕಂಡು ಜಯನೇ ಕೇಳಿದಳು—

"ಯಾಕಪ್ಪ, ಏನೂ ಮಾತನಾಡೋಲ್ಲ."

ಚಂದ್ರಶೇಖರಯ್ಯನವರು ಮಗಳ ಮುಖವನ್ನೊಮ್ಮೆ ತೀಕ್ಷ್ಣವಾಗಿ ನೋಡಿ ಹೇಳಿದರು—

"ಇಲ್ಲ. ನೀನು ಅವನನ್ನು ಲಗ್ನವಾಗಲು ಖಂಡಿತ ಸಾಧ್ಯವಿಲ್ಲ."

"ಯಾಕೆ ಸಾಧ್ಯವಿಲ್ಲ."

"ನಿನಗೆ ನಾಚಿಕೆಯಾದರೂ ಆಗುವುದಿಲ್ಲವೆ ಅವನನ್ನು ಲಗ್ನವಾಗು ತ್ತೇನೆಂದು ಹೇಳುವುದಕ್ಕೆ. ನೀನು ಗ್ರಾಜುಯೇಟು. ಅವನು ಶುದ್ಧ ಶುಂಠೀಕಾಯಿ-ನಿರಕ್ಷರ ಕುಕ್ಷಿ. ಹೆಚ್ಚೆಂದರೆ ಒಂದು ಎಸ್. ಎಸ್. ಎಲ್. ಸಿ. ಪಾಸುಮಾಡಿದ್ದಾನೋ ಇಲ್ಲವೋ. ಸಾಲದುದಕ್ಕೆ ಆ ಮೂತಿಯೋ ಸಾಕ್ಷಾತ್ ಕಪಿಮೂತಿ. ಹೋಗಲಿ ಆಸ್ತಿಪಾಸ್ತಿ ಏನಾದರೂ ಇದೆಯೇ ಎಂದರೆ ಕುಚೇಲನ ಗೋತ್ರ. ಇದರ ಮೇಲೆ ಅವನು ನಮ್ಮ ಜನವೂ ಅಲ್ಲ. ನಮ್ಮ ಅಂತಸ್ತಿಗೆ ತಕ್ಕವನೂ ಅಲ್ಲ."

"ಅವರು ಹೇಗಾದರೂ ಇರಲಿ. ನಾನಂತೂ ಅವರನ್ನೇ ಲಗ್ನವಾಗು ವವಳು," ದೃಢನಿಶ್ಚಯದಿಂದ ಹೇಳಿದಳು ಜಯ.

"ಬೇಡ ಜಯು. ಸುಮ್ಮನೆ ಹಠಮಾರಿತನ ಮಾಡಬೇಡ. ಇದು ವರೆಗೂ ಲಗ್ನವೇ ಬೇಡವೆಂದು ಮೊಂಡಾಟ ಹೂಡಿದೆ. ಈಗ ಈ ಹಠ ಹೂಡುತ್ತಿರುವೆ. ಇಂತಹ ದುರ್ಬುದ್ಧಿ ನಿನಗೆ ಒಳ್ಳೆಯದಲ್ಲ. ನಾವು ನಿನ್ನ ತಂದೆ ತಾಯಿಗಳು, ನಿನಗೆ ಜನ್ಮವಿತ್ತು ಸಾಕಿ ಸಲಹಿದವರು. ನಿನ್ನ ಹಿತಾಹಿತಗಳನ್ನು ಬಲ್ಲವರು. ಈಗ ನಾವು ಗೊತ್ತುಮಾಡಿರುವ ಗಂಡು ಸರ್ವವಿಧದಲ್ಲಿಯೂ ನಿನಗೆ ತಕ್ಕವನು. ಸುಮ್ಮನೆ ಇಲ್ಲದ ಹವ್ಯಾಸ ಹಚ್ಚಿಕೊಂಡು ನಮ್ಮ ಮರ್ಯಾದೆ ಗಾಳಿಗೆ ತೂರಬೇಡ"

—ಭೇದೋಪಾಯದಿಂದ ಸಾಧ್ಯವಾಗದುದು ಸಾಮೋಪಾಯದಿಂದ ಸಾಧ್ಯವಾಗಬಹುದೆಂದು ಚಂದ್ರಶೇಖರಯ್ಯನವರು ಕಣ್ಣಲ್ಲಿ ನೀರು ತಂದು ಕೊಂಡು ಹೇಳಿದರು.

ಆದರೆ ಜಯುಳ ಮನಸ್ಸು ಕೊಂಚವಾದರೂ ಕದಲಲಿಲ್ಲ. ತಂದೆಯ ಕಣ್ಣೀರಿನ ಕಡೆಗೆ ಅವಳಿಗೆ ಲಕ್ಷ್ಯವೇ ಹೋಗಲಿಲ್ಲ. ಅವನನ್ನು ಹೊರತು ತಾನು ಬೇರೆ ಯಾರನ್ನೂ ಲಗ್ನವಾಗುವುದಿಲ್ಲವೆಂದು ಅವಳು ಮತ್ತೆ ಒರಟೊರಟಾಗಿಯೇ ಹೇಳಿದಳು.

ಚಂದ್ರಶೇಖರಯ್ಯನವರಿಗೂ ಸಹನೆ ಮೀರಿತು. ಅವರು ಕೋಪದಿಂದ ಕಿಡಿಕಿಡಿಯಾಗಿ ಆರ್ಭಟಿಸಿದರು—

"ಸಾರ್ಥಕವಾಯಿತು. ಏನೋ ಪಾಪ ಹೆಣ್ಣುಮಕ್ಕಳು ಓದಲಿ ಎಂದು ನಿಮಗೆ ಸ್ವಾತಂತ್ರ್ಯ ಕೊಟ್ಟು ಓದಿಸಿದ್ದು ನನ್ನ ಮಹಾಪರಾಧವಾಯಿತು ಅಲ್ಲವೆ? ಕಲಿತ ಬುದ್ಧಿಯನ್ನೆಲ್ಲಾ ಈಗ ನನ್ನ ಹತ್ತಿರ ನೀನು ಖರ್ಚುಮಾಡುತ್ತಿರುವೆ. ಹುಷಾರ್. ನಮ್ಮ ಮಾತಿನಂತೆ ನೀನು ನಡೆಯುವುದಾದರೆ ನೀನು ಇಲ್ಲಿರಬಹುದು. ಹಾಗಲ್ಲದೆ ಅವನನ್ನು ಮದುವೆಯಾಗುತ್ತೇನೆ, ಇವನನ್ನು ಮದುವೆಯಾಗುತ್ತೇನೆ ಎಂದು ಹುಚ್ಚಾಟ ತೋರಿಸುವುದಾದರೆ ನನಗೂ ನಿನಗೂ ಯಾವ ಸಂಬಂಧವೂ ಇಲ್ಲ ತಿಳಿಯಿತೆ. ಒಂದು ಕ್ಷಣವೂ ನನ್ನ ಮನೆಯಲ್ಲಿರಕೂಡದು."

ಪ್ರಶಾಂತ ವಾತಾವರಣದಲ್ಲಿ ಇದ್ದಕ್ಕಿದ್ದಂತೆ ಸಿಡಿದ ಬಾಂಬಿನ ಭಯಂಕರ ಶಬ್ದದಂತೆ ಚಂದ್ರಶೇಖರಯ್ಯನವರ ಆರ್ಭಟ ಮನೆಯಲ್ಲೆಲ್ಲಾ ಪ್ರತಿಧ್ವನಿಸಿತು. ಅಡಿಗೆಯ ಮನೆಯಲ್ಲಿ ಕೇಕೆಹಾಕುತ್ತ ಕೆಲಸ ಮಾಡುತ್ತಿದ್ದ ಹೆಂಗಸರು ಆ ಆರ್ಭಟ ಕೇಳಿ ಕಳವಳದಿಂದ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು.

ವಿಶಾಲಾಕ್ಷಮ್ಮ ಹೌಹಾರಿ ರಾಯರಿದ್ದ ಕೋಣೆಗೆ ಧಾವಿಸಿ ಬಂದಳು, "ಏನು, ಏನಾಯಿತು, ಏನು ಗಲಾಟೆ" ಎನ್ನುತ್ತ.

ಚಂದ್ರಶೇಖಯ್ಯನವರ ಕಣ್ಣುಗಳು ಕೋಪದಿಂದ ಕೆಂಡವಾಗಿದ್ದವು. ಅವರು ಜಯುಳ ಕಡೆ ದುರದುರನೆ ನೋಡುತ್ತಿದ್ದರು. ಜಯ ಅವರ ಎದುರಿನಲ್ಲಿ ಅಲುಗಾಡದೆ ತುಟಿಪಿಟಕ್ಕೆನ್ನದೆ ತಲೆ ತಗ್ಗಿಸಿಕೊಂಡು ಕುಳಿತಿದ್ದಳು. ಯಾರೂ ಮಾತನಾಡದಿರಲು ವಿಶಾಲಾಕ್ಷಮ್ಮ ಮತ್ತೆ ಕೇಳಿದಳು—

"ಏನಾಯ್ತು? ಯಾಕೆ ಹೀಗಿದ್ದೀರಿ?"

ಚಂದ್ರಶೇಖರಯ್ಯನವರು ಹೆಂಡತಿಯ ಕಡೆಗೆ ತಿರುಗಿ ಅಂದರು—

"ನೋಡು ನಿನ್ನ ಮಗಳಿಗೆ ನಾವು ಗೊತ್ತುಮಾಡಿರೋ ಗಂಡು ಬೇಡವಂತೆ. ನಮ್ಮ ಔಟುಹೌಸಿನಲ್ಲಿರೊ ಆ ಕಪಿಮುಂಡೇ ಮಗನ್ನ ಮದುವೆಯಾಗ್ತಾಳಂತೆ."

"ಕಪಿಗಿಪಿ ಅಂತ ಹಾಗೆಲ್ಲಾ ಬಯ್ಯಬೇಡಣ್ಣಾ ಅವರ್ನ"

—ಜಯ ಸೆಟೆದುಕೊಂಡು ಹೇಳಿದಳು.

"ಇಲ್ಲ ಒಳ್ಳೆ ಮನ್ಮಥ, ಮೋಹನಾಂಗ ಅಲ್ಲವೇ?"

—ವ್ಯಂಗ್ಯವಾಗಿ ನುಡಿದರು ಚಂದ್ರಶೇಖರಯ್ಯನವರು ಮಗಳ ಮುಖವನ್ನು ತೀಕ್ಷ್ಣವಾಗಿ ನೋಡುತ್ತ.

"ಏನೇ ಇದೆಲ್ಲಾ ಜಯ, ಏನೇ ನಿನ್ನ ಹುಡುಗಾಟ."

—ವಿಶಾಲಾಕ್ಷಮ್ಮ ಕಳವಳದಿಂದ ಮಗಳನ್ನು ಕೇಳಿದರು.

"ಹುಡುಗಾಟವೂ ಅಲ್ಲ ಗಿಡಗಾಟವೂ ಇಲ್ಲ. ನಾನು ಅವರ್ನೇ ಮದುವೆಯಾಗೋದು. ನೀವು ಒಪ್ಪಿದರೆ ಒಪ್ಪಿ, ಬಿಟ್ಟರೆ ಬಿಡಿ."

"ಹಾಗಾದರೆ ನಾವು ಯಾರೂ ಅಲ್ಲವೇನೆ ನಿನಗೆ."

"ನನ್ನ ಇಷ್ಟಕ್ಕೆ ಅಡ್ಡಿಪಡಿಸೋದಾದರೆ ನೀವು ಯಾರೂ ಅಲ್ಲ ನನ್ನ ಭಾಗಕ್ಕೆ."

"ಜೇಡ್ಡೆ. ಹಾಗೆಲ್ಲಾ ಮಾತಾಡಬೇಡ್ವೆ."

ತಾಯಿ ಎಷ್ಟೆಷ್ಟು ಗೊಗರೆದು ಕೇಳಿಕೊಂಡರೂ ಮಗಳು ಕೊಂಚವಾದರೂ ಜಗ್ಗಲಿಲ್ಲ. ತಾಯಿಯ ಕಣ್ಣೀರಿನಿಂದಲೂ ಜಯ ಕರಗಲಿಲ್ಲ. ಕೊನೆಗೆ ಅಲ್ಲಿಂದೆದ್ದು ತನ್ನ ಕೋಣೆಗೆ ಹೋಗಿ ಧಡಾರನೆ ಬಾಗಿಲು ಹಾಕಿಕೊಂಡು ಕುಳಿತುಬಿಟ್ಟಳು ಜಯ. ಚಂದ್ರಶೇಖರಯ್ಯನವರಿಗೂ ವಿಶಾಲಾಕ್ಷಮ್ಮನಿಗೂ ಆಕಾಶವೇ ತಮ್ಮ ಮೇಲೆ ಕಳಚಿಬಿದ್ದಂತಾಯಿತು.

ಆ ದಿನ ಮಧ್ಯಾಹ್ನ ಗಂಗಾಧರಮೂರ್ತಿ ತನ್ನ ಮನೆಗೆ ಬಂದು ಬೀಗ ತೆಗೆದ ಕೂಡಲೆ ಚಂದ್ರಶೇಖರಯ್ಯನವರು ಅವನೊಂದಿಗೆ ಒಂದು ಮಾತು ಸಹ ಆಡದೆ ಆಳುಗಳನ್ನು ಬಿಟ್ಟು ಮನೆಯೊಳಗಿನಿಂದ ಅವನ ಸಾಮಾನುಗಳನ್ನೆಲ್ಲಾ ಹೊರಹಾಕಿಸಿದರು. ಗಂಗಾಧರಮೂರ್ತಿ ಕಕ್ಕಾಬಿಕ್ಕಿಯಾಗಿ

ನೋಡುತ್ತ ನಿಂತ. ಸಾಮಾನುಗಳನ್ನೆಲ್ಲಾ ಹೊರಹಾಕಿ ಮನೆಗೆ ಬೇರೆ ಬೀಗ ತಗುಲಿಸಿದ ನಂತರ ಗಂಗಾಧರಮೂರ್ತಿಯ ಮುಖ ನೋಡಿ ಚಂದ್ರ ಶೇಖರಯ್ಯನವರೆಂದರು—

"ಯಾಕೆ ನಿಂತಿದ್ದೀಯ. ನಿನ್ನ ಸಾಮಾನ್ನೆಲ್ಲಾ ತಗೊಂಡು ಈಗಲೇ ಎಲ್ಲಾದ್ರೂ ಹೊರಟುಹೋಗು. ಒಂದು ಕ್ಷಣ ಇಲ್ಲಿರಕೂಡದು."

"ಯಾಕೆ ಸಾರ್ ನಾನೇನು ಮಾಡಿದೆ?"

—ರಾಯರು ಸಿಟ್ಟಿನಿಂದ ಕಾವುಗೊಂಡು ಹೇಳಿದ ಮಾತುಗಳಿಗೆ ವಿನೀತವಾಗಿಯೇ ಕೇಳಿದ ಗಂಗಾಧರಮೂರ್ತಿ.

"ನೀನು ಏನು ಮಾಡಿದಿಯೋ ಏನು ಬಿಟ್ಟಿಯೋ ನಿನಗೆ ಎಕ್ಸ್‌ಪ್ಲನೇಷನ್ ಕೊಡೋದಕ್ಕೆ ನನಗೆ ಪುರಸತ್ತಿಲ್ಲ. ಇನ್ನು ನೀನು ಇಲ್ಲಿರಕೂಡದು. ಹೊರಟುಹೋಗು ಅಷ್ಟೆ"

ಚಂದ್ರಶೇಖರಯ್ಯನವರು ಅಷ್ಟು ಹೇಳಿ ಅಲ್ಲಿ ನಿಲ್ಲದೆ ತಮ್ಮ ಮನೆಯೊಳಕ್ಕೆ ಹೊರಟುಹೋದರು. ಗಂಗಾಧರಮೂರ್ತಿ ಇನ್ನು ವಿಧಿಯಿಲ್ಲದೆ ಹೊರಬಿದ್ದಿದ್ದ ಸಾಮಾನುಗಳೆನ್ನೆಲ್ಲಾ ತನ್ನ ಸ್ನೇಹಿತನೊಬ್ಬನ ಮನೆಗೆ ಸಾಗಿಸಿದ. ಅವನು ಹೊರಟುಹೋಗುತ್ತಲೂ ಚಂದ್ರಶೇಖರಯ್ಯನವರು ಸಮಾಧಾನದ ನಿಟ್ಟುಸಿರೊಂದನ್ನು ಬಿಟ್ಟರು.

ಅದೇ ದಿನ ಸಂಜೆ ಮಾಮೂಲಿನಂತೆ ಲಾಲ್‌ಬಾಗಿನಲ್ಲಿ ಸಂಧಿಸಿದರು ಜಯ ಮತ್ತು ಗಂಗಾಧರಮೂರ್ತಿ.

ಜಯ ನಡೆದ ಸಂಗತಿಯನ್ನೆಲ್ಲಾ ಗಂಗಾಧರಮೂರ್ತಿಗೆ ವಿವರವಾಗಿ ಹೇಳಿದಳು.

"ಈಗ ಏನು ಮಾಡೋಣ ಅಂತೀಯ?"

—ಗಂಗಾಧರಮೂರ್ತಿ ಕೇಳಿದ.

"ಮಾಡೋದೇನು. ನಾನಂತೂ ನಿಮ್ಮನ್ನೇ ಲಗ್ನವಾಗೋದು. ಇದಕ್ಕೆ ಅಪ್ಪ ಅಮ್ಮ ಒಪ್ಪಿದರೆ ಒಪ್ಪಲಿ, ಬಿಟ್ಟರೆ ಬಿಡಲಿ"

—ಎಂದಳು ಜಯ.

"ಹಾಗಂದ್ರಾಗುತ್ಯೆ? ಎಷ್ಟಾದರೂ ಅವರು ನಿನ್ನ ತಂದೆ ತಾಯಿ."

—ಗಂಗಾಧರಮೂರ್ತಿ ಪ್ರಶ್ನಿಸಿದ.

"ಮತ್ತೆ ನನ್ನ ಸ್ವಾತಂತ್ರ್ಯಕ್ಕೆ ಅಡ್ಡಿಬರೋದಕ್ಕೆ ಅವರ್‍ಯಾರು? ಅವರಿಗೇನು ಹಕ್ಕಿದೆ?"

"ಮಕ್ಕಳ ಮೇಲೆ ತಂದೆ ತಾಯಿಗಳಿಗೆ ಒಂದು ಸ್ವಾತಂತ್ರ್ಯ ಇದ್ದೇ ಇರತ್ತೆ"

"ಅದು ಓಬಿರಾಯನ ಕಾಲದ ಮಾತು.

"ಹೋಗಲಿಬಿಡು. ನನ್ನ ನೀನು ಲಗ್ನವಾಗೋಕ್ಕೆ ನಿನ್ನ ತಂದೆ ತಾಯಿಗಳು ಬಿಲ್‌ಖುಲ್ ಒಪ್ಪದೇ ಇದ್ದರೆ ಏನು ಮಾಡಬೇಕು ಅಂತ."

"ನನಗೆ ಅವರೂ ಬೇಡ, ಅವರ ಮನೇನೂ ಬೇಡ. ಕೊನೆಗೆ ಈ ಊರೂ ಬೇಡ. ಬೇರೆ ಎಲ್ಲಾದ್ರೂ ಹೋಗಿ ನಮ್ಮ ಪಾಡಿಗೆ ನಾವು ಮದುವೆ ಮಾಡಿಕೊಂಡು ಸುಖವಾಗಿದ್ದುಬಿಡೋಣ"

ಆ ಮಾತು ಕೇಳಿ ಗಂಗಾಧರಮೂರ್ತಿ ವಿಚಾರಪರನಾದ.

"ಅದು ಸರಿ. ಈ ಊರು ಬಿಟ್ಟು ನಾವು ಹೋಗೋದಾದರೂ ಎಲ್ಲಿಗೆ? ಯಾರಿದ್ದಾರೆ ನಮಗೆ? ಇದ್ದ ಕೆಲಸಾನೂ ಕಳ್ಕೊಂಡು ಇಲ್ಲದ ಕಷ್ಟಕ್ಕೆ ಗುರಿಯಾಗಬೇಕಾಗೋಲ್ವೆ?"

"ಒಳ್ಳೆ ಕೆಲಸ! ಮಹಾ ದಿವಾನಗಿರಿ ಅಲ್ವೆ ಈಗ ನೀವು ಮಾಡ್ತಿರೋದು."

"ಹ್ಯಾಗೋ ಜೀವನ ಸಾಗ್ತಿದೆಯೇ"

"ಸರಿ ಮತ್ತೆ. ದುಡಿದು ಜೀವನ ಸಾಗಿಸೋರ್ಗೆ ಎಲ್ಲಿ ಹೋದರೂ ಕೆಲಸ ಸಿಗತ್ತೆ. ಈ ಕೆಲಸ ಇಲ್ದಿದ್ರೆ ಇನ್ನೊಂದು ಕೆಲಸ."

"ಕೆಲಸ ಸಿಗೋದು ಅಷ್ಟು ಸುಲಭ ಅಂತ ತಿಳ್ಕೋಬೇಡ ಜಯಾ ಈಗಿನಕಾಲದಲ್ಲಿ."

"ಮನಸ್ಸೊಂದಿದ್ದರೆ ಮಾರ್ಗ ತಾನಾಗಿಯೆ ಸಿಗತ್ತೆ. ನಾನೂ ಓದಿ ದೀನಿ. ಸುಮ್ನೆ ಕೂತ್ಕೋತೇನ್ಯೇ. ಯಾವುದಾದರೂ ಕೆಲಸಕ್ಕೆ ಪ್ರಯತ್ನ ಪಡ್ತೇನೆ. ಸಿಕ್ಕೇ ಸಿಗತ್ತೆ. ಇಬ್ಬರೂ ನಮ್ಮಷ್ಟಕ್ಕೆ ನಾವು ಸುಖವಾಗಿರ ಬಹುದು. ಆದರೆ........"

"ಏನು ಆದರೆ?"

"ಆದಕ್ಕೆಲ್ಲಾ ಕೊಂಚ ದುಡ್ಡುಕಾಸು ಸರಿಮಾಡ್ಕೋಬೇಡ್ವೆ. ನನ್ಹತ್ರ ಸಿಗಿದರೂ ಮೂರ್ರಾಕಿಸಿಲ್ಲ."

"ಆ ಯೋಚನೆ ನಿನುಗೆ ಬೇಡ. ನನ್ನ ಹತ್ರ ಐನೂರು ರೂಪಾಯಿ ಇದೆ. ಅಪ್ಪ ನನ್ನ ಪಾಕೆಟ್ ಎಕ್ಸ್‌ಪೆನ್ಸಿಗೆ ಕೊಟ್ಟಿದ್ದ ದುಡ್ನಲ್ಲಿ ಉಳಿಸಿದ್ದು. ಇನ್ನೊಂದು ವಾರದಲ್ಲಿ ಇನ್ನೂ ಒಂದಷ್ಟು ಹೇಗಾದರೂ ಶೇಖರಿಸ್ತೇನೆ. ನನ್ನ ಒಡವೆವಸ್ತುಗಳನ್ನು ತಗೊಂಡು ಬಂದುಬಿಡ್ತೇನೆ."

ಅಲ್ಲಿಗೆ ಎಲ್ಲಾ ತೀರ್ಮಾನವಾದಂತಾಯಿತು. ಅವರು ಎಂಟು ಹತ್ತು ದಿನಗಳಲ್ಲಿ ಬೆಂಗಳೂರು ಬಿಟ್ಟು ಹೊರಡಲು ನಿಶ್ಚಯಿಸಿದರು. ಗಂಗಾಧರಮೂರ್ತಿ ತಾನೂ ಆದಷ್ಟು ಹಣ ಜತೆ ಮಾಡುವುದಾಗಿ ಹೇಳಿದ.

ಜಯ ಮತ್ತೆ ಮನೆಯಲ್ಲಿ ಆ ಪ್ರಕರಣ ಎತ್ತಿ ಮಾತನಾಡಲಿಲ್ಲ. ಅವಳು ಸುಮ್ಮನಿದ್ದುದನ್ನು ಕಂಡು ಅವಳಿಗೆ ಹಿಡಿದಿದ್ದ ಪೀಡೆ ತೊಲಗಿರಬೇಕೆಂದು ಚಂದ್ರಶೇಖರಯ್ಯನವರೂ, ವಿಶಾಲಾಕ್ಷಮ್ಮನೂ ಭಾವಿಸಿ ಸಮಾಧಾನ ಗೊಂಡರು.

ಮದುವೆಗೆ ಆಗಬೇಕಾದ ಸಿದ್ಧತೆಗಳು ಎಂದಿನಂತೆ ಭರದಿಂದ ಸಾಗತೊಡಗಿದವು. ಈ ಮಧ್ಯೆ ಭಾವಿಬೀಗರಾದ ಸೋಮಯ್ಯನವರೂ ಒಂದೆರಡು ಬಾರಿ ಬಂದು ಕುಶಲಪ್ರಶ್ನೆ ವಿಚಾರಿಸಿಕೊಂಡು ಹೋದರು. ಜಯೆ ಮಾತ್ರ ಯಾವೊಂದು ಮಾತಿಗೂ ಹೋಗದಿದ್ದರೂ ಯಾರಿಗೂ ಸುಳಿವು ಕೊಡದಂತೆ ತನ್ನ ಸಿದ್ಧತೆಯನ್ನು ತಾನು ಮಾಡಿಕೊಳ್ಳತೊಡಗಿದಳು. ತನ್ನ ಬಟ್ಟೆ-ಬರೆ, ಒಡವೆ-ವಸ್ತುಗಳನ್ನೂ ಒಂದೊಂದಾಗಿ ಮನೆಯಿಂದ ಹೊರಸಾಗಿಸಹತ್ತಿದಳು. ಜತೆಗೆ ತಂಗಿಯರ ಒಡವೆ ವಸ್ತುಗಳನ್ನೂ ಒಂದಷ್ಟು ಸೇರಿಸಿಕೊಂಡಳು. ತನ್ನಲ್ಲಿದ್ದ ಹಣವನ್ನೂ ಗಂಗಾಧರಮೂರ್ತಿಯ ವಶ ಕೊಟ್ಟಳು.

ಒಂದು ದಿನ ಕಾಲೇಜಿನಲ್ಲಿ ಕ್ಲಾಸ್‌ಡೇ ಇದೆ. ಅಲ್ಲಿ ನನಗೆ ನಾಟಕದಲ್ಲಿ ಪಾರ್ಟ್‌ಕೊಟ್ಟಿದ್ದಾರೆ. ಅದಕ್ಕಾಗಿ ನಿನ್ನ ಒಡವೆಗಳನ್ನೂ ಹಾಕಿಕೊಂಡು ಹೋಗುತ್ತೇನೆ ಎಂದು ತಾಯಿಗೆ ಸುಳ್ಳುಹೇಳಿ ವಿಶಾಲಾಕ್ಷಮ್ಮನ ಒಡವೆಗಳನ್ನೂ ತೆಗೆದುಕೊಂಡಳು. ಪಾಪ, ವಿಶಾಲಾಕ್ಷಮ್ಮ ಏನೂ ಅರಿಯದ ಮುಗ್ಧೆ. ಮಗಳ ಮಾತು ನಿಜವಿರಬಹುದೆಂದು ನಂಬಿದಳು.

ಅದೇ ದಿನ ರಾತ್ರಿ ಮದರಾಸ್ ರೈಲಿನಲ್ಲಿ ಗಂಗಾಧರಮೂರ್ತಿ, ಜಯಾ ಇಬ್ಬರೂ ಬೆಂಗಳೂರು ಬಿಟ್ಟು ಹೊರಟರು.

ಮಗಳು ರಾತ್ರಿ ಎಷ್ಟು ಹೊತ್ತಾದರೂ ಕಾಲೇಜಿನಿಂದ ಹಿಂದಿರುಗಿ ಬಾರದಿದ್ದುದನ್ನು ನೋಡಿ ಚಂದ್ರಶೇಖರಯ್ಯನವರಿಗೂ ವಿಶಾಲಾಕ್ಷಮ್ಮ ನಿಗೂ ಬಹಳ ಗಾಬರಿಯಾಯಿತು. ವಿಶಾಲಾಕ್ಷಮ್ಮನಂತೂ ಕಣ್ಣೀರ ಕೋಡಿ ಹರಿಸುತ್ತ ಕುಳಿತುಬಿಟ್ಟರು. ಚಂದ್ರಶೇಖರಯ್ಯನವರು ಕಾಲೇಜು ಬಳಿ ಹೋಗಿ ನೋಡಿದರು. ಅಲ್ಲಿಂದ ಕಾಲೇಜು ಹಾಸ್ಟಲಿಗೆ ಹೋಗಿ ವಿಚಾರಿಸಿದರು. ಅಲ್ಲಿ ದೊರೆತ ಸುದ್ದಿಯಿಂದ ಅವತ್ತು ಯಾವ ಕ್ಲಾಸ್ ಡೇನೂ ಇರಲಿಲ್ಲವೆಂಬುದು ತಿಳಿಯಿತು.

ಮುಂದೇನು ಮಾಡಬೇಕೆಂಬುದೇ ಚಂದ್ರಶೇಖರಯ್ಯನವರಿಗೆ ಹೊಳೆಯದಂತಾಯಿತು. ಮಗಳು ಗಂಗಾಧರಮೂರ್ತಿಯ ಬಳಿಗೇ ಹೋಗಿರ ಬಹುದೆಂದು ಅವರಿಗೆ ಸ್ಪಷ್ಟವಾಯಿತು. ಒಂದು ಕಡೆ ತಡೆಯಲಾಗದ ಕೋಪ, ಮತ್ತೊಂದು ಕಡೆ ಭರಿಸಲಾರದ ದುಃಖ ಇವುಗಳಿಂದ ಅವರು ತಲ್ಲಣಿಸಿದರು.

ಗಂಗಾಧರಮೂರ್ತಿಯನ್ನು ತಮ್ಮ ಮನೆಯಿಂದ ಹೊರಹಾಕಿದ ಮೇಲೆ ಅವನು ಈಗ ಎಲ್ಲಿ ವಾಸಕ್ಕಿರುವನೆಂಬುದು ಚಂದ್ರಶೇಖರಯ್ಯನವ ರಿಗೆ ಗೊತ್ತಿರಲಿಲ್ಲ. ಆದರಿಂದ ಅವರು ಟೀ ಬೋರ್ಡು ಆಫೀಸಿನ ಸೆಕ್ರೆಟರಿಯವರ ಮನೆಗೇ ಹೋಗಿ ಅವರನ್ನು ವಿಚಾರಿಸಿದರು. ಗಂಗಾಧರ ಮೂರ್ತಿ ಕಳೆದ ಎರಡು ದಿನದಿಂದಲೂ ಆಫೀಸಿನ ಕಡೆಗೆ ಬಂದಿಲ್ಲವೆಂಬುದು ಅವರಿಂದ ತಿಳಿಯಿತು.

ಪೋಲೀಸ್ ಠಾಣೆಗಾದರೂ ಹೋಗಿ ದೂರು ಕೊಡಬೇಕೆಂದು ಚಂದ್ರಶೇಖರಯ್ಯನವರು ಯೋಚಿಸಿದರು. ಆದರೆ ಮಗಳು ಕೆಲವು ದಿನ ಗಳ ಹಿಂದೆ ತಮ್ಮೊಡನೆ ಆಡಿದ ಮಾತುಗಳ ನೆನಪಿಗೆ ಬಂದು ಹಾಗೆ ದೂರು ಕೊಡುವುದರಿಂದ ಯಾವ ಯಾವ ಪ್ರಯೋಜನವೂ ಆಗದೆಂದು ಅರಿತು ತಲೆಗೆ ಕೈಯಿಟ್ಟು ಸುಮ್ಮನೆ ಕುಳಿತುಬಿಟ್ಟರು.

ಮೂರು ದಿನಗಳ ನಂತರ ಚಂದ್ರಶೇಖರಯ್ಯನವರಿಗೆ ಜಯಳಿಂದ ಒಂದು ಪತ್ರ ಬಂತು. ಮೂರೇ ಪಂಕ್ತಿಗಳಲ್ಲಿದ್ದ ಆ ಪತ್ರದ ಸಾರಾಂಶ

ವಿಷ್ಟು—"ನಾನೂ, ಮ|| ರಾ|| ಗಂಗಾಧರಮೂರ್ತಿಗಳೂ ಸುಖವಾಗಿದ್ದೇವೆ. ನಿನ್ನೆಯ ದಿನ ನಮ್ಮ ವಿವಾಹವಾಯಿತು, ತಿರುಪತಿ ವೆಂಕಟರಮಣಸ್ವಾಮಿ ಸನ್ನಿಧಿಯಲ್ಲಿ. ನಮ್ಮನ್ನು ಹುಡುಕಿಸುವ ತೊಂದರೆ ತೆಗೆದುಕೊಳ್ಳಬೇಡಿ."

ಕೊನೆಗೂ ಮಗಳು ಹೀಗೆ ಮಾಡಿದಳಲ್ಲ ಎಂದು ಚಂದ್ರಶೇಖರಯ್ಯನವರು ಹಲ್ಲುಹಲ್ಲು ಕಡಿದರು. ವಿಶಾಲಾಕ್ಷಮ್ಮ 'ಗೋಳೋ' ಎಂದು ಅತ್ತು ಕಂಬನಿ ಸುರಿಸಿದರು, ಮುಂದೆ ಮುಖ ಎತ್ತಿ ಹೇಗೆ ಬಾಳು ನಡೆಸುವುದೆಂದು.

ಇತ್ತ ತಿರುಪತಿಯಲ್ಲಿ ದೇವರ ಸನ್ನಿಧಿಯಲ್ಲಿ ವಿವಾಹವಾದ ನೂತನ ದಂಪತಿಗಳು ಮತ್ತೆ ಬೆಂಗಳೂರಿಗೆ ಬಂದರು. ತಮ್ಮ ಆ ವಿವಾಹ ಆದಷ್ಟು ಕಾನೂನು ಬದ್ಧವಾಗಿರಬೇಕೆಂದು ಬಯಸಿ ಬೆಂಗಳೂರಿನ ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗಿ ಅಲ್ಲಿಯೂ ರಿಜಿಸ್ಟ್ರೇಷನ್ ಮ್ಯಾರೇಜಿಗೆ ತಮ್ಮ ಸಹಿಗಳನ್ನು ಹಾಕಿದರು.

ಬೆಂಗಳೂರಿನಿಂದ ಅವರು ಬೊಂಬಾಯಿ ದಾರಿ ಹಿಡಿದರು, ಬೊಂಬಾಯಿಯಲ್ಲಿ ಯಾವುದಾದರೂ ಕೆಲಸ ದೊರಕಿಸಿಕೊಂಡು ಅಲ್ಲಿಯೇ ಇದ್ದು ಬಿಡಬೇಕೆಂದು.

ಬೊಂಬಾಯಿ ಗಂಗಾಧರಮೂರ್ತಿ-ಜಯ ಇಬ್ಬರಿಗೂ ಅಪರಿಚಯವಾದ ಸ್ಥಳ. ಕೈಯಲ್ಲಿ ಹೇಗೂ ಹಣವಿತ್ತು. ಯಾವುದೋ ಹೋಟೆಲೊಂದರಲ್ಲಿ ಬಿಡಾರ ಮಾಡಿದರು.

ಪ್ರೇಕ್ಷಣೀಯವಾದ ಸ್ಥಳಗಳನ್ನು ನೋಡುವುದರಲ್ಲಿಯೇ ಹದಿನೈದು ಇಪ್ಪತ್ತುದಿನಗಳು ಕಳೆದವು.

ಶ್ರೀಮಂತಿಕೆಯಲ್ಲಿ ಹುಟ್ಟಿ ಬೆಳೆದವಳು ಜಯ. ಅದರಿಂದಾಗಿ ಆವಳಲ್ಲಿ ದುಂದುವೆಚ್ಚವೂ ಮನೆ ಮಾಡಿಕೊಂಡಿತ್ತು. ನಾಲ್ಕುದಿವಸ ಸುಖವಾಗಿದ್ದು ನಂತರ ಯಾವುದಾದರೂ ಕೆಲಸ ನೋಡಿಕೊಂಡರಾಯಿತು ಎಂದು ಗಂಗಾಧರಮೂರ್ತಿಯೂ ಜಯಳನ್ನು ಎಡೆಬಿಡದೆ ಅವಳ ಸಂಗಸುಖದಲ್ಲಿ ಇಹಲೋಕವನ್ನೇ ಮರೆತು.

ಆದರೆ ಕುಡಿಕೆಯ ಹಣ ಎಷ್ಟು ದಿನ ತಾನೆ ಬಂದೀತು ಅವರ ಇತಿ ಮಿತಿಯಿಲ್ಲದ ಆ ದುಂದಿನಲ್ಲಿ. ಕೈಯಲ್ಲಿದ್ದ ಹಣವೆಲ್ಲಾ ಕರಗಿತು. ಇನ್ನು ಜಯಳ ಮೈ ಮೇಲಿದ್ದ ಒಡವೆಗಳೂ ಒಂದೊಂದಾಗಿ ಕರಗತೊಡಗಿದವು.

ಇನ್ನು ಹೀಗೆಯೇ ಕಾಲ ಕಳೆದರೆ ಆಗುವುದಿಲ್ಲವೆಂದು ಗಂಗಾಧರ ಮೂರ್ತಿ-ಜಯ ಇಬ್ಬರೂ ಚಾಕರಿಬೇಟೆಗೆ ಷುರು ಹಚ್ಚಿದರು.

ಬೊಂಬಾಯಿ ನಗರವನ್ನೆಲ್ಲಾ ನಾಯಿಗಳಂತೆ ಅಲೆದರು ಕೆಲಸ ಕ್ಕಾಗಿ. ಆದರೆ ಅದರಿಂದ ಯಾವ ಪ್ರಯೋಜನವೂ ದೊರೆಯಲಿಲ್ಲ. ಪ್ರತಿಯಾಗಿ ಆಗುತ್ತಿದ್ದ ವೆಚ್ಚವೂ ಹೆಚ್ಚಿತು. ಟ್ರಾಮಿಗೆ, ಚಾ ಅಂಗಡಿ ಗಳಿಗೆ ದಿನವೂ ಐದಾರು ರೂಪಾಯಿಗಳನ್ನಾದರೂ ಇಡಬೇಕಾಯಿತು.

ಹೀಗೆ ಅವರಿಗರಿವಿಲ್ಲದಂತೆಯೇ ಐದು ತಿಂಗಳು ಕಳೆದುಹೋದವು ಜಯಳ ಮೈಮೇಲಿದ್ದ ಆಭರಣಗಳು ಪೂರ್ಣವಾಗಿ ಒಂದಿಲ್ಲದಂತೆ ಮಾಯದುದಾಯಿತು, ದಿನದಿನದ ಜೀವನ ನಿರ್ವಹಣೆಗೆ. ಇನ್ನು ಬೇರೆ ಉಪಾಯವಿಲ್ಲದೆ ಅವಳ ಒಳ್ಳೊಳ್ಳೆಯ ಸೀರೆಗಳೂ ಆದೆದಾರಿ ಹಿಡಿದವು. ಮತ್ತೆ ಎರಡು ತಿಂಗಳ ಕಾಲ ಇದೇ ರೀತಿ ಕಳೆದುದಾಯಿತು. ಇಂದು ಕೊಡುತ್ತೇವೆ, ನಾಳೆ ಕೊಡುತ್ತೇವೆ, ಊರಿಗೆ ಹಣಕ್ಕೆ ಬರೆದಿದ್ದೇವೆ, ಮನಿಯಾರ್ಡರು ಬಂದು ಬಿಡುತ್ತದೆ ಎನ್ನುತ್ತ ಇನ್ನು ಎರಡು ತಿಂಗಳು ನೂಕಿದುದಾಯಿತು. ಹೋಟಲಿನವನೂ ಬಾಕಿಗಾಗಿ ತೊಂದರೆ ಕೊಡಲು ಪ್ರಾರಂಭಿಸಿದ. ಇವರ ಠಕ್ಕು ಠೌಳಿಯ ವಾಯಿದೆಗಳನ್ನು ಕಂಡು ಬೇಸರ ಗೊಂಡ. ಕಡೆಗೊಂದು ದಿನ ಅವನು ಇನ್ನು ತನ್ನ ಹೋಟಲಿನಲ್ಲಿ ಅವರಿಗೆ ಆಶ್ರಯಕೊಡಲು ಸಾಧ್ಯವಿಲ್ಲವೆಂದು ಹೇಳಿಯೇಬಿಟ್ಟ ಮಾತ್ರವಲ್ಲ ಅವರ ಸಾಮಾನುಗಳನ್ನು ತನ್ನ ಬಾಕಿ ಬೇಬಾಕು ಮಾಡಿ ನಂತರ ತೆಗೆದುಕೊಂಡು ಹೋಗಬೇಕೆಂದು ಹೇಳಿದ. ಎಷ್ಟಾದರೂ ವ್ಯಾಪಾರಿಯಲ್ಲವೆ ಅವನು! ಸರಿ ಗಂಗಾಧರಮೂರ್ತಿ-ಜಯ ಉಟ್ಟ ಬಟ್ಟೆಯಲ್ಲಿ ಬೀದಿಯಲ್ಲಿ ನಿಲ್ಲ ಬೇಕಾಯಿತು.

ಇಷ್ಟಾಗುವ ವೇಳೆಗೆ ಅವರಿಗೆ ಮುಂಬಯಿ ಜೀವನ ಸಾಕು ಸಾಕೆ ನ್ನಿಸಿ ಬಿಟ್ಟಿತು. ಬೆಂಗಳೂರಿಗೇ ಹಿಂದಿರುಗಿ ಹೊರಟುಹೋಗುವುದು ಸರಿ ಯೆನಿಸಿತು. ಅಲ್ಲಿಯಾದರೆ ಗುರುತಿನವರು ಎಷ್ಟೋ ಮಂದಿ ಇದ್ದಾರೆ,

ಹೇಗಾದರೂ ಜೀವನಕ್ಕೊಂದು ಕೆಲಸ ಸಂಪಾದಿಸಿಕೊಳ್ಳಬಹುದು ಎಂದು ನಿರ್ಧರಿಸಿದರು.

ಬೆಂಗಳೂರಿಗೆ ಮರಳುವುದೆಂದು ನಿರ್ಧರಿಸಿದುದೇನೋ ಆಯಿತು. ಆದರೆ ರೈಲು ವೆಚ್ಚಕ್ಕೆ ಹಣ?

ಯೋಚಿಸಿ ಯೋಚಿಸಿ ಬೇರೆ ದಾರಿ ಕಾಣದೆ ಹೇಗಾದರಾಗಲಿ ಹೊರಟುಬಿಡುವುದೆಂದು ಧೃಢನಿರ್ಧಾರ ಮಾಡಿಕೊಂಡು ಟಿಕೀಟಿಲ್ಲದೆ ರೈಲು ಹತ್ತಿಬಿಟ್ಟರು.

ಗಂಗಾಧರಮೂರ್ತಿ ಬುದ್ಧಿ ಓಡಿಸಿ ಜಯಳನ್ನು ಹೆಂಗಸರ ಡಬ್ಬಿಯಲ್ಲಿ ಕುಳ್ಳಿರಿಸಿ ತಾನು ಬೇರೇ ಡಬ್ಬಿಯಲ್ಲಿ ಕುಳಿತ. ಟಿಕೆಟ್ ಕಲೆಕ್ಟರ್ ಬಂದು ಟಿಕೆಟ್ ಕೇಳಿದಾಗ ಜಯ "ಬೇರೇ ಡಬ್ಬಿಯಲ್ಲಿ ಗಂಡಸರ ಬಳಿ ಇದೆ" ಎಂದು ಹೇಳಿ ಬಚಾಯಿಸಿಕೊಂಡಳು. ಅದೇ ದಾರಿ ಹಿಡಿದು ಗಂಗಾಧರ ಮೂರ್ತಿ "ನನ್ನ ಹೆಂಡತಿ ಹತ್ತಿರ ಇದೆ, ಹೆಂಗಸರ ಡಬ್ಬಿಯಲ್ಲಿ" ಎಂದ. ಅಂತೂ ಹೇಗೊ ಮಾಡಿ ಅವರು ಬೆಂಗಳೂರು ಮುಟ್ಟಿದರು.

ಬೆಂಗಳೂರು ಸೇರಿದುದೇನೋ ಆಯಿತು. ಆದರೆ ಮುಂದೆ? ಎಲ್ಲಿಗೆ ಹೋಗುವುದು? ಎಲ್ಲಿರುವುದು?

ತಂದೆಯ ಮನೆಗೆ ಹೋಗುವುದಂತೂ ಸಾಧ್ಯವಿರಲಿಲ್ಲ ಜಯಳಿಗೆ. "ಅವನನ್ನು ನೀನು ಲಗ್ನವಾಗುವುದಾದರೆ ಒಂದು ಘಳಿಗೆ ನನ್ನ ಮನೆಯಲ್ಲಿರಕೂಡದು" ಎಂದು ಚಂದ್ರಶೇಖರಯ್ಯನವರು ಸಿಡಿದು ನುಡಿದಿದ್ದ ಮಾತುಗಳ ಅವಳ ಕಿವಿಯಲ್ಲಿ ಇನ್ನೂ ಮೊರೆಯುತ್ತಿದ್ದವು. ತಾಯಿಗೂ ಮುಖ ತೋರಿಸುವಂತಿಲ್ಲ. ಅವಳಿಗೂ ಸುಳ್ಳು ಹೇಳಿ ಅವಳ ಒಡವೆಗಳನ್ನೆಲ್ಲಾ ಮೋಸದಿಂದ ಹಾರಿಸಿಕೊಂಡು ಬಂದಿದ್ದುದಾಗಿತ್ತು. ಗಂಗಾಧರ ಮೂರ್ತಿಗೆ ಆಶ್ರಯ ಕೊಡುವಂತಹ ಆಪ್ತ ಸ್ನೇಹಿತರು ಯಾರೂ ಇರಲಿಲ್ಲ.

'ಹತ್ತು ಜನ ಹೋಗಿಬರುವ ಸ್ಥಳ, ತೋಟದಪ್ಪನವರ ಛತ್ರದಲ್ಲಿ ಇಳಿದುಕೊಳ್ಳುವುದು ಬೇಡ, ಅಲ್ಲದೆ ಅದು ರೈಲ್ವೆ ಸ್ಟೇಷನ್ನಿನ ಮಗ್ಗುಲಲ್ಲೆ ಇದೆ. ಗುರುತಿನವರು ಕಂಡಾರು' ಎಂದುಬಿಟ್ಟಳು ಜಯ. ಅದೂ ನಿಜವೇ ಎನ್ನಿಸಿತು ಗಂಗಾಧರಮೂರ್ತಿಗೆ. ಇನ್ನು ಉಳಿದುದು ಪೂರ್ಣಯ್ಯನ ಛತ್ರ.

ಗಂಗಾಧರಮೂರ್ತಿ – ಜಯ ಇಬ್ಬರೂ ಪೂರ್ಣಯ್ಯನ ಛತ್ರದಲ್ಲಿ ಒಂದು ಕೋಣೆ ತೆಗೆದುಕೊಂಡು ಅಲ್ಲಿ ಇಳಿದುಕೊಂಡರು.

ಜಯ ಮೊದಲಿನಿಂದಲೂ ಉಂಡು ತಿಂದು ಸುಖವಾಗಿ ಬೆಳೆದವಳು; ಯಾವ ಯೋಚನೆಯೂ ಇಲ್ಲದೆ, ಮಮತೆಯ ತಂದೆ ತಾಯಿಗಳ ಮೊದಲ ನೆಯ ಮಗಳಾಗಿ ಬಾಳಿದವಳು. ಹಸಿವಿನ ಬಾಧೆ ಏನೆಂಬುದನ್ನೆ ಅವಳು ಕಂಡು ಅರಿತವಳಲ್ಲ. ಈಗ ಅದರ ಅನುಭವವಾಯಿತು. ತಡೆಯ ಲಾರದೆ ನಲ್ಲಿಯ ಬಳಿಗೆ ಹೋಗಿ ಮನದಣಿಯ ನೀರು ಕುಡಿದಳು. ಆದರೆ ಆ ನೀರು ಎಷ್ಟು ಹೊತ್ತು ಅವಳ ಹಸಿವೆಯನ್ನು ಅಡಗಿಸಿಟ್ಟಿರಬಲ್ಲದು!

ಗಂಗಾಧರಮೂರ್ತಿ ಗುರುತು ಕಂಡವರ ಬಳಿ ಹೋಗಿ ಅವರನ್ನು ಕಾಡಿ ಬೇಡಿ ಎರಡು ರೂಪಾಯಿ ತಂದ. ಅದರಲ್ಲಿಯೇ ಎರಡು ಮೂರು ದಿನದ ಜೀವನ ಹೇಗಾದರೂ ಸಾಗಿಸಬೇಕೆಂದು ಅವರು ನಿಶ್ಚಯಿಸಿಕೊಂಡರು. ಅಗತ್ಯವಾದ ಆಹಾರ ಪದಾರ್ಥಗಳನ್ನು ತಂದು ಛತ್ರದವರಿಂದಲೇ ಪಾತ್ರೆ ಗಳನ್ನು ಎರವಲು ಪಡೆದು ಸ್ವಂತ ಅಡಿಗೆ ಮಾಡಿಕೊಂಡರು.

ಅಂದಿನಿಂದಲೇ ಗಂಗಾಧರಮೂರ್ತಿ ಚಾಕರಿ ಬೇಟೆಗೆ ಪ್ರಾರಂಭಿಸಿದ. ಮೊದಲು ತಾನಿದ್ದ ಟೀಬೋರ್ಡು ಆಫೀಸಿನ ಸೆಕ್ರಟರಿಯವರನ್ನು ಹೋಗಿ ಕಂಡ. ತಾನು ಬಹಳ ಖಾಹಿಲೆಬಿದ್ದು ಹೇಳದೇ ಕೇಳದೆ ನಿಂತುಬಿಡ ಬೇಕಾಯಿತೆಂದು ಅವರಲ್ಲಿ ಸುಳ್ಳು ಹೇಳಿಕೊಂಡ. ಆದರೆ ಆ ವೇಳೆ ಗಾಗಲೇ ಅವರಿಗೆ ನಿಜ ಸಂಗತಿ ಗೊತ್ತಾಗಿ ಹೋಗಿತ್ತು. ಅವರು ಗಂಗಾಧರ ಮೂರ್ತಿಯ ಮುಖವನ್ನು ಕಂಡಾಗಲೇ ಸಿಡಿಗುಟ್ಟಿದರು. ಈಗ ಈ ಸುಳ್ಳು ಬೇರೆ ಕೇಳಿ ಕಿಡಿಕಿಡಿಯಾದರು. ಒಂದು ಕ್ಷಣವೂ ತಮ್ಮ ಆಫೀಸಿನಲ್ಲಿ ನಿಲ್ಲಕೂಡದೆಂದು ಹೇಳಿ ಅವನನ್ನು ಹೊರಗಟ್ಟಿದರು.

ಟೀಬೋರ್ಡು ಆಫೀಸಿನಿಂದ ಮುಖ ಮುರಿಸಿಕೊಂಡು ಬಂದ ಗಂಗಾಧರಮೂರ್ತಿ ಬೇರೆ ಹತ್ತಾರು ಕಡೆಗಳಲ್ಲಿ ಕೆಲಸಕ್ಕೆ ಯತ್ನಿಸಿದ. ಎಲ್ಲೆಲ್ಲೂ ಇವನ ಕಥೆ ಹಬ್ಬಿಬಿಟ್ಟಿತ್ತು. ಎಲ್ಲೆಲ್ಲೂ ಇವನಿಗೆ ಮುಖ ಪ್ರಕ್ಷಾಳನಮಾಡಿ ಹೊರದಬ್ಬುವವರೇ ಆದರು.

ಜಯಳೂ ಸಹ ಅಲ್ಲಲ್ಲಿ ಹೋಗಿ ತಾನೂ ಕೆಲಸಕ್ಕೆ ಪ್ರಯತ್ನಿಸಿದಳು. ಗಂಗಾಧರಮೂರ್ತಿಗೆ ಆದ ಗತಿಯೇ ಅವಳಿಗೂ ಆಯಿತು ಹೋದೆಡೆ

ಯಲ್ಲೆಲ್ಲಾ. ಅಪಮಾನದ ನೋವು ಸಹಿಸಲಾರದೆ ಅವಳು ಬಿಕ್ಕಿ ಬಿಕ್ಕಿ ಅತ್ತುಬಿಟ್ಟಳು. ಮತ್ತೆ ಕೆಲಸ ಹುಡುಕಿಕೊಂಡು ಅವಳು ಹೊರಗೆ ಹೊರಡಲಿಲ್ಲ.

ಮತ್ತೆ ತಂದೆಯ ಮನೆಗೆ ಹೋಗಿ ಅವರ ಕಾಲು ಹಿಡಿದು ತನ್ನ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುವುದೇ ಎಂದು ಒಮ್ಮೊಮ್ಮೆ ಯೋಚಿಸುವಳು. ಆದರೇಕೋ ಹಾಗೆ ಮಾಡುವುದಕ್ಕೆ ಅವಳಿಗೆ ಧೈರ್ಯ ಬರಲೊಲ್ಲದು.

ಮಗಳು ಮತ್ತೆ ಬೆಂಗಳೂರಿಗೆ ಬಂದು ಕಷ್ಟಪಡುತ್ತಿರುವ ಸುದ್ದಿ ದಿನಕ್ರಮೇಣ ವಿಶಾಲಾಕ್ಷಮ್ಮನ ಕಿವಿ ಮುಟ್ಟಿತು. ಎಷ್ಟಾದರೂ ಹೆತ್ತ ಕರುಳಲ್ಲವೆ? ಅವಳಿಗೂ ಬಹಳ ದುಃಖವಾಯಿತು. ಮಗಳನ್ನು ಕರೆತರುವಂತೆ ಗಂಡನನ್ನು ಬೇಡಿಕೊಂಡಳು, ಮನಕರಗುವಂತೆ ಹೇಳಿಕೊಂಡಳು. ಆದರೆ ಚಂದ್ರಶೇಖರಯ್ಯನವರು ಮಗಳ ಮುಖವನ್ನು ಮತ್ತೆ ತಾವು ನೋಡುವುದಿಲ್ಲ, ಅವಳನ್ನು ಪುನಃ ಮನೆ ಸೇರಿಸಿ ಜನರ ನಗೆಗೆ ಗುರಿಯಾಗಲಾರೆ, ಅವಳ ದುರ್ಮಾರ್ಗವನ್ನು ತಮ್ಮ ಇತರ ಹೆಣ್ಣು ಮಕ್ಕಳೂ ಅನುಕರಿಸಲು ತಾವು ಎಂದಿಗೂ ಅವಕಾಶಕೊಡಲಾಗುವುದಿಲ್ಲ ಎಂದು ಖಂಡಿತವಾಗಿ ನುಡಿದುಬಿಟ್ಟರು. ಅವರ ಮನಸ್ಸು ಇನಿತಷ್ಟೂ ಅಲುಗಲಿಲ್ಲ. ಪ್ರತಿಯಾಗಿ ಇನ್ನೂ ಕಠಿಣವಾಯಿತು. ವಿಶಾಲಾಕ್ಷಮ್ಮ ತಾನೇ ಏನು ಮಾಡಬಲ್ಲಳು. ಗಂಡನಿಗೆ ತಿಳಿಯದಂತೆ ಮಗಳಿಗೆ ಏನಾದರೂ ಸಹಾಯಮಾಡುವುದಕ್ಕೂ ಅವಳಿಗೆ ಭಯ. ಹೇಳಿ ಕೇಳಿ ಅವಳು ಹಳೆಯ ಕಾಲದ ಹೆಂಗಸು. ಗಂಡನಿಗೆ ಎಂದೂ ಎದುರು ಮಾತನಾಡಿದವಳಲ್ಲ, ಎದುರುಬಿದ್ದು ಯಾವುದನ್ನೂ ಮಾಡಿದವಳಲ್ಲ. ಮಗಳ ದುಃಸ್ಥಿತಿಯ ಬಗ್ಗೆ ತನ್ನ ಮನಸ್ಸಿನಲ್ಲಿ ಕೊರಗಿಕೊಳ್ಳುವುದೊಂದೇ ಅವಳ ಪಾಲಿಗೆ ಸಾಧ್ಯವಾಗಿತ್ತು.

ಗಂಗಾಧರಮೂರ್ತಿ – ಜಯ ಬೆಂಗಳೂರಿಗೆ ಹಿಂದಿರುಗಿ ಮೂರು ದಿನಗಳು ಕಳೆದು ನಾಲ್ಕನೆಯ ದಿನ ಕಾಲಿಟ್ಟಿತ್ತು. ಗುರುತಿನವರು ಕೊಟ್ಟಿದ್ದ ಎರಡು ರೂಪಾಯಿಗಳು ಹಿಂದಿನ ದಿನಕ್ಕೇ ಮುಗಿದುಹೋಗಿ ಮತ್ತೆ ಉಪವಾಸ ಪ್ರಾರಂಭವಾಗಿತ್ತು.

ದಿಕ್ಕುಕಾಣದವನಂತೆ ತಲೆಗೆ ಕೈಕೊಟ್ಟು ಕುಳಿತುಬಿಟ್ಟ ಗಂಗಾಧರ ಮೂರ್ತಿ. ಜಯ ಕುಳಿತುಕೊಳ್ಳಲು ಸಹ ಶಕ್ತಿಯಿಲ್ಲದೆ ಅವನ ಎದುರಿಗೆ ಗೋಡೆಗೆ ಒರಗಿಕೊಂಡಳು. ಇಬ್ಬರ ಮುಖಗಳನ್ನೂ ಚಿಂತೆಯ ಕಾರ್ಮೋಡ ಕವಿದಿತ್ತು. ಹೊಟ್ಟೆಯೊಳಗಣ ಹಸಿವಿನ ಜ್ವಾಲೆ ದೇಹವನ್ನೇ ದಹಿಸುತ್ತಿತ್ತು.

ಜಯಳಿಗೆ ಒಂದು ಕ್ಷಣ ಪಶ್ಚಾತ್ತಾಪ ಮೂಡಿತು. ತಂದೆ ತಾಯಿಗಳಿಗೆ ಎದುರುಬಿದ್ದು ಮತಿಭ್ರಷ್ಟಳಾಗಿ ತಾನು ಎಂತಹ ಹೊಲಗೆಲಸ ಮಾಡಿಬಿಟ್ಟೆ, ಎಂತಹ ಭೀಕರ ಸ್ಥಿತಿಗೆ ಇಳಿದುಬಿಟ್ಟೆ ಎಂದು ಅವಳು ದುಃಖಿಸಿದಳು. ಆದರೆ ಈಗ ಆ ಪಶ್ಚಾತ್ತಾಪದಿಂದ ಯಾವ ಪ್ರಯೋಜನವೂ ಇರಲಿಲ್ಲ.

ಗಂಗಾಧರಮೂರ್ತಿ ಏನನ್ನೋ ನೆನಸಿಕೊಂಡವನಂತೆ ಥಟ್ಟನೆದ್ದು ಹೊರಹೊರಟ.

ಗೋಪಾಲಿ, ಗಂಗಾಧರಮೂರ್ತಿ ಅವನನ್ನು ಹೋಗಿ ಕಂಡಾಗ, ತನ್ನ ಮಾಮೂಲು ಸ್ಥಳದಲ್ಲಿ ಆಗಲೇ ಬಂದು ಕುಳಿತಿದ್ದ.

"ಏನು ಶ್ವೇತವರಾಹಮೂರ್ತಿಗಳು. ಇಷ್ಟು ದಿನ ಎಲ್ಲಿ ಪರಾರಿಯಾಗಿ ಹೋಗಿದ್ದಿರಿ?"

—ನಗುತ್ತ ಕೇಳಿದ ಗೋಪಾಲಿ ಗಂಗಾಧರಮೂರ್ತಿಯನ್ನು ನೋಡಿದ ಕೂಡಲೆ.

"ಎಲ್ಲೂ ಇಲ್ಲಪ್ಪ. ಮೈಗೆ ಹುಷಾರಿರಲಿಲ್ಲ, ಊರಿಗೆ ಹೋಗಿದ್ದೆ."

—ಗಂಗಾಧರಮೂರ್ತಿ ಉತ್ತರಿಸಿದ.

"ಯಾರಿಗಯ್ಯಾ ಹೇಳ್ತೀಯ ಈ ಗಫ್ಫಾಲಜಿ. 'ಸಾಲಂಕೃತ ಕನ್ಯಾಪಹರಣ ಮಾಡ್ಕೊಂಡು ಹೋಗಿದ್ದೆ' ಅಂತ ಇದ್ದದ್ದು ಇದ್ದಹಾಗೆ ಹೇಳು" ಗೋಪಾಲಿ ಚುಡಾಯಿಸಿದ.

"ಅದೆಲ್ಲಾ ದೊಡ್ಡ ಕಥೆ ಗೋಪಾಲಿ. ಒಟ್ನಲ್ಲಿ ನನ್ನ ಗ್ರಹಚಾರ ಚೆನ್ನಾಗಿಲ್ಲ. ನಾನು ಹಾಗೆ ಮಾಡಬಾರದಾಗಿತ್ತು."

"ಯಾಕೆ ಹಾಗಂತೀಯಯ್ಯಾ. ಹುಡುಗೀಗೆ ಹುಡುಗಿ ಸಿಕ್ಕಿದಳು, ಅದೂ ಶ್ರೀಮಂತರ ಮನೆಯವಳು. ಅವಳ ಮೈಮೇಲಿನ ಒಡವೆ ವಸ್ತು

ಗಳು ಏನಿಲ್ಲಾಂದ್ರೂ ನಾಲ್ಕೈದು ಸಾವಿರ ರೂಪಾಯಿ ಕೈಸೇರಿಸಿಕೊಂಡು ಬಿಟ್ಟಿದ್ದೀ."

"ಆ ಕಥೇನೇ ನಿನಗೆ ಹೇಳೋಣ ಅಂತ ಬಂದೇಪ್ಪ ಗೋಪಾಲಿ."

"ಯಾಕೆ? ಅವಳು ನಿನಗೂ ಏನಾದರೂ ಕೈಕೊಟ್ಟುಬಿಟ್ಟಳೇನು?"

—ಚಕಿತನಾಗಿ ಕೇಳಿದ ಗೋಪಾಲಿ.

"ಛೆ ಛೆ ಅಂಥವೇನೂ ಇಲ್ಲಪ್ಪ."

—ಎಂದು ಉತ್ತರಿಸಿ ಗಂಗಾಧರಮೂರ್ತಿ ತಾನು ಪಟ್ಟ ಪಾಡನ್ನೆಲ್ಲಾ ಗೋಪಾಲಿಗೆ ಹೇಳಿಕೊಂಡ.

"ಅಂತೂ ಹುಡುಗೀನೂ ಕರಕೊಂಡು ವಾಪಸು ಬೆಂಗಳೂರಿಗೇ ಬಂದುಬಿಟ್ಟಿದ್ದೀ ಅನ್ನು."

—ಗಂಗಾಧರಮೂರ್ತಿ ಹೇಳುವುದನ್ನೆಲ್ಲಾ ಕೇಳಿ ಗೋಪಾಲಿ ಕೇಳಿದ.

"ಹೌದಪ್ಪ, ಪೂರ್ಣಯ್ಯನ ಛತ್ರದಲ್ಲಿ ಇಳಕೊಂಡಿದ್ದೀವಿ. ಯಾರೋ ಗುರುತಿನವರು ಕೊಟ್ಟಿದ್ದ ಎರಡು ರೂಪಾಯಿಯಲ್ಲಿ ಮೂರು ದಿನ ತಳ್ಳಿದ್ದಾಯ್ತು. ಈವತ್ತು ಬೆಳಗ್ಗಿನಿಂದ ಉಪವಾಸ. ನಾನೂ ಎಲ್ಲೆಲ್ಲೋ ಕೆಲಸಕ್ಕೆ ಪ್ರಯತ್ನಿಸಿದೆ. ಹೋದ ಕಡೇಲೆಲ್ಲಾ ಮುಖಕ್ಕೆ ಮಂಗಳಾರತಿ ಮಾಡಿಸಿಕೊಂಡದ್ದಾಯ್ತು. ಕೆಲಸ ಬೇರೆ ಸಿಗಲಿಲ್ಲ. ಈಗ ಕಡೇದಾಗಿ ನಿನ್ನೇ ಹುಡುಕಿಕೊಂಡು ಬಂದಿದೀನಿ."

"ನಾನು ಏನಪ್ಪ ಮಾಡಲಿ. ನಾನು ಯಾವ ದೊಡ್ಡಮನುಷ್ಯ ಅನ್ನೋದು ನಿನಗೆ ಗೊತ್ತೇ ಇದೆಯಲ್ಲ"

—ವ್ಯಥೆಗೊಂಡವನಂತೆ ಹೇಳಿದ ಗೋಪಾಲಿ.

"ಆದರೂ ನಿನಗೆ ಎಷ್ಟೋ ಮಂದಿ ದೊಡ್ಡ ಮನುಷ್ಯರು ಗುರ್ತಿದಾರೆ. ಯಾರ ಹತ್ರಾನಾದ್ರೂ ಸರಿಯೆ ಹೇಳಿ ನೀನು ನನಗೊಂದು ಕೆಲಸಕೊಡಿಸಿಕೊಡಬೇಕಪ್ಪ. ಇಲ್ಲ ಅನ್ನಬಾರದು. ನಿನ್ನ ಹೆಸರು ಹೇಳಿಕೊಂಡು ನಾವು ಜೀವಿಸಬೇಕು."

—ಗಂಗಾಧರಮೂರ್ತಿ ಅಂಗಲಾಚಿ ಕೇಳಿಕೊಂಡ. ಗೋಪಾಲಿಗೂ ಮನಸ್ಸು ಕರಗಿತು.

"ಆಗಲಿ ನೋಡೋಣಾಪ್ಪ. ಸೇಂದಿ ಕಂಟ್ರಾಕ್ಟರ್ ಸಣ್ಣಯ್ಯಪ್ಪನಿಗೆ ಹೇಳಿ ನೋಡ್ತೀನಿ. ಅವನು ಯಾವುದಾದರೂ ಕೆಲಸ ಕೊಟ್ಟರೂ ಕೊಡಬಹುದು. ನಿನ್ನ ಅದೃಷ್ಟ"

"ಆಗಲಿ ಹೋಗಲಿ ಅನ್ನಕೂಡದಪ್ಪ. ನೀನು ಖಂಡಿತ ಮಾಡಿ ಕೊಡಲೇಬೇಕು. ನಿನ್ನೇ ನಂಬಿದೀನಿ."

"ಮನಃಪೂರ್ವಕವಾಗಿ ಪ್ರಯತ್ನಪಡ್ತೇನೆ. ಎಲ್ಲಾದ್ರೂ ಅಂತೂ ಮಾಡಿಕೊಡ್ತೇನೆ. ಸರಿಯೆ ?"

"ಹಾಗಾದರೆ ನಾನು ಯಾವಾಗ ಬರ್ಲಿ ?"

"ನಾಳೆ ಬೇಡ, ನಾಡಿದ್ದು ಮದ್ಯಾಹ್ನ ಬಾ. ಅಷ್ಟರಲ್ಲಿ ಏನಾದರೂ ಒಂದು ಏರ್ಪಾಡು ಮಾಡಿರ್ತೀನಿ."

"ಇನ್ನೊಂದು ವಿಚಾರ ಗೋಪಾಲಿ........"

—ದೇಹವನ್ನು ಬಹಳ ಕುಗ್ಗಿಸಿಕೊಂಡು ಹೇಳಿದ ಗಂಗಾಧರ ಮೂರ್ತಿ.

"ಏನಪ್ಪ ಅದು."

"ಏನೂ ತಿಳಕೊಳ್ಳೋದಿಲ್ಲ ಅಂದ್ರೆ ಹೇಳ್ತೀನಿ"

"ತಿಳಕೊಳ್ಳೋದೇನು ಬಂತು. ಹೇಳು ಅದೇನು ?"

"ಬೆಳಗಿನಿಂದ ಉಪವಾಸವಪ್ಪ. ಇನ್ನೂ ಒಂದು ಕೆಲಸ ಸಿಗೋ ವರೆಗೂ ಉಪವಾಸಾನೇ ಇರಬೇಕಾಗತ್ತಪ್ಪ."

ಗಂಗಾಧರಮೂರ್ತಿಯ ದೀನ ಸ್ಥಿತಿಯನ್ನು ನೋಡಿ ಗೋಪಾಲಿಗೆ ಬಹಳ ಮರುಕವೆನಿಸಿತು. ಅಂಗಿಯ ಕಿಸೆಗೆ ಕೈಹಾಕಿ ಐದು ರೂಪಾಯಿ ನೋಟೊಂದನ್ನು ತೆಗೆದು ಗಂಗಾಧರಮೂರ್ತಿಗೆ ಕೊಟ್ಟು—

"ಇದರಲ್ಲಿ ಇವತ್ತು ನಾಳೆ ಹ್ಯಾಗೋ ಮಾಡ್ಕೋ, ಹೇಗೂ ನಾಡದ್ದು ಬಂದು ಕಾಣ್ತೀಯಲ್ಲ. ಇನ್ನೊಂದು ಐದು ರೂಪಾಯಿ ಕೊಡ್ತೀನಿ. ಆ ಸಣ್ಣಯ್ಯಪ್ಪ ನಿನಗೇನಾದರೂ ಕೆಲಸ ಕೊಡೋದಾದ್ರೆ ಅವನಿಂದ ವಂದು ತಿಂಗಳ ಸಂಬಳಾನೂ ಅಡ್ವಾನ್ಸ್ ಕೊಡಸ್ತೀನಿ" ಎಂದ.

ಗೋಪಾಲಿಗೆ ಯಾರಾದರೂ ಉಪವಾಸವಿದ್ದಾರೆಂದರೆ ಕರುಳು ಕತ್ತರಿಸಿದಂತಾಗುತ್ತಿತ್ತು. ಅಂಥವರಿಗೆ ತನ್ನ ಕೈವಾರಿ ಸಹಾಯ ಮಾಡು

ತ್ತಿದ್ದ. ಕೊನೆಗೆ ತಾನಾದರೂ ಉಪವಾಸವಿದ್ದು ಅವರ ಊಟಕ್ಕೆ ಏರ್ಪಾಡು ಮಾಡುತ್ತಿದ್ದ. ಅದು ಮೊದಲಿಂದಲೂ ಅವನಲ್ಲಿ ಬೆಳೆದು ಬಂದಿದ್ದ ಗುಣ. ಹೀಗಾಗಿ ಅವನ ಸಂಪಾದನೆಯ ಬಹುಭಾಗ ದಾನ ಧರ್ಮಗಳಿಗೇ ಹೋಗುತ್ತಿತ್ತು.

"ಅಲ್ಲಯ್ಯ, ಹೀಗೆ ನೀನು ಸಿಕ್ಕಿದವರಿಗೆಲ್ಲಾ ದುಡ್ಡುಕೊಟ್ಟು ಬಿಡ್ತೀ ಯಲ್ಲ, ನೀನೇನು ಪುಡಿಮಣ್ಣು ಹುಯ್ಕೋಳ್ತೀಯಾ ?"

—ಎಂದು ಯಾರಾದರೂ ಸ್ನೇಹಿತರು ಕೇಳಿದರೆ,

"ನನಗೇನಯ್ಯ, ಹೆಂಡ್ರಿಲ್ಲ, ಮಕ್ಕಳಿಲ್ಲ, ಮನೆ ಅಂತೂ ಮೊದಲೇ ಇಲ್ಲ. ಹಸಿದ ಹೊತ್ನಲ್ಲಿ ನನ್ನ ಜೇಬ್ನಲ್ಲಿ ದುಡ್ಡಿಲ್ಲದಿದ್ದರೆ ನಿಮ್ಮಂತಹ ಸ್ನೇಹಿತರು ಯಾರಾದರೂ ಇದ್ದೇ ಇರ್ತೀರಿ. ಇನ್ನು ದುಡ್ಡು ಕಟ್ಕೊಂಡು ನಾನೇನ್ಮಾಡ್ಲಪ್ಪ."

—ನಗುತ್ತ ಹೇಳಿಬಿಡುತ್ತಿದ್ದ ಗೋಪಾಲಿ.

"ದುಡ್ಡು ಬೇಡವಾದೋನು ಈ ಅನಿಷ್ಟ ಕಸುಬನ್ನಾದರೂ ಯಾಕೆ ಕಟ್ಕೊಂಡಿದ್ದೀಯ ?"

—ಸ್ನೇಹಿತರು ಅವನ ವಿರಕ್ತಿಯನ್ನು ಕಂಡು ಅಚ್ಚರಿಗೊಂಡು ಕೇಳುತ್ತಿದ್ದರು.

"ನೋಡು 'ಕರ್ಮ ಮಾಡೋದರಲ್ಲಿ ನಿನಗೆ ಆಸಕ್ತಿ ಇರಲಿ ಆದರೆ ಕರ್ಮಫಲದಲ್ಲಿ ಆಸಕ್ತಿಯನ್ನಿಡಬೇಡ' ಎಂದು ಶ್ರೀಕೃಷ್ಣ ಪರಮಾತ್ಮ ಗೀತೆಯಲ್ಲಿ ಉಪದೇಶಿಸಿದ್ದಾನೆ. ಕರ್ಮ ಎಂದರೆ ಕರ್ತವ್ಯ. ಅದು ಸತ್ಕರ್ಮವಾಗಲಿ ದುಷ್ಕರ್ಮವಾಗಲಿ, ಅದರಲ್ಲಿ ಯಾವಲಾಭವನ್ನೂ ಇಟ್ಟು ಕೊಳ್ಳದೆ ಅದನ್ನು ಕರ್ತವ್ಯವೆಂದು ತಿಳಿದು ಪರಹಿತಕ್ಕಾಗಿ ಮಾಡಬೇಕು. ಆದರಂತೆ ಈಗ ನಾನು ಅವಲಂಬಿಸಿರುವ ಕಸುಬು. ಅದೊಂದು ಕೆಟ್ಟ ಕಸುಬೇನೋ ನಿಜ. ಆದರೂ ಅದನ್ನು ನಾನು ನನಗಾಗಿ ಮಾಡುತ್ತಿಲ್ಲ. ನನಗಾಗಿಯೇ ನಾನು ಮಾಡಿದ್ದರೆ ಈ ವೇಳೆಗೆ ಬೆಂಗಳೂರಿನಲ್ಲಿ ನಾಲ್ಕು ಮಹಡಿ ಮನೆಗಳನ್ನು ಕಟ್ಟಿಸಿಬಿಡುತ್ತಿದ್ದೆ. ಆದರೆ ಹತ್ತು ಜನರ ಉಪ ಕಾರಕ್ಕಾಗಿ ಮಾಡುತ್ತಿದ್ದೇನೆ. ಅದರಿಂದ ಜೀವನದಲ್ಲಿ ನೊಂದು ಬೆಂದವರು

ಒಂದಿಷ್ಟು ಅನ್ನ ಕಂಡರೆ, ವಂದಿಷ್ಟು ಸುಖ ಕಂಡರೆ ಅದೇ ನನಗೆ ಸಾಕು" ಎಂದುಬಿಡುತ್ತಿದ್ದ ಗೋಪಾಲಿ.

ಗಂಗಾಧರಮೂರ್ತಿ "ಬಹಳ ಉಪಕಾರ ಮಾಡಿದೇಪ್ಪ, ನಾಡದ್ದು ಬರ್ತೀನಿ, ಮರಿಬೇಡ" ಎಂದು ಮತ್ತೊಮ್ಮೆ ಜ್ಞಾಪಕ ಕೊಟ್ಟು ಹೊರಟುಹೋದ.

ಅಂದು ಸಾಯಂಕಾಲವೇ ಸಣ್ಣಯ್ಯಪ್ಪನನ್ನು ಕಂಡು ಮಾತನಾಡಿದ ಗೋಪಾಲಿ. ತಿಂಗಳಿಗೆ ನಲವತ್ತು ರೂಪಾಯಿ ತಲಬಿನ ಮೇಲೆ ಗಂಗಾಧರ ಮೂರ್ತಿಗೆ ತನ್ನ ಬಳಿಯಲ್ಲಿ ಒಂದು ಗುಮಾಸ್ತೆಯ ಕೆಲಸ ಕೊಡುವುದಕ್ಕೆ ಅವನೂ ಒಪ್ಪಿಕೊಂಡ. ಒಂದು ತಿಂಗಳ ಸಂಬಳವನ್ನು ಅಡ್ವಾನ್ಸಾಗಿ ಕೊಡುವುದಕ್ಕೆ ಗೋಪಾಲಿ ಅವನನ್ನು ಒಪ್ಪಿಸಿದ.

ಸಣ್ಣಯ್ಯಪ್ಪನಿಗೆ ಸೇರಿದ ಸಣ್ಣದೊಂದು ಮನೆ ಶ್ರೀರಾಮಪುರದಲ್ಲಿ ಖಾಲಿಯಿತ್ತು. ಅದನ್ನೇ ತಿಂಗಳಿಗೆ ಎಂಟು ರೂಪಾಯಿನಂತೆ ಗೊತ್ತು ಮಾಡಿ ಕೊಂಡು, ಪ್ರತಿತಿಂಗಳೂ ಬಾಡಿಗೆ ಹಣವನ್ನು ಸಂಬಳದಲ್ಲಿ ಹಿಡಿದುಕೊಂಡು ಬಾಕಿ ಮೊಬಲಗನ್ನು ತನ್ನ ಕೈಗೆ ಕೊಡಬಹುದೆಂದು ಹೇಳಿ ಅದನ್ನು ಬಾಡಿಗೆಗೆ ಹಿಡಿದ ಗಂಗಾಧರಮೂರ್ತಿ.

ಯಾರಿಗೇ ಆಗಲಿ ಸ್ವಾರ್ಥದೃಷ್ಟಿಯಿಲ್ಲದೆ ಸಹಾಯ ಮಾಡುವುದು ಸಣ್ಣಯ್ಯಪ್ಪನ ಸ್ವಭಾವದಲ್ಲಿ ಬಂದಿರಲಿಲ್ಲ. ಗಂಗಾಧರಮೂರ್ತಿಗೆ ತನ್ನ ಬಳಿ ಕೆಲಸ ಕೊಡಿಸಲು ಬಂದ ಗೋಪಾಲಿಯಿಂದ ಅವನ ಕಥೆಯನ್ನೆಲ್ಲಾ ಕೇಳಿ ತಿಳಿದುಕೊಂಡಿದ್ದ. ಸಣ್ಣಯ್ಯಪ್ಪ ಗೋಪಾಲಿಯ ಎದುರಿನಲ್ಲಿ 'ಅಯ್ಯೋ ಪಾಪ' ಎಂಬ ಅನುಕಂಪ ತೋರಿಸಿದ್ದನಾದರೂ ಮನಸ್ಸಿನಲ್ಲಿ ಮಾತ್ರ ಗಂಗಾಧರಮೂರ್ತಿಯ ಹೆಂಡತಿಯ ಬಗ್ಗೆ ಒಂದು ದುರಾಸೆಯನ್ನು ಆಗಲೇ ಮೂಡಿಸಿಕೊಂಡಿದ್ದ; ಅವಳು ಹೇಗಿದ್ದಾಳು, ಯಾವಾಗ ನೋಡಿ ಯೇನು, ಯಾವ ರೀತಿ ತನ್ನ ವಶಪಡಿಸಿಕೊಂಡೇನು ಎಂಬ ದುಷ್ಟ ಯೋಚನೆ ಆಗಲೇ ಅವನನ್ನು ಕಾಡುತ್ತಿತ್ತು.

ಗಂಗಾಧರಮೂರ್ತಿ ಶ್ರೀರಾಮಪುರದ ಮನೆಯಲ್ಲಿ ಬಂದು ನೆಲಸಿದ ಮೂರನೆಯ ದಿನವೇ ಮನೆ ಸರಿಯಾಗಿದೆಯೇ ಇಲ್ಲವೆ, ರಿಪೇರಿಮಾಡಿಸಬೇಕೆ ಎಂಬ ನೆಪಹಾಕಿಕೊಂಡು ಬಂದು ಸಣ್ಣಯ್ಯಪ್ಪ ಜಯಳನ್ನು ನೋಡಿದ.

ಕಲಿತ ಹುಡುಗಿ, ಜೊತೆಗೆ ಹರೆಯ ಬೇರೆ, ಸಂಕೋಚಪಟ್ಟುಕೊಳ್ಳದೆ ಸಲೀಸಾಗಿ ಮಾತನಾಡುತ್ತಿದ್ದಳು. ಸಣ್ಣಯ್ಯಪ್ಪನ ಹಸಿವು ಹೆಚ್ಚಿತು.

ಅಂದಿನಿಂದ ಸಣ್ಣಯ್ಯಪ್ಪ ದಿನ ಬಿಟ್ಟು ದಿನ ಏನಾದರೊಂದು ನೆಪ ಮಾಡಿಕೊಂಡು ಗಂಗಾಧರಮೂರ್ತಿಯ ಮನೆಗೆ ಬರತೊಡಗಿದ. ಮನೆಯ ಮಾಲೀಕ, ಮೇಲಾಗಿ ತನಗೆ ಕೆಲಸ ಕೊಟ್ಟಿರುವ ಧಣಿ ಮನೆಗೆ ಬರಕೂಡದೆಂದು ಹೇಳಲು ಗಂಗಾಧರಮೂರ್ತಿಗೆ ಹೇಗೆ ತಾನೇ ಬಾಯಿ ಬಂದೀತು?

ಸಾಮಾನ್ಯವಾಗಿ ಗಂಗಾಧರಮೂರ್ತಿ ಮನೆಯಲ್ಲಿಲ್ಲದ ವೇಳೆಯನ್ನೆ ನೋಡಿಕೊಂಡು ಸಣ್ಣಯ್ಯಪ್ಪ ಬರುತ್ತಿದ್ದ. ಬರುವಾಗ ಜಯಳಿಗೆ ಯಾವುದಾದರೊಂದು ಉಡುಗೊರೆಯನ್ನು ತರುತ್ತಿದ್ದ. ಅವನ ಮನಸ್ಸಿನ ಉದ್ದಿಶ್ಯ ಜಯಳಿಗೆ ಗೊತ್ತಾಗದೆ ಇರಲಿಲ್ಲ. ಅವಳಿಗೆ ಅವನ ಮೇಲೆ ಮನಸ್ಸಿರದಿದ್ದರೂ ಅವನು ತರುತ್ತಿದ್ದ ಆ ಉಡುಗೊರೆಗಳ ಮೇಲೆ ಆಕರ್ಷಣೆಯುಂಟಾಗುತ್ತಿತ್ತು. ತಂದೆಯ ಮನೆಯಲ್ಲಿದ್ದಾಗ ಚಿಕ್ಕಂದಿನಿಂದಲೂ ಬೇಕುಬೇಕಾದ ಆಭರಣಗಳನ್ನು ಇಟ್ಟು, ಬೇಕು ಬೇಕಾದ ಸೀರೆಗಳನ್ನು ತೊಟ್ಟು ಮೆರೆದವಳು. ಆ ಪೂರ್ವವಾಸನೆ ಅವಳಲ್ಲಿ ಮತ್ತೆ ಚೇತನಗೊಂಡಿತು. ಗಂಡ ತರುತ್ತಿದ್ದ ಅಲ್ಪ ಸಂಬಳದಲ್ಲಿ ದಿನಜೀವನದ ನಿರ್ವಹಣವೇ ಕಷ್ಟವಾಗಿ ಅವಳಿಗೆ ರೋಸಿಹೋಗಿತ್ತು. ಇನ್ನು ಹೀಗೆಯೇ ಇದ್ದರೆ ಒಡವೆ ವಸ್ತುಗಳನ್ನಾದರೂ ಕಾಣುವುದು ಹೇಗೆ. ತಾನಾಗಿಯೇ ಹುಡುಕಿಕೊಂಡು ಬಂದ ಭಾಗ್ಯವನ್ನು ಬಿಡಬಾರದೆಂದು ಅವಳು ಯೋಚಿಸಿದಳು. ಸಣ್ಣಯ್ಯಪ್ಪ ತಂದ ಉಡುಗೊರೆಗಳನ್ನು ನಗುನಗುತ್ತ ಸಂತೋಷದಿಂದ ಸ್ವೀಕರಿಸಿದಳು. ಇನ್ನು ಅದಕ್ಕೆ ಪ್ರತಿಫಲವಾಗಿ ತನ್ನನ್ನು ಒಪ್ಪಿಸದೇ ಇರುವುದಕ್ಕೆ ಸಾಧ್ಯವಾದೀತೆ?

ಮೊದಮೊದಲು ಗಂಗಾಧರಮೂರ್ತಿಗೆ ಜಯಳ ಈ ಕಾರುಬಾರು ತಿಳಿಯುತ್ತಿರಲಿಲ್ಲ. ಆದರೆ ತಿಳಿಯದೆ ಇರಲು ಬಹಳ ದಿನ ಹಿಡಿಯಲಿಲ್ಲ. ತಿಳಿದ ಮೇಲೆ ಅವನು ಏನು ಮಾಡುವಂತೆಯೂ ಇರಲಿಲ್ಲ. ಹೆಚ್ಚೆಂದರೆ ಹೆಂಡತಿಯನ್ನು ತ್ಯಜಿಸಿ ತಾನು ಮನೆಬಿಟ್ಟು ಹೊರಟುಹೋಗಬೇಕು. ಅದರಿಂದ ಬರುವ ಲಾಭ?

ಗಂಡನಿಗೆ ಬೇಕು ಬೇಕಾದಾಗ ಅವನು ಕೇಳಿದಾಗಲೆಲ್ಲಾ ಕೇಳಿ ದಷ್ಟು ಹಣಕೊಟ್ಟು ಅವನನ್ನು ಸಮಾಧಾನದಲ್ಲಿಟ್ಟಿರಲು ಯತ್ನಿಸಿದಳು ಜಯ. ಜತೆಗೆ ಸಣ್ಣಯ್ಯಪ್ಪನೂ ಔದಾರ್ಯ ತೋರಿ ಗಂಗಾಧರಮೂರ್ತಿಗೆ ಹಣಕೊಡುತ್ತಿದ್ದ.

ಗಂಗಾಧರಮೂರ್ತಿ ಜೇಬಿಗೆ ಹಣ ಸೇರುತ್ತಲೂ ತೆಪ್ಪಗಾಗಿ ಬಿಡು ತ್ತಿದ್ದ. ಅವನಲ್ಲಿ ಆ ಹಣದ ಪ್ರಭಾವದಿಂದ ಹಲವು ಬೇರೇ ಚಟಗಳು ತಾನಾಗಿಯೇ ಹುಟ್ಟಿಕೊಂಡವು. ಕುಡಿತ, ಕುದುರೆಜೂಜುಗಳಿಗೆ ಧಾರಾಳವಾಗಿ ಹಣ ಚೆಲ್ಲಲಾರಂಭಿಸಿದ. ಆ ದಿಸೆಯಲ್ಲಿ ಅವನಿಗೆ ಮಿತ್ರ ಬಳಗವೂ ವೃದ್ಧಿಗೊಂಡಿತು.

ತನಗೆ ಹಣದ ಅವಶ್ಯಕತೆಯುಂಟಾದಾಗ ತಾನೇ ಹೋಗಿ ಸಣ್ಣಯ್ಯಪ್ಪನನ್ನು ಮನೆಗೆ ಕರೆತಂದು ಬಿಡುತ್ತಿದ್ದ. ಜತೆಗೆ ಸಣ್ಣಯ್ಯಪ್ಪ ನಿಗೆ ತಿಳಿಯದಂತೆ ತನ್ನ ಹಲವಾರು ಶ್ರೀಮಂತ ಮಿತ್ರರನ್ನೂ ಜಯಳಿಗೆ ಭೇಟಿ ಮಾಡಿಸತೊಡಗಿದ.

ಈ ಸುದ್ದಿ ಗೋಪಾಲಿಯ ಕಿವಿ ಮುಟ್ಟಿದಾಗ ಅವನು ಅಚ್ಚರಿ ಗೊಂಡ. 'ಹೀಗೂ ಉಂಟೆ' ಎಂದು ಅವನ ಮನಸ್ಸು ಪರಿತಪಿಸಿತು.

ಗಂಗಾಧರಮೂರ್ತಿ ಕೈಹಿಡಿದ ಹೆಂಡತಿಯನ್ನೇ ಬೀದಿಗೆಳೆದ ಭೂಪ!

ಈಗ ಅಂತಹವನೇ ಇನ್ನೊಬ್ಬ! ಇಂದು ತನ್ನಿದಿರಿನಲ್ಲಿ! ಹೆಂಡ ತಿಗೇ ಗಿರಾಕಿಬೇಕೆಂದು ಬಂದಿರುವವನು!

ಗೋಪಾಲಿಗೆ ಅಸಹ್ಯವೆನ್ನಿಸಿತು. ಅವನು ಜಿಗುಪ್ಸೆಗೊಂಡು ತಿರುಮಲಯ್ಯನ ಮುಖವನ್ನು ದುರುಗುಟ್ಟಿ ನೋಡಿದ. ತಿರುಮಲಯ್ಯ ತಲೆ ತಗ್ಗಿಸಿದ. ಗೋಪಾಲಿ ಕಟುವಾಗಿಯೇ ಕೇಳಿದ—

"ನಿನಗೆ ನಾಚಿಕೆಯಾಗುವುದಿಲ್ಲವೆ? ಹೆಂಡತಿಗೇ ತಲೆಹಿಡಿಯುವು ದಕ್ಕೆ? ನೀನೇನು ಮನುಷ್ಯನೋ ಇಲ್ಲ........"

ತಿರುಮಲಯ್ಯನ ಕಣ್ಣುಗಳಲ್ಲಿ ನೀರೂರಿದುವು.

"ಸ್ವಾಮಿ, ನನ್ನದು ವಿಚಿತ್ರ ಚರಿತ್ರೆ'

—ಎಂದು ಪ್ರಾರಂಭಿಸಿ ತಿರುಮಲಯ್ಯ ತನ್ನ ದುರ್ಭರ ಜೀವನದ ದಾರುಣ ಕಥೆಯನ್ನು ಚಾಚೂ ಬಿಡದೆ ಗೋಪಾಲಿಗೆ ಹೇಳಿಕೊಂಡು—

"ಗಂಡಸಿನಂತೆ ನನ್ನ ಹೆಂಡತಿಯನ್ನು ಆಳುವಂತೆ ಹಾಳು ವಿಧಿ ನನ್ನನ್ನು ಸೃಷ್ಟಿಸಲಿಲ್ಲ, ಸ್ವಾಮಿ" ಎಂದು ನಿಟ್ಟುಸಿರಿಟ್ಟು ಮುಗಿಸಿದ.

ಗೋಪಾಲಿಗೆ ಆಶ್ಚರ್ಯವಾಯಿತು. ಜತೆಗೆ ಮರುಕವೂ ಉಂಟಾಯಿತು. 'ಏನು ಹಾಳು ಸೃಷ್ಟಿಯೋ ಇದು!' ಎಂದು ತನ್ನಲ್ಲೇ ಗೊಣಗಿಕೊಂಡ.

"ಸರಿ. ನಾಳೆ ಬಂದು ನಾನು ನೋಡ್ತೇನೆ. ನನ್ನ ಕೈಲಾದಷ್ಟು ಸಹಾಯಮಾಡ್ತೇನೆ" ಎಂದು ಹೇಳಿ ಗೋಪಾಲಿ ಹೊರಡಲನುವಾದ.

ತಿರುಮಲಯ್ಯ ತಲೆ ಕೆರೆದುಕೊಳ್ಳುತ್ತ ಹಾಗೆಯೇ ನಿಂತಿದ್ದ.

"ಸ್ವಾಮಿ ಏ........" ಎಂಬ ದೀನವಾಣಿ ಅವನ ಬಾಯಿಂದ ಹೊರಟಿತು.

"ಮತ್ತೇನು ?" ಗೋಪಾಲಿ ಕೇಳಿದ.

"ಮೊನ್ನೆಯಿಂದ ಹಿಡಿ ಅನ್ನವಿಲ್ಲ....ಉಪವಾಸವಿದ್ದೇವೆ, ಸ್ವಾಮಿ." ಅದೇ ಮನ ಕರಗುವ ದೀನವಾಣಿ.

ಉಪವಾಸ........ಉಪವಾಸ........ಎಲ್ಲೆಲ್ಲೂ ಉಪವಾಸ....ಹಸಿವು ತನ್ನ ಸಹಸ್ರ ಸಹಸ್ರ ಜ್ವಾಲೆಗಳಿಂದ ಮನುಷ್ಯನನ್ನು ಭಯಂಕರವಾಗಿ ದಹಿಸುತ್ತಿದೆ. ಮೃಗ, ಪಕ್ಷಿ, ಪಶುಗಳೂ ಕೂಡ ಹೇಗಾದರೂ ತಮ್ಮ ಆಹಾರವನ್ನು ದೊರಕಿಸಿಕೊಳ್ಳಬಲ್ಲವು. ಆದರೆ ಸೃಷ್ಟಿಯಲ್ಲೇ ಶ್ರೇಷ್ಠ ಜೀವಿ ಎನ್ನಿಸಿರುವ ಮಾನವ ಅದಕ್ಕಾಗಿ ಮಾನವನ್ನು ಬೀದಿಪಾಲು ಮಾಡಬೇಕು. ಹೆಂಡತಿಯನ್ನು ಮಾರಬೇಕು.

ಗೋಪಾಲಿ ಮಾತನಾಡದೆ ಐದು ರೂಪಾಯಿನ ನೋಟೊಂದನ್ನು ಕಿಸೆಯಿಂದ ತೆಗೆದು ತಿರುಮಲಯ್ಯನ ಕೈಯ್ಯಲ್ಲಿಟ್ಟ, ಹಿಂದೊಮ್ಮೆ ತಿರುಮಲಯ್ಯನ ಪ್ರತಿರೂಪವಾದ ಗಂಗಾಧರಮೂರ್ತಿಗೆ ನೀಡಿದಂತೆಯೇ. ಯಾವುದೋ ಮೂಕವೇದನೆ ಅವನಿಗೆ ಮೌನದ ಮುಸುಗನ್ನು ಹಾಕಿತ್ತು.

ತಿರುಮಲಯ್ಯನ ಕಣ್ಣುಗಳಿಂದ ಕೃತಜ್ಞತೆಯ ಹನಿಗಳುದುರಿದವು.

೧೪

ಹೊಸೂರು ಬಸವಿ

ಸೇಂದಿ ಕಂಟ್ರಾಕ್ಟರ್ ಸಣ್ಣಯ್ಯಪ್ಪ ದಿವಾಳಿ ಏಳುವುದಕ್ಕೆ ಬಹು ಕಾಲ ಹಿಡಿಯಲಿಲ್ಲ. ಹೆಣ್ಣೆಂದರೆ ಹುಚ್ಚು ಹೊಳೆಯಾಗಿ ವೆಚ್ಚಮಾಡು ತ್ತಿದ್ದ ಅವನಿಗೆ ನಾಳೆಯ ಗತಿಯೇನು ಎಂಬ ಪರಿಜ್ಞಾನವೇ ಇರಲಿಲ್ಲ. ಸಿಕ್ಕಿದಂತೆ ಸಿಕ್ಕಿದ ಕಡೆ ಸಾಲಮಾಡಲು ಅವನು ಯಾವಾಗಲೂ ಹಿಂದೆ ಬಿದ್ದವನಲ್ಲ; ಅವನಿಗೆ ಸಾಲಕೊಡುವವರೂ ಹಿಂಜರಿಯುತ್ತಿರಲಿಲ್ಲ. ದೊಡ್ಡ ಕಂಟ್ರಾಕ್ಟರು, ಬೆಂಗಳೂರಿನಲ್ಲಿ ನಾಲ್ಕಾರು ದೊಡ್ಡ ಮಹಡಿ ಮನೆಗಳು, ಅವನಿಗೇನು, ಎಷ್ಟುಕೊಟ್ಟರೂ ಮೋಸವಿಲ್ಲವೆಂದು ಅವನು ಕೇಳಿದಷ್ಟು ಹಣ ಕೊಡಲು ಮುಂದಾಗುತ್ತಿದ್ದರು ಜನ. ಸಾಲಕೊಡಲು ಅವನಿಂದ ಯಾವ ಈಡೂ ಅಡವೂ ಬೇಕಾಗಿರಲಿಲ್ಲ ಅವರಿಗೆ; ಬರಿಯ ಒಂದು ಆಂಡಿವ್ಯಾಂಡ್ ಪ್ರೋನೋಟು ಅವನು ಬರೆದುಕೊಟ್ಟರೆ ಸಾಕಾಗಿತ್ತು.

ಅದಕ್ಕೆ ತಕ್ಕಂತೆ ಸಣ್ಣಯ್ಯಪ್ಪನಿಗೂ ಶುಕ್ರಮಹಾದೆಶೆ ಕೂಡಿ ಬಂದಿತ್ತು. ಈ ಶುಕ್ರಮಹಾದೆಶೆ ಮನುಷ್ಯನ ಜೀವಮಾನದಲ್ಲಿ ಯಾವಾ ಗಲೋ ಎಂದೊ ಒಂದು ಬಾರಿ ಮಾತ್ರ ಬರುವುದಂತೆ. ಅದರಂತೆ ಅವನಿಗೂ ಬಂದಿತ್ತು. ಅವನು ಮುಟ್ಟಿದ್ದೆಲ್ಲಾ ಚಿನ್ನವಾಗುತ್ತಿತ್ತು.

ಮೂರು ವರ್ಷಗಳಿಂದ ಒಂದೇಸಮನೆ ಸೇಂದಿ ಕಂಟ್ರಾಕ್ಟು ಅವನ ಕೈಬಿಟ್ಟಿರಲಿಲ್ಲ. ಇನ್ನು ಹತ್ತುವರ್ಷವಾದರೂ ಅದು ತನ್ನ ಕೈಬಿಡುವುದಿಲ್ಲವೆಂದು ಅವನು ನಂಬಿದ್ದ. ಎಲ್ಲರಲ್ಲಿಯೂ ಹಾಗೆ ಹೇಳಿ ಕೊಂಡೂ ಬಂದಿದ್ದ.

ಬೆಂಗಳೂರಿನ ಸುಪ್ರಸಿದ್ಧ ಸೇಂದಿ ಕಂಟ್ರಾಕ್ಟರುಗಳೆನಿಸಿಕೊಂಡಿದ್ದ ಕಲ್ಲಪ್ಪ, ಗುರಪ್ಪ ಇವರುಗಳು ಅವನ ಮೇಲೆ ತೀವ್ರ ಪೈಪೋಟಿ ನಡೆಸಿದರೂ ಸಹ ಆದರಿಂದ ಅವರಿಗೆ ಯಾವ ಪ್ರಯೋಜನವೂ ಆಗದೆ ನಾಲ್ಕನೆಯ

ವರ್ಷವೂ ಕೂಡ ಸುರಾದೇವಿ ಸಣ್ಣಯ್ಯಪ್ಪನ ಕೊರಳಿಗೇ ವಿಜಯಮಾಲೆ ಹಾಕಿದಳು. ಇದರಿಂದ ಸಣ್ಣಯ್ಯಪ್ಪನ ಮೀಸೆ ಇನ್ನೂ ಹುರಿಯಾಯಿತು. "ಅದ್ಯಾವೋನು ನನ್ನ ಅಲ್ಲಾಡ್ಸೋನು ನಾನು ಬದುಕಿರೋಗಂಟ!" ಎನ್ನ ಹತ್ತಿದ. ಕಲ್ಲಪ್ಪ, ಗುರಪ್ಪ ಇವರುಗಳಿಗೆ ಕಂಟ್ರಾಕ್ಟು ದೊರೆಯದೇ ಹೋದದ್ದರಿಂದಲೇ ಮುಖಭಂಗವಾದಂತಾಗಿತ್ತು. ಇನ್ನು ಸಣ್ಣಯ್ಯಪ್ಪನ ಬಡಾಯಿ ಬೇರೆ ಅವರನ್ನು ಕಟುವಾಗಿ ಕುಕ್ಕಿತು. ಗಾಯದ ಮೇಲೆ ಮೆಣಸಿನಕಾಯಿ ಅರೆದು ಹಚ್ಚಿದಂತಾಯಿತು ಅವರಿಗೆ.

ಮರುವರ್ಷ ಏನಾದರಾಗಲಿ ಕಂಟ್ರಾಕ್ಟು ಸಣ್ಣಯ್ಯಪ್ಪನಿಗೆ ಬಿಡಬಾರ ದೆಂದು ಅವರು ನಿಶ್ಚಯಿಸಿಕೊಂಡರು. ಅದರಿಂದ ಕಲ್ಲಪ್ಪ, ಗುರಪ್ಪ ಇಬ್ಬರೂ ಒಂದಾದರು.

ಆದರೂ ಜಿಲ್ಲೆಯ ಅಬ್ಕಾರಿ ಮುಖ್ಯಾಧಿಕಾರಿಗಳು ಸಣ್ಣಯ್ಯಪ್ಪನಿಗೆ ಬೇಕಾದವರಾಗಿದ್ದರು. ಅವರ ಕೈವಾಡದಿಂದ ಐದನೆಯ ವರ್ಷವೂ ಸೇಂದಿ ಕಂಟ್ರಾಕ್ಟು ಸಣ್ಣಯ್ಯಪ್ಪನಿಗೇ ಸಿಕ್ಕಿತು. ಕಲ್ಲಪ್ಪ, ಗುರಪ್ಪ ಇಬ್ಬರಿಗೂ ಮುಖಕ್ಕೆ ನೀರು ಎರಚಿದಂತಾಯಿತು. ಶತ್ರುಗಳ ಸೋಲಿನಿಂದ ಸಣ್ಣಯ್ಯಪ್ಪನಿಗೆ ಎದೆ ಉಬ್ಬಿ ಜೂಜಿನ ಕುದುರೆಯ ಬೆನ್ನೇರಿದಂತಾಯಿತು.

ಈ ಅಬ್ಕಾರಿ ಮುಖ್ಯಾಧಿಕಾರಿ ಇರುವವರೆಗೂ ತಮಗೆ ಸೇಂದಿ ಕಂಟ್ರಾಕ್ಟು ದೊರೆಯುವುದು ಸಾಧ್ಯವಿಲ್ಲವೆಂದು ಅರಿತ ಕಲ್ಲಪ್ಪ, ಗುರಪ್ಪ. ಅವರ ಮೇಲೆಯೇ ಸರ್ಕಾರಕ್ಕೆ ತರಲೆ ಅರ್ಜಿಗಳನ್ನು ಬರೆಸಲು ಪ್ರಾರಂಭಿಸಿ ದರು. ಮೇಲಾಧಿಕಾರಿಗಳಲ್ಲೂ ತಮ್ಮ ಪ್ರಭಾವ ಮೂಡುವಂತೆ ಮಾಡಿದರು. ಅವರ ಪ್ರಯತ್ನದಿಂದಾಗಿ ಆ ಅಧಿಕಾರಿ ಬೇರೇ ಕಡೆಗೆ ವರ್ಗವಾಗಿ ಹೋಗ ಬೇಕಾಯಿತು.

ಅದರಿಂದ ಸಣ್ಣಯ್ಯಪ್ಪನ ಬಲಗೈ ಮುರಿದಂತಾಯಿತು. ಅವನು ಏರಿದ್ದ ಜೂಜಿನ ಕುದುರೆಯ ಕಡಿವಾಣ ಕತ್ತರಿಸಿ ಬಿಟ್ಟಂತಾಯಿತು. ಬಿಗಿದಪ್ಪಿ ಅವನು ಕೆಳಕ್ಕೆ ಉರುಳಿದ. ಆರನೆಯ ವರ್ಷದ ಕಂಟ್ರಾಕ್ಟು ಕಲ್ಲಪ್ಪ, ಗುರಪ್ಪ ಅವರ ಕೈಸೇರಿತು. ಸಣ್ಣಯ್ಯಪ್ಪನ ಗ್ರಹಗತಿ ತಲೆಕೆಳಕಾಯಿತು.

ಸಣ್ಣಯ್ಯಪ್ಪ ಬಿದ್ದುದನ್ನು ನೋಡಿ ಅವನ ಸಾಲಗಾರರು ಮೇಲೆ ದ್ದರು. ಅವನು ಬರೆದುಕೊಟ್ಟಿದ್ದ ಆಂಡಿವ್ಯಾಂಡ್ ಪ್ರೋನೋಟುಗಳು ಕೋರ್ಟ್ ಕಂಡವು.

ಲಾಂಗ್‌ಕೋಟು ಲಾಯರಿ ಲಿಂಗಣ್ಣ ಸಣ್ಣಯ್ಯಪ್ಪನ ಹೆಂಡತಿಯನ್ನು ಮೊದಲೇ ಎಚ್ಚರಿಸಿದ್ದ. ಅವಳೂ ಹುಷಾರಿ ಹೆಂಗಸು. ಗಂಡನ 'ದಿಲ್‌ದಾರ ತನ'ವನ್ನು ನೋಡಿ ಇದ್ದಬದ್ದ ಆಸ್ತಿಯೆಲ್ಲವನ್ನೂ ಉಪಾಯದಿಂದ ತನ್ನ ಹೆಸರಿಗೆ ಮಾಡಿಸಿಕೊಂಡುಬಿಟ್ಟಿದ್ದಳು. ಅದರಿಂದ ಸಾಲಗಾರರಿಗೆ ಸಣ್ಣ ಯ್ಯಪ್ಪನ ಮೇಲೆ ಯಾವ ಹಿಡಿತವೂ ಸಿಕ್ಕದಂತಾಯಿತು. ಅವರು ಕೊಟ್ಟ ಹಣ ನೀರಿನಲ್ಲಿ ತೊಳೆದ ಹುಣಿಸೆಹಣ್ಣಾಯಿತು. ಸಣ್ಣಯ್ಯಪ್ಪ ಸುಮ್ಮನೆ ತಂಟೆತಕರಾರು ಯಾಕೆಂದು ದಿವಾಳಿ ಅರ್ಜಿ ಗುಜರಾಯಿಸಿಕೊಂಡ. ದಿವಾಳಿ ಯಾದ ಮೇಲೆ ಅವನನ್ನು ಕೇಳುವವರೇ ದಿಕ್ಕಿಲ್ಲವಾಯಿತು. ಮನೆಯಲ್ಲೂ ಅವನಿಗೆ ಪುರಸ್ಕಾರ ದೊರೆಯಲಿಲ್ಲ. ಲಾಂಗ್‌ಕೋಟು ಲಾಯರಿ ಲಿಂಗಣ್ಣನೇ ಮನೆಗೆ ಯಜಮಾನನಾಗಿಬಿಟ್ಟ. ಸಣ್ಣಯ್ಯಪ್ಪನಿಗೆ ಮನೆ ಮಸಣವಾಯಿತು. ಹೆಂಡತಿ ಸಾಕ್ಷಾತ್ ಢಾಕಿನಿಯೇ ಆಗಿಬಿಟ್ಟಳು.

ಇದುವರೆಗೆ ಲಾಂಗ್ ಕೋಟು ಲಾಯರಿ ಲಿಂಗಣ್ಣ ಹಾಗೂ ಸಣ್ಣಯ್ಯಪ್ಪನ ಹೆಂಡತಿಯ ಸಂಬಂಧ ಸಣ್ಣಯ್ಯಪ್ಪನ ಕಣ್ಣಿಗೆ ಕಾಣದಂತೆ ಹೇಗೋ ನಡೆದುಕೊಂಡು ಹೋಗುತ್ತಿತ್ತು. ಈಗ ತನ್ನ ಕಣ್ಣೆದುರಿಗೇ ತನ್ನ ಹೆಂಡತಿ ಇನ್ನೊಬ್ಬನೊಂದಿಗೆ ಕೂಡುವುದು ಅವನಿಗೆ ಸಹಿಸದಾಯಿತು. 'ಸಹಿಸಿಕೊಂಡಿರಲಾಗದಿದ್ದವರು ಮನೆ ಬಿಟ್ಟು ಹೊರಡುಬಹುದು' ಎಂದು ಕಡ್ಡಿ ಮುರಿದಂತೆ ಹೇಳಿಬಿಟ್ಟಳು ಅವನ ಹೆಂಡತಿ. ಅವಳಿಗೆ ಯಾವ ಸಂಕೋಚವಾಗಲಿ, ಮರ್ಯಾದೆಯಾಗಲಿ, ಲಜ್ಜೆಯಾಗಲಿ ಉಳಿದಿರಲಿಲ್ಲ. ಸಣ್ಣಯ್ಯಪ್ಪನಿಗೂ ರೇಗಿತು. ತನಗೂ ತನ್ನ ಹೆಂಡತಿಗೂ ಅಂದಿಗೆ ಋಣಾನು ಬಂಧ ತೀರಿತೆಂದು ಅಂದೇ ಅವನು ಆ ಮನೆ ಬಿಟ್ಟು ಹೊರಹೊರಟ.

ಬೀದಿಯ ಭಿಕಾರಿಯಾದ ಸಣ್ಣಯ್ಯಪ್ಪನಿಗೆ ಆಶ್ರಯ ನೀಡಿದವ ಳೆಂದರೆ ಹೊಸೂರು ಬಸವಿ. ಹಿಂದೆ ಬಸವಿ ಬೀದಿಯ ಭಿಕಾರಿಯಾಗಿದ್ದಾಗ ಸಣ್ಣಯ್ಯಪ್ಪ ತನಗೆ ಆಶ್ರಯ ನೀಡಿದ್ದನ್ನು ಸ್ಮರಿಸಿಕೊಂಡು ನಿಯತ್ತಿನಿಂದ ನಡೆದುಕೊಂಡಳು ಬಸವಿ.

೧೫

ಬಸವಿ ಬೆಂಗಳೂರು ಸೇರುವುದಕ್ಕೆ ಮೊದಲು ಹೊಸೂರಿನಲ್ಲಿಯೇ ಇದ್ದವಳು.

ಮಾಯಣ್ಣ–ಚನ್ನಮ್ಮ ಗಂಡಹೆಂಡಿರಾಗಿ ಹತ್ತು ವರ್ಷಗಳ ನಿರಂತರ ಸಂಸಾರಮಾಡಿದ್ದರೂ ಭಗವಂತ ಅವರಿಗೆ ಒಂದು ಸಂತಾನವನ್ನು ಕರುಣಿಸಿರಲಿಲ್ಲ. ಎಷ್ಟೋ ದೇವರುಗಳಿಗೆ ಅವರು ಹರಕೆ ಹೊತ್ತು ಸುಸ್ತಾಗಿದ್ದರು. ಯಾವ ದೇವರೂ ಅವರ ಮೇಲೆ ಮರುಕ ತೋರಲಿಲ್ಲ.

ಕೊನೆಗೆ ಬೀರೇದೇವರ ಕೃಪೆಯಿಂದ, ಹುಟ್ಟಿದ ಮಗುವನ್ನು ಅವನ ಹೆಸರಿನ ಮೇಲೆ ಬಿಡುವುದಾಗಿ ಮಾತು ಕೊಟ್ಟಮೇಲೆ ಹೆಣ್ಣು ಸಂತಾನವಾಯಿತು. ಆ ಸಂತಾನವೇ ಬಸವಿ. ಬಸವಿ ಹುಟ್ಟಿ 'ಬಸವಿ'ಯಾದಳು.

ಅವಳು ಹುಟ್ಟಿದ ಮೂರನೆಯ ದಿನವೇ ಮಾಯಣ್ಣ ತೀರಿಕೊಂಡ. ಚನ್ನಮ್ಮ ಮಗಳನ್ನು ಬಹಳ ಪ್ರೀತಿಯಿಂದಲೇ ಸಾಕಹತ್ತಿದಳು.

ಬಸವಿ ಬೆಳೆದು ದೊಡ್ಡವಳಾದಳು. ತಾಯಿಯ ಮುದ್ದಿನಲ್ಲಿ ಬೆಳೆದ ಅವಳು ಮುದ್ದುಮುದ್ದಾಗಿಯೇ ಬೆಳೆದಿದ್ದಳು, ನೋಡುವವರ ಮನಸ್ಸಿನಲ್ಲಿ ಬಯಕೆ ಮೂಡಿಸುವಂತೆ ಅರಳಿದ್ದಳು.

ಮಗಳು ದೊಡ್ಡವಳಾಗುತ್ತಲೂ ಚನ್ನಮ್ಮ ಬೀರೇದೇವರಿಗೆ ಮಾತು ಕೊಟ್ಟಿದ್ದಂತೆ ಬಸವಿಯನ್ನು ಆ ದೇವರ ಹೆಸರಿನಲ್ಲಿ ಬಸವಿಯಾಗಿಬಿಟ್ಟಳು. ದೇವರ ಬಸವಿ, ಊರಬಸವಿಯೂ ಆದಳು.

ಆದರೆ ಸಾಹುಕಾರ್ ಶರಣಪ್ಪನವರು ಬಸವಿಯನ್ನು ಊರಬಸವಿಯಾಗಿ ಬಿಡಲು ಒಪ್ಪಲಿಲ್ಲ.

ಸಾಹುಕಾರ್ ಶರಣಪ್ಪನವರು ಆ ಊರಿಗೆ ಮಾತ್ರವಲ್ಲ, ಸುತ್ತಮುತ್ತಲ ಊರಿಗೆಲ್ಲಾ ದೊಡ್ಡ ಸಾಹುಕಾರರಾಗಿದ್ದರು.

ಎಲ್ಲ ಸಾಹುಕಾರರಂತೆ ಅವರ ಸಾಹುಕಾರಿಕೆಯೂ ಬೆಳೆದು, ಅವರು

ಬರಿ ಸಾಹುಕಾರರೇ ಆಗಿರದೆ ಆ ಪ್ರಾಂತ್ಯಕ್ಕೇ ಪಾಳೆಯಗಾರರಾಗಿದ್ದರು. ಅವರ ಅಪ್ಪಣೆಯಿಲ್ಲದೆ ಒಂದು ಹುಲ್ಲುಕಡ್ಡಿಯೂ ಅತ್ತಿಂದಿತ್ತ ಅಲುಗುತ್ತಿರಲಿಲ್ಲ. ಅಷ್ಟು ದರ್ಪದಿಂದ ತಮ್ಮ ಅಧಿಕಾರವನ್ನು ಅವರು ಉಳಿಸಿಕೊಂಡಿದ್ದರು.

ಶರಣಪ್ಪನವರಿಗೆ ವಯಸ್ಸು ಕಳೆದು ಮುದಿತನ ಕಾಲಿಟ್ಟು ಆಗಲೇ ಬಹಳ ವರ್ಷಗಳಾಗಿ ಹೋಗಿದ್ದವು. ವಯಸ್ಸಿಗೆ ಬಂದ ಇಬ್ಬರು ಗಂಡು ಮಕ್ಕಳಿದ್ದರು. ಮನೆಗೆ ಸೊಸೆಯರೂ ಬಂದದ್ದಾಗಿತ್ತು. ಆದರೂ ಅವರಲ್ಲಿ ಹೆಣ್ಣಿನ ಮೋಹ ಇನ್ನೂ ಹಸುರಾಗಿಯೇ ಇತ್ತು.

ಹತ್ತು ವರ್ಷಗಳ ಹಿಂದೆ ಹೆಂಡತಿ ಸತ್ತುಹೋದ ಮೇಲೆ ಅವರು ಮತ್ತೆ ಮದುವೆಯಾಗದಿದ್ದರೂ ಸ್ತ್ರೀಸುಖಕ್ಕೆ ಅವರಿಗೆ ಯಾವ ಕೊರತೆಯೂ ಉಂಟಾಗಿರಲಿಲ್ಲ. ಲೆಖ್ಖವಿಲ್ಲದಷ್ಟು ಹರೆಯದ ಹುಡುಗಿಯರು ಅವರ ಹಾಸಿಗೆಯನ್ನು ಅಲಂಕರಿಸಿದ್ದರು.

ಬಸವಿಯ ಮೇಲೆ ಶರಣಪ್ಪನವರ ಕಣ್ಣು ಬಿತ್ತು. ಬಸವಿ ಸಾಹುಕಾರ ಶರಣಪ್ಪನವರಿಗೆ ವಿಲಾಸಲಾದ ಬಸವಿಯಾದಳು. ಪ್ರತ್ಯೇಕವಾದ ಮನೆಯೊಂದನ್ನು ಮಾಡಿ ಅಲ್ಲಿ ಅವಳನ್ನಿಟ್ಟರು. ಬೇಕುಬೇಕಾದ ಸುಖಭೋಗಗಳನ್ನು ಒದಗಿಸಿಕೊಟ್ಟರು.

ಮಗಳು ದೊಡ್ಡ ಸಾಹುಕಾರರ ಕೃಪೆಗೆ ಪಾತ್ರಳಾದುದನ್ನು ನೋಡಿ ಚನ್ನಮ್ಮನಿಗೆ ಸಂತೋಷ ಉಕ್ಕಿಬಂತು.

ಶರಣಪ್ಪನವರಿಗೆ ಇನ್ನೂ ಐವತ್ತು ವರ್ಷಗಳು ಬದುಕಿರಬೇಕೆಂಬ ಆಸೆಯಿತ್ತು. ಆದರೆ ಅವರ ಆಸೆಯನ್ನು ಈಡೇರಿಸಲು ಭಗವಂತ ಸಿದ್ಧನಿರಲಿಲ್ಲ. ಅಂತೂ ಬಸವಿಯ ಸಂಗಮಾಡಿದ ಆರು ತಿಂಗಳಿಗೇ ಅವರು ಇಹಲೋಕಯಾತ್ರೆಯನ್ನು ಮುಗಿಸಿದರು. ಅವಳ ಸಂಗವೇ ಅವರಿಗೆ ಕೊನೆಯ ಕಾಯಸಂಗವಾಯಿತು.

ಶರಣಪ್ಪನವರು ಕೈಲಾಸವಾಸಿಯಾದ ಮೇಲೆ ಹಿರಿಯ ಮಗ ಪಿಳ್ಳಪ್ಪ ಮನೆಯ ಯಜಮಾನನಾದ, ಊರಿಗೆ ಸಾಹುಕಾರನಾದ. ಸುತ್ತಲ ಪ್ರಾಂತ್ಯಕ್ಕೆ ಪಾಳೆಯಗಾರನೂ ಆದ.

ಬಹಳ ದಿನಗಳಿಂದ ಪಿಳ್ಳಪ್ಪನಿಗೆ ಬಸವಿಯ ಮೇಲೆ ಬಲವತ್ತರವಾದ ಆಸೆಯಿತ್ತು. ಚನ್ನಮ್ಮನೊಂದಿಗೂ ತನ್ನ ಆ ಆಸೆಯನ್ನು ವ್ಯಕ್ತಪಡಿಸಿದ್ದ. ಅವಳೂ ಅಂದಿದ್ದಳು – 'ಆಗಲಿ, ಅವಳನ್ನು ದೇವರಿಗೆ ಒಪ್ಪಿಸಿದ ಮೇಲೆ' ನೋಡೋಣ ಎಂದು. ಆದರೆ ಅವಳನ್ನು ದೇವರಿಗೆ ಒಪ್ಪಿಸಿದ ಮೇಲೆ ಅವನ ತಂದೆ ಅವಳನ್ನು ಒಪ್ಪಿಸಿಕೊಂಡುಬಿಟ್ಟಿದ್ದ. ತಂದೆಗೆ ಎದುರಾಗಿ ನಿಂತು 'ಅವಳು ತನ್ನವಳಾಗಬೇಕೆಂದು' ಕೇಳುವ ಎದೆಗಾರಿಕೆ ಅವನಲ್ಲಿರಲಿಲ್ಲ. ಆದರಿಂದ ಅವನು ತನ್ನ ಆಸೆಯನ್ನು ನಿರಾಶೆಯನ್ನಾಗಿ ಮಾಡಿಕೊಂಡು ಸುಮ್ಮನಾಗಬೇಕಾಯಿತು.

ತಂದೆ ಸತ್ತನಂತರ ಪಿಳ್ಳಪ್ಪ ಸರ್ವತಂತ್ರ ಸ್ವತಂತ್ರನಾದ. ಅವನು ಯಾರಿಗೂ ಹೆದರಬೇಕಾಗಿರಲಿಲ್ಲ. ಬಸವಿಯ ಮೇಲಿನ ಮೋಹ ಇನ್ನೂ ಸುಪ್ತವಾಗಿಯೇ ಇತ್ತು. ಬಸವಿ ಮತ್ತೆ ಪಿಳ್ಳಪ್ಪನಿಗೆ 'ಬಸವಿ'ಯಾದಳು. ಊರಲ್ಲಿ ಜನ ಗುಸಗುಸ ಮಾತನಾಡಿಕೊಂಡರು—

'ತಂದೆ ಇಟ್ಟುಕೊಂಡವಳನ್ನು ಮಗ ಇಟ್ಟುಕೊಳ್ಳುವುದು ಮಹಾ ಪಾಪ. ಮಾಡಬಾರದ ಕೆಲಸ.'

ಅದು ಹೇಗೋ ಪಿಳ್ಳಪ್ಪನಿಗೆ ತಿಳಿಯಿತು. ಗಡುಸಾಗಿಯೇ ಅವನಂದ—

'ಯಾವ ಪಾಪ? ಹೇಗೆ ಕೆಟ್ಟ ಕೆಲಸ? ತಂದೆ ಇಟ್ಟುಕೊಂಡಿದ್ದರೇನು? ಎಷ್ಟಾದರೂ ಅವಳು ದೇವರ ಬಸವಿ.'

'ಮಾತಾಡಿದರೆ ಮೇಲೆ ಬೀಳುವವ ಪಿಳ್ಳಪ್ಪ. ತಮಗೇಕೆ ಬೇಕು? ಏನಾದರೂ ಮಾಡಿಕೊಳ್ಳಲಿ'

—ಎಂದು ಊರಜನರು ಮರುಮಾತನಾಡಲಿಲ್ಲ.

ಆದರೂ ಶರಣಪ್ಪನ ಕಿರಿಯ ಮಗ, ಪಿಳ್ಳಪ್ಪನ ತಮ್ಮ ಬುಳ್ಳಪ್ಪನಿಗೆ ಅಣ್ಣನ ಮೇಲೆ ದ್ವೇಷ ಹುಟ್ಟಿತು. ಬಸವಿಯನ್ನು ಪಡೆಯಬೇಕೆಂದು ಅವನಿಗೂ ಬಹುಕಾಲದ ಬಯಕೆ. ಆಗ ತಂದೆ, ಈಗ ಅಣ್ಣ ಅವನ ಬಯಕೆಗೆ ಅಡ್ಡವಾಗಿದ್ದರು.

ಬಸವಿ, 'ಬಸವಿ'ಯಾಗುವುದಕ್ಕೆ ಮೊದಲೇ ಬುಳ್ಳಪ್ಪ ಅವಳೊಂದಿಗೆ

ಮಾತನಾಡಿದ್ದ. ಅವಳೂ ಅವನಿಗೆ ಮನಸೋತಿದ್ದಳು. ಆದರೆ ಅಷ್ಟರಲ್ಲಿಯೇ ಶರಣಪ್ಪನವರು ನಡುವೆ ಬಂದು ಅವರಿಬ್ಬರ ಆಸೆಯನ್ನು ಮುರಿದುಬಿಟ್ಟರು.

ಈಗ ಅಣ್ಣ ಪಿಳ್ಳಪ್ಪ ಬಸವಿಯನ್ನಿಟ್ಟುಕೊಂಡು 'ತಂದೆ ಇಟ್ಟು ಕೊಂಡವಳಾದರೇನು? ಅವಳು ದೇವರ ಬಸವಿ. ಪಾಪವೇನೂ ಇಲ್ಲ' ಎನ್ನಹತ್ತಿದ್ದರಿಂದ ತಮ್ಮ ಬುಳ್ಳಪ್ಪನಿಗೆ, ಅವನ ಪೂರ್ವದ ಬಯಕೆ ಕೆರಳಿ, ಆಸೆ ಮತ್ತೆ ಚಿಗುರಿಕೊಂಡಿತು. ಅವನಿಗೆ ಅಣ್ಣನ ಮೇಲೆ ಅಸೂಯೆ ಮೊಳೆಯಿತು. ತಾನೂ ಏಕೆ ಬಸವಿಯನ್ನೊಂದುಕೈ ನೋಡಬಾರದು ಎನ್ನಿಸಿತು.

ಬುಳ್ಳಪ್ಪ ಬಸವಿಯನ್ನು ಕಂಡು ಮಾತನಾಡಿದ, ತನ್ನ ಮನದಾಸೆ ಯನ್ನು ಬಯಲು ಮಾಡಿದ. ಅವಳು ಅವನಿಗೂ ತನ್ನ ದೇಹವನ್ನು ನೀಡಲು ಸಂತೋಷದಿಂದಲೇ ಸಮ್ಮತಿಸಿದಳು. ಅಣ್ಣನಿಗೆ ಮರೆಮಾಡಿ ತಮ್ಮನೂ ಬಸವಿಯ ಬಳಿಗೆ ಹೋಗತೊಡಗಿದ. ಅಣ್ಣತಮ್ಮಂದಿರಿಬ್ಬರೂ ತಂದೆ ಅನುಭವಿಸಿ ಬಿಟ್ಟ ಬಸವಿಗೆ ವಾರಸುದಾರರಾದರು.

ಬುಳ್ಳಪ್ಪ–ಬಸವಿಯರ ಸಂಬಂಧ ಬಹಳ ಕಾಲ ಒಳಗೇ ಹುದುಗಿ ಕೊಂಡಿರಲು ಸಾಧ್ಯವಾಗಲಿಲ್ಲ. ಅದು ಹೊರಬಿದ್ದು ಹರಡಿದಾಗ ಜನ ಕೌತುಕದಿಂದ ಮೂಗಿನ ಮೇಲೆ ಬೆರಳಿಟ್ಟುಕೊಂಡರು, ಬಹಳ ಅನ್ಯಾಯ ಎಂದರು.

ಪಿಳ್ಳಪ್ಪ ತಮ್ಮನನ್ನು ಕರೆಸಿ ಅವನಿಗೆ ಚೆನ್ನಾಗಿ ಛೀಮಾರಿ ಮಾಡಿದ. ತಮ್ಮನೂ ಅಣ್ಣನಿಗೆ ಎದುರುಬಿದ್ದ.

"ನೀನ್ಯಾರ್ಲಾ ಕೇಳೋಕೆ ನನ್ನ?" ಎಂದ ತಮ್ಮ.

"ನಾನು ಅವಳ್ನ ಇಟ್ಕೊಂಡಿದೀನಿ" ಅಣ್ಣ ಪಿಳ್ಳಪ್ಪ ಹೇಳಿದ.

"ನಿಂದು ಒಬ್ಬಂದೇ ಏನು ಅವಳ ಮೇಲೆ ಅಧಿಕಾರ? ಅವಳು ದೇವರ ಬಸವಿ" ತಮ್ಮ ಉತ್ತರಿಸಿದ.

ಪಿಳ್ಳಪ್ಪನಿಗೆ ಪ್ರತ್ಯುತ್ತರ ಕೊಡಲು ಸಾಧ್ಯವಿಲ್ಲವಾಯಿತು. ಆದರೂ ಅವನಂದ—

"ನಾನು ಮನೆಯ ಯಜಮಾನ, ನಾನು ಹೇಳಿದ ಹಾಗೆ ನೀನು ಕೇಳ್ಕೊಂಡಿರಬೇಕು."

"ಹಾಗಂತ ಬರ್ಕೊಟ್ಟು ನಾನು ನಮ್ಮಪ್ಪನಿಗೆ ಹುಟ್ಟಲಿಲ್ಲ. ನಿನಗಿರೋ ಅಷ್ಟು ಹಕ್ಕು ನನಗೂ ಇದೆ. ನಾನೂ ಮನೆಗೆ ಯಜಮಾನನೇ" ಬುಳ್ಳಪ್ಪ ಎದುರು ವಾದಿಸಿದ.

ಅಂದಿನಿಂದ ಅಣ್ಣ-ತಮ್ಮಂದಿರಿಬ್ಬರಲ್ಲೂ ದ್ವೇಷ ಬೆಳೆಯಿತು. ತಮ್ಮನಿಗೆ ಬುದ್ಧಿ ಕಲಿಸಬೇಕೆಂದು ಅಣ್ಣ ಗುಂಪುಕಟ್ಟಿದ. ಅಣ್ಣನಿಗೆ ಬುದ್ಧಿ ಕಲಿಸಬೇಕೆಂದು ತಮ್ಮನೂ ಗುಂಪುಕಟ್ಟಿದ. ಒಳಗೊಳಗೇ ಬೆಂಕಿಯಾಡುತ್ತಿತ್ತು ಸೇಡಿನ ಕಿಡಿ.

ಊರಿನವರು ಭಯಭ್ರಾಂತರಾದರು. ಮುಂದೇನು ಮಹಾವಿಪತ್ತು ಸಂಭವಿಸುವುದೋ ಎಂದು ಅವರು ಹೆದರಿದರು.

ಕಡೆಗೂ ಆ ದಿನ ಬಂದೇ ಬಂತು. ಅಂದು ಪಿಳ್ಳಪ್ಪ ಬಸವಿಯ ಮನೆಗೆ ಹೋಗಿ ಅವಳು ಮಲಗುವ ಕೋಣೆಯೊಳಕ್ಕೆ ಕಾಲಿಡುವುದಕ್ಕೂ ಬುಳ್ಳಪ್ಪ ಮಂಚದಿಂದ ಎದ್ದು ಬರುವುದಕ್ಕೂ ಸರಿಹೋಯಿತು. ಅಸ್ತವ್ಯಸ್ತವಾಗಿದ್ದ ತನ್ನ ಸೀರೆಯನ್ನು ಸರಿಮಾಡಿಕೊಳ್ಳುತ್ತ ಬಸವಿ ಇನ್ನೂ ಮಂಚದ ಮೇಲೆಯೇ ಇದ್ದಳು.

ಪಿಳ್ಳಪ್ಪನಿಗೆ ಕ್ರೋಧ ಉಕ್ಕಿತು, ಅವನು ಕಿಡಿಕಿಡಿಯಾದ. ಹಲ್ಲು ಹಲ್ಲು ಕಡಿದ. ತಮ್ಮನನ್ನು ಹಿಡಿದು ಅವನ ಕೆನ್ನೆಗೆ ಫಳೀರೆಂದು ಏಟಿನ ಮೇಲೆ ಏಟು ಹೊಡೆದ. ತಮ್ಮನೂ ಬಿಡಲಿಲ್ಲ. ಅಣ್ಣನ ಕೆನ್ನೆಗೆ ಹಿಂದು ಮುಂದು ನೋಡದೆ ಅಪ್ಪಳಿಸಿದ. ಬಸವಿ ಭಯಗೊಂಡು ಅಲ್ಲಿಂದ ಹೊರ ಓಡಿದಳು. ಅಣ್ಣ ತಮ್ಮಂದಿರಿಬ್ಬರೂ ಎಷ್ಟೋ ಹೊತ್ತು ಕಾದಾಡಿದರು. ಕಾದಾಡಿ ಕೊನೆಗೆ ಸುಸ್ತಾದರು. ಇಬ್ಬರ ಮೈಮೇಲೂ ರಕ್ತಕಿತ್ತು, ಘಾಯಗಳು ಕಾಣಿಸಿಕೊಂಡವು.

ಅದೇ ದಿನ ಅಣ್ಣ, ತಮ್ಮನಿಗೆ - ಇನ್ನು ತನ್ನ ಮನೆಯೊಳಕ್ಕೆ ಕಾಲಿಡಕೂಡದೆಂದು ಹೇಳಿದ. ತಮ್ಮನೂ ಮನೆ ನಿನ್ನೊಬ್ಬನದೇ ಅಲ್ಲ, ನನಗೆ ಕೊಡುವ ಪಾಲು ಕೊಟ್ಟುಬಿಡೆಂದು ಹೇಳಿದ. ಪಿಳ್ಳಪ್ಪ ಕೆಂಡ ಕಾರುವಂತೆ ತಮ್ಮನ ಮುಖವನ್ನು ನೋಡಿದ.

ಮೂರನೆಯ ದಿನವೇ ಶರಣಪ್ಪನವರ ಆಸ್ತಿ ಎರಡು ಪಾಲಾಯಿತು. ಅಣ್ಣ ತಮ್ಮಂದಿರಿಬ್ಬರಿಗೂ ಊರಿನ ಪಂಚರ ಎದುರು ತೋಟ, ಮನೆ, ಗದ್ದೆ, ಹೊಲ, ಲೇವಾದೇವಿ ಎಲ್ಲವೂ ಹಂಚಿಕೆಯಾಯಿತು.

ಇನ್ನು ಹಂಚಿಕೆಯಾಗದೇ ಉಳಿದ ಶರಣಯ್ಯನವರ ಒಂದೇ ಒಂದು ಆಸ್ತಿಯೆಂದರೆ ಬಸವಿ. ಪಿಳ್ಳಪ್ಪ ಧಾವಿಸಿ ಹೋಗಿ ಬಸವಿಯನ್ನು ತನ್ನ ಮನೆಗೆ ಕರೆತಂದ. ಬುಳ್ಳಪ್ಪ ಅವನನ್ನು ರಸ್ತೆಯಲ್ಲಿ ತಡೆದ. ಬಸವಿ ನನಗೆ ಬೇಕು, ತನಗೆ ಬೇಕು ಎಂದು ಇಬ್ಬರೂ ಜಗ್ಗಾಡಿದರು. ಪಿಳ್ಳಪ್ಪ - ಬುಳ್ಳಪ್ಪರ ಜಗ್ಗಾಟದಲ್ಲಿ ಬಸವಿ ಬಸವಳಿದು, ಬದುಕುವುದೇ ಕಷ್ಟ ವಾಯಿತು.

ಊರಿನ ಜನಕ್ಕೆ ಇವನ್ನು ನೋಡಿ ಒಂದು ಕಡೆ ತಡೆಯಲಾಗದ ನಗು, ಇನ್ನೊಂದು ಕಡೆ ಎದೆ ನಡುಗಿಸುವ ಭಯ.

ಬೀದಿಯ ಜಗಳ, ಜನ ಸೇರಿತು, ಗುಂಪುಕೂಡಿತು. ಪಿಳ್ಳಪ್ಪನ ಗುಂಪಿನವರಿಗೂ ಬುಳ್ಳಪ್ಪನ ಗುಂಪಿನವರಿಗೂ ಹೊಡೆದಾಟ ಪ್ರಾರಂಭ ವಾಯಿತು. ಊರು, ಕೇರಿ ಕುರುಕ್ಷೇತ್ರವಾಯಿತು. ದೊಣ್ಣೆ, ಮಚ್ಚು ಗಳು ಎಡೆತಡೆಯಿಲ್ಲದೆ ಹಾರಿದವು, ತಲೆಗಳೂ ಉರುಳಿದವು.

ಪಿಳ್ಳಪ್ಪ ತಮ್ಮನನ್ನು ಹಿಡಿದು ಅಪ್ಪಳಿಸಿದ. ಬುಳ್ಳಪ್ಪನೂ ಅಣ್ಣನ ಮೇಲೆ ಏರಿಹೋದ. ಉದ್ರಿಕ್ತನಾದ ಪಿಳ್ಳಪ್ಪ ಬದಿಯಲ್ಲಿದ್ದ ತನ್ನ ಕಡೆಯವ ನೊಬ್ಬನ ಕೈಯ್ಯಲ್ಲಿದ್ದ ಮಚ್ಚನ್ನು ಸೆಳೆದುಕೊಂಡು ರೆಪ್ಪೆಹಾರಿಸುವುದರಲ್ಲಿ ಬುಳ್ಳಪ್ಪನ ಮೇಲೆ ಬೀರಿದ. ಬುಳ್ಳಪ್ಪನ ತಲೆಯೊಡೆದು ರಕ್ತ ಚಿಮ್ಮಿ, ಚೀರಿಕೊಂಡು ಅವನು ನೆಲಕ್ಕೆ ಒರಗಿದ. ಇದರಿಂದ ಕೆರಳಿದ ಬುಳ್ಳಪ್ಪನ ಕಡೆಯವರು ಪಿಳ್ಳಪ್ಪನ ಮೇಲೂ ತಮ್ಮ ಆಯುಧಗಳನ್ನು ಪ್ರಯೋಗಿಸಿ ದರು. ಪಿಳ್ಳಪ್ಪ ತಮ್ಮನನ್ನು ಹಿಂಬಾಲಿಸಿದ.

ಈ ಮಧ್ಯೆ ಬಸವಿ ತಪ್ಪಿಸಿಕೊಂಡು ತಾಯಿಯ ಮನೆ ಸೇರಿದಳು.

ಪಿಳ್ಳಪ್ಪ ಬುಳ್ಳಪ್ಪ ಇಬ್ಬರೂ ಸತ್ತುಬಿದ್ದರೂ ಅವರವರ ಕಡೆಯವ ರಿಗೆ ಕದನ ನಿಲ್ಲಲಿಲ್ಲ. ರಣೋನ್ಮತ್ತರಂತೆ ಹೋರಾಡತೊಡಗಿದರು. ಪೋಲೀಸು ಠಾಣೆ ಇದ್ದದ್ದು ಆ ಊರಿಗೆ ಎಂಟು ಮೈಲಿ ದೂರದ

ನಗರದಲ್ಲಿ. ಪೋಲೀಸಿನವರು ಸಕಾಲದಲ್ಲಿ ಬಂದು ಆ ಹೋರಾಟವನ್ನು ನಿಲ್ಲಿಸಿ ತಹಬಂದಿಗೆ ತರಲು ಸಾಧ್ಯವಾಗಲಿಲ್ಲ.

ಪಿಳ್ಳಪ್ಪನ ಪಡೆಯವರು ತಮ್ಮ ಧಣಿ ಸತ್ತುಬಿದ್ದುದನ್ನು ಕಂಡು ಅದರಿಂದ ರೊಚ್ಚಿಗೆದ್ದು ಇಷ್ಟಕ್ಕೆಲ್ಲಾ ಕಾರಣಳಾದ ಬಸವಿಯನ್ನೆ ಮುಗಿಸಿ ಬಿಡಬೇಕೆಂದು ಸಂಕಲ್ಪಿಸಿ ಅವಳ ಮನೆಯ ಕಡೆ ಧಾವಿಸಿದರು. ಅವಳು ಅಲ್ಲಿಲ್ಲದಿರಲು ಅವಳ ತಾಯಿ ಚೆನ್ನಮ್ಮನ ಮನೆಗೆ ಧಾಳಿಮಾಡಿದರು. ಚನ್ನಮ್ಮ ಗಾಭರಿಗೊಂಡು, ಮಗಳನ್ನು ರಕ್ಷಿಸಬೇಕೆಂದು ಮನೆಯ ಹೊರ ಬಾಗಿಲನ್ನು ಒಳಗಿನಿಂದ, ಭದ್ರಮಾಡಿ, ಕೀಲಿಹಾಕಿ, ಅದನ್ನು ತನ್ನ ಶಕ್ತಿಯನ್ನೆಲ್ಲಾ ಬಿಟ್ಟು ಅದುಮಿ ಹಿಡಿದು ನಿಂತಳು. ಬಂದ ಪುಂಡರು ಬಾಗಿಲನ್ನು ಒದೆದರು, ಬಡಿದರು, ಒಡೆದರು. ಹಳೆಯ ಬಾಗಿಲು ಮುರಿದು ಬಿತ್ತು. ಪುಂಡರು ಒಳನುಗ್ಗಿದರು. ಚನ್ನಮ್ಮ ಅಡ್ಡನಿಂತಳು. ಅವಳನ್ನು ಆ ಪುಂಡರು ಆಯುಧಗಳಿಂದ ಹೊಡೆದರು. ಚೆನ್ನಮ್ಮ ಗಟ್ಟಿಯಾಗಿ ಚೀರುತ್ತ ನೆಲಕ್ಕೆ ಉರುಳಿ ಸತ್ತುಬಿದ್ದಳು.

ಅಷ್ಟರಲ್ಲಿ ಬುಳ್ಳಪ್ಪನ ತಂಡದವರು ಪಿಳ್ಳಪ್ಪನ ಪಡೆಯವರನ್ನು ಹೊರಗೆಳೆದರು. ಮತ್ತೆ ಬೀದಿಯಲ್ಲಿ ಕದನ ಹತ್ತಿಕೊಂಡಿತು.

ಅವರೆಲ್ಲರೂ ಮನೆಯಿಂದ ಹೊರಹೋಗುತ್ತಲೂ ಬಸವಿ ನಡುಗುತ್ತ ಬಂದು ತಾಯಿಯ ಶವದ ಬಳಿ ನಿಂತಳು. ಒಮ್ಮೆ ತಾಯಿಯ ಮುಖವನ್ನು ನೋಡಿದಳು. ಅವಳಿಗೆ ತಡೆಯಲಾರದ ದುಃಖ ಉಕ್ಕಿ ಬಂದು ತಲೆತಲೆ ಚಚ್ಚಿಕೊಂಡು ಗಳಗಳನೆ ಅತ್ತುಬಿಟ್ಟಳು.

ಬೀದಿಯಲ್ಲಿ ಕಾಳಗ ಇನ್ನೂ ಬಿರುಸಾಗಿಯೇ ನಡೆಯುತ್ತಿತ್ತು. ಇನ್ನು ತಾನು ಅಲ್ಲಿದ್ದರೆ ಅವರು ತನ್ನನ್ನೂ ತೀರಿಸಿಬಿಡುವರೆಂದು ಬಸವಿ ಯೋಚಿಸಿದಳು. ಜೀವದಿಂದ ಉಳಿದುಕೊಳ್ಳಬೇಕಾದರೆ ಅಲ್ಲಿಂದ ಆ ಕೂಡಲೆ ಎಲ್ಲಿಗಾದರೂ ಓಡಿಹೋಗಬೇಕಾಗಿತ್ತು.

ತಾಯಿಯ ಮುಖವನ್ನು ಮತ್ತೊಮ್ಮೆ ನೋಡಿ ಕಣ್ಣೀರು ಸುರಿಸಿದಳು. ಅವಳ ಕಾಲುಗಳನ್ನು ಮುಟ್ಟಿ ಭಕ್ತಿಯಿಂದ ನಮಸ್ಕರಿಸಿದಳು. ನಂತರ ಮನೆಯ ಹಿಂಬಾಗಿಲು ತೆರೆದು ಅಲ್ಲಿಂದ ಗೋಡೆ ಹತ್ತಿ, ಕಾಡು ಬಿದ್ದು ಓಡಿಹೋದಳು. ಮತ್ತೆ ಊರ ಕಡೆಗೆ ಮುಖ ಕೂಡ ತಿರುಗಿಸಲಿಲ್ಲ.

೧೬

ಬಸವಿಯ ದಾರುಣ ಕಥೆಯನ್ನು ಕೇಳಿ ಗೋಪಾಲಿ ಅಚ್ಚರಿಗೊಂಡು ನಿಟ್ಟುಸಿರುಬಿಟ್ಟ.

"ನಂಗೊಂದು ದಾರಿ ತೋರ್ರಿ ಸ್ವಾಮಿ. ನಿಮ್ಮ ಎಸರು ಏಳ್ಕೊಂಡು ಬದಕ್ಕೊಂತೀನಿ"

—ಗೋಪಾಲಿಯ ಹೃದಯವನ್ನು ಕಲಕಿತು, ಬಸವಿಯ ಕಂಬನಿ ತುಂಬಿದ ಕಣ್ಣುಗಳು.

ಇದು ನಮ್ಮ ಸಂಸ್ಕೃತಿಯ ಸಂಕೇತ! ಪರಂಪರಾಗತವಾಗಿ ಬೆಳೆಸಿ ಕೊಂಡು ಬಂದಿರುವ ನಮ್ಮ ಸುಶ್ರೇಷ್ಠ ಸಂಸ್ಕೃತಿಯ ಆದರ್ಶ ಸಂಕೇತ! ದೇವರ ಹೆಸರಿನಲ್ಲಿಯೂ ವೇಶ್ಯಾವೃತ್ತಿ! ದೇವರ ಬಸವಿ ಊರ ಜನರ ವಿಲಾಸದ ವಸ್ತು!

ಎದೆಯಲ್ಲಿ ಕುದಿಯುತ್ತಿದ್ದ ಸಿಟ್ಟಿನ ಭರದಲ್ಲಿ ಹಲ್ಲುಗಳನ್ನು ಕಟಕಟಿಸಿದ ಗೋಪಾಲಿ.

"ನೀನು ಯಾಕೆ ಬಸವಿಯಾಗಲು ಒಪ್ಕೊಂಡೆ? ಯಾವೋನ್ನಾದರೂ ಮದುವೆ ಮಾಡ್ಕೊಂಡು ಸುಖವಾಗಿರಬಾರದಿತ್ತೆ?"

—ಬಸವಿಯ ಮುಖವನ್ನು ನೋಡುತ್ತ ಗೋಪಾಲಿ ಕೇಳಿದ. ಅವನ ಮಾತಿನಲ್ಲಿ ಇನ್ನೂ ಸಿಟ್ಟಿನ ಛಾಯೆ ಇತ್ತು.

"ನಂಗೂ ಅದೇ ಆಸೆ ಇತ್ತು ಸ್ವಾಮಿ. ಆದರೆ ಅವ್ವ ಒಪ್ನಿಲ್ಲ-ದೇವರೆಲ್ಲಿ ಮುನಸ್ಕೊಂಡಾನೋ ಅಂತ."

ಒಳ್ಳೆಯ ದೇವರು! ನಮಗೆ ಸಿಕ್ಕಿರುವ ದೇವರುಗಳೆಲ್ಲಾ ಇಂತಹವೇ. ಮಂಗಳಾರತಿಗೆ ಮುಖ ಒಡ್ಡಿ ನಿಂತಿರುವುದು. ಕಾಣಿಕೆಗಳಿಗೆ ಕೈಯೊಡ್ಡಿ ಕುಳಿತಿರುವುದು. ದೇವದಾಸಿಯರ ಹೆಸರಿನಲ್ಲಿ ಸೂಳೆಗಾರಿಕೆಯನ್ನು ಉತ್ತೇಜಿಸುವುದು. ಜನ ಕುಣಿಸಿದಂತೆ ಕುಣಿಯುವುದು.

ಎಂದಿಗೆ ನಮ್ಮ ಜನಕ್ಕೆ ಈ ಅಜ್ಞಾನದ ಅಂಧಕಾರ ಅಳಿಯು ತ್ತದೆಯೋ? ಎಂದಿಗೆ ಜ್ಞಾನೋದಯವಾಗುತ್ತದೆಯೋ?

ವಿಚಾರಮಗ್ನನಾಗಿ ಯೋಚಿಸುತ್ತ ಕುಳಿತ ಗೋಪಾಲಿ, ಜನರ ವಿಚಿತ್ರ ರೀತಿಯ ದೈವಭಕ್ತಿ, ಪರಾಕಾಷ್ಠತೆಗಳನ್ನು ಕುರಿತು ಗೋಪಾಲಿಯ ಮನಸು ಉಮ್ಮಳಿಸಿತು. ಹೃದಯ ಭಾರಗೊಂಡಿತು.

ಆದರೂ ಕರ್ತವ್ಯ ಎಚ್ಚರಿಸಿತು.

"ಆಗ್ಲಿ. ಒಂದೆರಡು ದಿನದಲ್ಲಿ ಯಾರ್ನ್ನಾರಾ ನೋಡ್ತೀನಿ, ಖಾಯ ವ್ವಾಗಿ ಇಟ್ಕೊಳ್ಳೋರ್ನ"

—ಎಂದ ಗೋಪಾಲಿ. ಇನ್ನೂ ಚಿಕ್ಕನಯಸ್ಸಿನ ಹುಡುಗಿ, ರೂಪವತಿ ಯಾಗಿದ್ದಾಳೆ, ತನ್ನ ಬಾಳಿನಲ್ಲಾದ ದುರ್ಘಟನೆಯಿಂದ ಹೆದರಿ ಕೊಂಚ ಕಂದಿದ್ದಾಳೆ, ಯಾರಾದರೂ ಸರಿಯಾದವರು ಅವಳಿಗೆ ಆಶ್ರಯ ಕೊಡ ಬಹುದು ಎಂದು ಯೋಚಿಸಿದ.

"ಅಲ್ಲೀವರ್ಗೂ ಇರೋಕೇ ತಾವಿಲ್ಲ ಸ್ವಾಮಿ. ಈ ಊರು ನಂಗೆ ಗುರ್ತಿಲ್ಲ"

—ಬಸವಿ ಗೋಪಾಲಿಯ ಮುಖವನ್ನೆ ನೋಡುತ್ತ ಹೇಳಿದಳು.

ಮತ್ತೆ ಯೋಚನೆಗಿಟ್ಟುಕೊಂಡಿತು ಗೋಪಾಲಿಗೆ. ನಿಂತ ನಿಲುವಿಗೆ ಅವಳನ್ನು ಯಾರಿಗೆ ಗಂಟುಹಾಕುವುದು? ತಕ್ಷಣದಲ್ಲಿ ಸ್ಥಳವಮಾಡಿ ಕೊಡ ಬೇಕೆಂದರೆ ಯಾವುದಾದರೂ ಕಸುಬಿನವರ ಮನೆಗೆ ಅವಳನ್ನು ಕರೆದು ಕೊಂಡು ಹೋಗಿಬಿಡಬಹುದು. ಅದರಿಂದ ಅವನಿಗೂ ಲಾಭವೇ ಇರು ತ್ತಿತ್ತು. ಆದರೂ ಅವನ ಮನಸ್ಸೇಕೋ ಅದಕ್ಕೆ ಒಪ್ಪಲಿಲ್ಲ. ಈ ಮಾತು ಹೇಳಬಹುದು, ಈ ಮಾತು ಹೇಳಬಾರದು ಎಂದು ಯಾವುದನ್ನೂ ಮರೆ ಮಾಚದೆ ತನ್ನ ಜೀವನದ ಇದ್ದ ಸಂಗತಿಗಳನ್ನೆಲ್ಲ ಇದ್ದಂತೆಯೇ ಚಾಚೂ ಬಿಡದೆ ಹೇಳಿದ ಆ ಹುಡುಗಿಯಲ್ಲಿ ಅವನಿಗೆ ಕನಿಕರ ಮೂಡಿತ್ತು. ಸಾಧ್ಯ ವಾದರೆ ಸರಿಯಾದ ಸ್ಥಳದಲ್ಲಿಯೇ ಅವಳನ್ನು ನಿಲ್ಲಿಸಬೇಕೆಂದು ಅವನು ಮನಸ್ಸು ಮಾಡಿದ್ದ.

ಅವನು ಯೋಚಿಸುತ್ತಿದ್ದಂತೆಯೇ ಸಣ್ಣಯ್ಯಪ್ಪ ಅಲ್ಲಿಗೆ ಬಂದ. ಅವನ ದೃಷ್ಟಿ ಗೋಪಾಲಿಯ ಎದುರಿಗೆ ನಿಂತಿದ್ದ ಬಸವಿಯ ಮೇಲೆ ಬಿತ್ತು.

"ಯಾರೋ ಈ ಉಡುಗಿ?" ಗೋಪಾಲಿಯನ್ನು ಕೇಳಿದ ಸಣ್ಣಯ್ಯಪ್ಪ.

"ಒಬ್ಬಳು ಬಂದಿದ್ದಾಳಪ್ಪ. ಹೊಸೂರ್ನೋಳಂತೆ."

"ಕಸುಬಿನೋಳೇನು?"

"ಹಾಗೇನಿಲ್ಲ. ಏನೋ ದಿಕ್ಕೆಟ್ಟು ಬಂದಿದ್ದಾಳೆ" ತೇಲಿಸಿ ಮಾತನಾಡಿದ ಗೋಪಾಲಿ.

"ಹಾಗಾದ್ರೆ ಮಾತಾಡ್ಬುಡು. ನಾನೇ ಎಲ್ಲಾ ಏರ್ಪಾಡು ಮಾಡಿಕೊಡ್ತೇನೆ" ಸಣ್ಣಯ್ಯಪ್ಪ ಉತ್ಸಾಹದಿಂದಲೇ ಹೇಳಿದ.

ಗೋಪಾಲಿಗೆ ಗೊತ್ತಿತ್ತು ಸಣ್ಣಯ್ಯಪ್ಪನ ಯೋಗ್ಯತೆ. ಅವನ ಉತ್ಸಾಹವೆಲ್ಲ ಬರಿಯ ಆರಂಭಶೂರತ್ವವಾಗಿತ್ತು. ದುಂಬಿಯಂತೆ ಹೂವಿಂದ ಹೂವಿಗೆ ಹಾರುವ ಕ್ಷಣಭಂಗುರ ಸ್ವಭಾವ ಅವನದು. ಆದರೂ ಈಗ ಗೋಪಾಲಿಗೆ ಉಪಾಯವಿರಲಿಲ್ಲ. ಒಂಟಿಕಾಲಿನಲ್ಲಿ ನಿಂತಿರುವ ಬಸವಿಗೆ ನೆಲೆಮಾಡಿಕೊಡಲು ಆಗಲೇ ಒಂದು ಸ್ಥಳ ನೋಡಿಕೊಡಬೇಕಾಗಿತ್ತು.

"ನೀನೇ ಮಾತಾಡಪ್ಪ, ಎದುರಿಗೇ ನಿಂತಿದ್ದಾಳಲ್ಲ" ಎಂದ ಗೋಪಾಲಿ.

ಸಣ್ಣಯ್ಯಪ್ಪ ಮಾತನಾಡಿದ. ಬಸವಿಯೂ ಅವನೊಂದಿಗೆ ಅವನ ಇಟ್ಟ ಹೆಣ್ಣಾಗಿ ಬಾಳುವೆ ನಡೆಸಲು ಒಪ್ಪಿಕೊಂಡಳು.

ಅಂದೇ ಅವಳಿಗೆ ಮನೆಮಾಡಿಕೊಟ್ಟ ಸಣ್ಣಯ್ಯಪ್ಪ. ಬಟ್ಟೆಬರೆಗಳನ್ನು ತೆಗಿಸಿಕೊಟ್ಟ, ಅಗತ್ಯವಾದ ಪಾತ್ರೆ ಪದಾರ್ಥ, ಸಾಮಾನು ಸರಂಜಾಮುಗಳನ್ನೂ ಕಳಿಸಿಕೊಟ್ಟ.

ಹೊಸೂರಿನಲ್ಲಿ ನಡೆದ ಭೀಕರ ಕದನವನ್ನು ಕಂಡು ಭಯಗೊಂಡು ಪ್ರಾಣಭೀತಿಯಿಂದ ಯಾರ ಕಣ್ಣಿಗೂ ಕಾಣದಂತೆ ತಲೆಮರೆಸಿಕೊಂಡು ನಿಂತಲ್ಲಿ ನಿಲ್ಲದೆ, ಕೂತಲ್ಲಿ ಕೂರದೆ ಊರೂರು ಅಲೆದು ಎಲ್ಲಿಯೋ ಉಂಡು ಎಲ್ಲಿಯೋ ತಂಗಿ ಹೇಗೋ ಬೆಂಗಳೂರನ್ನು ಮುಟ್ಟಿದ್ದಳು ಬಸವಿ. ಬೆಂಗಳೂರಲ್ಲಿ ಹಸಿವಿನ ಬೇಗೆ ತಾಳಲಾರದೆ ತುತ್ತುಕವಳಕ್ಕಾಗಿ ಮನೆ ಮನೆ ಅಲೆದಳು. ಯಾರೋ ಪುಣ್ಯಾತ್ಮರು ಒಂದಿಷ್ಟು ಹಳಸಿದ ಅನ್ನ, ಹಳಸಿದ ಹುಳಿ ಕೊಟ್ಟರು. ಬಹು ಮಂದಿ "ಹೋಗಾಚೆ, ಎಲ್ಲಾದರೂ ಕೆಲಸಮಾಡಿ

ಹೊಟ್ಟೆಹೊರೆಯಲು ನಿನಗೇನು ಧಾಡಿ, ಒಳ್ಳೆ ಹೇಸರಗತ್ತೆ ಇದ್ದಹಾಗೆ ಇದ್ದೀಯಲ್ಲ" ಎಂದು ಗದರಿ, ಮುಖಕ್ಕೆ ರಾಚಿದಂತೆ ರೊಪ್ಪನೆ ಬಾಗಿಲು ಬಡಿದು ಅವಳನ್ನು ದೂರ ಅಟ್ಟಿದರು. ಹಾಗೂ ನಾಲ್ಕಾರು ಮನೆಗಳನ್ನು ಅಲೆದು ಕೆಲಸಕ್ಕಾಗಿ ಯಾಚಿಸಿದಳು. "ಇಲ್ಲ ಹೋಗು" ಎನ್ನಿಸಿ ಕೊಂಡುದೂ ಆಯಿತು. ಕೊನೆಗೆ ಬೀದಿಗೆ ಬಿಸಾಡಿದ ಎಂಜಲು ಹಾಳೆ ಗಳಿಗೆ ಅಂಟಿಕೊಂಡಿದ್ದ ಅಗುಳುಗಳನ್ನು ಆರಿಸಿ ತಿಂದುದೂ ಆಯಿತು. ಹಾಳು ಪ್ರಾಣ ಏನಾದರೂ ಮಾಡಿ ಉಳಿಸಿಕೊ ಎನ್ನುತ್ತದೆ. ಕೈಯೊಡ್ಡಿ, ದೈನ್ಯದಿಂದ ಅನೇಕರನ್ನು ಕಾಸು ಬೇಡಿದಳು. "ಮಾರ್ಕೆಟ್ ಹತ್ರ ಹೋಗು, ಯಾರಾದರೂ ಕೊಟ್ಟಾರು ಧರ್ಮಾತ್ಮರು" ಎಂದು ಅವರು ನಕ್ಕು ಮುಖ ತಿರುಗಿಸಿಕೊಂಡು ತಮ್ಮ ದಾರಿ ಹಿಡಿದುಹೋದರು. ಬಸವಿಗೆ ಆಸೆ ಮೂಡಿ ಮಾರ್ಕೆಟ್ ಬಳಿಗೂ ಹೋದಳು. ಹಲವು ತುರುಕ ಹುಡುಗರು ಅವಳನ್ನು ಗೇಲಿಮಾಡಿ ಗೋಳುಹುಯ್ದರು. ಬಿಡಿಕಾಸು ಕೂಡ ಕೊಡುವ ಒಬ್ಬ ಧರ್ಮಾತ್ಮನೂ ಅಲ್ಲಿರಲಿಲ್ಲ. ಬಸವಿಗೆ ದುಃಖ ಉಮ್ಮಳಿಸಿ ಬಂತು. ಒಂದು ಕಡೆ ಜೀವಹಿಂಡುವ ಹಸಿವಿನ ಯಾತನೆ, ಇನ್ನೊಂದು ಕಡೆ ದೇಹಹಿಂಡುವ ಬಸವಳಿಕೆಯ ಯಾತನೆ, ಮತ್ತೊಂದು ಕಡೆ ಬಾಯಿ ಬಂದಂತೆ ಬಗುಳುವ ಪೋಲಿ ಹುಡುಗರ ಗೋಳಿನ ಯಾತನೆ. ತಲೆ ಗಿರ್ರೆಂದಿತು ಬಸವಿಗೆ. ಬವಳಿಕೆ ಬಂದು ನೆಲಕ್ಕೆ ಬೀಳುವಂತಾ ಯಿತು. ಹೇಗೋ ತತ್ತರಿಸಿಕೊಂಡು ಹೋಗಿ ವಿಕ್ಟೋರಿಯಾ ಆಸ್ಪತ್ರೆಯ ಕಾಂಪೌಂಡಿಗೆ ಒರಗಿ ನಿಂತು 'ಗೊಳೋ' ಎಂದು ಕಣ್ಣೀರು ಕಾಲುವೆ ಹರಿಸ ತೊಡಗಿದಳು.

ಗೋಪಾಲಿ ಬಸವಿಯ ಆ ಹೃದಯವಿದ್ರಾವಕವಾದ ಪರದಾಟವನ್ನು ಅರ್ಧಗಂಟೆಯಿಂದಲೂ ತಾನು ಕುಳಿತಲ್ಲಿಂದಲೇ ನೆಟ್ಟನೋಟದಿಂದ ನೋಡಿದ್ದ. ಮರುಕದ ಮುದ್ದೆಯಾಯಿತು ಅವನ ಮನಸ್ಸು. ಬಳಿ ಕರೆದು ಅವಳ ಕಥೆಯನ್ನು ವಿಚಾರಿಸಿದ, ವಿಚಾರಿಸಿ ವಿಚಾರಪರನಾದ.

ಸಣ್ಣಯ್ಯಪ್ಪ ದೇವರಂತೆ ಬಂದು, ಬೀದಿಯ ಭಿಕಾರಿಯಾಗಿದ್ದ ಬಸವಿಗೆ ಔದಾರ್ಯ ತೋರಿ ಆಶ್ರಯ ನೀಡಿದ.

೧೭

ಗೋಪಾಲಿ ಲೆಖ್ಖ ಹಾಕಿದಂತೆಯೇ ಆಗಿತ್ತು. ಹೊಸ ಹೂವನ್ನು ಕಂಡೊಡನೆಯೇ ಹಳೆಯದನ್ನು ಕಿತ್ತು ಬಿಸುಡುವ ಸ್ವಭಾವದ ಸಣ್ಣಯ್ಯಪ್ಪ ಬಸವಿಗೆ ಬಹಳ ದಿನ ಅಂಟಿಕೊಳ್ಳಲಿಲ್ಲ.

ಬಸವಿಯನ್ನು ಕರೆದುಕೊಂಡು ಹೋದ ಒಂದೆರಡು ತಿಂಗಳು ಎಡ ಬಿಡದೆ ಉಪಭೋಗಿಸಿದ್ದ ಸಣ್ಣಯ್ಯಪ್ಪ. ಅವಳಿಗೆ ವಸ್ತ್ರಾಭರಣಗಳನ್ನು ಕಾಣಿಕೆಯಾಗಿ ತಂದೊಪ್ಪಿಸಿದ್ದ. ಬಸವಿಗೂ ಸಣ್ಣಯ್ಯಪ್ಪನ ಸಹವಾಸದಲ್ಲಿ ಅಪೂರ್ವ ಆನಂದವೇ ಉಂಟಾಯಿತು. ನಗರವಾಸ, ಹೊಸ ಬಗೆಯ ಜೀವನ, ಬಯಸಿದುದನ್ನೆಲ್ಲಾ ತಂದುಕೊಡುವ ಸಿರಿವಂತ ಯಜಮಾನ— ಅವಳ ಸಂತೋಷಕ್ಕೆ ಪಾರವೇ ಇರಲಿಲ್ಲ. ಹೊಸೂರಿನಿಂದ ಜೀವಹಿಡಿದು ಓಡಿಬಂದಾಗ ಇಷ್ಟರಮಟ್ಟಿನ ಆಶ್ರಯ ಸಿಕ್ಕೀತೆಂದು ಅವಳು ಕನಸುಮನಸಿನಲ್ಲೂ ನೆನೆಸಿರಲಿಲ್ಲ. ದಿನ ಕಳೆಯುವುದೇ ಅವಳಿಗೆ ಗೊತ್ತಾಗುತ್ತಿರಲಿಲ್ಲ. ಒಂದು ದಿನ ಸಣ್ಣಯ್ಯಪ್ಪನನ್ನು ಕಾಣದಿದ್ದರೆ ಅವಳಿಗೆ ಆಕಾಶವೇ ಕಳಚಿ ಒಮ್ಮೆಲೇ ತಲೆಯ ಮೇಲೆ ಬಿದ್ದಂತೆ ಭಾಸವಾಗುತ್ತಿತ್ತು.

ಸಣ್ಣಯ್ಯಪ್ಪ ಸಹ ಬಸವಿಯ ಮನೆಗೆ ಬರುವುದನ್ನು ಒಂದು ದಿನವಾದರೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಅವನ ಸಹವಾಸದಲ್ಲಿ ಬಸವಿಗೆ ಹೊಸ ಹೊಸ ಅನುಭವವೂ ದೊರೆಯಿತು. ಹೊಸೂರಿನಲ್ಲಿದ್ದಾಗ ಬ್ರಾಂದಿ, ವಿಸ್ಕಿಗಳ ವಾಸನೆಯನ್ನೇ ಕಂಡವಳಲ್ಲ. ಇಲ್ಲಿ ದಿನವೂ ಅದರ ಸೇವನೆಯಾಗುತ್ತಿತ್ತು. ಅವಳಿಗೆ ಸ್ವರ್ಗವೇ ಅಂಗೈಮೇಲೆ ಬಂದು ಕುಳಿತಂತಾಗಿತ್ತು.

ದಿನ ಕಳೆದಂತೆಲ್ಲಾ ಸಣ್ಣಯ್ಯಪ್ಪನ ಉತ್ಸಾಹದ ಭರ ಕಡಿಮೆಯಾಗ ಹತ್ತಿತು. ಬಸವಿಯ ಒಡನಾಟ ಅವನಿಗೆ ಹಳೆಯದಾಗುತ್ತ ಬಂತು. ಹೊಸ ಹೂವಿಗಾಗಿ ಅವನು ಹಾತೊರೆಯತೊಡಗಿದ.

ಒಮ್ಮೆ ಸಣ್ಣಯ್ಯಪ್ಪ ಹದಿನೈದು ದಿನ ಒಂದೇ ಸಮನೆ ಬಸವಿಯ ಮನೆಗೆ ಬರಲಿಲ್ಲ. ಇದ್ದಕ್ಕಿದ್ದಂತೆ ಅವನು ಹಾಗೆ ಎಂದೂ ನಿಂತವನಲ್ಲ. ಬಸವಿಗೆ ಬಹಳ ಭಯವಾಯಿತು. ಸಣ್ಣಯ್ಯಪ್ಪ ಏನಾದರೂ ತನ್ನ ಕೈ ಬಿಟ್ಟನೋ ಎಂದು ಅವಳು ಭೀತಿಗೊಂಡಳು. ಹದಿನೈದು ದಿನಗಳ ನಂತರ ಬಂದ ಸಣ್ಣಯ್ಯಪ್ಪನನ್ನು ಕಂಡ ಮೇಲೆಯೇ ಅವಳಿಗೆ ಮತ್ತೆ ಧೈರ್ಯ ಮೂಡಿದುದು.

"ಊರ್ನಾಗಿರ್ನಿಲ್ಲ ಬಸವಿ, ಮದರಾಸ್ಗೋಗಿದ್ದೆ, ಬಿಜಿನೆಸ್ ಮೇಲೆ"

—ಎಂದು ಸುಳ್ಳಾಡಿದ ಸಣ್ಣಯ್ಯಪ್ಪ. ಅವಳನ್ನು ಕಂಡೊಡನೆ ಗಳಗಳನೆ ಅಳತೊಡಗಿದ ಬಸವಿಯನ್ನು ಮೈದಡವಿದ, ಸಮಾಧಾನಪಡಿಸಿದ.

"ಓಗೋರು ಓಯ್ತೀನಿ ಅಂತ ನಂಗೊಂದು ಮಾತು ಹೇಳಿ ಓಗ್ಬೇಡ್ವಾ. ನಂಗೆಷ್ಟು ಭಯ ಆಗೋಗಿತ್ತು ನಿಮಗ್ಗೊತ್ತಾ" ಕಣ್ಣೀರು ಸುರಿಸುತ್ತಲೇ ಹೇಳಿದಳು ಬಸವಿ.

"ಅಳ್ಬೇಡ ಬುಡು, ಇನ್ಮೇಕೆ ಎಲ್ಲಾನಾ ಓಗಬೇಕಾದ್ರೆ ಏಳೋಯ್ತೀನಿ" ತನ್ನ ಕರವಸ್ತ್ರದಿಂದ ಬಸವಿಯ ಕಣ್ಣೀರೊರೆಸಿದ ಸಣ್ಣಯ್ಯಪ್ಪ.

"ಅಂಗಾ ನನ್ರಾಜ........" ಎನ್ನುತ್ತ ಬಸವಿ ಸಣ್ಣಯ್ಯಪ್ಪನನ್ನು ಬಲವಾಗಿ ತಬ್ಬಿಕೊಂಡು ಉನ್ಮಾದದಿಂದ ರಂಜಿಸಿದಳು.

ಹೀಗೆಯೇ ಕೆಲವು ದಿನಗಳು ಕಳೆದವು. ಮತ್ತೆ ಸಣ್ಣಯ್ಯಪ್ಪ ಬಂದರೆ ಬಂದ, ಇಲ್ಲದಿದ್ದರೆ ಇಲ್ಲ.

ಬಸವಿ ಗೋಳಾಟ ಬಿಟ್ಟು ಚೀರಾಟಕ್ಕೆ ಆರಂಭಿಸಿದಳು. ಅದರಿಂದ ದೊರೆತ ಲಾಭವೆಂದರೆ ಸಣ್ಣಯ್ಯಪ್ಪ ಅವಳ ಮನೆಗೆ ಬರುವುದೇ ಸಂಪೂರ್ಣವಾಗಿ ನಿಂತುಹೋಯಿತು.

ಸಣ್ಣಯ್ಯಪ್ಪನಿಗಾಗಿ ಬಸವಿ ಕಾದು ಕಾದು ಕುಳಿತಳು—ಇಂದು ಬಂದಾನು, ನಾಳೆ ಬಂದಾನು ಎಂದು ಆಸೆ ಹೊತ್ತಳು. ಆ ಇಂದು ನಾಳೆಗಳೆಲ್ಲಾ ನೂರು ನಿನ್ನೆಗಳಲ್ಲಿ ಸೇರಿ ನಿರಾಶೆಯಲ್ಲಿ ಕೊನೆಗಂಡವು.

ಬಸವಿ ಸಣ್ಣಯ್ಯಪ್ಪನ ನಿರೀಕ್ಷೆಯಲ್ಲಿ ಆರು ತಿಂಗಳನ್ನು ಕಳೆದಳು.

ಜೀವನಕ್ಕಾಗಿ ಮೈ ಮೇಲಿದ್ದ ಒಂದೊಂದೇ ಆಭರಣಗಳು ಕೈ ಬಿಡತೊಡಗಿದವು.

ಕೊನೆಗೆ ಸಣ್ಣಯ್ಯಪ್ಪ ತನ್ನ ಕೈ ಬಿಟ್ಟನೆಂದು ಬಸವಿಗೆ ದೃಢವಾಯಿತು. ಆ ಯೋಚನೆ ಮನಸ್ಸಿನಲ್ಲಿ ತಲೆಯಿಟ್ಟಾಗ ಬಸವಿ ನಿಜಕ್ಕೂ ದಿಗಿಲುಗೊಂಡು ನಡುಗಿದಳು, ಮುಂದೇನು ಗತಿಯೆಂದು.

ಮನೆ ಬಾಡಿಗೆಗೆ ಕೊಟ್ಟದ್ದವರು ತಗಾದೆ ಮಾಡತೊಡಗಿದರು. ಹಾಲು ಮೊಸರಿನವರ ಉಪಟಳ ಹೇಳತೀರದಾಯಿತು. ಉಪಾಯವಿಲ್ಲದೆ ಬಸವಿ ಉಳಿದ ಒಡವೆಗಳನ್ನೂ ಮಾರಿಕೊಂಡಳು.

ಇನ್ನು ಜೀವನಕ್ಕೆ ಮಾರ್ಗ ತೋರದಾಯಿತು. ಗೋಪಾಲಿಯನ್ನು ಹುಡುಕಿಕೊಂಡು ಹೋಗಿ ಅವನಿಗೆ ಎಲ್ಲವನ್ನೂ ಹೇಳಿ ಗೋಳಿಟ್ಟಳು.

"ನನ್ನ ಏನ್ಮಾಡು ಅಂತೀಯ ಬಸವಿ?" ಗೊಪಾಲಿ ಕೇಳಿದ.

"ಏನಾದರಾ ಮಾಡಿ ಸ್ವಾಮಿ ಯಜಮಾನ್ರನ್ನ ಬರೇಳಿ."

"ಇನ್ನು ಅವನ್ನ ಮರೆತುಬಿಡು ಬಸವಿ. ಅವನು ವಿಚಿತ್ರದ ಮನುಷ್ಯ. ನಾನು ನಿನ್ನ ಅವನ ಕೈಗೆ ಸೇರಿಸಬಾರದಾಗಿತ್ತು. ಆದರೆ ಆಗ ಬೇರೆ ಮಾರ್ಗ ಇರ್ಲಿಲ್ಲ. ಇದು ಹೀಗೇ ಆಗುತ್ತೆ ಅಂತ ನನಗೆ ಮೊದಲೇ ಗೊತ್ತಿತ್ತು" ಖಂಡಿತವಾಗಿಯೂ ಹೇಳಿಬಿಟ್ಟ ಗೋಪಾಲಿ.

"ನಾನು ಮತ್ತೇನು ಮಾಡ್ಲಿ ಸ್ವಾಮಿ, ಊರಿಲ್ಲದ ಪರದೇಸಿ. ಆಗಂತೂ ದಿಕ್ಕು ತೋರಿಸಿದಿರಿ. ಈಗ........"

—ಮುಂದೆ ಮಾತು ಹೊರಡಲಿಲ್ಲ ಬಸವಿಗೆ. ಗಂಟಲು ಉಬ್ಬಿಬಂತು. ತಡೆದು ನಿಂತಿದ್ದ ಕಣ್ಣಹನಿಗಳು ಫಳಫಳನೆ ಉದುರಿದುವು.

"ಅತ್ರೇನ್ಬಂತು ಬಸವಿ" ಗೋಪಾಲಿ ಸಮಾಧಾನ ನುಡಿಯತೊಡಗಿದ.

"ಇವರಿಂಗೆ ಮಾಡಬೌದೇನು ಸ್ವಾಮಿ, ನಂಬಿಸಿ ಮ್ವೋಸವಲ್ಲಾ ಇದು."

"ಅವನೊಬ್ಬನೇನು. ಈಗಿನ ಕಾಲದ ಜನಾನೇ ಹಾಗಿದ್ದಾರೆ. ಎಲ್ರನ್ನೂ ನಂಬಬೇಕು, ಆದರೆ ಯಾರನ್ನೂ ನಂಬಬಾರ್ದು. ಹಾಗಿರ್ಬೇಕು."

"ಹಳ್ಳಿಯೋಳು ಸ್ವಾಮಿ ನಾನು. ಏನೂ ಅರೀದ ಮುಕ್ಕ. ನಂಗೆ ಅದೆಲ್ಲಾ ಎಂಗೆ ಗೊತ್ತಾಗಬೇಕು. ಅವನ್ನ ನಾನು ದೇವರಂತೆ ನಂಬ್ಕೊಂಡಿದ್ದೆ."

"ಅವನ ಕಥೆ ಆಯ್ತಲ್ಲ ಬಿಡು. ಅವನಿಗೂ ನಿನಗೂ ಇಷ್ಟು ದಿನಾನೇ ಋಣಾನುಬಂಧ ಇದ್ದದ್ದು ಅಂತ ತಿಳ್ಕೊ"

"ಅವರಿಗೆ ನೀವೊಂದು ಮಾತು ಹೇಳಿ ನೋಡಬಾರ್ದಾ ಸ್ವಾಮಿ." ಇನ್ನೂ ಆಸೆಯ ಮಿಣುಕಿನಲ್ಲಿ ಗೋಗರೆಯುತ್ತ ಹೇಳಿದಳು ಬಸವಿ.

"ನಾನಲ್ಲ. ಶಿವ ಬಂದು ಹೇಳಿದರೂ ಅದರಿಂದ ಯಾವ ಪ್ರಯೋಜನವೂ ಆಗೋಲ್ಲ. ಅವನ ಯೋಗ್ಯತೆ ನನಗೆ ಗೊತ್ತು. 'ಹ್ಞೂ' ಅಂತಾನೆ, ಮಾತ್ರ ಬರೋಲ್ಲ. ಸುಮ್ಮನೆ ಕಲ್ಲುಬಂಡೇಗೆ ತಲೆ ಒಡ್ಕೊಂಡು ಯಾಕೆ ಪ್ರಾಣ ಸೊರಗಿಸ್ತೀಯ."

"ಪ್ರಯತ್ನ ಮಾಡಿ ನೋಡಿ ಸ್ವಾಮಿ."

"ಆಗಲಿ. ನಿನ್ನಿಷ್ಟ ಯಾಕೆ ತಪ್ಪಿಸಲಿ."

ಗೋಪಾಲಿ ಸಣ್ಣಯ್ಯಪ್ಪನನ್ನು ಹೋಗಿ ಕಂಡ. ಅವನು ಬಗೆದಿದ್ದಂತೆಯೇ ಆಯಿತು. ಸಣ್ಣಯ್ಯಪ್ಪ "ಅವಳ್ಪಾಡು ಅವಳು ನೋಡ್ಕೊಳ್ಳಿ" ಅಂದುಬಿಟ್ಟ. ಗೋಪಾಲಿಯೂ ಹೇಳಿದ "ಅವಳಿಗೆ ಅನ್ನಬಟ್ಟೆ ಕೊಟ್ಕೊಂಡು ಸಾಯೋವರ್ಗೂ ಸುಖವಾಗಿ ಇಟ್ಕೋತೀನಿ ಅಂದ್ಯಲ್ಲ" ಎಂದ. "ನಾನೇನು ಸ್ಟಾಂಪು ಹಚ್ಚಿ ಕರಾರುಪತ್ರ ಬರ್ಕೊಟ್ಟಿವ್ನಾ, ಇಲ್ಲ ಅವಳ ಕತ್ತಿಗೇನಾರಾ ತಾಳಿ ಕಟ್ಟಿವ್ನಾ ಅವಳ್ನ ಸಾಯೋಗಂಟ ಸುಖವಾಗಿ ಇಟ್ಕೋಳೋಕೆ. ಏನೋ ಎಳ್ಡುದಿನ ಸೋಕಿ ಬಿತ್ತು. ಖುಸಿ ಮಾಡ್ಬಿಟ್ಟೆ" ಎಂದುಬಿಟ್ಟ ಸಣ್ಣಯ್ಯಪ್ಪ ಕುಡಿತದ ಅಮಲಿನಲ್ಲಿ. ಅವನೊಂದಿಗೆ ಇನ್ನು ವಾದಮಾಡಿ ಉಪಯೋಗವಿಲ್ಲವೆಂದು ಬಂದ ದಾರಿ ಹಿಡಿದು ಹಿಂದಿರುಗಿದ ಗೋಪಾಲಿ.

ಎರಡು ದಿನ ಬಿಟ್ಟು ಬಸವಿ ಮತ್ತೆ ಗೋಪಾಲಿಗೆ ಕಾಣಿಸಿಕೊಂಡಳು.

"ಮುಂದೆ ಏನ್ಗತಿ ಸ್ವಾಮಿ ನನಗೆ"

ಸಣ್ಣಯ್ಯಪ್ಪನ ಬಗ್ಗೆ ಗೋಪಾಲಿ ಹೇಳುವುದನ್ನೆಲ್ಲಾ ಕೇಳಿಯಾದ ಮೇಲೆ ಬಸವಿ ಕೇಳಿದಳು

"ಏನಾದರೂ ಮಾಡು. ನಿನಗೆ ಗೊತ್ತಿರೋ ಹಾಗೆ."

"ನನಗೇನು ಗೊತ್ತೈತೆ ಸ್ವಾಮಿ"

"ಬೇರೆ ಯಾರ್ನಾರಾ ನೋಡ್ಕೋ. ಇನ್ನೇನ್ಮಾಡೋಕಾಗ್ತದೆ."

"ನನಗೆ ಈ ಊರಲ್ಲಿ ನೀವೂ, ಯಜಮಾನ್ರು ಇಬ್ರಲ್ಲದೆ ಬೇರೆ ಯಾರೂ ಗೊತ್ತಿಲ್ಲ ಸ್ವಾಮಿ."

"ನಾನೇನ್ಮಾಡ್ಲಿ ಹೇಳು."

"ನೀವೇ ಏನಾರ ಮಾರ್ಗ ತೋರಿಸಿ ನನ್ನ ಉಳಸಬೇಕು ಸ್ವಾಮಿ"

ಗೋಪಾಲಿಗೆ ಅಂದು ನಿಜವಾಗಿಯೂ ಮನಸ್ಸಿಗೆ ಬೇಸರವಾಗಿತ್ತು. ಯಾವುದೂ ಅವನಿಗೆ ಬೇಕಿರಲಿಲ್ಲ. ಹೇಗಾದರೂ ಬಸವಿಯನ್ನು ಕೊಡವಿ ಕೊಳ್ಳಬೇಕೆಂದು ಪ್ರಯತ್ನಿಸಿದ. ಆದರೆ ಅವಳು ಬಿಡಲಿಲ್ಲ. ಕೊನೆಗೆ ನಿರ್ವಾಹವಿಲ್ಲದೆ ಹೇಳಿಬಿಟ್ಟ ಗೋಪಾಲಿ—

"ನೋಡು. ಖಾಯಮ್ಮಾಗಿ ಇಟ್ಕೊಳೋರು ಯಾರೂ ಸಿಕ್ಕೋಲ್ಲ. ಸಿಕ್ಕಿದರೂ ನಾಕು ದಿವಸ ಅವರ ಚಪಲ ತೀರೋವರ್ಗೂ ನಿನಗೆ ಅಂಟ್ಕೊಂಡಿರ್ತಾರೆ. ಆಮೇಲೆ ಯಥಾಪ್ರಕಾರ ಇದೇ ಗತಿ. ಅದರಿಂದ ನಿನಗೂ ಸುಖ ವಿಲ್ಲ. ಮೂರು ಮೂರು ದಿವಸಕ್ಕೂ ರಸ್ತೇಗೆ ಬಂದು ನಿಲ್ಲಬೇಕಾಗ್ತದೆ. ನಿನಗೆ ಇಷ್ಟ ಇದ್ದರೆ ಹೇಳು. ಕಸುಬಿನೋಳು ಒಬ್ಬಿದಾಳೇ - ಮೂರು ಮಹಡಿ ಚಂದ್ರಮ್ಮ ಅಂತ. ಚೆನ್ನಾಗಿ ನೋಡ್ಕೋತಾಳೆ. ಅವಳ ಮನೇಲೂ ಬೇಕಾದಷ್ಟು ಹುಡುಗೀರು ಇದ್ದಾರೆ. ಅವರ ಜತೇಲಿ ನೀನೂ ಹೇಗೋ ಹೊಟ್ಟೆ ಹೊರ್ಕೋಬಹುದು. ಅವನ್ನ ಇವನ್ನ ನಂಬ್ಕೊಂಡು ಪಡೋ ಈ ಕಷ್ಟಾನೂ ತಪ್ಪುತ್ತೆ. ಅಲ್ಲಿಗೆ ಕರ್ಕೊಂಡ್ಹೋಗಿ ಬಿಡ್ತೀನಿ."

ಬಸವಿ ಯೋಚಿಸುತ್ತ ನಿಂತಳು. ಗೋಪಾಲಿಯ ಮಾತು ಬಾಂಬಿನ ಸಿಡಿತದಂತಿತ್ತು.

"ಏನು ಯೋಚಿಸ್ತೀಯ ?"

—ಗೋಪಾಲಿ ಕೇಳಿದ.

"ಬೇರೆ ಯಾವುದೂ ಮಾರ್ಗಾನೇ ಇಲ್ವಾ ಸ್ವಾಮಿ"

"ಸದ್ಯಕ್ಕಿಲ್ಲ. ಒಂದಷ್ಟು ದಿನ ಸಿದಾನಿಸಿದರೆ ಏನಾದರೂ ನೋಡ ಬಹುದು."

'ಒಂದಷ್ಟು ದಿನ! ಒಂದು ದಿನವೂ ನಿಧಾನಿಸುವಂತಿರಲಿಲ್ಲ. ತುತ್ತಿನ ಚೀಲದ ಜೇಗೆ ಕರುಳು ಹಿಂಡುತ್ತಿತ್ತು. ಇಷ್ಟು ದಿನ ಪಾಡುಪಟ್ಟುದೇ ಸಾಕಾಗಿತ್ತು. ಇನ್ನೂ ಒಂದಷ್ಟು ದಿನ ಸಾಧ್ಯವಿಲ್ಲ. ಒಂದು ದಿನವೂ ಸಾಧ್ಯವಿಲ್ಲ. ಆಗಲಿ....ಆಗಲಿ....ನನ್ನ ಹಣೆಯಬರಹವಿದ್ದಂತಾಗಲಿ'

ಯೋಚಿಸಿ ಯೋಚಿಸಿ ಕೊನೆಗೆ ಬಸವಿ "ಅಂಗಾರೆ ಯಾವಾಗ ಕರ್ರ್ಕೊಂಡೋಯ್ತೀರಿ?" ಎಂದು ಕೇಳಿದಳು.

"ನಾಳೆ ಸಂಜೆ ಎಂಟುಗಂಟೆ ಸುಮಾರಿಗೆ ಇಲ್ಲಿಗೆ ಬಾ" ಎಂದ ಗೋಪಾಲಿ.

೧೮

ತಿಪಟೂರು ಸುಂದರಿ–ಮುನಿ

ತಿಪಟೂರು ಸುಂದರಿ ತಿಪಟೂರು ಬಿಟ್ಟು ಯಾವುದೋ ಆಸೆಯ ಹೊರೆ ಹೊತ್ತು ಬೆಂಗಳೂರಿಗೆ ಬಂದಳು. ಆದರೆ ಬೆಂಗಳೂರಿಗೆ ಬಂದ ಮೇಲೆ ತಿಪಟೂರಿನಲ್ಲಿಯೇ ಇದ್ದಿದ್ದರೆ ಚೆನ್ನಾಗಿತ್ತು ಎಂದುಕೊಂಡು ಹಲುಬಿದಳು. ಅವಳ ಆಸೆಯ ಕನಸುಗಳೆಲ್ಲವೂ ಒಡೆದುಹೋದವು.

ಸುಂದರಿಯ ತಂಗಿ ಮುನಿ ಸುಂದರಿಗಿಂತ ಸುಂದರಿ. ಪುಷ್ಪೋದ್ಯಾನದಲ್ಲಿ ಮಂದಹಾಸ ಬೀರುತ್ತ ಸುಂದರವಾಗಿ ಅರಳಿ ನಿಂತು ಮುಡಿಯುವವರ ಮನವನ್ನಾಕರ್ಷಿಸುವ ಚೆಲುಗುಲಾಬಿಯಂತಿದ್ದಳು ಮುನಿ. ಹದಿನೆಂಟರ ಹರೆಯಕ್ಕೆ ವಿಾರದ ವಯಸ್ಸು. ಬಳ್ಳಿಯಂತೆ ಬಳುಕುವ ದೇಹ. ಬಿಳಿಯ ಮೈ ಬಣ್ಣ.

ಅಂತಹ ಸುರಸುಂದರಿಯನ್ನು ಮುಂದಿಟ್ಟುಕೊಂಡಿದ್ದರೂ ಅದೇಕೋ ಗಿರಾಕಿಗಳಿಗೇ ಕೊರತೆಯಿತ್ತು ತಿಪಟೂರಿನಲ್ಲಿ. ಹೆಣ್ಣಿಗಿಂತ ಹಣದ ಮೇಲೆಯೇ ಹೆಚ್ಚಿನ ಮೋಹ ಇದ್ದಂತ್ತಿತ್ತು ಆ ಊರಿನ ಜನಕ್ಕೆ.

ಹಾದಿ ಕಾದು, ಬೀದಿ ಅಲೆದು, ಗಿರಾಕಿಗಳ ಮುಖದರ್ಶನವೂ ಇಲ್ಲದೆ ಬೇಸರಗೊಂಡು ಬಾಗಿಲಿಕ್ಕಿ ದಿಂಬಿಗೆ ತಲೆ ಕೊಟ್ಟ ದಿನಗಳೆಷ್ಟೋ ಇದ್ದವು ಸುಂದರಿ–ಮುನಿಯರ ಬಾಳಿನಲ್ಲಿ. ಎಂದೋ ಒಂದೊಂದು ದಿನ ಗಿರಾಕಿಗಳು ಬರುತ್ತಿದ್ದರು. ಅದೂ ಒಂಟು ಜನ. ಮಾಲಿಗೆ ತಕ್ಕ ಮೌಲ್ಯವನ್ನು ಕೊಡುವಂತಹವರೂ ಅಲ್ಲ. 'ಕೊಡೋದು ಮೂರು ಕಾಸು, ಕೋಣೆ ತುಂಬ ಹಾಸು' ಎನ್ನುವಂತೆಯೇ ನಡೆದುಕೊಳ್ಳುತ್ತಿದ್ದರು ಅವರು. ಅವರು ಕೊಡುತ್ತಿದ್ದ ಹಿಂಸೆಯಂತೂ ತಡೆದುಕೊಳ್ಳುವುದಕ್ಕೇ ಕಷ್ಟವಾಗಿತ್ತು. ಅವರೇನು ಮಾಡುವುದು, ಬದುಕಿಗೆ ಅದನ್ನೇ ನೆಚ್ಚಿಕೊಂಡಿರುವಾಗ. ಬರುವ

ವರಮಾನ ಬಿಡುವಂತಿರಲಿಲ್ಲ. ಅಷ್ಟು ಕಷ್ಟಗಳನ್ನು ಸಹಿಸಿಕೊಂಡರೂ ತಿಂಗಳ ಉತ್ಪತ್ತಿ ಇಬ್ಬರ ದುಡಿಮೆಯಿಂದ ನಲವತ್ತು–ಐವತ್ತು ರೂಪಾಯಿ ಗಳಿಗೆ ಮೀರುತ್ತಿರಲಿಲ್ಲ. ಆ ದುಡಿಮೆಯಿಂದಲೇ ಅವರಿಬ್ಬರ ಜೀವನವೂ ನಡೆಯಬೇಕಾಗಿತ್ತು.

ಅವರಿಬ್ಬರಿಗೆ ಮಾತ್ರವಲ್ಲ, ತಿಪಟೂರಿನಲ್ಲಿದ್ದ ಇತರ ಸೂಳೆಯರಿಗೂ ಇದೇ ಗತಿಯಾಗಿತ್ತು. ಕಸುಬಿನಲ್ಲಿ ಹಳಬರಾಗಿದ್ದ ತಾಯೂರಿನ ಪುಟ್ಟ ತಾಯಿ, ಬೇಲೂರಿನ ಎಲಿಫೆಂಟ್‌ರಾಣಿ ಇವರಿಬ್ಬರಿಗೆ ಮಾತ್ರ ಏನೋ ಅಷ್ಟು ಇಷ್ಟು ವರಮಾನವಿರುತ್ತಿತ್ತು. ಪುಟ್ಟತಾಯಿಗೆ ಕೆನ್ನೆ ಗುಳಿಬಿದ್ದು ಮುಖದಲ್ಲಿ ಗೆರೆ ಮೂಡಿ ಮುದಿತನ ಅಡರಿದ್ದರೂ, ಅದೇನು ಖಯಷ್ನೋ ಆ ಊರಿನ ಜನ ಅವಳನ್ನೇ ಹುಡುಕಿಕೊಂಡು ಹೋಗುತ್ತಿದ್ದರು. ಇನ್ನು ಎಲಿಫೆಂಟ್‌ರಾಣಿ. ಹೆಸರಿಗೆ ತಕ್ಕಂತೆಯೇ ಇದ್ದಳು. ಸ್ಥೂಲ ಶರೀರ. ಅವಳೂ ವಯಸ್ಸಾದವಳೇ. ಆದರೆ ಮುಖದ ಮೇಲೆ ಇನ್ನೂ ನೆರಿಗೆಗಳು ಕಟ್ಟಿರಲಿಲ್ಲ. ಆದುದರಿಂದ ವಯಸ್ಸು ಅಷ್ಟಾಗಿ ಕಾಣುತ್ತಿರಲಿಲ್ಲ. ಸಿಹಿ ನೀರಿನ ಚಿಲುಮೆಯಂತೆ ಸದಾ ಗುಳುಗುಳು ನಗುತ್ತಿದ್ದ ಅವಳನ್ನು ಕಂಡು ಊರಿನ ಹಲಕೆಲವು ತರುಣರು ಅವಳಿಗೇ ಜೋತುಬಿದ್ದಿದ್ದರು.

ಹೀಗಾಗಿ ಆ ಊರಿನಲ್ಲಿ ಜೀವನ ನಡೆಸುವುದೇ ದುಸ್ತರಕ್ಕೆ ಬಂದಿತ್ತು ಸುಂದರಿ–ಮುನಿಯರಿಗೆ. ನಡೆದ ಹಾಗೆ ನಡೆಯಲಿ ಎಂದರೆ ಹರೆಯವೇನು ಸ್ಥಿರವೇ? ಸೌಂದರ್ಯವೇನು ಶಾಶ್ವತವೇ? ಮೈರಕ್ತವೇನು ದೇಹದ ಮೆರು ಗನ್ನು ಹೀಗೆಯೆ ಇಟ್ಟಿರುತ್ತದೆಯೆ? ದುಡಿಯುವ ಶಕ್ತಿಯಿರುವಾಗಲೇ ನಾಲ್ಕು ಕಾಸು ಕೂಡಿಡದಿದ್ದರೆ ಮುಂದೆ ನಡುಬೀದಿಗೆ ಬಿದ್ದು ಜೋಳಿಗೆ ಹಿಡಿದು ಹೊರಡುವುದಕ್ಕಾಗುತ್ತದೆಯೆ? ಮಲ್ಲಿಗೆಯಂತಿದ್ದ ತಮ್ಮನ್ನು ಈಗಲೇ ಮೂಸದವರು ನಾಳೆ ಕುಸುಮ ಕಂದಿದಾಗ ತಮ್ಮ ಮೇಲೆ ಕಡೆಗಣ್ಣ ನೋಟವನ್ನಾದರೂ ಓಡಿಸಿಯಾರೆ? ಈ ಎಲ್ಲ ಯೋಚನೆ ಸುಂದರಿ–ಮುನಿಯರ ಮನಸ್ಸನ್ನು ಹಿಂಡಿ ಕಾಡಿಸತೊಡಗಿತು.

ಒಮ್ಮೆ ಒಂದೇ ಸಮನೆ ಹದಿನೈದು ದಿನ ಒಬ್ಬ ಗಿರಾಕಿಯೂ ಬಾರ ದಿರಲು ಮುನಿಯಳ ಮನಸ್ಸು ರೋಸಿತು. ಅವಳು ಸುಂದರಿಯನ್ನು ಕುರಿತು ಹೇಳಿದಳು—

"ಇಂಗಾದ್ರೆ ಆಗಾಕಿಲ್ಲ ಅಕ್ಕಯ್ಯ."

"ಮತ್ತೇನು ಮಾಡ್ಬೇಕು ಮುನಿ. ಎಲ್ಲಾ ನಮ್ಮ ಪ್ರಾರಬ್ಧ ಕರ್ಮ."

"ಪ್ರಾರಬ್ಧ ಕರ್ಮ ಅಂತ ಕೈ ಕಟ್ಕೊಂಡು ಕೂತ್ಕೊಂಡ್ರೆ ಒಟ್ಟೇ ಒಳಗಿನ ಆಸಿವು ಇಂಗ್ತದ?"

"ಕೈ ಕಟ್ಕೊಂಡು ನಾವೇನಾರಾ ಕುಂತಿದೀವಾ? ಬಾಕಲಾಗೆ ಬೆಳಗ್ನಿಂದ ಚಂಜೆ ಗಂಟ ನಿಂತೂ ನಿಂತೂ ಕಾಲು ಬಿದ್ದೋಗಯ್ತೆ."

"ಈಗ ಮೈಯ್ಯಲ್ಲಿ ತ್ರಾಣ ಇರೋವಾಗ್ಲೆ ಇಂಗೆ ಕಾಲು ಬಿದ್ದೋದ್ರೆ ಇನ್ನು ಕಾಲೇ ಬಿದ್ದೋದ್ಮೇಕೆ ಪ್ರಾಣ ಉಳಸ್ಕೊಂಡಿರೋದೆಂಗೆ ಅಂತ?"

"ನಂಗೂ ಅದೇ ಯೋಚ್ನೆ ಆಗದೆ ಮುನಿ, ಏನೂ ಒಳೀನೇ ಒಲ್ದು."

"ನೋಡು, ಆ ಬೆಂಗಳ್ಳೂರ್ನೋನು ತೆಂಗಿನಕಾಯಿ ಯಾಪಾರಕ್ಕೆ ಬಂದಿದ್ನಲ್ಲ, ಅವನೊಬ್ನೆ ಕಣ್ಣಿಗೆ ಕಾಣೋ ಅಂಗೆ ಕೊಟ್ಟ ಅದ್ನೈದು ರೂಪಾಯಿನಾಗೆ ಎಂಗೋ ಅದ್ನೈದು ದಿನ ಕಳದ್ವಿ, ನಾಳೆ ಬೆಳಕರದ್ರೆ ಇಡಿ ಅಕ್ಕಿ ಇಲ್ಲ. ಇನ್ನು ಉಪವಾಸ ಇರಬೇಕಾಗ್ತದೆ. ಊಟಕ್ಕೇ ಇಂಗೆ ಲಾಟ್ರಿ ಆದ್ರೆ ಇನ್ನು ಬಟ್ಟೆಗೇನು ಮಾಡೋಣ, ಬಾಕಿ ಖರ್ಚ ಎಚ್ಚಕ್ಕೇನು ಮಾಡೋಣ? ನಂಗ್ಯಾಕೋ ಅಕ್ಕಯ್ಯ ಇಂಗೆ ಬದುಕಿರೋಕಿಂತ ಸಾಯೋದೇ ಮೇಲು ಅನ್ನಸ್ತದೆ."

ತಂಗಿಯ ಮಾತಿಗೆ ಅಕ್ಕ ನಿಟ್ಟುಸಿರೊಂದನ್ನು ಬಿಟ್ಟಳು. ಅವಳ ಬಾಯಿಂದ ಮಾತೇ ಹೊರಡದಂತಾಯಿತು. ಮುನಿ ಮತ್ತೆ ಹೇಳಿದಳು.

"ಏನಾರಾ ಮಾಡ್ಬೇಕು ಅಕ್ಕಯ್ಯ. ನಂಗ್ಯಾಕೋ ಈ ಊರೇ ಬೇಜಾರಾಗೋಗೈತೆ. ಬೇರೆ ಇನ್ನೆಲ್ಲಿಗಾನ ಒಂಟೋಗೋದೇ ಮೇಲು."

"ಈ ಊರ್ನಾಗೇನೋ ಉದ್ಧಾರ ಆಯ್ತೀವಿ ಅಂತ ಚಿಕ್ನಾಯಕ್ನಳ್ಳಿ ಬಿಟ್ಟು ಇಲ್ಲಿಗೆ ಬಂದ್ವಿ. ಇಲ್ಬಿಟ್ಟು ಇನ್ನೊಂದು ಊರಿಗೋದ್ರೂ ನಮಗಿದೇ ಪಾಡು. ನಮ್ಮ ನಸೀಬು ಚಂದಾಕಿಲ್ಲ. ಏನು ಪಾಪ ಮಾಡಿ ಈ ಜನುಮದಾಗೆ ಉಟ್ಟಿದ್ವೋ."

"ಮಾತೆತ್ತಿದರೆ ನೀನು ನಸೀಬು ಚೆಂದಾಕಿಲ್ಲ, ಪ್ರಾರಬ್ಧ ಕರ್ಮ ಅಂತಿರ್ತೀಯ. ಆ ಆಳು ನಸೀಬು ನಮ್ಮನ ಉಡಿಕ್ಕೊಂಡು ಬರೋಕೆ

ಮೊದ್ಲ ನಾವೇ ಅದನ್ನ ಉಡಿಕ್ಕೊಂಡು ಎಲ್ಲೀಗಾನಾ ಓಗೋಣ" ಬೇಸರ ಗೊಂಡು ನುಡಿದಳು ಮುನಿ.

ಅವಳ ಮಾತು ಕೇಳಿ ಸುಂದರಿಗೆ ನಗುಬಂತು. ಅವಳಂದಳು :

"ನಸೀಬನ್ನ ಎಲ್ಲಾನಾ ನಾವು ಉಡಿಕ್ಕೊಂಡು ಓಗೋಕಾಯ್ತದ? ಬರೋಕಾಲಕ್ಕೆ ಅದೇ ಬತ್ತದೆ."

"ಅದು ಬರೋ ಒತ್ತಿಗೆ ನಮ್ಮ ಒಟ್ಟೆ ಬತ್ತೋಯ್ತದೆ, ಅಷ್ಟೆ" ಮುನಿ ನಿರಾಶೆಯಿಂದ ಹೇಳಿದಳು.

"ಯಾಕೆ ಮುನಿ, ನಾವು ಚಂದಾಕಿಲ್ವ?" ಬಳಿಯಲ್ಲಿದ್ದ ಕನ್ನಡಿ ಯನ್ನು ತನ್ನ ಮುಖಕ್ಕೆ ಹಿಡಿದು ಕೇಳಿದಳು ಸುಂದರಿ.

"ಯಾರು ಏಳ್ದೋರು ಚಂದಾಕಿಲ್ಲ ಅಂತ. ಕಣ್ಣಿಲ್ದೋರು ಅಂಗಂತ ಏಳ್ಬೇಕು ಅಷ್ಟೆ."

"ಅಂಗಾರೆ ಯಾಕೆ ಯಾರೂ ನಮ್ಕಡೆ ನೋಡಾಕೇ ಇಲ್ಲ– ಈ ಊರ್ನೋರು?"

"ಹಾಳು ಬಿಕನಾಸಿ ಊರು, ಬಿಕನಾಸಿ ಜನ" ಮುನಿಯಳ ಮಾತಿನಲ್ಲಿ ಕೋಪದೊಂದಿಗೆ ಅಸಹ್ಯ ಬೆರೆತಿತ್ತು.

"ನಿಜ. ಈ ಜನಕ್ಕೆ ಒಸೀನಾರಾ ಖುಸಿಯಾಗಿರೋ ಮುಖವಿಲ್ಲ, ಎಲ್ಲಾ ದ್ರಾಬೆ ಬಡಿದ ಮುಖಗೋಳೇ."

"ಅದ್ಕೇ ನಾ ಏಳಿದ್ದು ಈ ಊರು ಬಿಟ್ಟು ಇನ್ನೆಲ್ಲಿಗಾನ ಒಂಟೋ ಗೋಣ ಅಂತ–ಒಳ್ಳೇ ಜನ ಇರೋ ಕಡೇ?"

"ಅಲ್ಲೂ ಇಂಗೇ ಆದ್ರೆ ಏನು ಅಂತ?"

"ಆ ಊರೂ ಬಿಡೋದು, ಇನ್ನೊಂದೂರ್ಗೋಗೋದು. ನಮ್ಗೇನು, ಎಲ್ಲಿ ಯಾಪಾರ ಚಂದಾಗೆ ನಡೀತದೋ ಅಲ್ಲಿ ನಿಲ್ಲೋದು. ಎಲ್ಲಾ ಊರು ಈ ಹಾಳು ತಿಪ್ಪೂರ್ನಂಗೇ ಇರ್ತದಾ?"

"ಅದು ನಿಜ ಆದ್ರೂ ಇದು ಕಂಡೂರು. ಕಾಣದೂರಿಗೆ ಓಗಿ ಬನ್ನೆ ಪಡೋದ?"

"ಕಂಡೂರಾಗಿ ಇಲ್ಲೇನು ಗೆಪ್ಪೆ ಆಕ್ತಿದೀವಾ?"

"ಇಲ್ಲ ಅನ್ನು."

"ಚಿಕ್ನಾಯ್ಕನಳ್ಳೀ ಇಂದ ಬರೋಕ್ಮೊದಲು ಈ ಊರೇನಾರಾ ಕಂಡಿದ್ವಾ?"

"ಇಲ್ಲ."

"ಅಂಗೇ ಓದೂರ್ನ ಕಂಡ್ಕೊಂಡ್ರಾಯ್ತು."

ಅಕ್ಕ – ತಂಗಿಯರಿಬ್ಬರೂ ಮಾತನಾಡುತ್ತ ಕುಳಿತಿದ್ದಂತೆಯೇ ಹೊರಬಾಗಿಲು ತಟ್ಟಿದ ಶಬ್ದವಾಯಿತು. ಇಬ್ಬರ ಮುಖಗಳಲ್ಲೂ ಗೆಲುವು ಮೂಡಿತು.

"ಯಾರೋ ಬಂದಂಗೈತೆ." ಎಂದಳು ಸುಂದರಿ.

"ಊ್ಞ, ಸದ್ಯ. ನಾಳೇಗೆ ಊಟಕ್ಕೇನು ಮಾಡೋಣ ಅಂತಿದ್ದೆ. ಉಪವಾಸ ತಪ್ಪಿದಂಗೈತೆ." ಮುನಿ ಮುಸಿನಕ್ಕು ಹೇಳಿದಳು.

ಸುಂದರಿ ಎದ್ದುಹೋಗಿ ಬಾಗಿಲು ತೆರೆದಳು. ಶಿಬ್ಬೊಟ್ಟ ಹೊಸಿಲೊಳಕ್ಕೆ ಕಾಲಿಟ್ಟ.

"ಏನು ಸುಂದರಿ ಇನ್ನೂ ಮನಗಿಲ್ವ."

"ಇಲ್ಲಾ ಕಾಣಣ್ಣ. ಅಂಗೇ ಮಾತಾಡ್ತಾ ಕೂತಿದ್ವಿ."

"ಯಾರಾನಾ ಬಂದವ್ರ?"

"ಯಾರೂ ಇಲ್ಲ, ನಾನೂ ಮುನಿ ಇಬ್ರೆ."

ಅಷ್ಟರಲ್ಲಿ ಮುನಿಯೂ ಎದ್ದು ಅಲ್ಲಿಗೆ ಬಂದಳು.

"ಅಂಗಾರೆ ನಾನಿಲ್ಲಿರಬೋದಾ ಈವತ್ತು?" ಶಿಬ್ಬೊಟ್ಟ ಪ್ರಶ್ನಿಸಿದ.

"ಇರಣ್ಣ ಬೇಡ ಅಂದೋರ್ಯಾರು." ಸುಂದರಿ ಉತ್ತರಿಸಿದಳು.

ಶಿಬ್ಬೊಟ್ಟ ಹಜಾರದ ಕಡೆಗೆ ನಡೆದ. ಸುಂದರಿ ಮತ್ತೆ ಹೊರಬಾಗಿಲು ಮುಚ್ಚಿ ಕೀಲಿ ಹಾಕಿ ಒಳಗೆ ಹೋದಳು. ಮುನಿ ಅವಳನ್ನು ಹಿಂಬಾಲಿಸಿದಳು.

"ಯಾಕೆ ಮುನಿ, ಏನೂ ಮಾತೇ ಆಡಾಕಿಲ್ಲ ನೀನು?"

—ಹಾಸಿದ್ದ ಚಾಪೆಯ ಮೇಲೆ ಕುಳಿತುಕೊಳ್ಳುತ್ತ ಮುನಿಯ ಮುಖ ನೋಡಿ ಕೇಳಿದ ಶಿಬ್ಬೊಟ್ಟ.

"ಏನು ಮಾತಾಡ್ಲಣ್ಣ. ಇಷ್ಟು ದಿನಕ್ಕಾನಾ ಬಂದ್ಯೆಲ್ಲಾ ಈವತ್ತು – ಬಡವರ ಕಡೆ ಮನಸ್ಸುಮಾಡಿ" ಎಂದಳು ಮುನಿ.

"ಅಪರೂಪವಾಗೋದ್ಯಲ್ಲಣ್ಣ, ಎಲ್ಲೋಗ್ಬಿಟ್ಟದ್ದೆ" ಸುಂದರಿಯೂ ಮಾತು ಸೇರಿಸಿದಳು ತಂಗಿಯ ಜತೆಗೆ.

"ಕಂಪ್ನಿ ಜೊತೇಲಿ ಊರೂರು ಅಲೆಯೋದೇ ಆಯ್ತು."

"ಅಂಗಾರೆ, ಯಾವ್ಯಾವೂರಿಗೋಗಿದ್ರಿ?"

—ಕುತೂಹಲದಿಂದ ಮುನಿ ಕೇಳಿದಳು.

"ಈ ಕಡೆ ಬಳ್ಳಾರಿ, ಹೊಸ್ಪೇಟೆ, ಗದಗು, ಬಿಜಾಪುರ, ಬಾಗಲ್ಕೋಟೆ, ಸೋಲಾಪುರ; ಆಕಡೆ ಬೆಳಗಾವಿ, ಹುಬ್ಬಳ್ಳಿ, ದಾವಣಗೆರೆ, ಭದ್ರಾವತಿ, ಸೀಮೊಗ್ಗ, ಸಾಗರ."

"ನೀನೇ ವಾಸಿ ಕಾಣಣ್ಣ, ಎಷ್ಟೊಂದು ಊರು ನೋಡಿದ್ದಿ."

—ಆಶ್ಚರ್ಯ ವ್ಯಕ್ತಪಡಿಸಿದಳು ಮುನಿ.

"ಏನು ನೋಡಿವ್ನೋ ಬಿಡು. ಆ ಮಾರಾಯ ಯಜಮಾನ ಸಲೀಸು ಸಂಬ್ಳಾನೂ ಕೊಡಾಕಿಲ್ಲ. ಒಟ್ಟೆಗೂ ಸರೀಗೆ ಆಕಾಕಿಲ್ಲ. ಬಣ್ಣ ಬಳ್ಕೊಂಡು, ನಿದ್ದೆಗೆಟ್ಟು, ಮೈ ಒಣಗಿಸ್ಕೊಳ್ಳೋದೇ ಆಗೈತೆ."

"ಯಾಕೆ, ಕಲೆಕ್ಸನ್ ಚೆಂದಾಕಿಲ್ವ?"

"ಕಲೆಕ್ಸನ್ ನಂಬ್ಕೊಂಡಿದ್ರೆ ಕಂಪ್ನಿಜನ ಮಸಾಣಕ್ಕೆ ಓಗ್ಬೇಕು. ನಾಟ್ಕಕ್ಕೆ ಬರೋರೆಲ್ಲಾ ಬರೀ ಬಿಟ್ಟಿ ಜನ, ಮುಕ್ಕಾಲುಮೂರ್ವೀಸೆ."

"ಅಂಗಾರೆ ಕಂಪನಿ ನಡೆಯೋದೆಂಗೆ ?

"ಓದೋದೂರ್ನಾಗೆಲ್ಲಾ ಸಾಲ ಮಾಡೋದು, ಅಲ್ಲುಗಸ್ಕೊಂಡು ಮುಂದ್ನೂರ್ಗೋಗೋದು. ಅಲ್ಲೂ ಅದೇ ಪಾಡಾಗಿ ಅಲ್ಲಿಂದ ಮುಂದ್ನೂರು ಕ್ಯಾಂಪು. ಇಂಗೇ."

"ಜನಾನಾರಾ ತಿಳ್ಕೊಬ್ಯಾಡ್ವಾ. ಇಂಗೆ ಬಿಟ್ಟಿ ಓಗ್ಬಾರ್ದು ಕಂಪ್ನಿ ಒಟ್ಟೆ ಮ್ಯಾಲಿ ಒಡೀಬಾರ್ದು ಅಂತ. ಅವರ ಮನೆಗೇನು ಅಕ್ಕಿ, ಜೇಳೆ ಬಿಟ್ಟೆ ಬತ್ತೈತಾ ದುಡ್ಡು ಬಿಚ್ಚದೆ, ಇದೂ ಅಂಗೇ ಅಂತ."

"ಎಲ್ಲಿ ತಿಳ್ಕೊಂತಾರೆ. ಅವರ್ಗೆ ಆ ಬುದ್ಧಿ ಐತಾ".

"ನಮ್ಮ ದೇಸದ ಜನಕ್ಕೆ ವಸೀನೂ ಬುದ್ಧಿ ಇಲ್ಲ.''

"ಅಂಗಸ್ಬೇಡ, ಪರಚಂಡ ಬುದ್ದಿ ಐತೆ, ಇನ್ನೊಬ್ರ ಮನೆ ಹಾಳ್ಮಾಡಿ ತಮ್ಮ ಮನೇ ಕಳಸ ಏರಿಸೋದ್ರಾಗೆ."

“ಇಂಗಾದ್ರೆ ಪಾಪ, ಕಂಪ್ನಿ ಯಜಮಾನ ಏನ್ಮಾಡ್ತಾನೆ. ಕೆಲಸ ದೋರ್ಗೆ ಎಂಗೆ ಸಂಬಳ ಕೊಡ್ತಾನೆ? ಅವರ್ಹೊಟ್ಟೆಗೇನು ಹಾಕ್ತಾನೇ”
—ಅನುತಾಪಗೊಂಡು ಮಧ್ಯೆ ಬಾಯಿ ಹಾಕಿದಳು ಸುಂದರಿ.

“ಆಗದಿದ್ರೆ ಕಂಪ್ನಿ ಮುಚ್ಚಿಬಿಡಬೇಕು” ಶಿಬ್ಬೊಟ್ಟ ಹೇಳಿದ.

“ಮುಚ್ಚಿಬಿಡೋದೇನೋ ಸುಲಭ ಕಾಣಣ್ಣಾ. ಒಂದು ಮನೆ ಕಟ್ಟಬೇಕಾದ್ರೆ ಎಷ್ಟೊಂದು ಕಷ್ಟಪಡಬೇಕು. ಅದ್ನ ಕೆಡವಿ ಉರುಳಿ ಸೋದು ಎಷ್ಟರಾಗೈತೆ? ಇಷ್ಟೊಂದು ಕಷ್ಟ ಆದ್ರೂ ಎಂಗೋ ಕಂಪ್ನಿ ನಡಸ್ತಾ ಅವ್ನಲ್ಲ ಆ ಮಾರಾಯ. ಅದ್ಕೇ ತಾರಿಫ್ ಮಾಡ್ಬೇಕು” ಎಂದಳು ಸುಂದರಿ, ಮೆಚ್ಚಿಗೆಯ ಧ್ವನಿಯಲ್ಲಿ.

ಶಿಬ್ಬೊಟ್ಟ ಮಾತನಾಡಲಿಲ್ಲ ಆ ಮಾತಿಗೆ.

“ಈಗೆಲ್ಲೈತಣ್ಣ ಕಂಪ್ನಿ?” ಮುನಿ ಕೇಳಿದಳು.

“ಸಾಗರ ಮುಗಸ್ಕೊಂಡು ಅರಸೀಕೆರೇಗೆ ಬಂದ್ವಿ ನೆನ್ನೆ, ಆಸನದ ಜಾತ್ರೆಗೆ ಕ್ಯಾಂಪು ಆಕ್ಬೇಕೂ ಅಂತ. ಆದ್ರೆ ಕಂತ್ರಾಟು ಕುದರ್ನಿಲ್ಲ. ಈಗ ಬೆಂಗ್ಳೂರು ಕ್ಯಾಂಪು ಮಾಡ್ಬೇಕು ಅಂತವ್ನೆ ಯಜಮಾನ.”

“ಬೆಂಗ್ಳೂರ್ಗೊಯ್ತೀಯ ಅಂಗಾರೆ?”

“ಊ್ನ....ಅಲ್ಲೀಗೇ ಓಗ್ಬೇಕು ಅಂತ ಏರ್ಪಾಟು ಮಾಡ್ತಾಅವ್ನೆ. ಅವರ್ಗೆ ಈ ಅಳ್ಳೀ ನಾಟ್ಕ ಎಂಗಿಡಸ್ತದೋ. ಅದೂ ಅಳೇ ನಾಟ್ಕ ಗೋಳು – ಸಂಪೂರ್ಣ ರಾಮಾಣ್ಯ, ಲಂಕಾದಅನ, ಲವಕುಸ, ಮಾಅ ಭಾರತ, ಇರಾಟಪರ್ವ, ಸದಾರಮೆ, ಸುಭದ್ರಾ ಪರಿಣಯ – ಇಂಥೋವೇ ಪುರಾಣಗಳು ನಾವಾಡೋದು. ಅವರಿಗೆ ಬೇಕು, ಈಗಿನ ಕಾಲದ್ದು ಒಸೊಸ ನಾಟ್ಕ - ಸಾಮಾಜಿಕ ಅಂತ ಏಳ್ತಾರಲ್ಲ, ಅಂಥಾದ್ದು.”

“ಅಂಗಾರೆ ಬೇರೆ ಎಲ್ಲಾನಾ ಕೇಂಪು ಆಕೋದು ಒಳ್ಳೇದಲ್ವಾ.”

“ಕೇಳ್ಬೇಕಲ್ಲ ಅವ್ನು”

“ಬೆಂಗ್ಳೂರ್ಗೆ ಅಂಗಾರೆ ಯಾವಾಗ ಓಯ್ತೀರಿ?” ಸುಂದರಿ ಕೇಳಿದಳು.

“ಇನ್ನೊ ಎಳ್ಡು - ಮೂರು ದಿನಕ್ಕೆ.”

"ನೀನು ಓಗೋವಾಗ ನಾವೂ ಬತ್ತೀವಿ ಕಾಣಣ್ಣ ಕರ್‍ಕೊಂಡೋಯ್ತೀಯಾ ?"

"ನೀವೂ ! ಬೆಂಗಳೂರ್‍ಗೆ ?" ಆಶ್ಚರ್ಯದಿಂದ ಶಿಬ್ಬೊಟ್ಟ ಕೇಳಿದ.

"ಊ್ಞ. ಅಲ್ಲೇ ಇದ್ಬುಡೋವಾ ಅಂತ ಮಾಡಿದೀವಿ."

"ತಿಪ್ಟೂರು ಬುಟ್ಬುಟ್ಟು ?"

"ಏನೈತಣ್ಣ ಈ ಆಳು ತಿಪ್ಟೂರ್‍ನಾಗೆ; ತೆಂಗಿನಕಾಯಿ ಚಿಪ್ಪು"

"ನಿಜ. ನಾನು ನೋಡಿರೋ ಊರ್‍ನಾಗೆಲ್ಲಾ ಈ ತಿಪ್ಟೂರು ದರ್ಬೇಸಿ ಊರು. ಸಾವ್ಕಾರ್‍ಕೆ ನೋಡಿದ್ರೆ ನಿರ್ವಾಕ ಇಲ್ಲ. ಎಂಜಲ ಕೈಯ್ನಾಗೆ ಕಾಗೆ ಕೂಡ ಓಡಿಸಾಕಿಲ್ಲ ಈ ಊರಿನ ಜನ"

—ಶಿಬ್ಬೊಟ್ಟ ಆ ಊರಿನ ಬಗ್ಗೆ ತನ್ನ ಅನುಭವವನ್ನೂ ಹೇಳಿದ.

"ನಮ್ಗೂ ಅಂಗೇ ಆಗೈತೆ ಕಾಣಣ್ಣ, ಒಟ್ಟೆಗೆ ಬಟ್ಟೆಗೆ ನೆಟ್ಟಗಾಗೋ ಅಷ್ಟು ಕೂಡ ಗಿಟ್ಟಾಕಿಲ್ಲ. ಅದ್ಕೇ ಬೆಂಗ್ಳೂರು - ಗಿಂಗ್ಳೂರು ಕಡೆ ಓಗ್ಬಿಡೋವ ಅಂತ ಇದೀವಿ ಎಂದಳು ಸುಂದರಿ.

"ಅದೂ ಒಳ್ಳೇ ಯೋಚ್ನೇನೇ. ಎಂಗೂ ಬೆಂಗ್ಳೂರು ದೊಡ್ಪಟ್ಣ. ಮಸ್ತಾಗಿ ಗಿರಾಕೀನೂ ಸಿಕ್ತಾರೆ."

"ಅದ್ಕೇ ನಮ್ನೂ ನಿನ್ಜತೇಲಿ ಕರ್‍ಕೊಂಡೋಯ್ತೀಯಾ ಅಂತ ಕೇಳಿದ್ದು."

"ಆಗಲಿ. ನಾಡದ್ದೋ, ಆಚೆನಾಡದ್ದೋ ಒಂತ್ತೀವಿ ನಾವು. ಬಂದು ಕರ್‍ಕೊಂಡೋಯ್ತೀನಿ. ನೀವು ಎಲ್ಲಾ ಸಿದ್ಧ ಮಾಡಿಟ್ಕೊಂಡಿರಿ."

ಮಾತು ಮುಗಿಯಿತು. ಸುಂದರಿಯ ಹಾಸಿಗೆಯನ್ನು ಸರಿಮಾಡಿ, ಮುನಿ ತನ್ನ ಕೋಣೆಗೆ ಹೋಗಿ ಬಾಗಿಲು ಮುಚ್ಚಿ ಒಳಗಿನಿಂದ ಅಗಳಿಹಾಕಿ ಹಾಸಿಗೆಯ ಮೇಲೆ ಉರುಳಿಕೊಂಡಳು.

೧೯

ಶಿಬ್ಬೊಟ್ಟ ಜತೆಗೂಡಿ ಸುಂದರಿ, ಮುನಿ ತಿಪಟೂರು ಬಿಟ್ಟು ಬೆಂಗಳೂರು ತಲುಪಿದರು. ಹದಿನೈದು–ಇಪ್ಪತ್ತು ದಿನ ನಾಟಕದ ಕಂಪನಿ ಮನೆಯಲ್ಲಿಯೇ ಬಿಡಾರವಾಯಿತು.

'ರಸಿಕ ವಿಲಾಸಿನಿ ನಾಟಕ ಮಂಡಳಿ'ಯಲ್ಲಿ ರಾಣಿ ಪಾರ್ಟು ಮಾಡು ಮಾಡುತ್ತಿದ್ದವನು ಶಿಬ್ಬೊಟ್ಟ. ರಾಮಾಯಣದಲ್ಲಿ ಸೀತೆ, ಮಹಾಭಾರತ ದಲ್ಲಿ ದ್ರೌಪದಿ, ಸುಭದ್ರಾ ಪರಿಣಯದಲ್ಲಿ ಸುಭದ್ರೆ, ಸದಾರಮೆಯಲ್ಲಿ ಸದಾರಮೆ ಇಂತಹ ಮುಖ್ಯ ಪಾತ್ರಗಳನ್ನೇ ಅವನು ವಹಿಸುತ್ತಿದ್ದ. ಸ್ತ್ರೀ ಪಾತ್ರಕ್ಕೆ ಬೇಕಾದ ಅಂಗಸೌಷ್ಟವವಾಗಲಿ, ಮಧುರಕಂಠವಾಗಲಿ ಅವನಿ ಗಿರದಿದ್ದರೂ ಹಾವಭಾವಗಳಲ್ಲಿ ಹೇಗೋ ಜನಮೆಚ್ಚುಗೆ ಗಳಿಸಿದ್ದ. ಆಗಿನ ಕಾಲಕ್ಕೆ ಸ್ತ್ರೀಯರು ಈಗಿನಷ್ಟು ಮುಂದುವರೆದಿರಲಿಲ್ಲ. ನಾಟಕಕಲಾ ರಂಗಕ್ಕಿನ್ನೂ ಅವರು ಕಾಲಿಟ್ಟಿರಲಿಲ್ಲ. ಆದುದರಿಂದ ಗಂಡಸೇ ಹೆಂಗಸಾಗಿ ಬರಬೇಕಾಗಿತ್ತು. ಗಂಡಸಾದರೇನು? ಅವನು ಸೀರೆ ಉಟ್ಟು ರಂಗ ಭೂಮಿಯ ಮೇಲೆ ಕಾಣಿಸಿಕೊಂಡರೆ ಅವನನ್ನು ಹೆಂಗಸೆಂದೇ ಗುರುತಿಸು ತ್ತಿದ್ದರು ಪ್ರೇಕ್ಷಕರು.

ಚಿಕ್ಕಂದಿನಿಂದಲೂ ಶಿಬ್ಬೊಟ್ಟಗೆ ನಾಟಕದಲ್ಲಿ ಪಾರ್ಟು ಮಾಡುವ ಷೋಕಿ. ಅದರಲ್ಲೂ ಸೀರೆ ಉಟ್ಟು ಹೆಂಗಸಿನ ಪಾರ್ಟು ಹಾಕುವುದರಲ್ಲಿ ಇದ್ದದ್ದೂ ಹುಚ್ಚು. ಹಳ್ಳಿಯಲ್ಲಿ ಆಡುತ್ತಿದ್ದ ಬಯಲುನಾಟಕ ಭಾಗವತ ರಾಟಗಳಲ್ಲಿ ಸ್ತ್ರೀ ಪಾತ್ರ ಅವನಿಗೇ ಮೀಸಲಾಗಿರುತ್ತಿತ್ತು. ಅದಕ್ಕಾಗಿಯೇ ಎಂದು ಒಂದು ಸೆಟ್ಟು ಸಾಮಾನುಗಳನ್ನು ಕೈಯಿಂದ ದುಡ್ಡು ಕೊಟ್ಟು ಕೊಂಡು ತಂದಿಟ್ಟುಕೊಂಡಿದ್ದ. ನಾಲ್ಕೈದು ಕೃತಕ ರೇಷ್ಮೆಸೀರೆಗಳು ಗಿಲೀಟಿನ ಒಡವೆಗಳು, ಮುಖಕ್ಕೆ ಬೇಕಾದ ಬಣ್ಣ, ಎಲ್ಲವೂ ಅವನಲ್ಲಿ ದ್ದವು. ನಾಟಕದ ದಿವಸಗಳಲ್ಲಿ ಅವನ ಆಡಂಬರ ಹೇಳತೀರದು.

ಇನ್ನೂ ನಾಟಕ ಪ್ರಾರಂಭವಾಗುವುದು ಎರಡು ಗಂಟೆ ಇದೆ ಎನ್ನುವಾಗಲೇ ಸೀರೆ ಉಟ್ಟು, ಬಣ್ಣ ಬಳಿದುಕೊಂಡು ಸಿದ್ಧನಾಗಿಬಿಡುತ್ತಿದ್ದ. ಅದನ್ನು ನೋಡಿ ಇತರರು ಮುಸಿಮುಸಿ ನಕ್ಕರೂ ಅವನಿಗೆ ಉತ್ಸಾಹ ಭಂಗವಾಗುತ್ತಿರಲಿಲ್ಲ.

ಈ ಹಳ್ಳಿಯ ನಾಟಕಗಳನ್ನು ಕಲಿಸುವ ಹೊಣೆ ಚೆನ್ನಪ್ಪನ ಮೇಲಿರುತ್ತಿತ್ತು. ಚಿಕ್ಕನಾಯಕನಹಳ್ಳಿಯಲ್ಲಿ ಮಾತ್ರವೇ ಅಲ್ಲ, ಆ ಸುತ್ತಮುತ್ತಿನ ಎಲ್ಲ ಹಳ್ಳಿಗಳಲ್ಲೂ ಅವನೇ 'ನಾಟಕದ ಮೇಷ್ಟ್ರು' ಎನಿಸಿಕೊಂಡಿದ್ದ. ಅದೇ ಅವನ ಜೀವನದ ಕಸುಬಾಗಿತ್ತು. ಯಾವ ಹಳ್ಳಿಯಲ್ಲೇ ಆಗಲಿ ಹಳ್ಳಿಗರು ನಾಟಕ ಕಲಿತು ಆಡಬೇಕೆಂದು ಬಯಸಿದರೆ ಚೆನ್ನಪ್ಪ ಆ ಹಳ್ಳಿಯಲ್ಲಿ ಮೂರು – ನಾಲ್ಕು ತಿಂಗಳುಗಳ ಕಾಲ ಮೊಕ್ಕಾಂ ಹಾಕುತ್ತಿದ್ದ. ಅವನ ಬಳಿ ಹಳ್ಳಿಗರು ಆಡುವ ಎಲ್ಲ ನಾಟಕಗಳ ಕೈಬರಹದ ಪ್ರತಿಯ ಒಂದು ದಫ್ತರವೇ ಇತ್ತು. ಅವರು ಇಚ್ಛಿಸಿದ ನಾಟಕವನ್ನು ಕಷ್ಟಪಟ್ಟು ಕಲಿಸುತ್ತಿದ್ದ. ಹಳ್ಳಿಯವರು ಅವನ ಖರ್ಚು ವೆಚ್ಚಗಳನ್ನೆಲ್ಲಾ ತಾವೇ ವಹಿಸುತ್ತಿದ್ದರು. ಜೊತೆಗೆ ನಾಟಕ ಆಡಿಯಾದ ಮೇಲೆ ಏನಾದರೂ 'ಮರ್ಯಾದೆ' ಮಾಡಿ ಕಳಿಸುತ್ತಿದ್ದರು. ಈ ಎಲ್ಲ ಹಳ್ಳಿಗಳ ನಾಟಕಗಳಲ್ಲೂ ಸ್ತ್ರೀಪಾತ್ರವನ್ನು ಶಿಬ್ಬೊಟ್ಟಿಯೇ ವಹಿಸುತ್ತಿದ್ದ. ಜನ ಅವನಿಗೂ ಖರ್ಚುಕೊಟ್ಟು, ಮರ್ಯಾದೆಯ ಉಡುಗೊರೆ ಒಪ್ಪಿಸಿ ಅವನನ್ನೇ ಕರೆಸುತ್ತಿದ್ದರು. ಇದರಿಂದಾಗಿ ಚೆನ್ನಪ್ಪ ಎಲ್ಲಿದ್ದರೆ ಶಿಬ್ಬೊಟ್ಟಿ ಅಲ್ಲಿರುತ್ತಿದ್ದ. ಚೆನ್ನಪ್ಪನ ಬಿಡಾರದಲ್ಲಿಯೇ ಶಿಬ್ಬೊಟ್ಟಿಗೆ ಊಟ, ತಿಂಡಿ, ಮೊಕ್ಕಾಂ ಆಗುತ್ತಿತ್ತು.

ಸುಂದರಿ – ಮುನಿ ಚೆನ್ನಪ್ಪನ ಇಬ್ಬರೇ ಹೆಣ್ಣುಮಕ್ಕಳು. ಚೆನ್ನಪ್ಪ ಹೆಂಡತಿ ಸತ್ತ ಮೇಲೆ ಪುನಃ ಮದುವೆ ಮಾಡಿಕೊಳ್ಳುವ ಹವ್ಯಾಸಕ್ಕೆ ಹೋಗಲಿಲ್ಲ. ತಾಯಿಲ್ಲದ ತಬ್ಬಲಿ ಮಕ್ಕಳನ್ನು ಬಹು ಅಕ್ಕರೆಯಿಂದ ಸಾಕುತ್ತಿದ್ದ.

ಪ್ರಾಪ್ತವಯಸ್ಕರಾದರೂ ಅವನು ಮಕ್ಕಳಿಗೆ ಇನ್ನೂ ಮದುವೆ ಮಾಡಿರಲಿಲ್ಲ. ಯಾರಾದರೂ ಕೇಳಿದರೆ "ಮಾಡಿದರಾಯಿತು, ಏನವಸರ"

ಎಂದುಬಿಡುತ್ತಿದ್ದ. ನಾಟಕದ ಗುಂಗಿನಲ್ಲಿ ಸದಾ ಮುಳುಗಿರುತ್ತಿದ್ದ ಅವನಿಗೆ ಮಕ್ಕಳ ಮದುವೆಯ ನೆನಪೇ ಬರುತ್ತಿರಲಿಲ್ಲ.

ಶಿಬ್ಬೊಟ್ಟಿ-ಸುಂದರಿಯರಲ್ಲಿದ್ದ ಸಲಿಗೆ ಕ್ರಮೇಣ ಸ್ನೇಹಕ್ಕೆ ತಿರುಗಿ ಕೊನೆಗೆ ಪ್ರಣಯಕ್ಕೇರಿತು. ಮೊದಮೊದಲು ಈ ವಿಚಾರ ಚೆನ್ನಪ್ಪನಿಗೆ ತಿಳಿಯಲಿಲ್ಲ. ತಿಳಿದ ಮೇಲೆ ಅವನು ಶಿಬ್ಬೊಟ್ಟಿಯನ್ನು ದೂರ ಮಾಡಿದ. ಅವನಿಗೂ ಶಿಬ್ಬೊಟ್ಟಿಗೂ ವೈಮನಸ್ಯವುಂಟಾಯಿತು.

ಇನ್ನು ಹಾಗೆಯೇ ಇದ್ದರೆ ಸರಿಯಲ್ಲವೆಂದು ಚೆನ್ನಪ್ಪ ಮಕ್ಕಳಿಗೆ ಮದುವೆಮಾಡಲು ಸರಿಯಾದ ಕಡೆ ವರಾನ್ವೇಷಣಕ್ಕೆ ತೊಡಗಿದ. ಸುಂದರಿ ಧೈರ್ಯಮಾಡಿ ಶಿಬ್ಬೊಟ್ಟಿಗೆ ತನ್ನನ್ನು ಕೊಟ್ಟು ಲಗ್ನ ಮಾಡಲು ತಂದೆಯನ್ನು ಬೇಡಿದಳು. ಆದರೆ ಚೆನ್ನಪ್ಪ "ಅವನಿಗೇನೈತೆ ಹುಟ್ಟುದರಿದ್ರ, ಬೇವಾರ್ಸಿ ಮುಂಡೇದು" ಎಂದು ಹೇಳಿ ಮಗಳ ಬೇಡಿಕೆಗೆ ಒಪ್ಪಿಗೆ ಕೊಡಲಿಲ್ಲ.

ಶಿಬ್ಬೊಟ್ಟಿಗೆ ಇನ್ನು ಆ ಊರಿನಲ್ಲಿರಲು ಮನಸ್ಸು ಬರಲಿಲ್ಲ. ಊರು ಬಿಟ್ಟು ಊರೂರು ಅಲೆಯುತ್ತ ಕೊನೆಗೆ 'ಕಂಪ್ನೀ ನಾಟಕ'ಕ್ಕೆ ಸೇರಿದ. ಅವನ ನಟನಾಸಾಮರ್ಥ್ಯವನ್ನು ಮೆಚ್ಚಿ 'ರಸಿಕ ವಿಲಾಸಿನಿ ನಾಟಕ ಮಂಡಳಿ'ಯ ಕಿಟ್ಟಪ್ಪ ಅವನನ್ನು ಮಂಡಳಿಗೆ ಸೇರಿಸಿದ. ಚಿಲ್ಲರೆ ಪಾರ್ಟು ಗಳಿಂದ ಅವನು ಕ್ರಮೇಣ ಮುಖ್ಯ ಪಾತ್ರಗಳನ್ನು ವಹಿಸುವ ಯೋಗ್ಯತೆ ಯನ್ನೂ ಪಡೆದ.

ಚೆನ್ನಪ್ಪ ವರ ಹುಡುಕುತ್ತಲೇ ಇದ್ದ. ಅವನು ನೋಡಿದ ವರಗಳಲ್ಲೆಲ್ಲಾ ಪ್ರತಿಯೊಬ್ಬನಲ್ಲೂ ಒಂದೊಂದು ಹುಳುಕು ಕಣ್ಣಿಗೆ ಬೀಳುತ್ತಿತ್ತು. ಹೀಗಾಗಿ ಮಕ್ಕಳ ಮದುವೆ ಮುಂದೆ ಮುಂದೆ ಹೋಗು ತ್ತಿತ್ತು.

ಅಷ್ಟರಲ್ಲಿ ವಿಷಮಶೀತಜ್ವರ ದೇಶವನ್ನೇ ಜಾಲಾಡಿಬಿಟ್ಟಿತು. ಸಾವಿರಾರು ಜನ ಅದರ ಭಯಂಕರ ಬಾಯಿಗೆ ತುತ್ತಾದರು. ಚೆನ್ನಪ್ಪನೂ ಅದರಲ್ಲಿಯೇ ಕಣ್ಣು ಮುಚ್ಚಿದ. ಮಕ್ಕಳು ಅನಾಥರಾದರು.

ತಂದೆ ಸತ್ತ ಮೇಲೆ ಸುಂದರಿ - ಮುನಿಯರಿಗೆ ಜೀವನ ನಿರ್ವಹಣವೇ ಕಷ್ಟಕ್ಕೆ ಬಂತು. ಚೆನ್ನಪ್ಪ ಬದುಕಿದ್ದಾಗ ಚೆನ್ನಾಗಿಯೇ ಸಂಪಾದಿಸುತ್ತಿದ್ದ.

ಆದರೆ ಆಸ್ತಿ–ಪಾಸ್ತಿಗಳನ್ನು ಮಾಡಿಡಬೇಕೆಂಬ ಯೋಚನೆ ಅವನಿಗೆ ಯಾವಾಗಲೂ ಬಂದಿರಲಿಲ್ಲ. ಬಂದ ಹಣವೆಲ್ಲ ಅವನಿಗೆ ಅರಿವಿಲ್ಲದೆ ದುಂದುವೆಚ್ಚವಾಗಿ ಹೋಗುತ್ತಿತ್ತು.

ತಂದೆಯ ಮಮತೆಯ ಮಕ್ಕಳಾಗಿ ಬೆಳೆದಿದ್ದ ಸುಂದರಿ–ಮುನಿಯರಿಗೆ ಕಷ್ಟದ ಪರಿಚಯವೇ ಇರಲಿಲ್ಲ. ಈಗ ಅದರ ಪೂರ್ಣ ಅನುಭವವಾಗಿ ಒಂದೊಂದು ದಿನವೂ ಅವರ ಜೀವ ಹಿಂಡುತ್ತಿತ್ತು. ಅವರು ಹೊಟ್ಟೆಗಿಲ್ಲದೆ ಕಂಗೆಟ್ಟರು, ಬಟ್ಟೆಯಿಲ್ಲದೆ ಭಂಗಪಟ್ಟರು.

ಶಿಬ್ಬೊಟ್ಟಯಾದರೂ ಇದ್ದಿದ್ದರೆ ತಮಗೆ ಇಷ್ಟೊಂದು ಕಷ್ಟವುಂಟಾಗುತ್ತಿರಲಿಲ್ಲ. ಹೇಗಾದರೂ ಅವನು ತಮಗೆ ಆಶ್ರಯಕೊಡುತ್ತಿದ್ದ ಎಂದು ಸುಂದರಿ ಬಹು ಪರಿತಪಿಸಿದಳು. ಅವನ ಪತ್ತೆಯ ಬಗ್ಗೆ ಅವರಿವರಲ್ಲೂ ವಿಚಾರಿಸಿದಳು. ಆದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಅವನ ವಿಚಾರವಾಗಿ ನೇರವಾದ ಸುದ್ದಿ ಯಾರಿಂದಲೂ ಅವಳಿಗೆ ದೊರೆಯಲಿಲ್ಲ. ಎಲ್ಲಿಯೋ ಉತ್ತರದೇಶಕ್ಕೆ ಹೊರಟುಹೋದ ಎಂದು ಯಾರೋ ಅಂದುಬಿಟ್ಟರು. ಸುಂದರಿ ಹತಾಶಳಾಗಿ ಅವನ ಯೋಚನೆ ಬಿಟ್ಟುಬಿಡಬೇಕಾಯಿತು.

ಸುಂದರಿ–ಮುನಿಯರು ಮೈಮೇಲಿದ್ದ ಚೂರುಪಾರು ಒಡವೆಗಳನ್ನು ಮಾರಿದ್ದಾಯಿತು. ಮುಂದೇನು ಗತಿ ಎಂಬ ಪ್ರಶ್ನೆ ಕಣ್ಣ ಮುಂದೆ ಭಯಂಕರವಾಗಿ ಪ್ರಳಯತಾಂಡವವಾಡತೊಡಗಿತು. ನೀರು ಕುಡಿದು ನೆಲಕ್ಕೆ ತಲೆಕೊಟ್ಟು ನಾಲ್ಕಾರು ದಿವಸ ನರಳಿ ಸೊರಗಿದುದಾಯಿತು. ಊರಿನ ಜನರ ಮರುಕವಾದರೂ ಅವರ ಕಡೆಗೆ ಬರಲಿಲ್ಲ. ನಾಲ್ಕು ಜನರಲ್ಲಿ ಮರ್ಯಾದೆಯಾಗಿ ಬಾಳುವೆ ನಡೆಸಿದ ತಂದೆಯ ಮಕ್ಕಳಾಗಿ ಅವರು ಭಿಕ್ಷಾಪಾತ್ರೆ ಹಿಡಿದು ಜನರ ಬಳಿ ಯಾಚನೆಗೆ ಹೊರಡುವುದಕ್ಕೂ ಸ್ವಾಭಿಮಾನ ತಡೆದು ನಿಲ್ಲಿಸಿತು.

"ಎಷ್ಟು ದಿನ ಅಂತ ಇಂಗೆ ಉಪಾಸ ಬಿದ್ಕೊಂಡಿರೋಕಾಯ್ತದೆ, ಅಕ್ಕಯ್ಯ ?"

—ಸೊರಗಿದ ಧ್ವನಿಯಲ್ಲಿ ಮುನಿ ಅಕ್ಕನನ್ನು ಕೇಳಿದಳು ಹಸಿವಿನ ಮಹಾಜ್ವಾಲೆ ಅವಳ ಹೊಟ್ಟೆಯನ್ನು ತೀಕ್ಷ್ಣವಾಗಿ ದಹಿಸುತ್ತಿತ್ತು

ಸುಂದರಿ ಮಾತನಾಡಲಿಲ್ಲ. ಕಂಬನಿಯ ರೂಪದಲ್ಲಿ ಅವಳ ಕಣ್ಣುಗಳೇ ಉತ್ತರ ಕೊಟ್ಟುವು.

ಮುನಿಯೇ ಮತ್ತೆ ಹೇಳಿದಳು ಅಕ್ಕನ ಕಣ್ಣೀರನ್ನು ನೋಡಿ :

"ಅತ್ರೆ ಹಸಿವು ಹೋಯ್ತುದೇನಕ್ಕಯ್ಯ? ಯಾರ ಮನೇಲಾನಾ ಕೂಲೀನಾಲಿ ಕಸಾಮುಸರೇ ಮಾಡೋಕಾಗ್ದಾ? ಎಂಗೋ ವಸೀ ಗಂಜೀ ನೀರಾನಾ ಕುಡೀಬೌದು."

ತಂಗಿಯ ಮಾತು ಸುಂದರಿಯ ಹೃದಯವನ್ನು ಶೂಲದಂತೆ ಇರಿಯಿತು ಅವಳಂದಳು.—

"ಜನ ನೋಡಿ ನಗಾಕಿಲ್ವಾ ಮುನಿ? ಎಲ್ಲರೂ ಊರ್ನಾಗೆ ಅಪ್ಪಯ್ಯನ್ನ 'ಮೇಷ್ಟ್ರು, ಮೇಷ್ಟ್ರು' ಅಂತ ಕರೀತಾ ಇದ್ರು. ಕೈಮುಗುದು ಮರ್ಯಾದೆ ಇಂದ ಮಾತಾಡಸ್ತಾ ಇದ್ರು. ಈಗ ನಾವು ಇನ್ನೊಬ್ಬರ ಮನೇಗೆ ಕಸಮುಸುರೆ ಕೆಲಸಕ್ಕೆ ಓಗಿ ಸೇರ್ಕೊಂಡ್ರೆ ಸತ್ತು ಸ್ವರಗ್ದಾಗಿರೋ ಅಪ್ಪಯ್ಯನ ಮರ್ಯಾದೇಗೆ ತಡೀತದ?"

ಮುನಿ ಕ್ಷಣಹೊತ್ತು ನೀರವವಾಗಿ ನೆಲವನ್ನು ದಿಟ್ಟಿಸುತ್ತ ಕುಳಿತಳು. ನಂತರ ಅಕ್ಕನ ಮುಖದತ್ತ ನೋಡಿ ಕೇಳಿದಳು, "ಅಂಗಾರೆ ಇಂಗೇ ಉಪಾಸ ಬಿದ್ದಿದ್ದು ಪ್ರಾಣ ಬಿಡೋಣ ಅಂತೀಯ?"

"ಇಲ್ಲ ಮುನಿ, ಏನಾನಾ ಮಾಡಬೇಕು."

"ಹೇಳು ಮತ್ತೆ, ಏನು ಮಾಡಬೇಕು ಅಂತ."

ಏನು ಮಾಡಬೇಕು? ಏನು ಮಾಡಬೇಕು? ಏನು ಮಾಡಬೇಕು?

ಭೂತದಂತೆ ಭಯಂಕರ ರೂಪ ತಳೆದು ಎದುರು ಬಂದು ನಿಂತಿತು ಆ ಪ್ರಶ್ನೆ.

ಬೀದಿಯ ಬಾಗಿಲು ತಳ್ಳಿಕೊಂಡು ಯಾರೋ ಬಂದ ಹಾಗಾಯಿತು. ಇಬ್ಬರ ದೃಷ್ಟಿಯೂ ಅತ್ತ ಸರಿಯಿತು.

"ಪರುಶುರಾಮಪ್ಪ ಬಂದ" ಎಂದಳು ಮುನಿ.

"ಬಾ ಪರುಶುರಾಮಪ್ಪ, ಕೂತ್ಕೋ" ಸುಂದರಿ ಪರುಶುರಾಮನನ್ನು ಕರೆದು ಕೂರಿಸಿದಳು.

ಹಾಸಿದ್ದ ಚಾಪೆಯ ಮೇಲೆ ಕುಳಿತುಕೊಳ್ಳುತ್ತ ಪರುಶುರಾಮ ಕೇಳಿದ.

"ಏನು ಚಂದಾಕಿದ್ದೀರಾ ?"

"ಇಂಗಿದೀವಪ್ಪ" ಸುಂದರಿ ಹೇಳಿದಳು.

"ಬೋ ಇಳದೋಗ್ಬಿಟ್ಟದೀರಿ ಇಬ್ರೂವೆ"

ಸುಂದರಿ–ಮುನಿ ಆ ಮಾತಿಗೆ ಏನೂ ಜವಾಬು ಕೊಡಲಿಲ್ಲ. ಅವರು ಮೌನವಾಗಿ ಕುಳಿತಿದ್ದುದನ್ನು ನೋಡಿ ಪರುಶುರಾಮನೇ ಶುರುಮಾಡಿದ.

"ಚೆನ್ನಪ್ಪಯ್ಯ ಬೋ ಒಳ್ಳೆ ಮನಸ್ಯ. ನಾಕ್ಜನಕ್ಕೆ ಬೇಕಾದೋನಾಗಿದ್ದ. ಎಷ್ಟೋ ಪಾಪಿಪರದೇಸಿಗಳಿಗೆ ಉಪ್ಕಾರ ಮಾಡಿದ್ದ. ಅಂಥ ಪುಣ್ಯಾತ್ಮನಿಗೆ ಇಷ್ಟು ಬೇಗ ಸಾವು ಬರಬಾರ್ದಾಗಿತ್ತು. ಒಳ್ಳೇ ವಸ್ತು ದೇವರಿಗೆ ಪಿರೀತಿ. ಅದ್ಕೇ ಅವನ್ನ ಕಿತ್ಕೊಂಡ್ಬಿಟ್ಟ. ಅಂಗಂತ ತಿಳ್ಕೊಂಡು ನೀವೂ ಸಮಾಧಾನ ಮಾಡ್ಕೋಬೇಕು. ಅದು ಬಿಟ್ಟು ಇಂಗೆ ನೀವು ಕೊರಕ್ಕೊಂಡು ಊಟಬಿಟ್ಟು ಅತ್ರೆ ಏನು ಪರ್ಯೋಜ್ನ. ನಿಮ್ಮ ಮುಖ ನೋಡೋಕಾಗಾಕಿಲ್ಲ. ಇನ್ನಾರಾ ಈ ಯಥೆ ಬಿಟ್ಟು–ಬಿಟ್ಟು ಇದ್ದದ್ರಾಗೆ ಮನಸ್ಸು ಧೈರ್ಯ ಮಾಡ್ಕೋಳಿ."

"ಏನು ಧೈರ್ಯ ಮಾಡ್ಕೊಳೊದೋ ಪರಶುರಾಮಪ್ಪ. ಅಪ್ಪಯ್ಯ ಇದ್ದಾಗ ನನುಗೆ ಯಾವುದಕ್ಕೂ ಏನೂ ಕೊತ್ತೆ ಇರ್ನಿಲ್ಲ" ಎಂದಳು ಸುಂದರಿ ಪರಶುರಾಮನ ಮಾತಿಗೆ.

"ನಂಗೂ ಗೊತ್ತಾಯ್ತು ನೀವು ಪಡ್ತಿರೋ ಕಷ್ಟ. ಏನು ಮಾಡೋಕಾಯ್ತದೆ. ಬಂದದ್ದು ಅನುಭವಸ್ದೆ ತೀರ್ದು."

"ದಿಟಕಣಪ್ಪ, ಆದರೆ ಅನುಭವಿಸೋದು ಎಂಗೆ ಅನ್ನೊದೇ ತಿಳಿಯಾಕಿಲ್ಲ."

"ಚನ್ನಪ್ಪಯ್ಯ ನಿಮ್ಮ ಲಗ್ನಾನಾರಾ ಮಾಡ್ಬಿಟ್ಟದ್ರೆ ಚೆಂದಾಕಿರ್ತಿತ್ತು."

"ಏನು ಮಾಡೋದು. ನಮ್ಮ ದುರದೃಷ್ಟ"

"ಈಗ್ಲೂ ನೀವ್ಯಾಕೆ ನಗ್ನ ಮಾಡ್ಕೊಂಡ್ಬಿಡ್ಬಾರ್ದು ? ಗಂಡು ದಿಕ್ಕಿಲ್ದೆ ಎಂಗಸು ಬಾಳೋದು ಕಷ್ಟ."

"ಎಂಗಾಯ್ತದಪ್ಪ. ನಾವೇ ಓಗಿ ಯಾರ್ನಾನ ಕೇಳ್ಕೋಕಾಯ್ತದ ನಮ್ನ ಲಗ್ನ ಮಾಡ್ಕೋತೀರಾ, ಅಂತ ?"

ಸುಂದರಿಯ ಆ ಮಾತು ಪರಶುರಾಮನ ಮನಸ್ಸಿನಲ್ಲಿ ಒಂದು ಬಗೆಯ ಸಮಾಧಾನವನ್ನು ಉಂಟುಮಾಡಿತು. ಮದುವೆಯಾಗಲು ಯಾರಾದರೂ ಮುಂದೆ ಬಂದರೆ ಒಪ್ಪಿಕೊಳ್ಳಲು ಸಿದ್ಧಳಾಗಿರುವಳೆಂಬುದನ್ನು ಅವಳ ಮಾತಿನ ಭಾವದಿಂದ ಅರ್ಥ ಮಾಡಿಕೊಂಡು ತಾನು ಬಂದ ಕೆಲಸ ಅರ್ಧ ಕೈಗೂಡಿ ತೆಂದೇ ಭಾವಿಸಿದ ಪರಶುರಾಮ. ಆದರೆ ತನ್ನನ್ನೇ ಲಗ್ನವಾಗುವೆಯಾ ಎಂದು ಸುಂದರಿಯನ್ನು ನೇರವಾಗಿ ಹೇಗೆ ಕೇಳುವುದು. ಕೆಲಹೊತ್ತು ಅವನು ಯೋಚಿಸಿ ನಂತರ ಮಾತಿಗೆ ಪ್ರಾರಂಭಿಸಿದ —

"ಅಂಗಾರೆ, ಯಾರಾನಾ ಬಂದ್ರೆ ಲಗ್ನ ಆಯ್ತೀರಿ ?"

"ಊ್ನ್ಣ....ಇಂಗೇ ಇರೋಕಾಯ್ತದೇನಪ್ಪ ?"

"ನಾನೂ ಈ ಇಚಾರಾನೇ ಮಾತಾಡೋಣ ಅಂತ್ಬಂದೆ. ಮಾತಾ ಡಿದ್ರೆ ಏನೂ ತಿಳ್ಕೋಳೋಕಿಲ್ಲ ತಾನೆ."

"ತಿಳ್ಕೋಳೋದು ಏನ್ಬಂತು, ಮಾತಾಡಪ್ಪ."

"ಮಾತಾಡ್ಬೋದೆ........ಅಂಗಾರೆ."

"ಊ್ನ್ಣ........"

"ನಂಗೂ ಇನ್ನು ಲಗ್ನ ಆಗಿಲ್ಲ....ನೀನು ಒಪ್ಕೊಳೋದಾದ್ರೆ...."

—ಉಗುಳು ನುಂಗಿ ಸುಂದರಿಯ ಮುಖ ನೋಡುತ್ತ ಹೇಳಿದ ಪರಶುರಾಮ. ಅವನ ಮಾತು ಕೇಳಿ ಸುಂದರಿಯ ಮುಖ ನಾಚಿಕೆಯಿಂದ ಕೆಂಪೇರಿತು, ಏನು ಪ್ರತ್ಯುತ್ತರ ಕೊಡಬೇಕೆಂಬುದೇ ತಿಳಿಯದಾಯಿತು.

ಪರಶುರಾಮ ಉತ್ಸುಕತೆಯ ನಿರೀಕ್ಷೆಯಿಂದ ಸುಂದರಿಯ ಕಡೆಗೇ ನೋಡುತ್ತ ಕುಳಿತ. ತುಸುಹೊತ್ತು ಮೌನದಲ್ಲಿಯೇ ಕಳೆಯಿತು.

"ಆದ್ರೆ........" ಸುಂದರಿ ಕ್ಷಣಕಾಲ ಯೋಚಿಸಿ ಅನುಮಾನಿಸುತ್ತ ಬಾಯಿ ತೆರೆದಳು.

"ಏನು ಆದ್ರೆ........?"

ಸುಂದರಿಯು ಪೂರ್ತಿಯಾಡದೆ ನಿಲ್ಲಿಸಿದ ಮಾತನ್ನು ಪೂರ್ತಿಗೊಳಿ

ಸಲು ಒತ್ತಾಯ ಮಾಡುವವನಂತೆ ಕೇಳಿದ ಪರಶುರಾಮ. ಸುಂದರಿಗೆ ಮಾತು ಗಂಟಲಿನಲ್ಲಿಯೇ ನಿಂತಿತು.

"ನಾನು ನಿಮ್ಜನ ಅಲ್ಲ ಅಂತ್ಲ ?" ಪರಶುರಾಮನೇ ಕೇಳಿದ.

"ಅಂಗೇನಿಲ್ಲ. ನಮ್ಜನ ನಮಗೆ ಬೋ ಕಡಿದಿರೋದು ಅಷ್ಟರಾಗೇ ಐತೆ. ಅಪ್ಪಯ್ಯ ಸತ್ತಮೇಕೆ ಒಬ್ಬರಾನಾ ಈ ದಿಕ್ಕಿಗೆ ಬರ್ನಿಲ್ಲ. ಎಂಗಿದೀರಾ ಅಂತ ಇಚಾರಸ್ನಿಲ್ಲ."

"ಮತ್ತೆ ?"

"ನಿಮ್ಮ ಅಪ್ಪಯ್ಯ-ಅಮ್ಮ ಒಪ್ಕೊಂತಾರಾ ಅಂತ."

"ಆ ಇಚಾರ ನನಗಿರ್ಲಿ, ಅವರ್ನ ಎಂಗಾನಾ ಮಾಡಿ ಒಪ್ಪಸ್ತೀನಿ. ಮೊದ್ಲು ನೀನು ಒಪ್ಕೊಂಡ್ರೆ ಆಮೇಕೆ ಉಳಿದದ್ದು."

ಸುಂದರಿ ಮೌನವಾಗಿದ್ದಳು. ಅವಳ ಮೌನವೇ ಪರಶುರಾಮನಿಗೆ ಒಪ್ಪಿಗೆಯ ಸಂಕೇತವಾಯಿತು. ಹೃದಯದಲ್ಲಿ ಉಕ್ಕುತ್ತಿದ್ದ ಸಂತೋಷದ ತೆರೆಗಳನ್ನು ತೋರಗೊಡದೆ ಪರಶುರಾಮ ಹೇಳಿದ—

"ಅಂಗಾರೆ ಉಗಾದೀಗೆ ಊರಿಗೋಯ್ತೀನಿ. ಅಪ್ಪ-ಅಮ್ಮನ್ನ ಒಪ್ಪಿಸಿಬಿಟ್ಟು ಬಾಕಿ ಏರ್ಪಾಟು ಮಾಡ್ತೀನಿ."

"ಉಗಾದಿ ಇನ್ನೂ ಅಪಾರ ದಿನ ಐತೆ" ಸುಂದರಿ ಹೇಳಿದಳು. ಹಸಿವಿನ ಭೂತ ಅವಳನ್ನು ಪೀಡಿಸುತ್ತಿತ್ತು.

"ಏನಿಲ್ಲ. ಬರೀ ಐದು ತಿಂಗಳು."

"ಅಲ್ಲೀಗಂಟ ಜೀವನಕ್ಕೆ ?"

"ನೀವೇನೂ ಯೋಚನೆ ಮಾಡಬೇಡಿ. ಎಲ್ಲಾ ನಾನು ನೋಡ್ಕೊಂಡೋಯ್ತೀನಿ."

ಸುಂದರಿಗೆ ಸಮಾಧಾನವಾಯಿತು. 'ದೇವರು ದೊಡ್ಡವನು. ಸದ್ಯ ಈ ಉಪವಾಸದಿಂದ ನರಳಿ ಸಾಯುವುದನ್ನು ತಪ್ಪಿಸಿದನಲ್ಲ' ಎಂದು ಮನಸ್ಸಿನಲ್ಲಿಯೇ ಸಂತಸಗೊಂಡಳು. ಮುನಿ ಯಾವ ಮಾತಿಗೂ ಹೋಗದೆ ಅವರು ಆಡುತ್ತಿದ್ದ ಮಾತುಗಳನ್ನು ಮೌನದಿಂದ ಕೇಳುತ್ತ ಕುಳಿತ್ತಿದ್ದಳು.

"ಒಂದು ವೇಳೆ ನಿಮ್ಮ ಅಪ್ಪಯ್ಯ-ಅಮ್ಮ ಒಪ್ಪದೇ ಓದರೆ ಏನು ಮಾಡೋದು" ಸುಂದರಿ ತನ್ನ ಅನುಮಾನವನ್ನು ವ್ಯಕ್ತಗೊಳಿಸಿದಳು.

"ಒಪ್ಕೊಂಡೇ ಒಪ್ಕೊಂತಾರೆ. ನನ್ನ ಮಾತಿಗೆ ಅವರು ಇಲ್ಲ ಅನ್ನೋಕಿಲ್ಲ. ಮದುವೆ ಆಗು ಅಂತ ಬಲವಂತಪಡಿಸಿದ್ದಕ್ಕೆ ನಾನೇ ಒಲ್ಲೆ ಅಂತ ಊರು ಬಿಟ್ಟು ಓಡಿಹೋದೆ. ಈಗ ಆಯ್ತೀನಿ ಅಂದ್ರೆ ಅವರಿಗೆ ಸಂತೋಸ ಆಗಾಕಿಲ್ವ? ಊ ಅಂದೇ ಅಂತಾರೆ" ಪರಶುರಾಮನ ಧ್ವನಿಯಲ್ಲಿ ಭರವಸೆಯಿತ್ತು.

"ಆದ್ರೆ ಜಾತಿ ಅಲ್ಲದ ಜಾತಿಯೋಳ್ನ ಲಗ್ನ ಆಗೋಕೆ ಅವರು ಒಪ್ಕೊಂತಾರೋ ಇಲ್ಲವೋ ?"

"ಜಾತಿಯಾಗೆ ಏನೈತೆ ಬುಡು. ದೇವರು ಉಟ್ಟಿಸಿರೋದು ಎಳ್ಡೇ ಜಾತಿ-ಎಣ್ಣೊಂದು, ಗಂಡೊಂದು. ಮನುಸ ಮಾಡ್ಕೊಂಡಿರೋದು ಆ ಜಾತಿ ಈ ಜಾತಿ ಅಂತ."

"ಅಂಗಂತ ನಿಮ್ಮ ಅಪ್ಪಯ್ಯ - ಅಮ್ಮ ತಿಳ್ಕೊಂಡ್ರೆ ಸರಿ."

"ತಿಳ್ಕೋಳೋ ಅಂಗೆ ನಾ ಏಳ್ತೀನಿ."

ಅಂದಿನಿಂದ ಪರಶುರಾಮ ಸುಂದರಿಯ ಮನೆಗೆ ದಿನವೂ ಬಂದು ಹೋಗುವುದು ಪ್ರಾರಂಭವಾಯಿತು. ಅವರ ಜೀವನನಿರ್ವಹಣೆಯ ಎಲ್ಲ ಖರ್ಚುಗಳನ್ನೂ ಅವನೇ ವಹಿಸಿಕೊಂಡ.

೨೦

ಪರಶುರಾಮನ ಹುಟ್ಟೂರು ಹುಬ್ಬಳ್ಳಿಯ ಹತ್ತಿರದ ಒಂದು ಹಳ್ಳಿ. ಚಿಪ್ಪಿಗರ ಕಸುಬು ಮೊದಲಿನಿಂದಲೂ ಮನೆತನಕ್ಕೆ ಅಂಟಿಬಂದಿದ್ದ ಕಸುಬು. ತಂದೆ-ತಾಯಿಗಳ ಒಬ್ಬನೇ ಮಗನಾಗಿ ಮುದ್ದಿನಿಂದ ಬೆಳೆದ ಅವನಲ್ಲಿ ಚಿಕ್ಕಂದಿನಿಂದಲೇ ದುರ್ಗುಣಗಳು ಮೂರ್ತೀಭವಿಸಿದ್ದವು. ಅವನು ದೊಡ್ಡವನಾದಂತೆಲ್ಲ ಆ ದುರ್ಗುಣಗಳ ಬೇರೂ ಬಲವಾಗತೊಡಗಿತು. ಜೊತೆಗೆ ದುಷ್ಟಜನರ ಸಹವಾಸ ಬೇರೆ ಸೇರಿ ಅದರ ಶಾಖೋಪಶಾಖೆಗಳು ಒಡೆದು ಬೆಳೆದವು. ತಂದೆತಾಯಿಗಳು ಎಚ್ಚರಗೊಳ್ಳುವ ವೇಳೆಗೆ ಮಗ ಎಲ್ಲವನ್ನೂ ಮೀರಿಸಿ ನಿಂತಿದ್ದ. ಅವನನ್ನು ದಾರಿಗೆ ತರುವುದು ಅವರಿಂದ ಅಸಾಧ್ಯವಾಯಿತು.

ಮನೆಯಲ್ಲಿ ಮಾತ್ರವಲ್ಲದೆ ಹೊರಗಡೆಯೂ ಅವನ ದುಷ್ಟತನದ ಹಾವಳಿ ಪ್ರಾರಂಭವಾಯಿತು. ಒಮ್ಮೆ ಸಾಹುಕಾರನೊಬ್ಬನ ಮಗಳನ್ನು ಕೆಣಕಿ ಅವನ ಕಡೆಯವರಿಂದ ಚೆನ್ನಾಗಿ ಥಳಿಸಿಕೊಂಡಿದ್ದ. ಇನ್ನೊಮ್ಮೆ ಸಂಗಡಿಗರೊಡಗೂಡಿ ಅಂಗಡಿಯೊಂದರ ಬೀಗ ಮುರಿದು ಅಲ್ಲಿದ್ದ ಸಾಮಾನುಗಳನ್ನೂ ಹಣವನ್ನೂ ಲೂಟಿ ಮಾಡಿದ್ದ. ಆದರೆ ನೇರವಾದ ಸಾಕ್ಷ್ಯ ದೊರೆಯದೆ ಅದರಿಂದ ಹೇಗೋ ಪಾರಾದ. ಮತ್ತೊಮ್ಮೆ ಅವನೂ ಅವನ ಗುಂಪಿನವರೂ ಕೈಯ್ಯಲ್ಲಿ ದೊಣ್ಣೆಮಚ್ಚುಗಳನ್ನು ಹಿಡಿದು ರಸ್ತೆಯಲ್ಲಿ ಸಾಲುಗಾಡಿಯವರನ್ನು ಅಡ್ಡಗಟ್ಟಿ ಅವರನ್ನು ಹೆದರಿಸಿ ಬೆದರಿಸಿ ಅವರಲ್ಲಿದ್ದುಬದ್ದುದನ್ನೆಲ್ಲಾ ದೋಚಿದ್ದರು. ಅದರಲ್ಲೂ ಅವನ ಗುರುತು ಪತ್ತೆಯಾಗದೆ ಬಚಾಯಿಸಿಕೊಂಡ. ಇಂತಹುದು ಲೆಖ್ಖವಿಲ್ಲದಷ್ಟು.

ಮಗನ ಈ ದುಷ್ಟಮಾರ್ಗ ತಂದೆತಾಯಿಗಳನ್ನು ಬಹುಪೇಚಿಗೆ ಸಿಕ್ಕಿಸಿತು. ದಿನಬೆಳಗಾದರೆ ಏನಾದರೊಂದು ದೂರು ಇದ್ದೇಇರುತ್ತಿತ್ತು. ಅವರು ಕೊರಗಿ ಹಣ್ಣಾದರು. ಹೀಗೆಲ್ಲಾ ಮಾಡಬಾರದೆಂದು ಮಗನಿಗೆ

ಒಳ್ಳೆಯ ಮಾತಿನಲ್ಲಿ ಬುದ್ಧಿ ಹೇಳಿ ನೋಡಿದರು. ಕೋಪಮಾಡಿ ಬೈದರು, ಹೆದರಿಸಿದರು. ಪರಶುರಾಮ ಯಾವುದಕ್ಕೂ ಬಗ್ಗಲಿಲ್ಲ. ಅವನ ದಾರಿಯೇ ಅವನದಾಯಿತು.

ಮದುವೆಮಾಡಿ ಹೆಗಲ ಮೇಲೆ ಜವಾಬ್ದಾರಿಯನ್ನಾದರೂ ಹೊರಿಸಿದರೆ ಮಗ ಸರಿಯಾದ ಮಾರ್ಗಕ್ಕೆ ಬಂದಾನೆಂದು ಯೋಚಿಸಿ ತಂದೆ ತಾಯಿಗಳು ಹೆಣ್ಣು ಹುಡುಕತೊಡಗಿದರು. ಅವನ ಹೆಸರು ಕೇಳಿದರೇ ಮುಖ ಸಿಂಡರಿಸಿಕೊಳ್ಳುತ್ತಿದ್ದ ಜಾತಿಯ ಜನ ಅವನಿಗೆ ಹೆಣ್ಣುಕೊಡಲು ಮುಂದೆ ಬರಲಿಲ್ಲ. ಕೊನೆಗೆ ತಂದೆತಾಯಿ ಅತಿ ಪ್ರಯಾಸದಿಂದ ಯಾವುದೋ ಒಂದು ಹೆಣ್ಣನ್ನು ಗೊತ್ತು ಮಾಡಿದರು. ಆದರೆ ಪರಶುರಾಮ ಆ ಹೆಣ್ಣನ್ನು ಲಗ್ನವಾಗಲು ಸಮ್ಮತಿಸಲಿಲ್ಲ. ತಂದೆತಾಯಿಗಳು ಮದುವೆಯಾಗಲೇ ಬೇಕೆಂದು ಊಟಬಿಟ್ಟು ಹಠ ಹಿಡಿದರು. ಮಗನ ಮನಸ್ಸು ಕದಲಲಿಲ್ಲ. ಇದೆಲ್ಲಿಯ ಕಷ್ಟಾವ್ಯಸನ ಎಂದವನೇ ಹೇಳದೆ ಕೇಳದೆ ಮನೆಬಿಟ್ಟು ಹೊರಟುಬಿಟ್ಟ ಪರಶುರಾಮ. ಸಿಕ್ಕಿದ ಪೋಲೀಜನರ ಸಹವಾಸದಲ್ಲಿ ಊರೂರು ಅಲೆದ, ಮಾಡಬಾರದ ದುಷ್ಕೃತ್ಯಗಳನ್ನೆಲ್ಲಾ ಮಾಡಿದ. ಕೊನೆಗೆ ಕರ್ನೂಲ್ ಕಡೆ ಮಾಡಿದ ಢಕಾಯಿತಿ ಕೇಸೊಂದರಲ್ಲಿ ಪೋಲೀಸರ ಕೈಗೆ ಸಿಕ್ಕದೆ ತಲೆತಪ್ಪಿಸಿಕೊಂಡು ಬಂದು ಚಿಕ್ಕನಾಯಕನಹಳ್ಳಿ ಸೇರಿದ. ಕೈಯ್ಯಲ್ಲಿದ್ದ ಹಣದಲ್ಲಿ ಒಂದು ಹೊಲಿಗೆ ಯಂತ್ರವನ್ನು ತೆಗೆದುಕೊಂಡು ಮತ್ತೆ ತನ್ನ ಕುಲಕಸುಬಿಗೆ ಇಳಿದ. ಊರ ಜನರ ಗೌರವ ವಿಶ್ವಾಸಗಳನ್ನು ಕ್ರಮೇಣ ಗಳಿಸಿಕೊಂಡ. ಊರಿನವರಲ್ಲಿ ತಾನೂ ಒಬ್ಬನಾದ.

ಪರಶುರಾಮನ ಈ ಪೂರ್ವ ಕಥೆ ಚಿಕ್ಕನಾಯಕನಹಳ್ಳಿಯಲ್ಲಿ ಯಾರಿಗೂ ತಿಳಿದಿರಲಿಲ್ಲ. ಸುಂದರಿಗಂತೂ ಮೊದಲೇ ತಿಳಿಯದು. ಹುಬ್ಬಳ್ಳಿಯ ಕಡೆ ಯಾವುದೋ ಹಳ್ಳಿಯಲ್ಲಿ ಅವನ ತಂದೆತಾಯಿಗಳು ಜೀವಂತರಾಗಿರುವರೆಂದು ತಂದೆ ಚೆನ್ನಪ್ಪನ ಬಾಯಿಂದ ಅವಳು ಕೇಳಿದ್ದಳು.

ಸುಂದರಿ – ಪರಶುರಾಮರು ವಿವಾಹವಾಗುವರೆಂಬ ಸುದ್ದಿ ಊರಲ್ಲಿ ಹರಡಲು ತಡವಾಗಲಿಲ್ಲ.

'ಸುಂದರಿ ಪರಶುರಾಮುನ್ನ ಮದುವೆ ಆಗ್ತಾಳಂತೆ. ಅವಳಿಗೇನು ಬಂತು ಕೇಡು, ಜಾತಿ ಇಲ್ಲದ ಜಾತಿಯೋನ್ನ ಮದುವೆ ಆಗೋದಕ್ಕೆ'

"ಚೆನ್ನಪ್ಪಯ್ಯ ಬದುಕಿದ್ದರೆ ಇಂಥಾದ್ದಕ್ಕೆಲ್ಲ ಅವಕಾಶ ಕೊಡ್ತಿರ್ಲಿಲ್ಲ. ಎಂತೆಂಥ ಗಂಡುಗಳ್ನೊ ಅವನು ಒಪ್ಪಿರಲಿಲ್ಲ"

"ಎಲ್ನೋ ಮೊದಲಿಂದಲೂ ಇವರಿಬ್ಬರಿಗೂ ನ್ಯಾಸ್ತ ಇರಬೇಕು."

"ಇದ್ದರೂ ಇದ್ದೀತು."

"ಕಾಲ ಕೆಟ್ಹೋಯ್ತು"

"ಕಾಲ ಏನ್ಮಾಡತ್ರೀ. ಮನುಷ್ಯರ ನಡವಳಿಕೆ ಕೆಟ್ಹೋಯ್ತು ಅನ್ನಿ" ಎಂದು ಹೆಂಗಸರು ಗುಸಗುಸ ಆಡಿಕೊಂಡರೆ ಗಂಡಸರ ವಲಯದಲ್ಲಿ–

"ಹೇಳೋರು ಕೇಳೋರು ದೊಡ್ಡೋರು ಇರ್ತಿದ್ರೆ ಹೀಗಾಗ್ತಿರ್ಲಿಲ್ಲ."

"ಅಲ್ಲ, ಜಾತಿ ಯಜಮಾನ್ರು ಅನ್ನಿಸ್ಕೊಂಡೋರು ಏನ್ಮಾಡ್ತಿದಾರೆ" ಎಂದು ಕೇಳಿ ಬರುತ್ತಿತ್ತು.

ಜಾತಿ ಯಜಮಾನ ತಾತಜ್ಜ ಸುಂದರಿಯ ಮನೆಗೆ ಓಡಿಬಂದ. ಪರಶುರಾಮುನನ್ನು ಮದುವೆಯಾಗದಂತೆ ಅವಳಿಗೆ ಬಗೆಬಗೆಯಾಗಿ ಹೇಳಿದ. ಸುಂದರಿ ಒಂದೇ ಮಾತು ಹೇಳಿಬಿಟ್ಟಳು: "ಜಾತಿಯೋರು ನಮ್ಮನ್ನ ಉದ್ಧಾರ ಮಾಡಿರೋದು ಅಷ್ಟರಾಗೇ ಐತೆ ಅಜ್ಜ, ನನ್ನಿಷ್ಟ. ನಾನು ಆಗ್ಲೇ ಮಾತು ಕೊಟ್ಟುಬಿಟ್ಟಿದೀನಿ" ಅವಳಿಗೆ ಇನ್ನೂ ರೇಗಿ ಚೆನ್ನಪ್ಪ ಸತ್ತಮೇಲೆ ತಾವುಗಳು ಪಟ್ಟ ಕಷ್ಟ, ಜಾತಿಯ ಜನ ಅವರ ಬಗ್ಗೆ ಕೊಂಚ ವಾದರೂ ಕನಿಕರ ತೋರಿಸದೆ ಹೋದುದು ಎಲ್ಲವನ್ನೂ ಒದರಿಬಿಟ್ಟಳು. ತಾತಜ್ಜ ಉತ್ತರ ಕೊಡಲಾರದೆ ಅಲ್ಲಿಂದ ಹೊರಟುಹೋದ. ನಾಲ್ಕುದಿನ ಊರಿನಲ್ಲಿ ಎಲ್ಲರ ಬಾಯಲ್ಲೂ ಅದೇ ಮಾತು, ಅದೇ ವ್ಯಂಗ್ಯ, ಅದೇ ಬಿರುಸು ಇತ್ತು. ನಂತರ ಎಲ್ಲವೂ ತಣ್ಣಗಾಯಿತು.

ಪರಶುರಾಮುನ ಆಶ್ರಯದಲ್ಲಿ ಸುಂದರಿ - ಮುನಿ ಅವರುಗಳ ನಿತ್ಯ ನರಳಿಕೆಯ ಕಷ್ಟ ತಪ್ಪಿತು. ಊಟ ಬಟ್ಟೆಯ ಕೊರತೆ ನೀಗಿತು.

ಒಂದು ದಿನ ಪರಶುರಾಮು ಸುಂದರಿಗೆ ಸಂತೋಷ ಸಮಾಚಾರ ವೊಂದನ್ನೂ ಮುಟ್ಟಿಸಿದ.

"ಊರಿಗೆ ಕಾಗ್ದ ಹಾಕಿದ್ದೆ. ಅಪ್ಪ, ಅಮ್ಮ ಒಪ್ಕೊಂಡವ್ರೆ. ನಿನಗೆ ಒಪ್ಪಿಗೆ ಆದ ಹೆಣ್ಣು ನಮಗೂ ಒಪ್ಪಿಗೆ ಅಂತ ಬರದವ್ರೆ."

ಸುಂದರಿಗೆ ಸಮಾಧಾನವಾಯಿತು. ತಲೆಯ ಮೇಲಿದ್ದ ಹೊರಲಾರದ ಹೊರೆಯೊಂದು ಇಳಿದಂತಾಯಿತು. ಇನ್ನು ಮುನಿಗೆ ಯಾವುದಾದ ರೊಂದು ಏರ್ಪಾಡು ಮಾಡಿಬಿಟ್ಟರೆ ಅಲ್ಲಿಗೆ ತಮ್ಮ ಕಷ್ಟ ಪೂರ್ಣನಿವಾರಣೆ ಯಾಯಿತು ಎಂದುಕೊಂಡಳು ಅವಳು.

ದಿನ ಕಳೆದಂತೆ ಪರಶುರಾಮ ಸುಂದರಿಯ ಮನೆಯಲ್ಲಿಯೇ ಬಂದು ನೆಲೆಸಿದ. ಸುಂದರಿಯನ್ನು ಮದುವೆಯಾಗುವ ವಿಷಯ ಊರಿನಲ್ಲೆಲ್ಲಾ ಪುಕಾರಾಗಿ ಹೋಗಿದೆ ಇನ್ನು ಇಲ್ಲೇ ಇದ್ದರೆ ಏನಂತೆ ಎಂದು ಸಮಾ ಧಾನ ತಂದುಕೊಂಡ; ಸುಂದರಿಯೂ ಬೇಡವೆನ್ನಲಿಲ್ಲ. ಪರಶುರಾಮ ನನ್ನು ಮದುವೆಯಾಗಲು ಇತ್ಯರ್ಥವಾದಂತಾದುದರಿಂದ ಸುಂದರಿ ಅವನಿಗೆ ಸಲಿಗೆ ಕೊಟ್ಟಳು, ಸ್ಥಳಕೊಟ್ಟಳು. ನಾಲ್ಕು ತಿಂಗಳಕಾಲ ಯಾವ ಯೋಚನೆಯೂ ಇಲ್ಲದೆ ಅವರ ಜೀವನ ಸುಖಸಂತೋಷಗಳಲ್ಲಿಯೇ ಕಳೆಯಿತು.

ಒಂದು ದಿನ ಇದ್ದಕ್ಕಿಂತೆಯೇ ಪೋಲೀಸಿನವರು ಬಂದು ಪರಶು ರಾಮನನ್ನು ಅರೆಸ್ಟ್ ಮಾಡಿ ಕೊಂಡೊಯ್ದರು. 'ಕರ್ನೂಲ್ ದರೋಡೆ ಮೊಖದ್ದಮೆ'ಯಲ್ಲಿ ಅಪರಾಧಿಯಾಗಿದ್ದು ತಲೆತಪ್ಪಿಸಿಕೊಂಡಿದ್ದ ಅವನನ್ನು ಕೊನೆಗೂ ಪೋಲೀಸಿನವರು ಪತ್ತೆ ಹಚ್ಚಿದರು.

ಸುಂದರಿಗೆ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಯಿತು. ಇನ್ನು ಗತಿಯೇನು ಎಂದು ಅವಳು ಕಂಗೆಟ್ಟಳು. ಬೀದಿಯಲ್ಲಿ ಜನರ ಎದುರಿಗೆ ಹೇಗೆ ಮುಖ ತೋರಿಸಿ ತಿರುಗುವುದು ಎಂಬ ಯಾತನೆ ಅವಳನ್ನು ಕಾಡತೊಡಗಿತು. ಚೌಡಮ್ಮನಲ್ಲಿ ಹೋಗಿ ತನ್ನ ನಿಜಸ್ಥಿತಿಯನ್ನು ಹೇಳಿ ಕೊಂಡಳು. ಸುಂದರಿಯ ಮುಖ ನೋಡಿ ವಿಚಿತ್ರ ನಗೆಯೊಂದನ್ನು ನಕ್ಕಳು ಚೌಡಮ್ಮ.

ಹಳ್ಳಿಯ ವೈದ್ಯ ಚೌಡಮ್ಮನ ಜೀವನವನ್ನು ನಡೆಸುತ್ತಿತ್ತು. ಎಲೆ ಮೂಲಿಕೆ, ಬೇರುನಾರುಗಳನ್ನು ಕೊಟ್ಟು ಸಣ್ಣ ಪುಟ್ಟ ಖಾಯಿಲೆಗಳನ್ನೆಲ್ಲಾ

ಅವಳು ವಾಸಿಮಾಡುತ್ತಿದ್ದಳು. ಆದರಿಂದ ಅವಳಿಗೆ ಊರಲ್ಲೂ ಸಾಕಷ್ಟು ಪ್ರಸಿದ್ಧಿ ಇತ್ತು.

ಚೌಡಮ್ಮ ಸುಂದರಿಗೆ ಯಾವುದೋ ಸೊಪ್ಪನ್ನು ಅರೆದು ರಸ ಹಿಂಡಿ ಕುಡಿಸಿದಳು. ಅನಂತರ ಮತ್ತಾವುದೋ ಬೇರನ್ನು ತಂದುಕೊಟ್ಟಳು. ಯಾವುದರಿಂದಲೂ ಸುಂದರಿಯ ಹೊಟ್ಟೆಯಲ್ಲಿದ್ದ ಗರ್ಭ ಕರಗಲಿಲ್ಲ.

ಮತ್ತೆ ನಾಲ್ಕು ತಿಂಗಳ ಕಾಲ ಅದೂ ಇದೂ ಔಷಧಗಳನ್ನು ಮಾಡುವುದರಲ್ಲೇ ಕಳೆಯಿತು. ಪರಶುರಾಮ ಕೊಟ್ಟಿದ್ದ ಅಷ್ಟಿಷ್ಟು ಹಣವೂ ಕರಗಿಹೋಯಿತು.

ಸುಂದರಿ ಮನೆಬಿಟ್ಟು ಹೊರಗೆ ಕಾಲಿಡಲು ಸಾಧ್ಯವೇ ಇಲ್ಲವಾಯಿತು. ಅವಳ ಹೊಟ್ಟೆ ಅವಳ ಪಾಪದ ಫಲವನ್ನು ಹೊತ್ತಿತ್ತು. ಮೊದಲೇ ಬಾಯಿಗೆ ಬಂದಂತೆ ಆಡುತ್ತಿದ್ದ ಜನ ಈಗ ಕೇಳಬೇಕೆ!

ಚೌಡಮ್ಮನ ಬಾಯಿಂದ ಗುಸಗುಸ ಹೊರಟ ಮಾತು ಊರಲ್ಲೆಲ್ಲಾ ವ್ಯಾಪಿಸಿತು. "ಹೀಗೂ ಉಂಟೆ, ಮಾನಗೆಟ್ಟವಳು" ಎಂದು ಜನ ವಾಚಾಮಗೋಚರವಾಗಿ ಬಯ್ಯಲು ಆರಂಭಿಸಿದರು. ಪೋಲೀ ಹುಡುಗರು ಸುಂದರಿಯ ಮನೆಯ ಮುಂದೆ ನಿಂತು ಅಸಹ್ಯಕರವಾದ ಶಬ್ದಗಳನ್ನಾಡು ವುದು, ಬಾಗಿಲು ಬಡಿಯುವುದು, ಮನೆಯ ಮೇಲೆ ಕಲ್ಲು ಎಸೆಯುವುದು ಮುಂತಾದ ಗೂಂಡಾವೃತ್ತಿಯೂ ನಡೆಯತೊಡಗಿತು.

ಸುಂದರಿಗೆ ಇನ್ನು ಆ ಊರಿನಲ್ಲಿ ಒಂದು ಗಳಿಗೆ ಇರುವುದೂ ಅಸಾಧ್ಯವೆನಿಸಿತು. ಎಲ್ಲರೂ ಅಪಹಾಸ್ಯ ಮಾಡುವವರೇ ಹೊರತು ಅನುತಾಪ ತೋರುವವರು ಒಬ್ಬರೂ ಅವಳ ಭಾಗಕ್ಕೆ ಅಲ್ಲಿರಲಿಲ್ಲ.

ಸಾಧ್ಯವಾದಷ್ಟು ಸಾಮಾನು, ಬಟ್ಟೆಬರೆಗಳನ್ನು ಗಂಟುಕಟ್ಟಿ, ಉಳಿದುವನ್ನು ಅಲ್ಲಿಯೇ ಬಿಟ್ಟು ಮುನಿಯಳನ್ನೂ ಸಂಗಡ ಕರೆದುಕೊಂಡು ಚಿಕ್ಕನಾಯಕನಹಳ್ಳಿಗೆ ವಿದಾಯ ಹೇಳಿ ಕಾಲುನಡಿಗೆಯಲ್ಲಿಯೇ ತಿಪಟೂರು ದಾರಿ ಹಿಡಿದಳು ಸುಂದರಿ.

ತಿಪಟೂರು ತಲುಪುವ ವೇಳೆಗೆ ಸುಂದರಿಗೆ ಆಯಾಸವಾಗಿ ಹೊಟ್ಟೆ ಯಲ್ಲಿ ಛಳುಕು ಕಾಣಿಸಿಕೊಂಡಿತು. ಛತ್ರದ ಕೋಣೆಯೊಂದರಲ್ಲಿ ತಮ್ಮ ಸಾಮಾನುಗಳನ್ನೆಲ್ಲ ಇಟ್ಟು ಅಕ್ಕ ತಂಗಿಯರಿಬ್ಬರೂ ಆಸ್ಪತ್ರೆಯ ಕಡೆಗೆ

ನಡೆದರು. ಅಂದೇ ಸುಂದರಿಯ ಬಸಿರಿಳಿಯಿತು. ಸತ್ತ ಮಗುವೊಂದಕ್ಕೆ ಅವಳು ಜನನ ಕೊಟ್ಟಳು. ಈ ಮಧ್ಯೆ ಗುರುತುಪರಿಚಿತರಿಲ್ಲದ ಊರಿನಲ್ಲಿ ಅಕ್ಕನ ಶುಶ್ರೂಷೆಗೆ ಹೆಗಲುಗೊಟ್ಟು ನಿಂತವಳೆಂದರೆ ಮುನಿ.

ಒಂದು ದಿನ ಎಲಿಫೆಂಟ್ ರಾಣಿ ಮುನಿಯುಳನ್ನು ಭೇಟಿಮಾಡಿದಳು. ಅವಳನ್ನು ಪುಸಲಾಯಿಸಿ ತನ್ನ ಮನೆಗೆ ಕರೆದುಕೊಂಡು ಹೋದಳು. ಅವಳಲ್ಲಿ ಮರುಕದ ನಟನೆ ಮಾಡಿದಳು. ಏನೂ ಅರಿಯದ ಮುಗ್ಧೆ ಮುನಿ ಎಲಿಫೆಂಟ್‌ರಾಣಿಯ ಮಾತುಗಳಿಗೆ ಬೆರಗಾದಳು.

"ನೀನ್ಯಾಕೆ ಇಂಗಾನಾ ಪಾಡುಪಡಬೇಕು. ನೀನು ಕೇಳಿ ಕೇಳಿ ದಷ್ಟು ಅಣಕೊಡೋರು ಚಿಕ್ತಾರೆ. ಆಣ ಒಂದಿದ್ರೆ ಎಂಗ್ಬೇಕಾನಾ ಸುಖ ವಾಗಿರಬೋದು. ನಿಮ್ಮ ಅಕ್ಕನ ಸಿಸ್ರೂಸೇನೂ ಮಾಡಬೌದು."

ಮುನಿ ಯೋಚಿಸಿದಳು. ಅಕ್ಕನೇ ಈಗ ಅವಳ ಜೀವನದ ಜ್ಯೋತಿ. ಅವಳನ್ನು ಹೇಗಾದರೂ ಉಳಿಸಿಕೊಳ್ಳಬೇಕು. ತನ್ನ ಮಾನ, ತನ್ನ ಪ್ರಾಣ ಹೋದರೂ ಚಿಂತೆಯಿಲ್ಲ. ಅಕ್ಕನ ಜೀವದ ಮುಂದೆ ಅವು ತನಗೆ ತೃಣಸಮಾನ. ಈಗ ಅಕ್ಕನನ್ನು ಕಾಪಾಡಿಕೊಳ್ಳಬೇಕಾದರೆ ತಾನೂ ಅವಳ ಸೇವೆ ಮಾಡಲು ಜೀವ ಉಳಿಸಿಕೊಂಡಿರಬೇಕಾದರೆ ಎಲಿಫೆಂಟ್‌ರಾಣಿ ತೋರಿಸಿದ ಮಾರ್ಗ ಒಂದೇ ಇರುವುದು ಎಂದು ಅವಳಿಗನ್ನಿಸಿತು. ಮುನಿ ತನ್ನ ಮಾನವನ್ನು ಬಲಿಗೊಟ್ಟಳು. ಹೊಸ ಹುರುಪಿನಲ್ಲಿ ಹಲವಾರು ತರುಣರು ಅವಳ ಸಂಗಸುಖವನ್ನು ಪಡೆದರು. ಅದರಿಂದ ಹಣವೂ ದೊರೆಯಿತು. ಎಲಿಫೆಂಟ್‌ರಾಣಿಗೂ ಲಾಭ ದೊರೆಯಿತು.

ಸುಂದರಿ ಚೇತರಿಸಿಕೊಂಡು ಆಸ್ಪತ್ರೆಯಿಂದ ಹೊರಬೀಳುವುದಕ್ಕೆ ಒಂದು ತಿಂಗಳ ಕಾಲ ಹಿಡಿಯಿತು. ಮುನಿ ಅಕ್ಕನನ್ನು ಎಲಿಫೆಂಟ್ ರಾಣಿಯ ಮನೆಗೇ ಕರೆತಂದಳು. ಮನೆಗೆ ಬಂದ ನಂತರ ಸುಂದರಿಗೆ ತಂಗಿಯ ಆ ನೂತನ ಜೀವನದ ಗುಟ್ಟು ಅರ್ಥವಾಯಿತು. ದುಃಖ ಒತ್ತರಿಸಿ ಬಂದು ಅವಳು ಕಣ್ಣೀರು ಹೊಳೆ ಹರಿಸಿದಳು. ಆದರೆ ಬೇರೆ ಉಪಾಯವಿರಲಿಲ್ಲ. ತಂಗಿಯ ಮಾರ್ಗವನ್ನೇ ಅಕ್ಕನೂ ಅನುಸರಿಸ ಬೇಕಾಯಿತು. ಹಿಡಿತುತ್ತಿಗಾಗಿ ದೇಹವನ್ನು ಅವರಿವರ ಸೇವೆಗೆ ಮುಡಿ ಪ್ಪಿಟ್ಟು, ರೂಪಯೌವ್ವನಗಳನ್ನು ಉಣಬಡಿಸಬೇಕಾಯಿತು.

ದಿನ ಕಳೆದಂತೆಲ್ಲಾ ಅಕ್ಕತಂಗಿಯರಿಬ್ಬರಿಗೂ ದೇಹ ಸವೆಸುತ್ತಿರುವುದು ತಮಗಾಗಿಯಲ್ಲ, ಎಲಿಫೆಂಟ್‌ರಾಣಿಗಾಗಿ ಎಂಬುದು ತಿಳಿಯಿತು. ಈ ಮಧ್ಯೆ ಬೇಲೂರಿನ ಪುಟ್ಟತಾಯಿಯೂ ಇವರನ್ನು ತನ್ನ ಮನೆಗೆ ಕರೆದುಕೊಂಡು ಹೋಗಲು ಶ್ರಮಿಸಿದಳು.

ಪುಟ್ಟತಾಯಿಯ ಮನೆಯಲ್ಲೂ ಅವರಿಗೆ ಅದೇ ಅನುಭವವಾಯಿತು. ಬಂದ ಹಣವೆಲ್ಲಾ ಪುಟ್ಟತಾಯಿಯ ಗಲ್ಲ ಸೇರಿತು. ಸುಂದರಿಗೆ ಇದನ್ನೆಲ್ಲಾ ನೋಡಿ ಮನಸ್ಸಿಗೆ ರೋಸಿತು. ತಾವು ದುಡಿಮೆಮಾಡಿ ಇವರಿಗೇಕೆ ಇಕ್ಕಬೇಕು ಎನ್ನಿಸಿತು. ತಂಗಿಯನ್ನೂ ಕರೆದುಕೊಂಡು ಬೇರೆ ಮನೆಯನ್ನೇ ಮಾಡಿದಳು ಸುಂದರಿ. ಕೆಲವು ದಿನ ವ್ಯಾಪಾರ ಚೆನ್ನಾಗಿಯೇ ನಡೆಯಿತು. ಆದರೆ ಎಲಿಫೆಂಟ್‌ರಾಣಿ, ಪುಟ್ಟತಾಯಿ ತಮಗಾದ ನಷ್ಟಕ್ಕಾಗಿ ಹೊಟ್ಟೆ ಉರಿದುಕೊಂಡರು. ಸುಂದರಿ – ಮುನಿಯರ ಮೇಲೆ ಅಲ್ಲಸಲ್ಲದ ಕಟ್ಟು ಕಥೆಗಳನ್ನು ಪ್ರಚಾರ ಮಾಡಿದರು—

"ಅಡಾಸ್ ಉಡುಗೀರು. ಮೈತುಂಬ ತುಂಬೈತೆ ರ‍್ವಾಗ. ಮುಖ ಸಂದಾಕ್ಕೈತೆ ಅಂತ ಹೋದೋನು ಅಂಗೇ ಮಸಾಣದ ದಾರಿ ಇಡೀಬೇಕು."

ಅನುಭವಸ್ಥರೂ, ಬಹಳ ಕಾಲದಿಂದ ಆ ಊರಿನಲ್ಲಿ ಕಸುಬು ಮಾಡುತ್ತಿರುವವರೂ ಆದ ಅವರ ಮಾತಿನಲ್ಲಿ ಗಿರಾಕಿಗಳಿಗೆ ನಂಬಿಕೆ ಹುಟ್ಟಿತು. ಸುಂದರಿ – ಮುನಿ ಇವರುಗಳಿಗೆ ಬರುತ್ತಿದ್ದ ವರಮಾನ ಕಡಿಮೆಯಾಯಿತು, ಮಾನ ಮಾರಿಕೊಂಡರೂ ಸುಖವಿಲ್ಲದಾಯಿತು. ಹೇಗೋ ಆಗೊಬ್ಬ, ಈಗೊಬ್ಬ ಬರುತ್ತಿದ್ದ ಗಿರಾಕಿಗಳಿಂದ ತೃಪ್ತಿಪಟ್ಟುಕೊಳ್ಳಬೇಕಾಯಿತು.

ಸುಂದರಿ - ಮುನಿ ತಿಪಟೂರಿನಲ್ಲಿ ಕಸುಬು ಆರಂಭಿಸಿ ಎರಡು ವರ್ಷ ಕಳೆದಿತ್ತು. ಕಿಟ್ಟಪ್ಪ ತನ್ನ 'ರಸಿಕ ವಿಲಾಸಿನಿ ನಾಟಕ ಮಂಡಲಿ'ಯ ಕ್ಯಾಂಪನ್ನು ತಿಪಟೂರಿನಲ್ಲಿ ಹಾಕಿದ. ನಾಟಕದೊಂದಿಗೆ ಶಿಬ್ಬೊಟ್ಟಿಯೂ ತಿಪಟೂರಿಗೆ ಬಂದಿದ್ದ.

ಒಂದು ದಿನ ಸುಂದರಿ - ಮುನಿ ಇಬ್ಬರೂ ನಾಟಕ ನೋಡಲು ಹೋಗಿದ್ದರು. ಅವರನ್ನು ಕಂಡ ಶಿಬ್ಬೊಟ್ಟಿಗೆ ಆಶ್ಚರ್ಯವಾಯಿತು. ಸುಂದರಿಗಂತೂ ಅವನಿಗೆ ತನ್ನ ಮುಖ ತೋರಿಸುವುದಕ್ಕೆ ನಾಚಿಕೆಯೆನ್ನಿ

ಸಿತು. ಶಿಬ್ಬೊಟ್ಟಿ ನಾಟಕ ಮುಗಿದ ನಂತರ ಅದೇ ರಾತ್ರಿ ಸುಂದರಿ-ಮುನಿಯರೊಂದಿಗೆ ಅವರ ಮನೆಗೆ ಬಂದು ಅವರ ಜೀವನದ ದಾರುಣ ಕಥೆಯನ್ನು ಕೇಳಿದ. ಅವನಿಗೂ ದುಃಖವೆನ್ನಿಸಿತು. ಎಲ್ಲವೂ ಕೈಮಿಂಚಿ ಹೋಗಿದ್ದುದರಿಂದ ಅವನು ನಿರುಪಾಯನಾಗಿ ಸುಮ್ಮನಾಗಬೇಕಾಯಿತು.

ತಿಪಟೂರು ಕ್ಯಾಂಪಿನಲ್ಲಿ ನಾಟಕ ಕಳೆಗಟ್ಟಲಿಲ್ಲ. ಕಿಟ್ಟಪ್ಪ ಅಲ್ಲಿ ಇಲ್ಲಿ ಸಾಲಮಾಡಿ ಹೇಗೋ ಕೆಲವು ದಿನ ತೂಗಿಸಿದ. ಆದರಿಂದ ಸಾಲಗಾರರ ಬಾಧೆಯನ್ನು ಮೈಮೇಲೆ ತಂದು ಕೊಂಡಂತಾಯಿತು ಅಷ್ಟೆ.

ಥಿಯೇಟರು ಬಾಡಿಗೆ ಬಾಕಿ ಪೂರ್ತಿ ಫೈಸಲ್‌ಮಾಡಿದಲ್ಲದೆ ನಾಟಕ ಆಡಲು ಅವಕಾಶ ಕೊಡುವುದಿಲ್ಲವೆಂದು ಕೃಷ್ಣಪ್ಪ ಪಟ್ಟುಹಿಡಿದು ಥಿಯೇಟರಿಗೆ ಬೀಗ ಹಾಕಿಸಿದ. ಪರದೆ, ಡ್ರಸ್ಸು, ವಾದ್ಯಸಾಮಗ್ರಿ, ಎಲೆಕ್ಟ್ರಿಕ್ ಸಾಮಾನುಗಳೆಲ್ಲವೂ ಥಿಯೇಟರಿನ ಒಳಗೇ ಸೇರಿಕೊಂಡವು. ಬಾಕಿ 'ಚುಕ್ತಾ'ಮಾಡಿ ಸಾಮಾನು ತೆಗೆದುಕೊಂಡು ಹೋಗಬಹುದು ಎಂದು ಖಂಡಿತವಾಗಿ ಹೇಳಿಬಿಟ್ಟ ಕೃಷ್ಣಪ್ಪ. ಕಿಟ್ಟಪ್ಪನಿಗೆ ಬೇರೇ ಮಾರ್ಗವೇ ಇರಲಿಲ್ಲ. ಕಂಪನಿಯ ಜನರೊಂದಿಗೆ ಆ ಊರು ಬಿಡಬೇಕಾಯಿತು. ನಾಟಕದ ಸಾಮಾನುಗಳನ್ನು ಅಲ್ಲಿಯೇ ಬಿಟ್ಟು, ಇನ್ನಿತರ ಸಾಲಗಾರರಿಗೆ ಮುಂದಿನ ಕ್ಯಾಂಪಿನಲ್ಲಿ ಹೇಗಾದರೂ ಅವರ ಸಾಲ ಇಟ್ಟುಕೊಳ್ಳುವುದಿಲ್ಲವೆಂದು ಭರವಸೆಯ ಮಾತು ಹೇಳಿ ಅವನು ಗಂಟುಕಟ್ಟಿದ.

ಶಿಬ್ಬೊಟ್ಟಿ ತಿಪಟೂರಿನಿಂದ ಹೊರಡುವ ಮುನ್ನ ಸುಂದರಿಯನ್ನು ನೋಡಲು ಅವಳ ಮನೆಗೆ ಹೋದ. ಆ ಹೊತ್ತು ಸುಂದರಿ - ಮುನಿ ಎಲ್ಲೋ ಹೊರಗೆ ತಿರುಗಾಟಕ್ಕೆ ಹೋಗಿದ್ದರು. ಮನೆಗೆ ಬೀಗ ಹಾಕಿದ್ದಿತು ಶಿಬ್ಬೊಟ್ಟಿಗೆ ನಿರಾಶೆಯಾಯಿತು. ಆದರೆ ವಿಧಿಯಿಲ್ಲದೆ ಅವನು ಅವರನ್ನು ನೋಡದೆಯೇ ಊರುಬಿಟ್ಟು ಹೊರಡಬೇಕಾಯಿತು.

ಅವನು ಮತ್ತೆ ತಿಪಟೂರಿಗೆ ಹೋದದ್ದೂ, ಸುಂದರಿ - ಮುನಿ ಅವನೊಂದಿಗೆ ತಿಪಟೂರು ಬಿಟ್ಟು ಬೆಂಗಳೂರಿನಲ್ಲಿ ಬೀಡು ಮಾಡಲು ಹೊರಟುದೂ ಆದಾದ ಎರಡು ವರ್ಷಗಳ ನಂತರ.

೨೧

"ನೀವಿಬ್ರೂ ಯಾಕೆ ನಮ್ಮ ನಾಟಕದ ಕಂಪನೀಲೇ ಇದ್ಬಿಡ್ಬಾರ್ದು ಹಾಯಂತ. ಸ್ತ್ರೀಪಾರ್ಟುಗಳ್ನ ನೀವೇ ಮಾಡಬಹುದು. ಕೈತುಂಬ ಸಂಬಳಾನೂ ಕೊಡ್ತೀನೆ," ಕಿಟ್ಟಪ್ಪ ಸುಂದರಿ–ಮುನಿಯರಿಗೆ ಆಸೆ ತೋರಿಸಿ ಮಾತನಾಡಿದ.

"ನಾವು! ಪಾರ್ಟು ಮಾಡೋದಾ? ಬಿಡಪ್ಪಾ ಅವೆಲ್ಲಾ ನಮ್ಮ ಕೈಲೆಲ್ಲಾಗ್ತದೆ" ಸುಂದರಿ ಹೇಳಿದಳು.

"ಯಾಕೆ ಸಾಧ್ಯವಾಗೋಲ್ಲ. ಮನಸ್ಸು ಮಾಡಿದರೆ ಎಲ್ಲಾ ಸಾಧ್ಯ ಆಗ್ತದೆ"

"ಆದರೂ........ಬಣ್ಣ ಬಳ್ಕೊಂಡು ಅಷ್ಟೊಂದು ಜನದ ಎದುರಿಗೆ ಕುಣಿಯೋದು........ಖಂಡಿತ ನಮ್ಕಿಂದ ಆಗಾಕಿಲ್ಲ."

"ನಿಮ್ಗೂ ಹೊಟ್ಟೆ ಕಳೆದು ಅನುಕೂಲ ಆಗುತ್ತೆ. ನಮ್ಗೂ ಒಳ್ಳೆ ಸ್ತ್ರೀಪಾರ್ಟಿನೋರು ಸಿಕ್ದಂತೆ ಆಗುತ್ತೆ," ಕಿಟ್ಟಪ್ಪ ಆಸೆಯ ಬಲೆ ಬೀಸಿದ.

ಸುಂದರಿ ಮಾತನಾಡಲಿಲ್ಲ. ಮುನಿ ಯಾವ ಮಾತಿಗೂ ಹೋಗದೆ ಸುಮ್ಮನೆ ಕುಳಿತಿದ್ದಳು.

"ನಿಮ್ಮ ತಂದೇನೂ ಹಳ್ಳೀಲಿ ನಾಟಕ ಕಲಿಸೋ ಮೇಷ್ಟ್ರಾಗಿದ್ದರು ಅಂತ ಶಿಬ್ಬೊಟ್ಟೆ ಹೇಳಿದ" ಮತ್ತೆ ಕಿಟ್ಟಪ್ಪನೇ ಮಾತಿಗೆ ಪ್ರಾರಂಭಿಸಿದ.

"ಹೌದು."

"ಅಂದ ಮೇಲೆ ನಾಟಕ ನಿಮ್ಮ ಮನೆತನಕ್ಕೆ ಒಲಿದು ಬಂದಿರ ಬೇಕು."

"ನಮ್ಮ ತಂದೆಯವರಿಗೆ ಮಾತ್ರ ಅದೊಂದು ಹುಚ್ಚು."

"ಹುಚ್ಚು ಅನ್ಬೇಡಿ ಅದನ್ನ; ನಾಟಕದ ಮೂಲಕ ಮಾಡುವ ಅದ್ಭುತ ಜನಸೇವೆ, ದೇಶಸೇವೆಯನ್ನ. ಎಲ್ಲ ದೇಶಗಳ ಚರಿತ್ರೆಯನ್ನೂ

ತೆಗೆದುಕೊಂಡು ನೋಡಿ. ನಾಟಕ ಕಲೆಗೆ ಒಂದು ವಿಶಿಷ್ಟ ಸ್ಥಾನವಿದೆ. ಅದರಲ್ಲೂ ನಮ್ಮ ದೇಶದಲ್ಲಿ ಅನಾದಿಕಾಲದಿಂದಲೂ ನಾಟಕಗಳಿಗೆ ಜನ ಮನ್ನಣೆ ಇದೆ."

"ಹಾಗಿದ್ದೂ ನಿಮ್ಮ ನಾಟಕಗಳಿಗೇಕೆ ಸರಿಯಾಗಿ ಕಲೆಕ್ಷನ್ನೇ ಆಗಲ್ಲ - ಅದೂ ಇಂಥ ದೊಡ್ಡ ಪಟ್ಟಣದಲ್ಲಿ."

"ನಮ್ಮಲ್ಲಿ ಕೆಲವು ನ್ಯೂನತೆಗಳಿವೆ. ಅವನ್ನ ಸರಿಪಡಿಸಿಕೊಂಡರೆ ಕಲೆಕ್ಷನ್ನೇನು ಬಾಚಿಬಿಡಬಹುದು."

"ಯಾಕೆ, ನಿಮ್ಮ ಕಂಪನಿಯೋರೂ ಚೆನ್ನಾಗೇ ನಾಟಕ ಗಳ್ನಾಡ್ತಾರಲ್ಲ."

"ಆಡ್ತಾರೆ. ಇಲ್ಲ ಅನ್ನಲ್ಲ. ಜನರ ಮನಸ್ಸು ಬಹಳ ವಿಚಿತ್ರ. ಅದನ್ನ ಅನುಸರಿಸಿ ನಡೆದರೇನೇ ನಮ್ಮ ನಾಟಕ ಕಳೆಕಟ್ಟಬೇಕಾದರೆ. ಅದಿಲ್ಲದೆ ನಾವು ಎಷ್ಟೇ ಚೆನ್ನಾಗಿ ನಾಟಕ ಆಡಿದರೂ ಅದು ಸಪ್ಪೆ ಸಪ್ಪೆ ಅನ್ನಿಸುತ್ತೆ."

"ಅಂದರೆ ?"

"ಅಂದರೆ ನೋಡಿ, ಈಗ ನಮ್ಮಲ್ಲಿ ಗಂಡಸರು ಹೆಂಗಸರ ಪಾರ್ಟು ಮಾಡ್ತಾರೆ. ಹೆಂಗಸರ ಉಡಿಗೆತೊಡಿಗೆಗಳನ್ನ ಹಾಕ್ಕೊಂಡ್ರೂ ಅವರು ಗಂಡಸರು ಅನ್ನೋದು ಗೊತ್ತಾಗಿ ಹೋಗಿಬಿಡುತ್ತೆ ಜನಕ್ಕೆ. ನಾಟಕ ಕೃತಕವಾಗಿ ತೋರುತ್ತೆ. ಪ್ರೇಕ್ಷಕರ ಮನಸ್ಸಿನ ಮೇಲೆ ನಿಜವಾದ ಪರಿಣಾಮ ಉಂಟುಮಾಡಬೇಕಾದರೆ ಹೆಂಗಸರ ಪಾತ್ರಗಳನ್ನ ಹೆಂಗಸರೇ ನಿರ್ವಹಿಸಬೇಕು . . . ಅಲ್ಲದೆ ಅದೂ ಒಂದು ಅಟ್ರ್ಯಾಕ್ಷನ್ ಜನಕ್ಕೆ"

"ಈಗ ಸ್ಥಾನಂ ನರಸಿಂಹರಾವ್ ಪಾರ್ಟೀಲಿ ಸ್ಥಾನಮ್ಮೆ ಹೆಂಗಸರ ಪಾರ್ಟು ಮಾಡ್ತಾರಲ್ಲ. ಅವರೂ ಗಂಡಸೇ ಅಲ್ಲವೇ ? ಅಲ್ಲಿ ಭರ್ತಿ ಕಲೆಕ್ಷನ್ ಆಗತ್ತೆ."

"ಅದು ಬೇರೆ ವಿಚಾರ. ಹೊರಗಿನವರು ಅಂದರೆ ನಮ್ಮ ಜನ ಎಲ್ಲಿಲ್ಲದ ಉತ್ಸಾಹ ತೋರಸ್ತಾರೆ. ತೆಲುಗರು, ತಮಿಳರ ಕಂಪ್ನಿಗಳು ಯಾವುದು ಬಂದರೂ ಸರಿ ಕುರಿ ನುಗ್ಗಿದ ಹಾಗೆ ನುಗ್ತಾರೆ. ಅದೇ

ನಮ್ಮವರು ಎಷ್ಟೇ ಶ್ರಮ ತಗೊಂಡು ಅವರಿಗಿಂತ ಉತ್ತಮವಾಗಿ ನಾಟಕ ಆಡಲಿ, ಜನ ತಿರುಗಿ ಸಹ ನೋಡಲ್ಲ. ಹಿತ್ತಲಗಿಡ ಮದ್ದಲ್ಲ."

ಆ ಮಾತಿಗೆ ಸುಂದರಿ ಏನೊಂದು ಜವಾಬು ಕೊಡಲಾರದೆ ಸುಮ್ಮನಾದಳು. ಕಿಟ್ಟಪ್ಪನೇ ತುಸುಹೊತ್ತು ಬಿಟ್ಟು ಮಾತು ಮುಂದುವರಿಸಿದ.

"ಅದಕ್ಕೇ ನಾನು ಹೇಳಿದ್ದು. ನೀವು ಕಸುಬು ಗಿಸುಬು ಕಟ್ಕೊಂಡು ಒದ್ದಾಡೋದಕ್ಕಿಂತ ಕಂಪ್ನೀಲೇ ಇದ್ಬಿಡಿ, ಹೆಂಗಸರು ಪಾರ್ಟು ಮಾಡ್ತಾರೆ ಅಂದ್ರೆ ಚೆನ್ನಾಗಿ ಕಲೆಕ್ಷನ್ನೂ ಆಗುತ್ತೆ. ನೀವೂ ಸುಖವಾಗಿರಬಹುದು."

"ಅದೇನೋ ಸರಿ. ಆದರೆ . . ."

"ಏನು ಆದರೆ . . . ಹೇಳಿ ಬಾಯಿಬಿಟ್ಟು ನಿಮ್ಮ ಅನುಮಾನ ಏನಿದ್ದರೂ."

"ಏನಿಲ್ಲ........ನಮಗೆ ಪಾರ್ಟುಗೀರ್ಟು ಮಾಡಿ ಯಾವಾಗ್ಲೂ ಅಭ್ಯಾಸಾನೇ ಇಲ್ವಲ್ಲ."

"ಅದಕ್ಕೇನು, ನಾಕು ದಿವಸದಲ್ಲಿ ತಯಾರು ಮಾಡಿಬಿಡ್ತೀನಿ ನೀವು ಹೂ ಅನ್ನಿ. ಬಾಕಿ ವಿಚಾರಾ ಎಲ್ಲಾ ನಾನು ನೋಡ್ಕೋತೇನೆ."

ಕಿಟ್ಟಪ್ಪನ ಮಾತಿಗೆ ಒಪ್ಪಿ ನಾಟಕದಲ್ಲಿ ಬಣ್ಣ ಬಳಿದುಕೊಂಡು ಕುಣಿಯುವುದಕ್ಕೆ ಇಳಿಯುವುದೇ, ಹೇಗೆ ಎಂದು ಸುಂದರಿ ಯೋಚನಾ ಗ್ರಸ್ತಳಾದಳು.

"ಏನು ಯೋಚನೆಮಾಡ್ತಾ ಕುಳಿತುಬಿಟ್ಟರಲ್ಲ. ಯಾವುದನ್ನೂ ಇತ್ಯರ್ಥವಾಗಿ ಹೇಳಿಬಿಡಿ. ನಾನು ಈ ವಿಚಾರ ಪ್ರಸ್ತಾಪ ಮಾಡಿದ್ದು ನಮಗೂ ಉಪಕಾರ ಆಗ್ಲಿ ನಿಮಗೂ ಉಪಕಾರ ಆಗ್ಲಿ ಅಂತ" ಸುಂದರಿಯ ಮನಸ್ಸನ್ನು ಅತ್ತ ಸೆಳೆಯುವುದಕ್ಕಾಗಿ ಹೇಳಿದ ಕಿಟ್ಟಪ್ಪ.

"ನನಗೆ ನಾಳೇವರ್ಗೂ ಪುರಸತ್ತು ಕೊಡಿ. ಯಾವುದನ್ನೂ ಚೆನ್ನಾಗಿ ಯೋಚ್ನೆ ಮಾಡಿ ಹೇಳ್ತೇನೆ"

—ಎಂದಳು ಸುಂದರಿ, 'ಹ್ಞೂ' ಎನ್ನಲು ಮನಸ್ಸು ಬಂದಿದ್ದರೂ ಆತುರ ತೋರಿಸಿದರೆ ಅಗ್ಗವಾಗುತ್ತದೆಂದುಕೊಂಡು.

"ಹಾಗೇ ಮಾಡಿ, ನಾಳೆ ಮಧ್ಯಾಹ್ನ ನಾನು ಬರ್ತೇನೆ. ಅಷ್ಟರಲ್ಲಿ ಯಾವುದನ್ನೂ ತೀರ್ಮಾನಿಸಿ ಹೇಳಿ" ಎಂದು ಕಿಟ್ಟಪ್ಪ ಹೊರಟುಹೋದ.

ಅವನು ಹೋಗುತ್ತಲೂ, ಅದುವರೆಗೂ ಕಮಕ್ ಕಿಮಕ್ ಎನ್ನದೆ ಸುಮ್ಮನೆ ಕುಳಿತಿದ್ದ ಮುನಿ ಅಕ್ಕನ ಮುಖ ನೋಡಿ—

"ಇವನು ತರಲೆ ಆಸಾಮಿ ಅಂತ ಶಿಬ್ಬೊಟ್ಟಿ ಹೇಳಿದ. ಇಂಥವನು ನಮ್ಮನ್ನ ಸರಿಯಾಗಿ ನೋಡ್ಕೊಳ್ತಾನೆ ಅಂತ ಏನು ಖಾತ್ರಿ ಅಕ್ಕಯ್ಯ" ಎಂದಳು.

"ಏನೋ ನಾಲ್ಕು ಕಾಸು ಬರೋದಾದ್ರೆ ಯಾಕೆ ಬಿಡೋಣ. ಹೇಗೂ ಬೀದೀಗೆ ಬಿದ್ದಿದೀವಿ."

"ಹಾಗಾದ್ರೆ ನಾಟಕದಲ್ಲಿ ಪಾರ್ಟುಮಾಡೋಕೆ ಒಪ್ಕೋಳ್ತೀಯಾ ?"

"ಹ್ಞಾ. ಎಲ್ಲಾ ಖಂಡೀಷನ್ನಾಗಿ ಮಾತ್ನಾಡಿ ಒಪ್ಕೋಳ್ಳೋದು. ಅದಾಗೇ ಬಂದಿರೋ ಅವಕಾಸಾನ ಯಾಕೆ ಕಳ್ಕೋಳೋದು ಹೇಳು. ಅಲ್ದೆ ನಾವು ಪಾರ್ಟು ಮಾಡೋಕೆ ಹೊರಟ್ರೆ ನಾಕ್ಜನದ ಕಣ್ಣಿಗೂ ಬೀಳ್ತೀವಿ. ಆ ರೀತೀಲಾದ್ರೂ ನಮಗೆ ಒಳ್ಳೇವ್ರು ಸಿಕ್ಕಬಹುದು. ಶಿಬ್ಬೊಟ್ಟೀನೂ ಒಂದು ಮಾತು ಕೇಳಿ ನೋಡೋಣ. ಅವ್ನೂ 'ಹ್ಞಾ' ಅಂತಂದ್ರೆ ಒಪ್ಕೊಂಡ್ಬಿಡೋದು",

'ನಿನ್ನಿಷ್ಟ ಅಕ್ಕಯ್ಯ' ಎಂದು ಹೇಳಿ ಮುನಿ ಸುಮ್ಮನಾದಳು.

ಕೊಂಚ ಹೊತ್ತಿನಲ್ಲೆ ಶಿಬ್ಬೊಟ್ಟಿಯೂ ಬಂದ. ಸುಂದರಿ ಅವನಿಗೆ ವಿಚಾರವನ್ನೆಲ್ಲಾ ಹೇಳಿದಳು. ಶಿಬ್ಬೊಟ್ಟಿ ಹೇಳಿದ—

"ಒಪ್ಕೋಬೌದು. ಎಂಗಸರು ಪಾರಟ್ ಮಾಡ್ತಾರೆ ಅಂದ್ರೆ ಅಣಾನೂ ಸುರೀತದೆ. ಇಷ್ಟು ಸಂಬಳ ಅಂತ ಮಾತಾಡಿ ಮೂರ್ತಿಂಗಳ್ದು ಅಡ್ವಾನ್ಸ್ ತಗೊಂಡ್ಬಿಡಬೇಕು. ಅಲ್ದೆ........"

"ಏನು ಅಲ್ದೆ ? ಅಷ್ಟಕ್ಕೇ ಮಾತು ನಿಲ್ಲಿಸಿಬಿಡ್ತೀಯಲ್ಲ ?"

"ಇನ್ನೂ ವಂದು ವಿಚಾರ ಐತೆ ಇದರಾಗೆ."

"ಏನದು ?"

"ಅವನಿಗೆ ಮುನಿ ಮೇಲೆ ಕಣ್ಣು ಬಿದ್ದೈತೆ. ಪಾರ್ಟಿಗೂ ಆಯ್ತು, ತನಗೂ ಆಯ್ತು ಅಂತ ಏಟು ಆಕವ್ನೆ."

ಸುಂದರಿ ಮುನಿ ಮುಖ ನೋಡಿದಳು. ಮುನಿ ಯಾವ ಭಾವನೆಯನ್ನೂ ಪ್ರಕಟಿಸದೆ ನಿರ್ವಿಕಾರವಾಗಿ ಕುಳಿತಿದ್ದಳು.

"ಅಂಗೂ ಆಗ್ಲೇಳು. ನಮ್ಮ ಕೈಗೆ ಅಣ ಬಂದಿದ್ದೆಲ್ಲ ಒಂದು."

"ಅಂತೂ ಅಣಕ್ಕಾಗಿ ಏನು ಬೇಕಾರಾ ಮಾಡಬೌದು ಅನ್ನು"

"ಈಗ ಮಾಡದೆ ಬಿಟ್ಟಿರೋದು ಏನೈತೆ ನಾವು. ಯಾವತ್ತು ಕಸುಬಿಗೆ ಇಳದ್ವೋ ಆವತ್ತೇ ನಮ್ದೆಲ್ಲಾ ಮುಗದೋಯ್ತು."

"ಅದು ಸರಿ. ಇನ್ನು ಮುನೀನೇ ಕಂಪ್ನೀಗೆ ಯಜಮಾನಿ ಆಗೋಯ್ತಾಳೆ" ಮುನಿಯತ್ತ ಮುಖ ತಿರುಗಿಸಿ ನಗೆಯಾಡಿದ ಶಿವ್ಬೋಟ್ಟಿ.

"ನಂಗೆ ಯಾವ ಯಜಮಾನ್ತ್ನಾನೂ ಬೇಡಾಣ್ಣ. ಅಕ್ಕಯ್ಯ ಎಂಗೆ ಏಳ್ತಾಳೋ ಅಂಗೆ ಕೇಳ್ಕೊಂಡಿರೋದು ಅಷ್ಟೇ ಸಾಕು."

ತಂಗಿಯ ಆ ಮಾತು ಕೇಳಿ ಹೊಟ್ಟೆಯಲ್ಲಿ ಚೂರಿ ಇರಿದಂತಾಯಿತು ಸುಂದರಿಗೆ. ಎಂತಹ ಮುಗ್ಧ ಹುಡುಗಿಗೆ ಎಂತಹ ದುರವಸ್ಥೆ ಎಂದು ಅವಳು ನೊಂದುಕೊಂಡಳು. ಅಕ್ಕನ ದುಗುಡವನ್ನು ಕಂಡುಕೊಂಡು ಮುನಿ ಮಾತನ್ನು ಬೇರೇ ಕಡೆಗೆ ತಿರುಗಿಸಿದಳು—

"ಯಾಕಣ್ಣ, ನಿಮ್ಮ ಕಂಪ್ನೀಗೆ ಸರಿಯಾಗಿ ಕಲೆಕ್ಸನ್ನೇ ಆಗಾಕಿಲ್ವಂತೆ?"

"ನಾನು ಮೊದ್ಲೆ ಏಳಿರ್ನಿಲ್ವ. ಪುರಾಣದ ನಾಟಕಗೋಳು ಈ ಊರಿನ ಜನಕ್ಕೆ ಇಡಸಾಕಿಲ್ಲ ಅಂತ."

"ಗುಬ್ಬಿ ಥಿಯೇಟರ್ನಾಗೆ ನಾಟಕ ಆಡ್ತಾ ಅವ್ರಲ್ಲ, ಅದೆಂಥೋರೋ ಥಾನಂ ನರಸಿಮ್ಹರಾವು ಅಂತ. ಅವರ ಕಂಪ್ನೀವ್ರೂ ಪುರಾಣದ ನಾಟಕಗಳ್ನೇ ಆಡ್ತಾರೆ. ಅವರಿಗೆ ಕಲೆಕ್ಸನ್ ಸಂದಾಕೇ ಆಯ್ತದಂತಲ್ಲ?"

"ಅವರ್ಗೂ ನಮುಗೂ ಸರೀನಾ. ಅವ್ರು ಒಳ್ಳೇ ಎಸರಾದ ಕಂಪ್ನಿಯೋರು."

"ಆವಯ್ಯ ಎಂಗ್ಸಿನ ಪಾರ್ಟು ಮಾಡ್ತಾನಲ್ಲ. ಥೇಟ್ ಎಂಗ್ಸೇ. ಥಿಯೇಟರು ತುಂಬ ಜನ ಒಳ್ಳೆ ಪರಷೆ ಸೇರ್ದಂಗೆ ಸೇರಿದ್ರು" ಮಧ್ಯೆ ಬಾಯಿಹಾಕಿ ಸುಂದರಿ ಹೇಳಿದಳು.

"ಅವರು ಬಂದಿದ್ರಿಂದ್ಲೇ ನಮಗೆ ಲಾಟ್ರಿ ಆಯ್ತು. ಇಲ್ದಿದ್ರೆ ಕಲೆಕ್ಷನ್ ಇಷ್ಟು ಆದ್ಹಾಗ ಆಗ್ತಿರ್ಲಿಲ್ಲ."

"ಅವರವರ ನಸೀಪು ಅವರವರಿಗೆ."

"ಅದಕ್ಕೇ ಯಜಮಾನ ಪಳಾನು ಮಾಡಿರೋದು. ನೀವು ನಾಟಕದಾಗೆ ಪಾರ್ಟು ಮಾಡೋಕೆ ಒಪ್ಕೊಂಡ್ಬಿಟ್ರೆ ಎಂಗಸ್ರು ಪಾರ್ಟು ಮಾಡ್ತಾರೆ ಅಂತ ಜನಾನ ಈ ಕಡೆ ಎಳೀಬೌದು ಅಂತ."

ಮಾರನೆಯ ದಿನ ಕಿಟ್ಟಪ್ಪನಿಗೆ ತನ್ನ ಒಪ್ಪಿಗೆಯನ್ನಿತ್ತಳು ಸುಂದರಿ. ಸುಂದರಿ ಹೇಳಿದ ಎಲ್ಲ ನಿಬಂಧನೆಗಳಿಗೂ ಕಿಟ್ಟಪ್ಪ ಒಪ್ಪಿಕೊಂಡು ಇಬ್ಬರಿಂದಲೂ ತಿಂಗಳಿಗೆ ನೂರೈವತ್ತು ರೂಪಾಯಿ ಸಂಬಳ ಎಂದು ಗೊತ್ತು ಮಾಡಿ ಅಂದೇ ಒಂದು ತಿಂಗಳ ಸಂಬಳವನ್ನು ಮುಂಗಡವಾಗಿ ಕೊಟ್ಟ. ಇನ್ನುಳಿದ ಮುಂಗಡವನ್ನು ಎರಡು ನಾಟಕ ಆದ ಕೂಡಲೇ ಕೊಡುತ್ತೇನೆಂದ. ಸುಂದರಿ ಅದಕ್ಕೆ ಒಪ್ಪಿಕೊಂಡಳು. ಕಂಪನಿ ಮನೆಯಲ್ಲಿಯೇ ಅವರಿಗೆ ಪ್ರತ್ಯೇಕ ವಸತಿ, ಪ್ರತ್ಯೇಕ ಊಟ ಕೊಡಬೇಕೆಂದು ನಿರ್ಧಾರವಾಯಿತು. ಕಿಟ್ಟಪ್ಪನ ಸಂತೋಷ ಮುಗಿಲು ಮುಟ್ಟಿತು. ಮುನಿ ಇನ್ನು ತನ್ನವಳಾಗುತ್ತಾಳೆ, ನಾಟಕಗಳಿಂದಲೂ ಒಳ್ಳೆಯ ವರಮಾನ ಬರುತ್ತದೆಂದು ಅವನ ಎದೆ ಉಬ್ಬಿತು.

'ಹೆಂಗಸರು ಪಾರ್ಟು ಮಾಡುತ್ತಾರೆ' ಎಂದು ದಪ್ಪ ದಪ್ಪ ಅಕ್ಷರಗಳಲ್ಲಿ ಹಸ್ತಪತ್ರಿಗಳು ಮುದ್ರಿತವಾಗಿ ಊರಲ್ಲೆಲ್ಲಾ ಹಂಚಲ್ಪಟ್ಟವು. 'ರಸಿಕ ವಿಲಾಸಿನಿ ನಾಟಕ ಮಂಡಲಿ'ಯ ನಾಟಕಗಳಿಗೆ ಜನ ಹಿಂಡು ಹಿಂಡಾಗಿ ಬರತೊಡಗಿದರು.

ಕಲಾಸಿಪಾಳ್ಯದ ಮೈದಾನದಲ್ಲಿದ್ದ ಲಕ್ಷ್ಮಿ ಥಿಯೇಟರಿನಲ್ಲಿ ಬೀಡು ಬಿಟ್ಟಿದ್ದ ಕಿಟ್ಟಪ್ಪನ 'ರಸಿಕ ವಿಲಾಸಿನಿ ನಾಟಕ ಮಂಡಲಿ'ಯವರಿಗೆ ಗುಬ್ಬಿ ಥಿಯೇಟರಿನಲ್ಲಿ ಅಮೋಘವಾದ ನಾಟಕಗಳನ್ನಾಡುತ್ತಿದ್ದ ಸ್ಥಾನಂ ನರಸಿಂಹರಾವ್ ಅವರ ಪಾರ್ಟಿಯವರಿಂದ ಬಲವಾದ ಏಟೇ ಬಿದ್ದಂತಾಗಿತ್ತು. ಹದಿನೈದು ದಿನಗಳು ಒಂದೇ ಸಮನಾಗಿ ನಾಟಕಗಳಿಗೆ ನರಪಿಳ್ಳೆಯೂ ಸುಳಿಯದಂತಾಗಿತ್ತು. ಪಾಸು ಹಿಡಿದು ಬಿಟ್ಟ ನಾಟಕಗಳನ್ನು ನೋಡಿ

ಕೊಂಡು ಹೋಗುವವರಿಗಾಗಿಯೇ ನಾಟಕಗಳನ್ನು ಆಡುವಂತಾಗಿತ್ತು. ದಿನದಿನಕ್ಕೆ ನೂರಾರು ರೂಪಾಯಿಗಳ ಸಾಲ ಏರುತ್ತಿತ್ತು.

ಸುಂದರಿ–ಮುನಿ ಪಾತ್ರ ವಹಿಸಲು ಆರಂಭಿಸಿದಂದಿನಿಂದ ಜನ ಜಂಗುಳಿಯೇ ಲಕ್ಷ್ಮಿ ಥಿಯೇಟರಿನ ಕಡೆಗೆ ಧಾವಿಸಿತು. ಕಿಟ್ಟಪ್ಪ ತನ್ನ ಜೀವಮಾನದಲ್ಲಿಯೇ ಅಂತಹ ಉತ್ಪತ್ತಿಯನ್ನು ಕಂಡಿರಲಿಲ್ಲ. ತನ್ನ ಹಂಚಿಕೆ ಫಲದಾಯಕವಾದುದಕ್ಕೆ ಅವನು ಹಿರಿಹಿರಿ ಹಿಗ್ಗಿದ. ಅದುವರೆಗೆ ಬೆಂಗಳೂರಿನಲ್ಲಿ ಮಾಡಿದ್ದ ಸಾಲಗಳನ್ನೆಲ್ಲಾ ತೀರಿಸಿದುದೇ ಅಲ್ಲದೆ ಕಂಪನಿಯ ನಟರಿಗೆ ಬಾಕಿಯಾಗಿದ್ದ ಸಂಬಳವನ್ನೂ ಪಾವತಿ ಮಾಡಿದ. ಮಾತಿನಂತೆ ಸುಂದರಿ, ಮುನಿಗೂ ಉಳಿದ ಎರಡು ತಿಂಗಳ ಸಂಬಳ ಮುಂಗಡವನ್ನು ಸಲ್ಲಿಸಿದ. ಶುಕ್ರದೆಶೆ ಪ್ರಾರಂಭವಾದಂತಾಗಿತ್ತು ಕಿಟ್ಟಪ್ಪನಿಗೆ. 'ರಸಿಕ ವಿಲಾಸಿನಿ ನಾಟಕ ಮಂಡಳಿ'ಯ ಹೊಡೆತ ತಡೆದುಕೊಳ್ಳಲಾರದೆ ಸ್ಥಾನಂ ಪಾರ್ಟಿಯವರು ಬೆಂಗಳೂರಿನಿಂದ ತಮ್ಮ ಕ್ಯಾಂಪ್ ಕಿತ್ತರು. ಕೆಲವೇ ದಿನಗಳಲ್ಲಿ ಸುಂದರಿ–ಮುನಿ ಪಾತ್ರಗಳನ್ನು ಅಭಿನಯಿಸುವುದರಲ್ಲಿ ಪ್ರಾವಿಣ್ಯ ಪಡೆದುಕೊಂಡರು. ಜನಮೆಚ್ಚಿಗೆಯನ್ನು ಗಳಿಸಿದರು.

ಹೆಂಗಸರು ನಾಟಕಗಳಲ್ಲಿ ಅಭಿನಯಿಸುತ್ತಿದ್ದುದು ಅದೇ ಮೊದಲು. ಅದನ್ನು ಕೇಳಿ ನಾಟಕ ನೋಡಲು ದೂರದ ನಗರಗಳಿಂದಲೂ ಜನ ಬರತೊಡಗಿದರು. ಕಿಟ್ಟಪ್ಪನ ನಾಟಕಗಳ ಖ್ಯಾತಿ ಕೆಲವೇ ದಿನಗಳಲ್ಲಿ ಕರ್ಣಾಟಕದಲ್ಲೆಲ್ಲಾ ವ್ಯಾಪಿಸಿತು. ಅದರಿಂದ ಊರೂರಲ್ಲಿ ಅದುವರೆಗೆ ಕಿಟ್ಟಪ್ಪನಿಗೆ ಸಾಲ ಕೊಟ್ಟು ಕೃಷ್ಣಾರ್ಪಣಮಸ್ತು ಎಂದಿದ್ದವರಿಗೆಲ್ಲಾ ಕಿವಿ ಅರಳಿತು. ಅವರುಗಳೆಲ್ಲರೂ ತಮ್ಮ ಸಾಲದ ವಸೂಲಿಗಾಗಿ ಹಿಂಡುಹಿಂಡಾಗಿ ಬೆಂಗಳೂರಿಗೆ ಬರಹತ್ತಿದರು.

ಬಂದ ಸಾಲಗಾರರನ್ನೆಲ್ಲಾ ಮರ್ಯಾದೆಯಿಂದ ಕಂಡುಕೊಳ್ಳಬೇಕಾಗಿತ್ತು ಕಿಟ್ಟಪ್ಪ. ಅವರ ಊಟ, ತಿಂಡಿ, ಖರ್ಚು ಎಲ್ಲವನ್ನೂ ಅವನೇ ಪೂರೈಸಬೇಕಾಗಿ ಬಂತು—ಅವರೆಲ್ಲರೂ ಅಲ್ಲಿಗೆ ಬಂದುದು ತಮ್ಮ ಸ್ವಂತ ಕೆಲಸದ ಮೇಲಲ್ಲ, ಕಿಟ್ಟಪ್ಪನಿಗಾಗಿ ಬಂದವರು.

ವರಮಾನ ಹೆಚ್ಚಿದಂತೆಲ್ಲ ಸಾಲಗಾರರ ಬಾಧೆಯೂ ಹೆಚ್ಚತೊಡಗಿತು. ಅದುವರೆಗೆ ಎಲ್ಲೆಲ್ಲೂ ಮಾಡಿದ್ದ ಸಾವಿರಾರು ರೂಪಾಯಿಗಳ ಸಾಲವನ್ನು ತೀರಿಸುವುದು ಸುಲಭದ ಮಾತಾಗಿರಲಿಲ್ಲ. ಸಾಲಗಾರರಾದರೋ ರಣಹದ್ದುಗಳಂತೆ ಥಿಯೇಟರಿನ ಬಳಿಯೆ ಕಾದಿದ್ದು ತಮ್ಮ ಹಣವನ್ನು ನಿರ್ದಾಕ್ಷಿಣ್ಯವಾಗಿ ವಸೂಲುಮಾಡಿಬಿಡುತ್ತಿದ್ದರು. ದಿನದಿನದ ಖರ್ಚಿಗೂ ಕಲೆಕ್ಷನ್ನಿನಲ್ಲಿ ಹಣ ಮಿಗದಂತಾಯಿತು. ಹೊಸಬರಲ್ಲಿ ಸಾಲ ತೆಗೆಯಲಾರಂಭಿಸಿದ ಕಿಟ್ಟಪ್ಪ. ದಿನವೂ ಸಾವಿರಾರು ರೂಪಾಯಿ ಕಲೆಕ್ಷನ್ ಆಗುತ್ತಿದ್ದುದನ್ನು ನೋಡಿ ಅವನಿಗೆ ಧಾರಾಳವಾಗಿ ಸಾಲ ಕೊಡಲೂ ಹಲವರು ಮುಂದೆ ಬಂದರು. ಕಿಟ್ಟಪ್ಪ ಲಕ್ಷ್ಯ ಮಾಡದೆ ಸಿಕ್ಕಿದಂತೆಲ್ಲಾ ಸಾಲ ಮಾಡತೊಡಗಿದ.

ಹೊಸ ಹುರುಪು ಕಳೆದಂತೆಲ್ಲ ವರಮಾನವೂ ಇಳಿಮುಖವಾಗ ಹತ್ತಿತು. ಅದನ್ನು ಗಮನಿಸಿದ ಹೊಸ ಸಾಲಗಾರರೂ ಹಳೆಯ ಸಾಲಗಾರರ ಜತೆಗೂಡಿ ಉಪಟಳ ಕೊಡಲಾರಂಭಿಸಿದರು.

ಬಾಡಿಗೆ ಹಣಕ್ಕಾಗಿ ಥಿಯೇಟರಿನ ಮಾಲೀಕ ಭದ್ರಣ್ಣನದೂ ತಗಾದೆ ಪ್ರಾರಂಭವಾಯಿತು. ಅವನಿಗೆ ಎರಡು ತಿಂಗಳ ಬಾಡಿಗೆ ಬಾಕಿಯಾಗಿದ್ದ ಕಿಟ್ಟಪ್ಪ. ತಗಾದೆ ಮಾಡದೆ ಬಿಟ್ಟಿದ್ದ ಭದ್ರಣ್ಣ ಈಗ ಇಳಿಮುಖವಾದ ಕಲೆಕ್ಷನ್ ಹಾಗೂ ಕಿಟ್ಟಪ್ಪನ ಸಾಲಗಾರರ ತಂಡ ನೋಡಿ ಗಾಭರಿಯಾದ. ಮೂರುದಿನ ವಾಯಿದೆ ಕೊಟ್ಟು, ತನ್ನ ಹಣ ಚೇಬಾಕಿ ಮಾಡದಿದ್ದರೆ ಥಿಯೇಟರಿಗೆ ಬೀಗ ಹಾಕಿಸಿ, ನಾಟಕದ ಸಾಮಾನುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಾಗಿ ಖಡಾಖಂಡಿತವಾಗಿ ಹೇಳಿಬಿಟ್ಟ. ಕಿಟ್ಟಪ್ಪ ಸಾಲಕ್ಕಾಗಿ ಎಲ್ಲೆಲ್ಲೂ ಪ್ರಯತ್ನಿಸಿದ. ಹಿಂದೆ ಸಾಲ ಕೊಟ್ಟಿದ್ದವರನ್ನೇ ಗೋಗರೆದ. ಎಲ್ಲಿಯೂ ಬಿಡಿಕಾಸು ಸಾಲ ಹುಟ್ಟಲಿಲ್ಲ. ಕಿಟ್ಟಪ್ಪ ಅಧೀರನಾದ.

ಮೂರು ದಿನಗಳು ಕಳೆದುಹೋದುವು. ಕಿಟ್ಟಪ್ಪ ಭದ್ರಣ್ಣನನ್ನೆ ಅಂಗಲಾಚಿ ಕೇಳಿಕೊಂಡ. ಭದ್ರಣ್ಣನ ಕಲ್ಲುಹೃದಯ ಕರಗಲಿಲ್ಲ. ಅವನು ನಿರ್ದಾಕ್ಷಿಣ್ಯವಾಗಿ ಥಿಯೇಟರಿಗೆ ಬೀಗ ಹಾಕಿಸಿಬಿಟ್ಟ.

ಬೇರೆ ದಾರಿ ಕಾಣದೆ ತನ್ನ ಮೊದಲಿನ ಹಂಚಿಕೆಯನ್ನೇ ಮತ್ತೆ ಕಾರ್ಯಗತ ಮಾಡಲು ಯೋಚಿಸಿದ ಕಿಟ್ಟಪ್ಪ. ಬೆಂಗಳೂರಿನಿಂದ ಕ್ಯಾಂಪು ಕಿತ್ತು ಮೈಸೂರಿಗೆ ಹಾಕಲು ಅವನು ನಿರ್ಧರಿಸಿದ. ಮೈಸೂರಿನಲ್ಲಿ ಥಿಯೇಟರು, ಬಾಡಿಗೆ ಪರದೆಗಳನ್ನು ಗೊತ್ತು ಮಾಡಲು ಅಂದೇ ಶಿಬ್ಬೊಟ್ಟಿಯನ್ನು ಕಳುಹಿಸಿಕೊಟ್ಟ.

ಬೆಂಗಳೂರಿನ ಸಾಲಗಾರರಿಗೆ ಏನೇನೋ ಸಮಾಧಾನ ಹೇಳಲು ಕಿಟ್ಟಪ್ಪ ಪ್ರಯತ್ನಿಸಿದ. ಆದರೆ ಅವರು ಯಾರೂ ಅವನ ಸಮಾಧಾನದ ಮಾತುಗಳಿಗೆ ಕಿವಿಗೊಡಲಿಲ್ಲ. 'ನಮ್ಮ ಹಣ ಇಟ್ಟುಬಿಟ್ಟು ಮುಂದೆ ಹೋಗು' ಎಂದು ಅವರು ಒತ್ತಾಯ ಮಾಡಿದರು.

ಅಷ್ಟರಲ್ಲೆ ಮೈಸೂರಿನಿಂದ ಶಿಬ್ಬೊಟ್ಟಿಯ ಕಾಗದ ಬಂತು. ಮುಂಗಡ ಹಣಕೊಡದೆ ಅಲ್ಲಿ ಥಿಯೇಟರಾಗಲೀ, ಪರದೆ ಸಾಮಾನುಗಳಾಗಲಿ ಸಿಗುವುದಿಲ್ಲವೆಂದು ಅವನು ಬರೆದಿದ್ದ.

ಭದ್ರಣ್ಣನಿಂದ ನಾಟಕದ ಸಾಮಾನುಗಳನ್ನು ಪಡೆಯಲು ಕಿಟ್ಟಪ್ಪ ಪ್ರಯತ್ನಿಸಿ ವಿಫಲನಾದ. 'ಬಾಡಿಗೆ ಹಣ ಎಲ್ಲಾ ಪಾವತಿಮಾಡಿ ನಿನ್ನ ಸಾಮಾನುಗಳು ಏನಿದ್ದರೂ ತೆಗೆದುಕೊಂಡು ಹೋಗು' ಎಂದುಬಿಟ್ಟ ಭದ್ರಣ್ಣ.

ಕಿಟ್ಟಪ್ಪನಿಗೆ ದಿಕ್ಕು ತೋರದಂತಾಯಿತು. ದಿನ ಬೆಳಗಾದರೆ ಸಾಲಗಾರರ ಯಮಯಾತನೆಯನ್ನು ಅವನು ಸಹಿಸಿಕೊಳ್ಳಲಾರದಾದ. ಅವನ ಸ್ವಾಭಿಮಾನಕ್ಕೆ ಉರುಲು ಬಿಗಿದಂತಾಯಿತು. ಅವನಿಗೆ ಬೇರೆ ಮಾರ್ಗವೇ ಉಳಿದಿರಲಿಲ್ಲ. ಯಾರಿಗೂ ಹೇಳದೆ, ಯಾರನ್ನೂ ಕೇಳದೆ ಬೆಂಗಳೂರು ಬಿಟ್ಟು ಓಡಿಹೋಗಿ ತಲೆತಪ್ಪಿಸಿಕೊಂಡ.

ಕಿಟ್ಟಪ್ಪ ಪರಾರಿಯಾದುದನ್ನು ಕೇಳಿ ಕಂಪೆನಿ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದ ಶ್ರೀಕಂಠಯ್ಯ ಓಡಿಬಂದ. ಭಸ್ಮಾಸುರನಂತೆ ಕೆರಳಿ ಮನೆಯಲ್ಲೆಲ್ಲಾ ಕುಣಿದಾಡಿದ. ತನಗೆ ಬಾಕಿಯಿರುವ ಎರಡು ತಿಂಗಳ ಬಾಡಿಗೆ ಅರವತ್ತು ರೂಪಾಯಿ ಫೈಸಲು ಮಾಡಿದಲ್ಲದೆ, ಕಂಪನಿ ಮನೆಯವರ ಸಾಮಾನುಗಳನ್ನೂ ಹೊರಕ್ಕೆ ಬಿಡುವುದಿಲ್ಲವೆಂದು ಪಟ್ಟು ಹಿಡಿದು ಕುಳಿತ. ಕಂಪೆನಿಯ ನಟವರ್ಗದವರು ತಮಗೂ ಅವಕ್ಕೂ

ಸಂಬಂಧವಿಲ್ಲ, ಯಜಮಾನನನ್ನೇ ಕೇಳಿಕೋ ಹೋಗು ಎಂದು ವಾದ ಹೂಡಿದರು. ಮಾತಿಗೆ ಮಾತು ಬೆಳೆದು ದೊಡ್ಡ ರಗಳೆಯೇ ಹತ್ತಿಕೊಂಡಿತು. ಬೀದಿಯಲ್ಲಿ ಹೋಗುತ್ತಿದ್ದ ಜನ ಬಂದು ಸೇರಿ ಇದ್ದದ್ದೂ 'ವೇಡಿಕೆ' ಯಾಯಿತು. ಅದನ್ನೆಲ್ಲಾ ನೋಡಿ ಸುಂದರಿಗೆ 'ಇಸ್ಸಿಸ್ಸಿ' ಎನ್ನಿಸಿತು. ಆವಳು ಪೆಟ್ಟಿಗೆ ತೆರೆದು ಅರವತ್ತು ರೂಪಾಯಿ ಎಣಿಸಿ ಶ್ರೀಕಂಠಯ್ಯನ ಕೈಯಲ್ಲಿಟ್ಟಳು. ಶ್ರೀಕಂಠಯ್ಯ 'ನಾಳೆ ಇಷ್ಟು ಹೊತ್ತಿಗೆ ಮನೆ ಖಾಲಿ ಮಾಡಿಬಿಡಬೇಕು' ಎಂದು ಆರ್ಭಟಿಸಿ ಹಣ ತೆಗೆದುಕೊಂಡು ಹೊರಟು ಹೋದ.

ಶಿಬ್ಬೊಟ್ಟಿ ಬಂದ ನಂತರ ಅವನನ್ನು ಕೇಳಿ ಏನಾದರೂ ಏರ್ಪಾಡು ಮಾಡಿಕೊಳ್ಳಬೇಕು ಎಂದು ಸುಂದರಿ ಆಲೋಚಿಸಿದಳು. ಆದರೆ ಶಿಬ್ಬೊಟ್ಟಿ ಪತ್ರವನ್ನೂ ಹಾಕಲಿಲ್ಲ. ಅತ್ತ ಬರಲೂ ಇಲ್ಲ. ಮೈಸೂರಿಗೆ ಹೋದವನು ಹಾಗೆಯೇ ಹೊರಟುಹೋದ.

ಅದೇ ದಿನ ಕಂಪೆನಿ ನಟರೆಲ್ಲ ತಮ್ಮ ಗಂಟುಮೂಟೆ ಕಟ್ಟಿ ಕೊಂಡು ಕಂಪನಿ ಮನೆ ಬಿಟ್ಟು ಹೊರನಡೆದರು. ಸುಂದರಿ – ಮುನಿ ಇಬ್ಬರೇ ಮನೆಯಲ್ಲಿ ಉಳಿದುಕೊಂಡರು. ಅವರಿಗೆ ಮುಂದೆ ಏನು ಮಾಡ ಬೇಕೆಂಬುದು ಯೋಚನೆಗಿಟ್ಟುಕೊಂಡಿತು. ಕೈಯ್ಯಲ್ಲೇನೋ ಕೊಂಚ ಹಣವಿತ್ತು. ಅದರಲ್ಲಿ ಹೇಗೂ ಕೆಲವು ದಿನ ನಿರಾತಂಕವಾಗಿ ತಳ್ಳಬಹು ದಾಗಿತ್ತು. ಆದರೂ ಆ ಮನೆಯನ್ನು ಕೂಡಲೇ ಬಿಟ್ಟು ಹೋಗುವು ದಾದರೂ ಎಲ್ಲಿಗೆ?

ಸುಂದರಿ - ಮುನಿ ರಂಗಭೂಮಿಯ ಮೇಲೆ ಕಾಣಿಸಿಕೊಂಡಾಗ ಲಾಯರ್ ಜೀವರತ್ನಂ ದಿನವೂ ತಪ್ಪದೆ ನಾಟಕಕ್ಕೆ ಬರುತ್ತಿದ್ದ. ನೋಡಿದ್ದ ನಾಟಕವನ್ನೇ ಮತ್ತೆ ಮತ್ತೆ ನೋಡಲು ಅವನಿಗೆ ಬೇಸರವೆನಿಸುತ್ತಿರಲಿಲ್ಲ. ಜೂನಿಯರ್ ಲಾಯರಾದ ಅವನಿಗೆ ಕಕ್ಷಿಗಾರರ ಕಾಟವೂ ಅಷ್ಟಾಗಿರ ಲಿಲ್ಲ. ಅವನಿಗೆ ನಾಟಕ ನೋಡಬೇಕೆನ್ನುವುದಕ್ಕಿಂತ ಮುನಿಯ ಮುಖದರ್ಶನ ಹೆಚ್ಚು ಆಪ್ಯಾಯಮಾನವಾಗಿತ್ತು. ಕಂಪೆನಿ ಮನೆಯ ರಸ್ತೆಯಲ್ಲಿಯೂ ಹಲವಾರು ಬಾರಿ ಅಡ್ಡಾಡಿ, ಅತ್ತ ಕಡೆ ಕಣ್ಣು ಹಾಯಿಸಿ ನಿರಾಶನಾಗಿದ್ದ.

ನಾಟಕ ನಿಂತದ್ದು, ಮಾಲೀಕ ಓಡಿ ಹೋದದ್ದು, ಕಂಪೆನಿ ಮನೆಯಲ್ಲಿ ನಡೆದ ಹಗರಣ, ಸುಂದರಿ – ಮುನಿ ಇಬ್ಬರೇ ಅಲ್ಲಿ ಉಳಿದುಕೊಂಡದ್ದು ಎಲ್ಲವನ್ನೂ ಜೀವರತ್ನಂ ಕಣ್ಣಲ್ಲಿ ಕಣ್ಣಿಟ್ಟು ಗಮನಿಸಿದ. ಪಾರ್ಟುದಾರರೆಲ್ಲ ಕಂಪನಿ ಮನೆ ಬಿಟ್ಟು ಹೊರಟುಹೋದ ದಿನ ಸಂಜೆಯೇ ಅವನು ಸುಂದರಿ – ಮುನಿಯರನ್ನು ನೋಡಲು ಆಗಮಿಸಿದ.

"ನೋಡಿ, ನೀವು ಬಹಳ ಚೆನ್ನಾಗಿ ಅಭಿನಯಿಸ್ತೀರಿ. ನಿಮ್ಮ ನಾಟಕದ ಕಂಪೆನಿಗೆ ಹೀಗಾದದ್ದು ಬಹಳ ಅನ್ಯಾಯ, ಬಹಳ ಅನ್ಯಾಯ" ಎನ್ನುತ್ತಲೆ ಮನೆಯೊಳಗೆ ಪ್ರವೇಶಿಸಿದ ಜೀವರತ್ನಂ. ಸುಂದರಿ - ಮುನಿ ಇವರಿಗೆ ಅವನ ಗುರುತು ಥಟ್ಟನೆ ಪತ್ತೆಯಾಯಿತು. ಪ್ರತಿ ನಾಟಕದಲ್ಲೂ ಅವನು ದಿನವೂ ಮುಂದಿನ ಸಾಲಿನಲ್ಲಿ ಕುಳಿತಿರುತ್ತಿದ್ದ.

"ಏನೋ, ಎಲ್ಲಾ ಎಷ್ಟೆಷ್ಟು ಲಭ್ಯಾನೋ ಅಷ್ಟಷ್ಟೆ" ಎಂದು ಹೇಳಿ ಸುಂದರಿ ಬಂದವನನ್ನು ಸ್ವಾಗತಿಸುತ್ತ ಕೂರಿಸಿದಳು.

ಜೀವರತ್ನಂ ಹಾಸಿದ್ದ ಜಮುಖಾನದ ಮೇಲೆ ಕುಳಿತುಕೊಳುತ್ತ "ಎಲ್ಲಿ ಕಂಪನಿಯೋರು ಒಬ್ಬರೂ ಕಾಣೋದೇ ಇಲ್ಲವಲ್ಲ" ಎಂದು ಏನೂ ಅರಿಯದವನಂತೆ ಕೇಳಿದ.

"ಎಲ್ಲಾ ಬಿಟ್ಟು ಹೊರಟುಹೋಗಿಬಿಟ್ಟರು."

"ಅಯ್ಯೋ ಪಾಪ, ನಂಬ್ಕೊಂಡಿದ್ದ ಜನಕ್ಕೆ ಇನ್ನು ಎಷ್ಟು ಕಷ್ಟವಾಗತ್ತೋ ಏನೋ."

"ಏನ್ಮಾಡೋಕಾಗತ್ತೆ. ಬಂದದ್ದೆಲ್ಲಾ ಅನುಭವಿಸಬೇಕು."

"ಈ ನಾಟಕದ ಕಸುಬೇ ಅಂಥಾದ್ದು ನೋಡಿ. ಯಾರೂ ಉದ್ಧಾರವಾಗ್ಲಿಲ್ಲ."

"ತಮ್ಮ ಉದ್ಧಾರಕ್ಕೋಸ್ಕರ ನಾಟಕಗಳ್ನ ನಡೆಸೋರು ನಾಟಕ ಆಡಸಲ್ಲ. ಜನರ ಉದ್ಧಾರಕ್ಕೆ, ಕಲೆಯ ಸೇವೆಗೆ ಅವರು ನಾಟಕ ಆಡಸ್ತಾರೆ. ಅದನ್ನ ಜನ ತಿಳಿಯಲ್ಲ."

"ಅದು ಸರಿ. ಈಗ ನೀವೇನು ಮಾಡ್ಬೇಕು ಅಂತ ಇದೀರಿ" ಮಾತಿನ ಮೋಡಿಯನ್ನು ತಿರುಗಿಸಿ ತಾನು ಬಂದಿರುವ ಉದ್ದಿಶ್ಯಕ್ಕೆ ಪೀಠಿಕೆ ಹಾಕುತ್ತ ಕೇಳಿದ ಜೀವರತ್ನಂ.

"ಇನ್ನೂ ನಾವು ಯಾವುದನ್ನೂ ತೀರ್ಮಾನ ಮಾಡಿಲ್ಲ" ಎಂದಳು ಸುಂದರಿ.

"ಯಜಮಾನ್ರು ಬಂದು ಕರ್ಕೊಂಡು ಹೋಗ್ತಾರೇನೋ."

"ಯಾವ ಯಜಮಾನ್ರು ?"

"ನಾಟಕದ ಕಂಪೆನಿ ಯಜಮಾನ್ರು."

"ಪಾಪ, ಇನ್ನು ಅವರೆಲ್ಲಿ ಬರ್ತಾರೆ, ಹೇಳದೇ ಕೇಳದೇ ಓಡಿ ಹೋದೋರು."

"ಹಾಗಾದರೆ........?"

"ಇನ್ನೂ ನಾವು ಏನೊಂದೂ ಇತ್ಯರ್ಥ ಮಾಡ್ಲಿಲ್ಲ."

"ಇನ್ನು ಯಾವುದಾದರೂ ನಾಟಕದ ಕಂಪೆನಿ ಸೇರ್ತೀರೇನು."

"ಅಯ್ಯೊ, ನಮಗ್ಯಾಕೆ ನಾಟಕದ ಕಂಪನಿ. ಏನೋ ಯಜಮಾನ್ರ ಬಲವಂತಕ್ಕೆ ನಾವೂ ಈ ಕಂಪ್ನೀಲಿ ಪಾರ್ಟು ಮಾಡಿದೆವು" ಸುಂದರಿ ತಾತ್ಸಾರದ ಧ್ವನಿಯಲ್ಲಿ ನುಡಿದಳು.

ಜೀವರತ್ನಂ ಕ್ಷಣಹೊತ್ತು ಸುಮ್ಮನಿದ್ದು ನಂತರ ಕೇಳಿದ :

"ನಾನು ನಿಮ್ಮತ್ರ ಒಂದು ವಿಚಾರ ಮಾತಾಡೋಣ ಅಂತ ಬಂದೆ. ಹೇಳಿದರೆ ಏನೂ ತಿಳಕೊಳ್ಳೋಲ್ಲವಷ್ಟೆ."

"ಏನು ಹೇಳಿ?........ನೀವೇನಾದ್ರೂ ನಾಟಕದ ಕಂಪನಿ ನಡೆಸ್ತಿದೀರೇನು."

"ಇಲ್ಲ ಇಲ್ಲ. ನನಗೂ ಅದಕ್ಕೂ ಬಲು ದೂರ....ನಾನು ಈ ಊರಲ್ಲಿ ದೊಡ್ಡ ಲಾಯರು. ವರಮಾನಾನೂ ಚೆನ್ನಾಗಿ ಬರ್ತಾ ಇದೆ, ನಮ್ಮ ತಂದೆಯೋರು ದೊಡ್ಡ ಆಸ್ತಿವಂತರು. ನೀವು ಅಲ್ಲಿ ಇಲ್ಲಿ ಅಲಿಯೋ ಬದಲು ಏನು ಅನುಕೂಲ ಬೇಕೋ ನಾನು ಮಾಡಿಕೊಡ್ತೇನೆ....ನಿಮ್ಮ ತಂಗೀನೂ ಒಪ್ಪೋದಾದ್ರೆ........" ಮಾತನ್ನು ಅರ್ಧಕ್ಕೇ ನಿಲ್ಲಿಸಿ ಮುನಿಯ ಮುಖವನ್ನೊಮ್ಮೆ ನೋಡಿ, ಜೀವರತ್ನಂ ಸುಂದರಿಯ ಉತ್ತರಕ್ಕಾಗಿ ಕಾದು ಕುಳಿತ.

ಸುಂದರಿ ಯಾವ ಮಾತನ್ನೂ ಆಡಜೆ 'ಇನನನ್ನು ಕಂಡಿಲ್ಲ ಕೇಳಿಲ್ಲ,

ಇವನ ಮಾತಿಗೆ ಬೆರಗಾಗಿ ಹೇಗೆ ಇವನ ಜತೆಯಲ್ಲಿ ಹೋಗುವುದು' ಎಂದು ಯೋಚಿಸುತ್ತ ಕುಳಿತಳು.

"ನೀವೇನೂ ಯೋಚನೆ ಮಾಡಬೇಡಿ. ನಿಮ್ಮ ಖರ್ಚಿಗೆ ತಿಂಗಳಿಗಿಷ್ಟು ಅಂತ ಮೊದಲೇ ಕೊಟ್ಟಿಡ್ತೇನೆ" ಸುಂದರಿಗೆ ತನ್ನ ಬಗ್ಗೆ ಧೈರ್ಯ ಮೂಡಿಸಲು ವ್ಯವಹಾರದ ಮಾತನ್ನಾಡಿದ ಜೀವರತ್ನಂ.

"ಎಷ್ಟು ಕೊಡ್ತೀರಾ?" ನಿರ್ವಾಹವಿಲ್ಲದೆ ಸುಂದರಿಯೂ ವ್ಯವಹಾರಕ್ಕೆ ತಿರುಗಬೇಕಾಯಿತು.

"ತಿಂಗಳೊಂದಕ್ಕೆ ನೂರು ರೂಪಾಯಿ ಕೊಡ್ತೀನೆ. ನೀವಿಬ್ರೇ ತಾನೆ ಇರೋದು."

"ಏನು ಮುನಿ ನಿನ್ನಿಷ್ಟ? ತಂಗಿಯ ಕಡೆ ತಿರುಗಿ ಸುಂದರಿ ಕೇಳಿದಳು."

"ನನ್ನೇನು ಕೇಳ್ತೀಯ ಅಕ್ಕಯ್ಯ. ನಿನ್ನಿಷ್ಟ ಹ್ಯಾಗೆ ಬರತ್ತೋ ಹಾಗೆ ಮಾಡು" ಎಂದು ಅಕ್ಕನ ಮೇಲೆಯೇ ಎಲ್ಲ ಜವಾಬ್ದಾರಿಯನ್ನೂ ಹಾಕಿದಳು ಮುನಿ.

"ಅದು ಸರಿ........ಆದರೆ" ಏನೋ ಹೇಳುವುದಕ್ಕೆ ಹೊರಟು ಮಾತನ್ನು ಅರ್ಧದಲ್ಲಿಯೇ ನಿಲ್ಲಿಸಿದಳು ಸುಂದರಿ.

"ಏನು ನಿಮ್ಮ ಅನುಮಾನ, ಹೇಳಿ" ತವಕದಿಂದ ಜೀವರತ್ನಂ ಕೇಳಿದ.

"ನಾನು ಸಂಕೋಚ ಇಟ್ಕೊಳ್ದೆ ಮಾತ್ನಾಡ್ಬೇಕಾಗತ್ತೆ. ಅದ್ರಿಂದ ನೀವು ಮನಸ್ಸಿಗೇನೂ ತಿಳ್ಕೋಬಾರ್ದು."

"ಇಲ್ಲ ಹೇಳಿ."

"ನನ್ನ ತಂಗೀನೇನೋ ನಿಮ್ಮ ವಶ ಒಪ್ಪಿಸ್ತೀನಿ. ನೀವು ನಿಯತ್ತಿನಿಂದ ಇರೋವರ್ಗೂ ಅವಳೂ ನಿಯತ್ತಿನಿಂದ ಇರ್ತಾಳೆ. ಅದರಲ್ಲೇನೂ ನಿಮಗೆ ಅನುಮಾನ ಬೇಡ. ಆದರೆ........"

"ಅದೇನು ಬಾಯಿಬಿಟ್ಟು ಹೇಳಬಾರ್ದೆ. ಆದರೆ........ಅಂತ ಅಷ್ಟಕ್ಕೇ ನಿಲ್ಲಿಸಿಬಿಡ್ತೀರಲ್ಲ."

"ಏನಿಲ್ಲ. ಅವಳ ವಿಚಾರ ಆಯ್ತು. ಇನ್ನು ನನ್ನ ವಿಚಾರಕ್ಕೆ ಏನಾದ್ರೂ ಮಾಡ್ಕೋಬೇಡ್ವೆ. ಆಮೇಲೆ ಮನೆಗೆ ಇನ್ಯಾರಾರೂ ಬಂದರೆ ನೀವು ತಪ್ಪರ್ಥ ಮಾಡ್ಕೋತೀರೇನೋ"

"ಛೆ....ಛೆ....ಎಲ್ಲಾದ್ರೂ ಉಂಟೆ. ನನಗೆ ನಿಮ್ಮಲ್ಲೂ ನಿಮ್ಮ ತಂಗೀಲೂ ಪೂರ್ತಿ ನಂಬಿಕೆ ಇದೆ. ನಿಮ್ಮಿಷ್ಟಕ್ಕೆ ನೀವು ಏನು ಮಾಡ್ಕೊಂಡ್ರೂ ನಾನು ಅಡ್ಡಿ ಬರಲ್ಲ."

"ಅದಕ್ಕೇ ಈಗಲೇ ಮನಸ್ಸು ಬಿಚ್ಚಿ ಮಾತಾಡಿಬಿಟ್ರೆ ನಾಳೆ ಯಾವ ಆಕ್ಷೇಪಣೆಗೂ ಅವಕಾಶ ಇರಲ್ಲ ನೋಡಿ."

"ಅದೂ ನಿಜವೇ. ಅಂತೂ ನೀವು ಸಾಫ್ ಸೀದಾ ಮಾತಾಡ್ತೀರಲ್ಲ. ನನಗೆ ಬಹಳ ಸಂತೋಷವಾಯ್ತು."

"ಅಂದ್ಹಾಗೆ, ನಿಮಗೆ ಮದುವೆ ಆಗಿದೆಯೆ ?"

ಸುಂದರಿಯ ಸೌಜನ್ಯವನ್ನು ನೋಡಿ ಸುಳ್ಳು ಹೇಳಲು ಜೀವರತ್ನಂಗೆ ಮನಸ್ಸು ಬರಲಿಲ್ಲ. ಅವನಂದ—

"ಆಗಿದೆ. ಆದರೆ ಹುಡುಗಿ ಇನ್ನೂ ಚಿಕ್ಕದು - ಮೈ ನೆರೆದಿಲ್ಲ."

"ನಾಳೆ ನಿಮಗೆ ತಾಪತ್ರಯವಾಗತ್ತಲ್ಲ. ಅದರಿಂದ ನಮಗೂ ತೊಂದರೆಯಾಗತ್ತೆ. ಕೊಂಚ ಯೋಚನೆಮಾಡಿ."

"ಯೋಚನೆ ಮಾಡಬೇಕಾದ್ದೇನೂ ಇಲ್ಲ. ದೇವರು ಕೊಟ್ಟ ಹಾಗೆ ಬೇಕಾದ ಅನುಕೂಲ ಇದೆ. ಯಾರಿಗೂ ಅನ್ಯಾಯ ಆಗ್ದಂತೆ ನಾನು ನೋಡ್ಕೋತೇನೆ."

ಸುಂದರಿಗೆ ಅವನ ಮಾತು ಕೇಳಿ ನಗು ಬಂತು. ದೇವರು ಅನುಕೂಲ ಕೊಟ್ಟಿರುವುದು ಇಂತಹುದಕ್ಕಾಗಿಯೇ ಎಂದುಕೊಂಡು ತನ್ನಮನಸ್ಸಿನ ಭಾವನೆಯನ್ನು ತೋರಗೊಡದೆ ಅವಳಂದಳು—

"ಸರಿ, ನಿಮ್ಮಿಷ್ಟ. ನಾವು ಸಿದ್ಧರಾಗಿದ್ದೇವೆ."

ಅಲ್ಲಿಗೆ ಮಾತು ಮುಗಿಯಿತು. ವ್ಯವಹಾರವನ್ನು ಪೂರ್ತಿ ಮಾಡುವುದಕ್ಕಾಗಿ ಜೀವರತ್ನಂ ತನ್ನ ಕೋಟಿನ ಕಿಸೆಯಲ್ಲಿದ್ದ ಪರ್ಸನ್ನು ತೆಗೆದು ಅದರಿಂದ ಹತ್ತು ರೂಪಾಯಿಯ ಹತ್ತು ನೋಟುಗಳನ್ನು ಹೊರಸೆಳೆದು ಸುಂದರಿಯ ಕೈಯ್ಯಲ್ಲಿಡುತ್ತ ಹೇಳಿದ—

"ಇದು ನೂರು ರೂಪಾಯಿ ನಿಮ್ಮ ಹತ್ರ ಇರಲಿ, ಮೊದಲನೇ ತಿಂಗಳದು."

"ಹಣಕ್ಕೇನವಸರವಾಗಿತ್ತು" ಎಂದಳು ಸುಂದರಿ.

"ಹಾಗಲ್ಲ. ವ್ಯಾಪಾರ, ವ್ಯವಹಾರಗಳಲ್ಲಿ ಒಂದು ಒಪ್ಪಂದ ಆಯಿತು ಅನ್ನೋದನ್ನ ನಿಗದಿಸಬೇಕಾದರೆ ಅದಕ್ಕೆ ಒಂದು ಕನ್ಸಿಡರೇಷ‍ (Consideration) ಮೊಬಲಗು ಇದ್ದೇ ಇರಬೇಕು. ಕೊನೆಗೆ ಒಂದು ಕಾಸಾದರೂ ಆಗಲಿ. ಕಾನೂನು ಹಾಗಿದೆ."

"ಹೆಣ್ಣು-ಗಂಡಿನ ಪ್ರೇಮವೂ ಒಂದು ವ್ಯಾಪಾರಕ್ಕೆ ಇಳಿದು ಬಿಟ್ಟಿದೆ ಅನ್ನಿ"

—ಎನ್ನುತ್ತ ಸುಂದರಿ ಮುಸಿನಕ್ಕಳು.

"ಜಗತ್ತಿನ ಜೀವನವೇ ಒಂದು ವ್ಯಾಪಾರ. ಆ ವ್ಯಾಪಾರದಲ್ಲಿ ಹಣಕ್ಕೇ ಪ್ರಧಾನವಿರೋದು. ಕೊನೆಗೆ ಕೈಹಿಡಿದ ಹೆಂಡತೀನೂ ಗಂಡನ ವರಮಾನದ ಕಡೆಗೇ ದೃಷ್ಟಿ ಇಟ್ಟಿರ್ತಾಳೆ. ಅದೇನಾದರೂ ಕುಸಿದು ಬಿದ್ದರೆ ಅವನನ್ನ ಕಸಕ್ಕೂ ಕಡೆಯಾಗಿ ಕಾಣ್ತಾಳೆ. ಆದಿಕವಿ ವಾಲ್ಮೀಕಿ ಇದರ ಬಗ್ಗೆ ಒಂದು ಸುಂಧರವಾದ ಶ್ಲೋಕ ರಚಿಸಿದ್ದಾನೆ.

"ಅರ್ಥೇನ ಪರಿಹೀನಸ್ಯ ಪುರುಷಾಸ್ಯಲ್ಪಮೇಧಸಾ |
ಕ್ರಿಯಾಸ್ಸರ್ವೇ ವಿನಶ್ಯಂತಿ ಗ್ರೀಷ್ಮೇ ಕುಸರಿತೋಯಥಾ ||
ಯಸ್ಯಾರ್ಥಸ್ತಸ್ಯ ಮಿತ್ರಾಣಿ, ಯಸ್ಯಾರ್ಥಸ್ತಸ್ಯ ಬಾಂಧವಾಃ |
ಯಸ್ಯಾರ್ಥಸ್ಸಪುಮಾನ್‌ಲೋಕೆ, ಯಸ್ಯಾರ್ಥಸ್ಸತಂ ಪಂಡಿತಃ ||"

"ಹಣವಿಲ್ಲದವನ ತಲೆಯಲ್ಲಿ ಮೆದುಳಿಲ್ಲದವನ ಎಲ್ಲ ಕೆಲಸಗಳೂ ಗ್ರೀಷ್ಮಋತುವಿನಲ್ಲಿ ಎಲೆಗಳು ಉದುರುವಂತೆ ಉದುರಿ ಹೋಗುತ್ತವೆ. ಎಲ್ಲಿ ಹಣವಿರುತ್ತೋ ಅಲ್ಲಿ ಸ್ನೇಹಿತರಿರುತ್ತಾರೆ, ಎಲ್ಲಿ ಹಣವಿರುತ್ತದೋ ಅಲ್ಲಿ ಬಂಧುಬಾಂಧವರು ತುಂಬಿಕೊಂಡಿರುತ್ತಾರೆ, ಹಣವಿದ್ದವನೇ ಮಾನ್ಯ, ಹಣವಿದ್ದವನೇ ಪಂಡಿತೋತ್ತಮ. ಪರಮಾತ್ಮ ಅವತರಿಸಿದ ಆ ಧರ್ಮ ಯುಗದಲ್ಲಿಯೇ ಹಣಕ್ಕೆ ಆ ಮಹತ್ವ ಇದ್ದಿರಬೇಕಾದರೆ, ಹಣವೇ ದೇವರು ಅಂತ ತಿಳ್ಕೊಂಡಿರೋ ಈಗಿನ ಪ್ರಪಂಚದಲ್ಲಿ ಹೇಳಬೇಕಾದ್ದೆ ಇಲ್ಲ."

"ಹಾಗಾದರೆ ನಮ್ಮ ಒಲುಮೆ ಪಡೆಯೋದಕ್ಕೆ ಹಣ ಕೊಟ್ಟರಿ ಅಂತ ಅರ್ಥವಾಯಿತು" ಎನ್ನುತ್ತ ಸುಂದರಿ ನಗತೊಡಗಿದಳು.

"ಛೆ....ಛೆ....ಹಾಗೆಲ್ಲಾ ತಿಳ್ಕೋಬೇಡಿ. ವ್ಯವಹಾರಜಗತ್ತಿನಲ್ಲಿ ಹಣಕ್ಕೆ ಯಾವ ಸ್ಥಾನ ಇದೆ ಅನ್ನೋದನ್ನ ವಿವರಿಸಿದೆ ಅಷ್ಟೆ." ಜೀವ ರತ್ನಂ ಹೇಳಿದ.

ಸುಂದರಿ ನೋಟುಗಳನ್ನು ತಂಗಿಯ ಕೈಗೆ ಕೊಟ್ಟು—

"ಇದನ್ನು ತೆಗೆದಿಡು"

—ಎಂದು ಹೇಳಿ, ಜೀವರತ್ನಂನನ್ನು ಕುರಿತು—

"ನಾವು ಇನ್ನು ಈ ಮನೇಲಿರೋಕಾಗೋಲ್ಲ. ಬೇರೆ ಮನೆ ಸರಿ ಯಾದ ಕಡೆ ನೋಡಬೇಕು. ನಮಗೆ ಈ ಊರು ಪರಿಚಯ ಇಲ್ಲ" ಎಂದಳು.

"ನೀವೇನೂ ಯೋಚಿಸಬೇಡಿ. ನಾಳೆ ನಾಡದ್ದರಲ್ಲಿ ನಾನು ಮನೆ ಗೊತ್ಮಾಡ್ತೇನೆ," ಜೀವರತ್ನಂ ಆ ಸಮಸ್ಯೆಯನ್ನು ಬಗೆಹರಿಸಿ, ಹೊರಡಲು ಸಿದ್ಧನಾದ.

ಮಾರನೆಯ ದಿನವೇ ಜೀವರತ್ನಂ ಮನೆ ಗೊತ್ತುಮಾಡಿಕೊಂಡು ಬಂದ. ಚಾಮರಾಜಪೇಟೆಯ ನಾಲ್ಕನೇ ಕ್ರಾಸಿನಲ್ಲಿದ್ದ ಆ ಮನೆ ಸ್ವತಂತ್ರ ವಾಗಿಯೇ ಇತ್ತು. ಪ್ರತ್ಯೇಕವಾದ ಕೌಂಪೌಂಡು. ಮುಂದುಗಡೆ ವರಾಂಡ. ಅದರ ಒಂದು ಪಕ್ಕಕ್ಕೆ ವಿಶಾಲವಾದೊಂದು ಕೋಣೆ. ವರಾಂಡದಿಂದ ಒಳಹೊಕ್ಕರೆ ನಡುಮನೆ. ಆ ಬದಿಗೆ ಈ ಬದಿಗೆ ಒಂದೊಂದು ಮಲಗುವ ಕೋಣೆಗಳು. ಒಳಗಡೆಗೆ ಊಟದ ಮನೆ, ಅಡಿಗೆಮನೆ, ಸಾಮಾನುಗಳನ್ನು ಇಡುವ ಕೋಣೆ. ಬಚ್ಚಲು ಮನೆಯಲ್ಲೂ ನಲ್ಲಿಗಳು, ಎಲೆಕ್ಟ್ರಿಕ್‌ದೀಪ. ಒಟ್ಟಿನಲ್ಲಿ ಅಚ್ಚುಕಟ್ಟಾಗಿತ್ತು. ಜೀವರತ್ನಂ ಮಂಚ, ಕುರ್ಚಿ, ಮೇಜು, ಪಾತ್ರೆ ಪದಾರ್ಥ ಎಲ್ಲವನ್ನೂ ತರಿಸಿ ಹಾಕಿದ. ಸುಂದರಿ - ಮುನಿ ಇಬ್ಬರೂ ಕೂಡಿ ಅವೆಲ್ಲವನ್ನೂ ಓರಣವಾಗಿ ತೆಗೆದಿಟ್ಟರು. ಮುಂದಿನ ಕೋಣೆಯನ್ನು ಮನೆಗೆ ಬಂದವರ ಕೂಡ ಕುಳಿತು ಮಾತನಾಡು ವುದಕ್ಕೆಂದು ಮೀಸಲಿಡಲಾಯಿತು. ನಡುಮನೆಯ ಕೋಣೆಗಳನ್ನು ಸುಂದರಿ - ಮುನಿ ಒಬ್ಬೊಬ್ಬರು ಒಂದದನ್ನು ಆರಿಸಿಕೊಂಡರು.

"ಎಲ್ಲಾ ಸರಿ, ಆದರೂ ಯಾಕೋ ಪಿಚ್ಚೆನ್ನತ್ತೆ" ಎಂದಳು ಮುನಿ.

"ಇನ್ನೇನು ಬೇಕಾಗಿದೆ ಹೇಳು. ಸಂಕೋಚಪಟ್ಕೋಬೇಡ." ಜೀವರತ್ನಂ ಕೇಳಿದ.

"ಗೋಡೆಗಳು ಬೆಕೋ ಅನ್ನಸ್ತವೆ. ಪಠಗಳಿದ್ದರೆ ಚೆನ್ನ" ಸುಂದರಿ ಮುನಿಯು ಒಗಟನ್ನು ಬಿಡಿಸಿದಳು.

"ಅದಕ್ಕೇನು ತರ್ತೀನಿ. ಎಂಥಾ ಪಠಗಳು ಬೇಕು" ಜೀವರತ್ನಂ ಮುನಿಯ ಮುಖ ನೋಡುತ್ತ ಕೇಳಿದ.

"ಅವೂ ಇವೂ, ಹಾಳೂ ಮೂಳು ಪಠ ತರ್ಬೇಡಿ. ದೇವರ ಪಠಗಳ್ನ ತನ್ನಿ—ಪಾರ್ವತಿ ಪರಮೇಶ್ವರ, ಶೇಷಶಾಯಿ ವಿಷ್ಣು, ಲಕ್ಷ್ಮಿ ಸರಸ್ವತಿ, ರಾಧಾಕೃಷ್ಣ, ತಿರುಪತಿ ವೆಂಕಟಾಚಲಪತಿ........ಹಾಗೇ ಒಂದು ಗೌತಮಬುದ್ಧ."

"ಗೌತಮಬುದ್ಧ! ಸುಖ ಸಂಪತ್ತು, ರಾಜ್ಯಕೋಶ, ಮನೆ ಮಠ, ಹೆಂಡತಿ ಮಕ್ಕಳು ಎಲ್ಲವನ್ನೂ ಬಿಟ್ಟು ಕಾಡಿಗೆ ಓಡಿಹೋಗಿ ಸನ್ಯಾಸಿ ಯಾದವನ ಪಠ!"

"ಹೌದು. ನಮ್ಮ ತಂದೆ ಒಂದ್ಸಾರಿ ಆ ನಾಟ್ಕ ತಂದು ಓದಿದ್ದರು. ಜಗತ್ತಿನ ಕೋಟ್ಯಾಂತರ ಜನರ ಸುಖಕ್ಕೆ, ಅವರ ದುಃಖ ಪರಿಹರಿಸೋ ದಕ್ಕೆ ತನ್ನ ಸ್ವಸುಖಾನ ತ್ಯಾಗ ಮಾಡಿದ ಮಹಾನುಭಾವ. ರಾಜಪುತ್ರ ನಾಗಿ ಎಂತಹ ವೈಭವ ಅಟ್ಟಹಾಸಗಳಲ್ಲಿ ಇರಬಹುದಾಗಿತ್ತು ಅವನು. ಆದರೆ ಅವೆಲ್ಲ ಅಶಾಶ್ವತ, ಅಸುಖ. ಸುಖ ತೋರಿದಂತೆ ತೋರಿ ದುಃಖಪರಂಪರೆಯನ್ನೇ ತಂದೊಡ್ಡುತ್ತವೆ ಅಂತ ತಿಳಿದು, ಹಾಗೆ ತಾನು ತಿಳಿದದ್ದನ್ನು ಮಾನವ ಕಲ್ಯಾಣಕ್ಕಾಗಿ ಬೋಧಿಸಿದ. ಅಂತಹ ಮಹಾನು ಭಾವನ ಪಠ ನಮ್ಮ ಕಣ್ಣೆದುರಿಗಿದ್ದರೆ ದೌರ್ಬಲ್ಯದಿಂದ ಪಾಪ ಯೋಚನೆಗಳು ನಮ್ಮ ಮನಸ್ಸಿನಲ್ಲಿ ಸುಳಿದಾಗ ಅದು ಎಚ್ಚರಕೊಡುತ್ತದೆ. ಅಲ್ಲವೆ?"

"ನಿಜ. ನೀನು ಎಷ್ಟೊಂದು ವಿಚಾರಗಳ್ನ ತಿಳ್ಕೊಂಡಿದ್ದೀ."

"ಮನುಷ್ಯ ತಿಳ್ಕೋಳ್ಳೋದು ಸುಲಭ. ತಿಳ್ಕೊಂಡಂತೆ ಆಚರಿ ಸೋದು ಕಷ್ಟ. ಏನು ಮಾಡೋದು, ಈ ಹಾಳು ಹೊಟ್ಟೆಪಾಡಿಗಾಗಿ

ಎಲ್ಲಾ ವೇಷಗಳನ್ನೂ ಕಟ್ಬೇಕು. ತಿಳಿದೂ ತಿಳಿದೂ ಪಾಪ ಕೆಲಸಗಳ್ನೇ ಮಾಡ್ತಿರ್ಬೇಕು."

"ಪಾಪವೋ ಪುಣ್ಯವೋ, ಅದನ್ನೆಲ್ಲಾ ಕಟ್ಕೊಂಡು ನಮಗೇನು. ನಾವು ಹುಟ್ಟಿರೋದು ಸುಖ ಪಡೋದಕ್ಕೆ. ಊಟ ಮಾಡೋದೂ ದೇಹ ಸುಖವಾಗಿರಲೆಂದೇ ಅಲ್ಲವೆ. ದೇಹ ಸುಖವಾಗಿದ್ದರೆ ಬುದ್ಧಿ, ಮನಸ್ಸು ಇಂದ್ರಿಯಗಳ ಸುಖ ಬಯಸತ್ತೆ. ಅದೆಲ್ಲಾ ಬೇಡ ಅಂದರೆ ಮನುಷ್ಯ ಬದುಕಿರೋದೇ ಸಾಧ್ಯವಿಲ್ಲವಾಗತ್ತೆ. ಆದ್ದರಿಂದ ನಮಗೆ ಅಂತರಿಕ್ಷ ದಲ್ಲಿರೋ ಆ ಅಧ್ಯಾತ್ಮ ಬೇಡ. ನಮ್ಮ ಕೈಯಲ್ಲಿರೋ ಸುಖ ಅನುಭವಿ ಸೋಣ. ಅದರಿಂದ ಕಷ್ಟ ಬಂದರೆ ಅದನ್ನೂ ಅನುಭವಿಸಿಬಿಡೋಣ"

—ಎಂದು ಹೇಳಿ ಜೀವರತ್ನಂ ಆ ಮಾತನ್ನು ಅಲ್ಲಿಗೇ ಮುಗಿಸಿದ.

ಮಾರನೆಯ ದಿವಸ ಚಿತ್ರಪಟಗಳು ಬಂದವು. ಮುನಿಯ ಮನಸ್ಸನ್ನು ಉಲ್ಲಸಿತಗೊಳಿಸಲು ಗೌತಮ ಬುದ್ಧನ ಚಿತ್ರಪಟವು ಬಂದಿತು. ಜೊತೆಗೆ ಮೂರು ದೊಡ್ಡ ಸೈಜಿನ ಕನ್ನಡಿಗಳನ್ನು ತಂದಿದ್ದ. ಅಕ್ಕತಂಗಿಯರಿಬ್ಬರೂ ಸೇರಿ ಪಟಗಳನ್ನು ತೂಗುಹಾಕಿ ಗೋಡೆಗಳನ್ನು ಅಲಂಕರಿಸಿದರು. ಒಂದೊಂದು ಕೋಣೆಯಲ್ಲಿ ಒಂದೊಂದು ಕನ್ನಡಿ ಇಟ್ಟದ್ದಾಯಿತು.

ಆ ಮೊದಲ ದಿನಗಳಲ್ಲಂತೂ ಜೀವರತ್ನಂಗೆ ಮುನಿಯನ್ನು ಒಂದು ಅರೆಘಳಿಗೆಯಾಗಲಿ ಬಿಟ್ಟಿರಲು ಮನಸ್ಸಾಗಲಿಲ್ಲ. ಕೋರ್ಟು - ಕಛೇರಿ ಗಳನ್ನೂ ಮರೆತು ಸದಾ ಅವಳ ಬಳಿಯೇ ಇರುತ್ತಿದ್ದ. ಅವಳ ಬಾಹು ಬಂಧನದಲ್ಲಿ ಅವನಿಗೆ ಸ್ವರ್ಗಸುಖ ಲಭಿಸಿದಂತಾಗಿತ್ತು. ತಂಗಿಯ ಸೌಭಾಗ್ಯವನ್ನು ಕಂಡು ಸುಂದರಿ ಬಹಳವಾಗಿ ಹಿಗ್ಗಿದಳು.

ಸುಂದರಿಯೂ ಹಲವಾರು ರಸಿಕರ ಸ್ನೇಹವನ್ನು ಸಂಪಾದಿಸಿದಳು. ದಿನ ಉರುಳಿದಂತೆ ಮನೆಯಲ್ಲಿ ಲಕ್ಷ್ಮಿ ತಾಂಡವವಾಡತೊಡಗಿದಳು. ಯಾವುದಕ್ಕೂ ಕೊರತೆಯಿರಲಿಲ್ಲ. ಕೊನೆಗೂ ತಮ್ಮ ಜೀವನ ಒಂದು ಸುಖದ ಮಟ್ಟವನ್ನು ಮುಟ್ಟಿದುದಕ್ಕಾಗಿ ಸುಂದರಿ - ಮುನಿ ಬಹಳ ಹರ್ಷ ಗೊಂಡರು.

ಜೀವರತ್ನಂಗಾದರೋ ದಿನ ಕಳೆದಂತೆಲ್ಲ ಮನೆಗೆ ಬರುತ್ತಿದ್ದ ಸುಂದರಿಯ ಗೆಳೆಯರ ಬಳಗವನ್ನು ಕಂಡು ಮನಸ್ಸಿಗೆ ಬಹಳ ಬೇಸರವಾಗ

ತೊಡಗಿತು. ಆದರೆ ಅದನ್ನು ವಿರೋಧಿಸಿ ಅವನು ಮಾತನಾಡುವಂತಿರಲಿಲ್ಲ. ಸುಂದರಿಯ ಬಗ್ಗೆ ಅವಳು ಏನು ಬೇಕಾದರೂ ಮಾಡಿಕೊಳ್ಳಬಹುದೆಂದು ಅವನು ಮೊದಲೇ ಒಪ್ಪಿಗೆ ಕೊಟ್ಟಿದ್ದುದು ನುಂಗಲೂ ಆಗದ ಉಗಿಯಲೂ ಆಗದ ತುತ್ತಾಗಿತ್ತು. ಒಂದೊಂದು ದಿನವಂತೂ ಮನೆ 'ಮಟನ್ ಮಾರ್ಕೆಟ್ಟ'ನ್ನೂ ಮೀರಿಸಿಬಿಡುತ್ತಿತ್ತು. ಅದು ಜೀವರತ್ನಂನ ಸ್ವಾಭಿಮಾನವನ್ನು ಕಲಕಿಬಿಡುತ್ತಿತ್ತು. ಎಲ್ಲಕ್ಕೂ ಹೆಚ್ಚಾಗಿ ಅವನಿಗೆ ಮುನಿಯ ಬಗ್ಗೆ ಇಲ್ಲದ ಅನುಮಾನ ಕಾಡುವಂತಾಯಿತು.

ಕಡೆಗೂ ಒಂದು ದಿನ ಅವನ ಸಹನೆಯ ದಡ ಕಳಚಿಕೊಂಡಿತು. ಅವನು ಮನೆಗೆ ಬಂದಾಗ ಸುಂದರಿಯ ನಾಲ್ಕಾರು ಗೆಳೆಯರು ಹರಟೆ ಕೊಚ್ಚುತ್ತಿದ್ದರು. ಮುನಿಯೂ ಅವರೊಂದಿಗೆ ಕುಳಿತಿದ್ದಳು. ಜೀವರತ್ನಂ ಕೋಪದ ಉದ್ವೇಗದಲ್ಲಿ ಮನಸ್ವೀ ಮಾತನಾಡಿದ—

"ಇದೇನು ಮನೇನೋ, ಇಲ್ಲ ಪಡಖಾನೇನೋ. ಸಿಕ್ಕಿದ ಜನ ಸಿಕ್ಕಿದ ಹಾಗೆ ಬರೋದಕ್ಕೆ. ಹಾಳು ಬೇವಾರ್ಸಿ ಸೂಳೇ ಮಕ್ಕಳು."

"ರೀ, ಮಿಸ್ಟರ್, ಕೊಂಚ ಮರ್ಯಾದೆಯಾಗಿ ಮಾತ್ನಾಡಿ."

—ಮರ್ಯಾದಸ್ಥನೊಬ್ಬ ಎದುರುಬಿದ್ದ.

ಅವನನ್ನನುಸರಿಸಿ ಉಳಿದವರೂ ಜೀವರತ್ನಂನನ್ನು ತಟಕಾಯಿಸಿದರು—

"ದೊಡ್ಡಲಾಯರ್ರು ಅಂತ ಹೇಳ್ಕೋತೀರಿ. ಮಾತು ಮಾತ್ರ ಲೋಫರ್‌ಗಳಂತೆ ಆಡ್ತೀರಲ್ರೀ"

"ನಿಮ್ಮಪ್ಪ ಲೋಫರ್ರು."

"ನಿಮ್ಮಾತ."

ಪರಿಸ್ಥಿತಿ ಬಿಗಡಾಯಿಸಿಕೊಂಡಿತು.

"ಇದು ನನ್ನ ಮನೆ. ಗೆಟ್‌ಔಟ್."

"ಇದು ನಿನ್ನ ಮನೆ ಅಂತ ಹೊರಗಡೆ ಬೋರ್ಡ್ರು ಹಾಕಿಲ್ಲ ಕಣಯ್ಯ. ಕಸುಬಿನೋರ ಮನೆ ಅಂತ ಪಬ್ಲಿಕ್ ಆಗೇ ಗೊತ್ತಿದೆ. ನೀನ್ಯಾರಯ್ಯ ಕೇಳೋಕೆ. ನೀನೇ ಗೆಟ್‌ಔಟ್"

"ನಿಮ್ಮನ್ನೆಲ್ಲಾ ಕೋರ್ಟಿಗೆ ಎಳಸ್ತೀನಿ ಹುಷಾರ್,. ಟ್ರೆಸ್‌ಪಾಸ್ ಮಾಡಿದೀರಿ ಅಂತ. ಅಂಡರ್‌ಸ್ಟಾಂಡ್ ?"

"ಹೋಗಯ್ಯ, ನೀನೊಬ್ಬನೇ ಅಲ್ಲ, ನಾವೂ ಕೋರ್ಟು ಕಂಡಿದೀವಿ. ನಿನ್ನ ಮೇಲೆ ಡಿಫೇಮೇಷನ್‌ಗೆ ಹೋಗ್ತೀವಿ ತಿಳ್ಕೋ."

ಸುಮಾರು ಅರ್ಧ ಗಂಟೆಯ ಹೊತ್ತು ಮಾತಿನ ಕದನವೇ ನಡೆಯಿತು. ಮುಂಗಾರಿನ ಗುಡುಗು ಸಿಡಿಲುಗಳಂತೆ ಆರ್ಭಟ ನಡೆಯಿತು. ಅನಿರೀಕ್ಷಿತವಾಗಿ ಬಂದೊದಗಿದ ಈ ಪ್ರಸಂಗದಿಂದ ದಿಗಿಲುಗೊಂಡ ಸುಂದರಿ - ಮುನಿ ಅಲ್ಲಿಂದ ಯಾವಾಗಲೋ ನುಸುಳಿ ಕೊಂಡು ಒಳಹೋಗಿ ತಮ್ಮ ತಮ್ಮ ಕೋಣೆಗಳನ್ನು ಸೇರಿಕೊಂಡರು.

ಗದ್ದಲವನ್ನು ಕೇಳಿ ರಸ್ತೆಯಲ್ಲೂ ಜನ ಸೇರತೊಡಗಿದರು. ಅದನ್ನು ನೋಡಿದ ಮೇಲೆ ಜೀವರತ್ನಂ ಭಯಗೊಂಡ. ಇದೆಲ್ಲಿ ಬೀದಿಯ ಹಗರಣವಾದೀತೋ, ತನ್ನ ಮಾನ ಎಲ್ಲರ ಮುಂದೂ ಎಲ್ಲಿ ಹೋದೀತೋ ಎಂದು ಹೆದರಿದ. ಅವನು ಅಲ್ಲಿ ನಿಲ್ಲದೆ ಬುಸುಗುಟ್ಟುತ್ತ ಮನೆಯೊಳಕ್ಕೆ ನಡೆದ. ಕೊಂಚ ಹೊತ್ತಿನ ನಂತರ ಸುಂದರಿಯ ಗೆಳೆಯರೂ ಹಲವು ಚಿಲ್ಲರೆ ಮಾತುಗಳನ್ನಾಡುತ್ತ ಅಲ್ಲಿಂದ ಹೊರಟುಹೋದರು.

ಜೀವರತ್ನಂ ಸಿಟ್ಟು ಇನ್ನೂ ಶಾಂತವಾಗಿರಲಿಲ್ಲ. ಅವನು ನಡುಮನೆಯಲ್ಲಿ ನಿಂತಲ್ಲಿಂದಲೇ ಒದರಿದ.

"ಏಯ್ ಮುನಿ, ಹೀಗೆಲ್ಲಾ ಪೋಲಿ ಪುಂಡರ್ನೆಲ್ಲಾ ಸೇರಸ್ಕೊಳ್ಳೋದಾದ್ರೆ ನಾನೇ ಈ ಮನೇಗೆ ಬರೋದಿಲ್ಲ. ನನಗೇನು ಮಾನ ಮರ್ಯಾದೆ ಯಾವುದೂ ಇಲ್ಲ ಅಂತ ತಿಳ್ಕೊಂಡ್ಬಿಟ್ಟಿದ್ದೀರೋ. ನಿಮ್ಮ ಅಕ್ಕನಿಗೆ ಅವಳ ಗೆಳೆಯರು ಬೇಕಾದರೆ ಅವಳೇ ಎಲ್ಲಾದರೂ ತೊಲಗಿ ಹೋಗಲಿ."

ಮೊದಲೇ ಆ ಕಹಿ ವಾತಾವರಣದಿಂದ ನೊಂದಿದ್ದ ಸುಂದರಿಗೆ ಜೀವರತ್ನಂನ ಮಾತುಗಳು ಅಂಬಿನ ಮೊನೆ ಚುಚ್ಚಿದಂತಾಯಿತು. ಅವಳ ಕಣ್ಣುಗಳು ಹನಿಗೂಡಿದವು. ತನ್ನಿಂದಾಗಿ ತನ್ನ ತಂಗಿಯ ಸುಖವೇಕೆ ಮಣ್ಣುಗೂಡಬೇಕು ಎಂದು ಅವಳು ಯೋಚಿಸಿದಳು. ಅಗತ್ಯವೆನಿಸಿದ ಹಲವು ಬಟ್ಟೆ ಬರೆಗಳನ್ನೂ, ಕೊಂಚ ಹಣವನ್ನೂ ಕೈಚೀಲವೊಂದರಲ್ಲಿ

ತುರುಕಿಕೊಂಡಳು. ಅಂದೇ ಆ ಮನೆಯನ್ನು ಬಿಟ್ಟು ಹೊರಡಲು ನಿರ್ಧರಿಸಿದಳು.

ಸಂಜೆ ಜಾರಿ ರಾತ್ರಿ ಕಾಲಿಟ್ಟಿತು. ಜೀವರತ್ನಂ ಮುನಿಯ ಕೋಣೆಯನ್ನು ಸೇರಿಕೊಂಡಿದ್ದ. ಸುಂದರಿ ತನ್ನ ಕೋಣೆಯಿಂದ ಹೊರಬಿದ್ದಳು. ತಂಗಿಯ ಕೋಣೆಯ ಕಡೆಗೊಮ್ಮೆ ನೋಡಿದಳು. ಅವಳಿಗೆ ಕರುಳು ಕತ್ತರಿಸಿದಂತಾಯಿತು. ದುಃಖ ಒತ್ತರಿಸಿ ಬಂತು. ತಂಗಿಗೆ ಒಂದು ಮಾತು ಹೇಳಿ ಹೋಗುವುದೇ ಎಂದು ಕ್ಷಣ ಹೊತ್ತು ಅವಳು ಚಿಂತಿಸಿದಳು. ಆದರೆ ತಂಗಿಗೆ ತನ್ನ ನಿರ್ಧಾರವನ್ನು ಹೇಳಿದರೆ ಅವಳು ತನಗಾಗಿ ಜೀವರತ್ನಂನನ್ನೇ ತೊರೆದುಬಿಡಬಹುದು, ಅದರಿಂದ ಅವಳ ಸುಖವನ್ನು ತಾನಾಗಿಯೇ ಕೆಡಿಸಿದಂತಾಗಬಹುದು ಎಂದು ಹಿಂಜರಿದಳು. ಒಸರುತ್ತಿದ್ದ ಕಂಬನಿಗಳನ್ನು ಸೆರಗಿನ ತುದಿಯಿಂದ ಒರಸಿಕೊಂಡು ಮೊಂಡು ಧೈರ್ಯ ತಂದುಕೊಂಡಳು. ನಿಶ್ಶಬ್ದವಾಗಿ ಹೊರಬಾಗಿಲನ್ನು ತೆರೆದು, ರಸ್ತೆ ಸೇರಿ ಭಾರವಾದ ಹೃದಯದಿಂದ ಹೆಜ್ಜೆಗಳನ್ನಿಡುತ್ತ ಕತ್ತಲಲ್ಲಿ ಕಣ್ಮರೆಯಾದಳು.

ಮರುದಿನ ಬೆಳಗಾಗುತ್ತಲೂ ಮನೆಯಲ್ಲಿ ಅಕ್ಕನನ್ನು ಕಾಣದೆ ಮುನಿ ಬಹಳ ಗಾಭರಿಗೊಂಡಳು. ದಿಕ್ಕುತೋರದೆ ಗಳಗಳನೆ ಅತ್ತಳು. ಸುತ್ತಮುತ್ತಲಿನಲ್ಲೆಲ್ಲಾ ಹೋಗಿ ಹುಡುಕಾಡಿದಳು. ಹುಡುಕಿ ಕರೆತರುವಂತೆ ಜೀವರತ್ನಂನನ್ನೂ ಬೇಡಿಕೊಂಡಳು.

ಜೀವರತ್ನಂಗೆ ಸುಂದರಿ ಮನೆ ಬಿಟ್ಟು ಹೊರಟುಹೋದುದು ಬಹಳ ಸಮಾಧಾನವೆನ್ನಿಸಿತು.

"ಎಲ್ಲಿ ಹೋದ್ಲೋ. ಅವಳಿಗೇನು ಒಬ್ಬರೇ ಇಬ್ಬರೇ ಹುಡುಕೋದಕ್ಕೆ. ಎಳೇ ಮಗೂನೇ ಅವಳು" ಎಂದುಬಿಟ್ಟ.

ಮುನಿ ತನ್ನ ಸಂಕಟವನ್ನು ಹೊಟ್ಟೆಯಲ್ಲಿ ಬಚ್ಚಿಟ್ಟುಕೊಂಡು ಕೊರಗುತ್ತ ಸುಮ್ಮನಾಗಬೇಕಾಯಿತು.

ಕಾಲದ ಅನಂತಾನಂತ ಪರಿಮಾಣದಲ್ಲಿ ತಿಂಗಳೆರಡು ಕಳೆದು ಹೋದವು. ಜೀವರತ್ನಂ ಒಮ್ಮೆ ಒಂದು ವಾರವಾದರೂ ಮುನಿಯ ಮನೆಗೆ ಬರಲಿಲ್ಲ. ದಿನವೂ ತಪ್ಪದೆ ಬರುತ್ತಿದ್ದ. ಅವನು ಯಾವ

ಮಾತೂ ಆಡದೆ, ಹಾಗೆ ಬರದೇ ನಿಂತುದನ್ನು ನೋಡಿ ಮುನಿಗೆ ಜೀವವೇ ಹಾರಿಹೋದಂತಾಯಿತು.

ಒಂದು ವಾರದ ನಂತರ ಜೀವರತ್ನಂನ ಆಪ್ತಮಿತ್ರನೊಬ್ಬನು ಮುನಿಯನ್ನು ಹುಡುಕಿಕೊಂಡು ಬಂದು ಜೀವರತ್ನಂಗೆ ವಿಷಮಶೀತಜ್ವರ (Typhoid) ಕಾಣಿಸಿಕೊಂಡು ಅವನು ಆಸ್ಪತ್ರೆಯಲ್ಲಿ ಮಲಗಿರುವನೆಂದು ಹೇಳಿದ. ತನ್ನನ್ನು ನೋಡಲು ಮುನಿ ಬರಕೂಡದೆಂದು, ತನ್ನ ಮತ್ತು ಅವಳ ಸಂಬಂಧ ತನ್ನ ಜನಕ್ಕೆ ತಿಳಿದರೆ ಮಾನ ಹೋಗುವುದೆಂದು ಜೀವ ರತ್ನಂ ಹೇಳಿಕಳಿಸಿದ್ದ. ಮುನಿ ತಲೆಯ ಮೇಲೆ ಕೈ ಹೊತ್ತು ಅಳುತ್ತ ಕುಳಿತಳು. ಜೀವರತ್ನಂನನ್ನು ನೋಡಲು ಅವಳ ಮನಸ್ಸು ಕಾತರಿಸಿತು. ಆದರೆ ಉಪಾಯವಿರಲಿಲ್ಲ. ಬರಕೂಡದೆಂದು ಅವನು ಕಟ್ಟಪ್ಪಣೆ ಮಾಡಿರು ವಾಗ ಹೋಗುವುದಾದರೂ ಹೇಗೆ ? ಅವಳ ಮೂಕಸಂಕಟದಲ್ಲಿ ಊಟ, ನಿದ್ರೆ ಯಾವುದೂ ಬೇಕಾಗಲಿಲ್ಲ.

ಹದಿನೈದು-ಇಪ್ಪತ್ತು ದಿನಗಳು ಕಳೆದನಂತರ ಮತ್ತೊಂದು ದಾರುಣ ವರ್ತಮಾನವನ್ನು ಅದೇ ಜೀವರತ್ನಂನ ಮಿತ್ರ ತಂದ. ಜೀವರತ್ನಂಗೆ ಪಾರ್ಶವಾಯು ರೋಗ ಬಡಿದಿದೆ, ಅವನು ಎದ್ದು ನಿಲ್ಲುವುದಕ್ಕೂ ಕೂಡ ಶಕ್ತನಾಗಿಲ್ಲ, ಇನ್ನು ಮುಂದೆ ಮುನಿಗೆ ಆಶ್ರಯ ಕೊಡಲು ಅವನಿಂದ ಸಾಧ್ಯವಿಲ್ಲ, ಅವಳು ತನಗೆ ಅನುಕೂಲ ತೋರಿದಂತೆ ಮಾಡಿಕೊಳ್ಳ ಬಹುದು ಎಂದು ಹೇಳಿದ. ಆ ಮಾತು ಕೇಳಿ ಮುನಿ ಭೂಮಿಗೆ ಇಳಿದು ಹೋದಳು. ಅವಳ ಜಂಘಾಬಲವೇ ಉಡುಗಿಹೋಯಿತು. ಮುಗಿಲು ಗಳೊಂದಿಗೆ ಗಗನಮಂಡಲವೇ ತಲೆಯ ಮೇಲೆ ಕವಿಚಿಕೊಂಡಂತಾಯಿತು.

ದಿನಗಳು ಉರುಳಿದವು. ಮುನಿಯ ಮನಸ್ಸಿಗೆ ಇನಿತಾದರೂ ನೆಮ್ಮದಿಯಿಲ್ಲದ ದುರ್ದಿನಗಳು ಅವು. ಇನ್ನು ಮುಂದೆ ಬಾಳಿನಲ್ಲಿ ಏನು ಮಾಡಬೇಕು, ಎತ್ತ ಹೋಗಬೇಕು ಎಂಬ ಬಗೆಹರಿಯದ ದೀರ್ಘ ಚಿಂತೆ ಗಳಲ್ಲಿ ಆ ದೀರ್ಘವಾದ ದುರ್ದಿನಗಳನ್ನು ಕಳೆದಳು ಮುನಿ. ಅವಳಿಗಿದ್ದ ಒಂದೇ ಒಂದು ಕರುಳಿನ ತಂತು ಎಂದರೆ ಸುಂದರಿ. ಈಗ ಅದೂ ಕಡಿದು ಬಿದ್ದಿತ್ತು. ಸುಂದರಿಯನ್ನು ಹುಡುಕಿಕೊಂಡು ಮುನಿ ಎಲ್ಲೆಲ್ಲೋ ಅಲೆದಳು.

ಆವಳೆಲ್ಲಿ ಹೋದಳು, ಎಲ್ಲಿರುವಳು ಎಂಬುದು ಕೊನೆಗೂ ಪತ್ತೆಯಾಗಲಿಲ್ಲ. ಮುನಿ ಕೊರಗಿ ಕೊರಗಿ ಕೃಶವಾದಳು.

ಒಂದು ದಿನ ಮುನಿ ಸುಂದರಿಯನ್ನು ಹುಡುಕುತ್ತ ಅಲೆದಲೆದು ಬೇಸತ್ತು ಅದೇ ತಾನೆ ಮನೆಗೆ ಬಂದು ನಡುಮನೆಯಲ್ಲಿ ಚಾಪೆಯ ಮೇಲೆ ತೋಳಿಗೆ ತಲೆಕೊಟ್ಟು ಬಿದ್ದುಕೊಂಡಿದ್ದಳು. ಬಳಲಿಕೆಯಿಂದ ಒಂದು ತೆರನಾದ ಜೊಂಪರು ಹತ್ತಿತ್ತು. ಅಷ್ಟರಲ್ಲಿ ಹೊರಬಾಗಿಲನ್ನು ತಟ್ಟಿದ ಶಬ್ದ ಕೇಳಿ ಬಂತು. ಮುನಿ ಥಟ್ಟನೆದ್ದು ಹೋಗಿ ಬಾಗಿಲು ತೆರೆದಳು. ಹಿಂದೆರಡು ಬಾರಿ ಬಂದಿದ್ದ ಜೀವರತ್ನಂ ಮಿತ್ರ, ಅವನೊಂದಿಗೆ ಸೂಟು ಬೂಟುಧಾರಿಯಾದ ಮಧ್ಯವಯಸ್ಕನಾದ ಇನ್ನೊಬ್ಬ ವ್ಯಕ್ತಿ ಇಬ್ಬರೂ ಮನೆಯೊಳಕ್ಕೆ ಪ್ರವೇಶಿಸಿದರು.

"ಏನು ಬಹಳ ಇಳಿದುಹೋಗಿಬಿಟ್ಟಿದೀರಲ್ಲಾ. ಹೀಗೆ ಮನಸ್ಸಿಗೆ ಚಿಂತೆ ಹಚ್ಚಿಸಿಕೊಂಡರೆ ಏನು ಪ್ರಯೋಜನ. ಅವೆಲ್ಲಾ ಋಣಾನುಬಂಧ. ಎಷ್ಟೆಷ್ಟೋ ಅಷ್ಟಷ್ಟೆ. ಹರಿದುಹೋದ ಹಳೆ ನೀರಿಗೆ ಕಣ್ಣೀರು ಬಿಡುತ್ತ ಕುಳಿತುಕೊಳ್ಳೋದರಿಂದ ಬಂದ ಲಾಭವೇನು ? ಹೊಸ ನೀರು ಬಂದದ್ದನ್ನು ಕುಡಿದುಕೊಂಡು ಬಾಳು ಸಾಗಿಸಬೇಕು," ಜೀವರತ್ನಂನ ಮಿತ್ರ ಮುನಿಯ ಕಡೆ ನೋಡುತ್ತ, ಹೇಳಿದ.

ಮುನಿ ಯಾವ ಮಾತೂ ಆಡಲಿಲ್ಲ. ಬಂದವರಿಬ್ಬರೂ ನಡುಮನೆಯಲ್ಲಿ ಹಾಕಿದ್ದ ಕುರ್ಚಿಗಳ ಮೇಲೆ ಕುಳಿತನಂತರ ಹೊಸಬನನ್ನು ಮುನಿಗೆ ಪರಿಚಯಮಾಡಿ ಕೊಡುತ್ತ ಆತನೇ ಮತ್ತೆ ಹೇಳಿದ—

"ನೋಡಿ, ಇವರು ಸರ್ಕಾರದಲ್ಲಿ ದೊಡ್ಡ ಅಧಿಕಾರದಲ್ಲಿದ್ದಾರೆ. ಸಾವಿರಾರು ರೂಪಾಯಿ ಸಂಬಳ ತೆಗೀತಾರೆ. ಇಂಗ್ಲೆಂಡು ಅಮೇರಿಕಾ ದೇಶಗಳಿಗೆಲ್ಲಾ ಹೋಗಿ ಅಧಿಕಾರ ಮಾಡಿದ್ದಾರೆ. ಸಿಂಗಾರವೇಲು ಮೊದಲಿಯಾರ್ ಅಂತ ಇವರ ಹೆಸರು. ಜೀವರತ್ನಂ ನಿಮ್ಮ ಕೈಬಿಟ್ಟ ನಂತರ ನೀವು ಬಹಳ ಕಷ್ಟಕ್ಕೆ ಸಿಕ್ಕಿರಬೇಕು ಅಂತ ನನಗೆ ವ್ಯಸನ ವಾಗಿತ್ತು. ಆದ್ದರಿಂದ ಇವರನ್ನ ಕರ್ಕೊಂಡು ಬಂದಿದೀನಿ. ಇವರು ನಿಮಗೆ ಆಶ್ರಯ ಕೊಡೋದಕ್ಕೆ ಸಮ್ಮತಿಸಿದ್ದಾರೆ–ನೀವೂ ಒಪ್ಕೊಳ್ಳೊದಾದ್ರೆ........"

ಭಯಂಕರ ಬಿರುಗಾಳಿಯಿಂದ ಅಲ್ಲೋಲಕಲ್ಲೋಲವಾದ ಅಲೆಗಳ ನಡುವೆ ಸಿಕ್ಕಿ ಮುಳುಗುತ್ತಿದ್ದವನಿಗೆ ತಾನಾಗಿಯೇ ಬಂದ ಹೊಗೆಯ ಜಹಜೊಂದರ ಆಸರೆ ದೊರಕಿದಂತಾಯಿತು ಮುನಿಗೆ.

ಮುನಿ ಜೀವರತ್ನಂ ಮಿತ್ರ ನೀಡಿದ ಸಲಹೆಗೆ ಒಪ್ಪಿಗೆ ಕೊಟ್ಟಳು:—ಅದಲ್ಲದೆ ಅವಳಿಗೆ ಬೇರೆ ದಾರಿಯೇ ಇರಲಿಲ್ಲ. ಸಿಂಗಾರವೇಲು ಬೇರೊಂದು ಮನೆಯನ್ನು ಮಾಡಿ ಮುನಿಯನ್ನು ಅಲ್ಲಿಂದ ಕರೆದುಕೊಂಡು ಹೋದ.

೨೨

ಜಾಲರಿಮನೆ

"ಟಿಕ್........ಟಿಕ್........ಟಿಕ್"

"ಥತ್.... ಏನು ಹಾಳು ಜನಾನೋ.... ಹೊತ್ತಿಲ್ಲ ಗೊತ್ತಿಲ್ಲ. ಕೆವಲು ಹತ್ತಿದಾಗಲೆಲ್ಲಾ ಬರ್ತಿರೋದು........ಇದೇನು ಅಡ್ಡಕಸುಬಿಗಳ ಮನೆ ಅಂತ ತಿಳ್ಕೊಂಡ್ಬಿಟ್ರಿನೋ" ಗೊಣಗುತ್ತಲೆ ಎದ್ದು ಬಾಗಿಲು ತೆರೆದಳು ಚಂದ್ರಮ್ಮ.

"ಓ.... ಗೋಪಾಲೀನಾ.... ಬಾಣ್ಣ ಒಳೀಕ್ಕೆ."

ಗೋಪಾಲಿ ಒಳಗೆ ಬಂದ. ಜತೆಯಲ್ಲಿದ್ದ ವ್ಯಕ್ತಿಯೂ ಹಿಂಬಾಲಿಸಿತು. ಹಾಸಿದ್ದ ಚಾಪೆಯ ಮೇಲೆ ಗೋಪಾಲಿ ಕುಳಿತ. ಜೊತೆಯಲ್ಲಿದ್ದ ವ್ಯಕ್ತಿ ಹಾಗೆಯೇ ಗೋಡೆಗೊರಗಿ ನಿಂತಿತು.

"ಏನು ಮಲಗಿಬಿಟ್ಟಿದ್ಯಾ ?"

"ಇಲ್ಲ ಕಣಣ್ಣ. ಹಾಗೆ ದಿಂಬಿಗೆ ತಲೆಕೊಟ್ಟಿದ್ದೆ ಇದೇತಾನೆ."

"ಪುಟ್ಟಿ, ಬಸವಿ, ಸುಂದರಿ ಎಲ್ಲಾ ಮಲಗಿಬಿಟ್ರಾ ?"

"ಊ್ಞ.... ಗಿರಾಕಿಗಳು ಬಂದವ್ರೆ"

"ಹಾಗಾದರೆ ಔಸ್ ಫುಲ್ಲು ಅನ್ನು."

"ಏನು ಔಸ್‌ಫುಲ್ಲೋ. ದಿನಾ ಇದ್ದೇ ಇರ್ತದೆ ಗೋಳು ಒಂದು ದಿನದ್ದಾದರೆ ಸರಿ."

"ಯಾಕೆ, ಜೇಜಾರ್ನಲ್ಲಿದೀಯಲ್ಲಾ. ಪುಟ್ಟಿ, ಬಸವಿ, ಸುಂದರಿ ಸರಿಯಾಗಿದ್ದಾರೋ ಇಲ್ವೋ"

"ಇಲ್ದೇ ಏನ್ಮಾಡ್ತಾರೆ. ಆ ಪುಟ್ಟೀದೂ ಬಸವೀದೂ ದಿನಾ ಇದ್ದೇ ಇರ್ತದೆ ಕಚ್ಚಾಟ. ಬಸವಿ ಹೆಸರಿಗೆ ತಕ್ಕಹಾಗೆ ರಾಂಗ್ ಖೋರಿ.

ಹಿಡದ್ದೇ ಹಠ, ಹಾಕಿದ್ದೇ ಲಾಗ. ಕೈಯ್ಯಲ್ಲಿ ಹಂಟರ್ ಹಿಡಿದರೇಸೇ ಅವಳು ಹಾದಿಗೆ ಬರೋದು. ಎಲ್ರನ್ನೂ ಗೋಳ್ಹುಯ್ಕೋತಾಳೆ. ಆ ಸುಂದರಿ ಪಾಪ ಒಳ್ಳೇ ಹುಡುಗಿ. ಆರಕ್ಕೆ ಹೋಗಲ್ಲ, ಮೂರಕ್ಕೆ ಬರಲ್ಲ. ದೊಡ್ತರ."

"ಏನ್ಮಾಡೋದು. ಎಲ್ಲಾ ಒಂದೇ ಥರ ಇರ್ತಾರ ?"

"ಅವುಗಳ ಚಾಳು ನೋಡಿ ನನಗೂ ಒಂದೊಂದ್ಸಲ ರೇಗ್ತದೆ. ಆದರೆ ಮರುಗಳ್ಗೇಲೇ, ಹೊರಗಡೆ ಏನೇನು ಕಷ್ಟ ಅನುಭವಿಸಿ ಈ ನರಕಕ್ಕೆ ಬಂದು ಬಿದ್ದವೋ ಪಾಪ ಅಂತ ಮರುಕಾನೂ ಬರುತ್ತೆ. ಇಲ್ಲಾದ್ರೂ ಒಂದಷ್ಟು ಸುಖವಾಗಿರ್ಲಿ ಅನ್ನಸತ್ತೆ."

"ಆದು ಸರಿ, 'ಸುಖನಿವಾಸ' ಅಂತ ಬೋರ್ಡು ಹಾಕಿಸಿಬಿಡು" ಎನ್ನುತ್ತ ಗೋಪಾಲಿ ನಕ್ಕ.

"ಯಾರಣ್ಣ ಈ ಹುಡುಗಿ?" ಗೋಪಾಲಿಯ ಜತೆಯಲ್ಲಿ ಬಂದಿದ್ದ ವ್ಯಕ್ತಿಯ ಕಡೆ ತೋರಿಸುತ್ತ ಚಂದ್ರಮ್ಮ ಕುತೂಹಲದಿಂದ ಕೇಳಿದಳು.

"ಇವಳ್ನೂ ನಿನ್ನ 'ಸುಖನಿವಾಸ'ಕ್ಕೆ ಸೇರಿಸೋಣ ಅಂತ ಕರ್ಕೊಂಡು ಬಂದಿದೀನಿ."

"ಹ್ಞೂ........ಬರೋರು ಬರ್ತಾ ಇರ್ಲಿ. ಹೋಗೋರು ಹೋಗ್ತಾ ಇರ್ಲಿ. ಇನ್ನು ಮುಂಬಾಗ್ಲು ಹಿಂಬಾಗ್ಲು ಎಲ್ಲಾ ತೆಗಿಸಿ ಬಿಡ್ತೀನಿ, ಸುಮ್ನಿರು. ಅಲ್ಲೀಗೆ ಸುಖನಿವಾಸ ಸಲೀಸ್ ನಿವಾಸ ಆಗಿಹೋಗತ್ತೆ."

"ಸದ್ಯ ಹಾಗೆ ಮಾಡಿಬಿಡಬೇಡ ಮಹರಾಯ್ತಿ. ಮನೇಗೆ ಬಾಗಿಲು ಗಳಿದ್ರೇನೆ ಚೆನ್ನ. ಆ ಬಾಗಿಲುಗ್ಳೇ ಎಷ್ಟೋ ಜನರ ಮಾನ ಕಾಪಾಡ್ತಾ ಇವೆ."

"ಹೋಗ್ಲಿಬಿಡು ಎಲ್ಲೀ ಮಾತು. ನೀನು ಸುಖನಿವಾಸ ಅಂದ್ಯಲ್ಲ ಆದಕ್ಕೆ ಏಳ್ದೆ........ಊ್ಞಂ. ಈ ಉಡ್ಗಿ ಕತೆ ಏನು ?"

"ಅವಳ ಕತೇನೆಲ್ಲಾ ನಿನಗೆ ಪುರುಸತ್ತಿರೋವಾಗ ನಿಧಾನವಾಗಿ ಅವಳ್ನೇ ಕೇಳ್ಕೋ. ಈಗಿನ ಕತೆ ಎಷ್ಟು ಬೇಕೋ ಅಷ್ಟು ಮಾತ್ರ ನಾನು ಹೇಳ್ತೀನೆ....ಹುಡುಗಿ ಹೆಸರು ರುದ್ರಮ್ಮ ಅಂತ. ದಿಕ್ಕುದೆಸೆ ಕೆಟ್ಟದಾಳೆ. ರಾತ್ರಿ ಎಲ್ಲೆಲ್ಲೋ ಅಲೀತಾ ಇದ್ಲಂತೆ. ಪೋಲೀಸು ಕಾನ್‌ಸ್ಟೇಬಲ್ ಕೆಂಚಣ್ಣ ಸ್ಟೇಷನ್ನಿಗೆ ಕರ್ಕೊಂಡು ಹೋಗ್ತಾ ಇದ್ದ. ನಾನು ದಾರೀಲಿ

ಕಂಡೆ. ವಿಚಾರಿಸ್ದೆ. ವಿವರಗಳ್ನೆಲ್ಲಾ ತಿಳ್ಕೊಂಡೆ. ಅವನಿಗೆ ಹೇಳಿ ಇವಳ್ನ ಇಲ್ಲಿಗೆ ಕರ್‍ಕೊಂಡ್ಬಂದೆ."

"ಸರಿ."

"ನಾಳೇನೋ ನಾಡದ್ದೋ ಆ ಕೆಂಚಣ್ಣ ಇಲ್ಲಿಗೆ ಬರಬಹುದು ಕೊಂಚ ಕೈ ಬಿಸಿಮಾಡು."

"ಈ ಪೋಲೀಸ್ನೋರ್ದು ಇದ್ದೇ ಇರ್‍ತದಪ್ಪ–ನಿತ್ಯರೋಧನ. ನಾವು ಅವರಿಗೆ ಕೈಯ್ಯೂ ಬಿಸಿ ಮಾಡ್ಬೇಕು, ಮೈಯ್ಯೂ ಬಿಸಿ ಮಾಡ್ಬೇಕು. ಮೊನ್ನೆ ಏನಾಯ್ತು ಅಂತೀಯ. ರಾತ್ರಿ ಎರಡು ಘಂಟೆ ಸುಮಾರ್ನಲ್ಲಿ ಯಾವೋನೋ ಬಾಗಿಲು ತಟ್ಟಿದ. ಹೋಗಿ ಬಾಗಿಲು ತೆಗೆದ್ರೆ ಪೋಲೀಸ್ನೋನು. ಡ್ರೆಸ್ ಹಾಕಿದ್ದ. ಸೀದಾ ಒಳಕ್ಕೆ ಬಂದ.

"ಯಾರ್‍ಯಾರವ್ರೆ ಒಳಗೆ ಅಂದ. 'ಎಲ್ಲಾ ಪೋಲೀಸ್ ಸ್ಟೇಷನ್ನಿಗೆ ಹೊರಡಿ' ಅಂತ ಕೂಗಾಡ್ದ. ಗಿರಾಕಿಗಳು ಅದೆಂಥಾ ಗಂಡಸ್ರೋಪ್ಪ. ಮಲಗಿದ್ದ ತಾವಿಂದ ಹೆದರ್‍ಕೊಂಡು ಎದ್ದು ಬಂದ್ಬಿಡೋದಾ?"

"ಸರಿ. ಆಮೇಲೇ?"

"ಇನ್ನೇನು. ಅವರ್ನೆಲ್ಲಾ ನೋಡಿ—'ನಡೀರೀ ಸ್ಟೇಷನ್ನಿಗೆ' ಅಂದ. ಹ್ಯಾಪ್ ಮೋರೆ ಹಾಕ್ಕೊಂಡು ಗಡಗಡ ನಡಗ್ತ ನಿಂತ್ಕೊಂಡ್ರು ಗಿರಾಕಿಗಳು. 'ಇನ್ಮೇಲೆ ಬರೋಕಿಲ್ಲಪ್ಪ, ತಪ್ಪಾಯ್ತು ಈವತ್ತಿಗೆ ಬಿಟ್ಬಿಡು' ಅಂತ ಅಂಗಲಾಚೋಕೆ ಶುರುಮಾಡಿದ್ರು. 'ಜೋಬಿನಾಗೇನೈತೆ ಬಿಚ್ಚಿ' ಅಂದ ಆವನು. ಬಿಚ್ಚಿದರು. ಅವರ್‍ಹತ್ರ ಇದ್ದ ಬದ್ದ ದುಡ್ನೆಲ್ಲಾ ಕಸ್ಕೊಂಡು 'ಇನ್ನು ಹೊರಡಿ ಇಲ್ಲಿಂದ' ಅಂದ. ಗಿರಾಕಿಗಳು ಒಬ್ಬರ ಹಿಂದೊಬ್ರು ಸದ್ದು ಮಾಡದೆ ಹೊರಟುಹೋದರು ಆಮೇಲೆ....ಅವರೆಲ್ಲಾ ಹೊರಟ್ಹೋದ್ಮೇಲೆ ನನ್ನ ಕಡೆ ತಿರುಗಿ 'ಹುಡುಗೀರು ಯಾರ್‍ಯಾರು ಅವ್ರೆ ಮನೇಲಿ ಎಲ್ಲಾರ್‍ನೂ ಕರಸು' ಅಂದ. ನಂಗೆ ಬೇರೇ ಮಾರ್ಗಾನೇ ಇರಲಿಲ್ಲ. ಎಲ್ಲಾರ್‍ನೂ ಕರ್‍ದು ಅವನ ಮುಂದೆ ನಿಲ್ಲಿಸಿದೆ ಸಾಲಾಗಿ. ಹುಡುಗೀರ ಮುಖಾನೆಲ್ಲಾ ಒಂದ್ಕಡೇ ಇಂದ ನೋಡ್ದ. ಆಮೇಲಿ ಬಸವೀನ ತೋರಸ್ತ—

"'ಈವತ್ತು ರಾತ್ರಿ ನಾನು ಈ ಹುಡುಗಿ ಹತ್ರ ಇರ್‍ತೀನಿ' ಅಂದ ಬಸವೀಗೆ ಅವತ್ತು ಮದ್ಯಾಹ್ನದಿಂದ ಹುಷಾರಿರ್‍ಲಿಲ್ಲ.

"'ನನ್ನ ಕೈಯ್ನಲ್ಲಾಗಾಕಿಲ್ಲ, ನಂಗೆ ವೈನೆಟ್ಟಗಿಲ್ಲ' ಅಂತ ಅವಳಂದಳು.

"'ನಾನು ನೆಟ್ಟಗೆ ಮಾಡ್ತೀನಿ. ಒಳ್ಳೆ ಮಾತ್ನಲ್ಲಿ ರೂಮಿಗೆ ನಡೀತೀಯೋ, ಇಲ್ಲ ಪೋಲೀಸು ಸ್ಟೇಷನ್ನಿಗೆ ಎಳ್ಕೊಂಡು ಹೋಗಿ ಲಾತಾ ಬಿಗೀಬೇಕೋ' ಅಂತ ಹೆದರಸ್ದ. ಪಾಪ, ಬಸವಿ ಹೆದರ್ಕೊಂಡು ತುಟಿಪಿಟಕ್ಕೆನ್ನದೆ ಅವನ ಜೊತೇಲಿ ಹೋಗಿ ಮಲಕ್ಕೊಂಡಳು. ಬೆಳಗಿನ ಜಾವ ಐದು ಗಂಟೆವರ್ಗೂ ಬಿದ್ಕೊಂಡಿದ್ದು ಹೊರಟುಹೋದ ಅವನು. ಹೀಗೆ ನಮ್ಕಿಂದ ಹಣಾನೂ ಕಿತ್ಕೊಂಡು, ನಮಗಿಷ್ಟ ಇಲ್ಲದಿದ್ರೂ ನಮ್ಮನ್ನ ಹೆಣಾನೂ ಮಾಡೋದು ಈ ಪೋಲೀಸ್ನೋರ್ಗೆ ಯಾವ ನ್ಯಾಯ. ಇವನು ರಾತ್ರಿ ಬೀಟು ತಿರ್ಗೋ ಪೋಲೀಸ್ನೋನಂತೆ. ಇದೇನಾ ಬೀಟು ತಿರ್ಗೋದು. ಹೇಳೋರು ಕೇಳೋರು ಯಾರೂ ಇಲ್ವ ಇವರಿಗೆ."

"ನೀನು ಹೀಗಾಯ್ತು ಅಂತ ಮೇಲಿನ ಅಧಿಕಾರಿಗಳಿಗೆ ದೂರು ಕೊಡಬೇಕು" ಗೋಪಾಲಿ ಸಲಹೆ ಮಾಡಿದ.

"ಮೇಲಿನ ಅಧಿಕಾರಿಗಳಿಗೆ ನಾವು ದೂರು ಕೊಡೋದು. ಅವರು ವಿಚಾರಣೆ ಹೆಸರಿನಲ್ಲಿ ಒಂದು ದೊಡ್ಡ ಹಗರಣ ಮಾಡೋದು. ಹೀಗೆ ಪೋಲಿಸ್ನೋರು ನಮ್ಮ ಮನೆ ಮೇಲೆ ಕಣ್ಣಿಟ್ಟದಾರೆ ಅಂದ್ರೆ ಬರೋ ಗಿರಾಕಿಗಳಾದರೂ ಧೈರ್ಯವಾಗಿ ಬರ್ತಾರಾ? ಅತ್ಲಾಗೆ ಇಲ್ಲದ ತಾಪತ್ರಯ. ಇತ್ಲಾಗೆ ವರಮಾನಕ್ಕೂ ಸೊನ್ನೆ. ಅಲ್ಲವೆ ಹೇಳು?"

ತಾಲ್ಲೋಕು ಕಛೇರಿ ಆವರಣದಿಂದ ಎರಡು ಘಂಟೆ ಹೊಡೆದ ಶಬ್ದ ಗಾಳಿಯಲ್ಲಿ ತೇಲಿಕೊಂಡು ಬಂದಿತು.

"ಆಗಲೇ ಎರಡು ಘಂಟೆ. ಮಾತಿಗೆ ಕೂತರೆ ಮಿತೀನೇ ಇರೊಲ್ಲ. ನಾನಿನ್ನು ಬರ್ತೀನಿ" ಎನ್ನುತ್ತ ಗೋಪಾಲಿ ಕುಳಿತೆಡೆಯಿಂದ ಎದ್ದ.

"ನನಗೂ ಅಷ್ಟೆ. ನೀನು ಮಾತಾಡ್ತ ಇದ್ರೆ ಮುಗಿಸೋಕೆ ಮನಸ್ಸೆ ಬರಲ್ಲ. ಹೊಸಹೊಸ ವಿಚಾರ ತಿಳ್ಕೋಬಹುದು."

"ಏನು ತಿಳ್ಕೊಂಡು ಏನು ಪ್ರಯೋಜನ. ಬಾಳಿನ ಭಂಡಾಟಕ್ಕೆ ಸಿಕ್ಕಿಕೊಂಡು ನಮಗೆ ಇದು ಇದ್ದ ಬದುಕಲ್ಲ, ಸತ್ತ ಸಾವಲ್ಲ. ಹ್ನ........

ನೋಡು. ಪಾಪ, ನಮ್ಮ ಮಾತ್ನಲ್ಲಿ ಈ ಹುಡುಗೀನೇ ಮರೆತುಬಿಟ್ವಲ್ಲ. ಈವತ್ತು ಊಟ ಮಾಡಿದಾಳೋ ಇಲ್ಲ ಉಪವಾಸಾನೇ ಇದ್ದಾಳೋ. ಏನಾದರೂ ತಿನ್ನೋದಕ್ಕೆ ಇದ್ದರೆ ಕೊಟ್ಟು ಮಲಗೋಕೆ ಸ್ಥಳ ಮಾಡಿ ಕೊಡು."

"ಸುಂದರೀಗೆ ಬಂದಿರೋ ಗಿರಾಕಿ ವಂದಷ್ಟು ಹೋಟಲು ತಿಂಡಿ ತಂದಿದ್ದ. ಅವಳು ನನಗೂ ಅಷ್ಟು ಕೊಟ್ಟು ಕಳಿಸಿದ್ದಳು. ಅದ್ನ ಹಾಗೆ ಇಟ್ಟೇದೀನಿ. ತಿಂದು ಮಲಕ್ಕೋತಾಳೆ........ನೀನು ಮತ್ತೆ ಯಾವಾಗ ಬರ್ತೀಯ?"

"ನಾಳೆ ನಾಡದ್ದು ಬರ್ತೀನಿ" ಎಂದು ಬಾಗಿಲ ಕಡೆ ಹೊರಟ ಗೋಪಾಲಿ.

ಗೋಪಾಲಿ ಬಾಗಿಲು ಬಳಿ ಹೋಗುವುದಕ್ಕೂ ಬಾಗಿಲಲ್ಲಿ ಪೋಲೀಸ್ ಕಾನ್‌ಸ್ಟೇಬಲ್ ಕೆಂಚಪ್ಪ ಪ್ರತ್ಯಕ್ಷವಾಗೋದಕ್ಕೂ ಸರಿಹೋಯಿತು.

"ಓ! ಕೆಂಚಪ್ಪನೇನು. ಏನು ಆಗ್ಲೇ ಬಂದ್ಬಿಟ್ಯಲ್ಲಾ."

"ಎರಡು ಗಂಟೆಗೇ ಡ್ಯೂಟಿ ಮುಗೀತು. ಹಾಗೇ ನೋಡ್ಕೊಂಡು ರಾತ್ರಿಗೆ ಇಲ್ಲಿದ್ದು ಹೋಗೋಣ ಅಂತ್ಬಂದೆ."

"ಸ್ವರಿ........"

—ಎನ್ನುತ್ತ ಗೋಪಾಲಿ ಅಲ್ಲಿಂದ ಹೊರಟುಹೋದ.

೨೩

ಚಂದ್ರಮ್ಮ ರಸಿಕಪ್ರಿಯರನ್ನು ತನ್ನ ವೇಶ್ಯಾವಾಟಿಗೆ ಎಷ್ಟು ಪ್ರೀತಿ ವಿಶ್ವಾಸಗಳಿಂದ ಸ್ವಾಗತಿಸುತ್ತಿದ್ದಳೋ ಅವರನ್ನು ಕಂಡು ಅವಳ ಹೃದಯ ಅಷ್ಟೇ ಸೇಡಿನ ಪೆಡಂಭೂತವಾಗಿ ಕುಣಿಯುತ್ತಿತ್ತು. ಅದರ ಅಗ್ನಿ ಜ್ವಾಲೆಯಲ್ಲಿ ಅವಳು ಅವರನ್ನು ನಿರ್ದಾಕ್ಷಿಣ್ಯವಾಗಿ ಬಲಿ ತೆಗೆದುಕೊಳ್ಳುತ್ತಿದ್ದಳು. ಶ್ರೀನಿವಾಸಮೂರ್ತಿಯನ್ನು ಪ್ರೇಮಿಸಿ ಭಗ್ನ ಹೃದಯಿಯಾದಂದಿನಿಂದ ಅವಳು ಒಲಿಯುವ ನಾರಿಯಾಗಿರದೆ ಮುನಿದ ಮಾರಿಯಂತಾಗಿದ್ದಳು.

ಹಣ, ಮಳೆಗಾಲದ ಪ್ರವಾಹದಂತೆ ಹರಿದುಬರುತ್ತಿತ್ತು. ಮಗಳ ಈ ಅಭ್ಯುದಯವನ್ನು ನೋಡಿ ನಂಜಾಸಾನಿಗೆ ಹಿಡಿಸಲಾರದಷ್ಟು ಸಂತೋಷ ವಾಗಿತ್ತು. ಭೀಮಣ್ಣನೂ ಊರಿನ ಎಷ್ಟೋ ಮಂದಿ ಶ್ರೀಮಂತರನ್ನು ಗಾಳ ಹಾಕಿ ಬುಟ್ಟಿಗೆ ಬೀಳಿಸುತ್ತಿದ್ದ.

ಚಂದ್ರಮ್ಮನಿಗಾದರೋ ಇದಾವುದರಿಂದಲೂ ಸುಖವೆನಿಸಲಿಲ್ಲ, ಮನ ಶ್ಯಾಂತಿ ದೊರೆಯಲಿಲ್ಲ. 'ಇದೂ ಒಂದು ಬಾಳೇ' ಎಂದು ಸದಾ ಅವಳ ಮನಸ್ಸು ಕೊರಗುತ್ತಿತ್ತು. ಅವಳೂ ನಗುತ್ತಿದ್ದಳು, ಸರಸವಾಡುತ್ತಿದ್ದಳು, ಬಂದ ರಸಿಕರನ್ನು ರಮಿಸುತ್ತಿದ್ದಳು—ಆದರೆ ಎಲ್ಲವೂ ಒಂದು ರೀತಿಯ ಯಾಂತ್ರಿಕತೆಯಿಂದ.

ಒಮ್ಮೊಮ್ಮೆ ಅವಳ ಮನಸ್ಸು ವಿಚಾರಗ್ರಸ್ತವಾಗುತ್ತಿತ್ತು—

'ನಾನು ಈ ರೀತಿ ಮನುಷ್ಯತ್ವವನ್ನೇ ಮರೆತು ಪೈಶಾಚಿಕ ಪ್ರವೃತ್ತಿಗೆ ಎಡೆಕೊಡಬಹುದೆ? ಇದು ಧರ್ಮವೆ? ಶ್ರೀನಿವಾಸಮೂರ್ತಿಯೊಬ್ಬನ ಮೇಲಿನ ಸೇಡಿಗಾಗಿ ಇಷ್ಟೊಂದು ಜನರ ಆಹುತಿ ತೆಗೆದುಕೊಳ್ಳುವುದು ನ್ಯಾಯವೆ?'

'ಏಕಾಗಬಾರದು? ಇಲ್ಲಿಗೆ ಬರುವವರೆಲ್ಲರೂ ಪೈಶಾಚಿಕ ಮನೋವೃತ್ತಿಯಿಂದಲೇ ಬರುವವರಲ್ಲವೆ? ಶ್ರೀನಿವಾಸಮೂರ್ತಿಯೊಬ್ಬನೇ ಏಕೆ. ಎಲ್ಲರೂ....ಎಲ್ಲರೂ....ಅವನ ಪ್ರತಿರೂಪಗಳೇ.... ಈ ಗಂಡಸರೇ ಅಷ್ಟು. ಅವರಿಗೆ ಕಾಮದ ಪಾಶವೀಶಕ್ತಿಯ ಮುಂದೆ ಪ್ರೇಮದ ನೈಜಸ್ವರೂಪವೇ ಅರ್ಥವಾಗುವುದಿಲ್ಲ. ಪ್ರೇಮದ ಸೋಗಿನಲ್ಲಿ ಅವರ ಹೃದಯಾಂತರಾಳದಲ್ಲಿ ಅಡಗಿರುವುದು ಕಾಮ........ತುಚ್ಛಕಾಮ! ಎಂತಹ ಭಯಂಕರ ವಿಷಸರ್ಪಗಳು!'

'ನಾನಾದರೂ ಮಾಡುತ್ತಿರುವುದೇನು? ನನ್ನ ಬೆಡಗುಬಿನ್ನಾಣಗಳಿಂದ ಅವರನ್ನು ಪ್ರೇಮಿಸುವೆನೆಂದು ನಟಿಸಿ ಅವರ ಸರ್ವಾಪಹರಣ ಮಾಡುತ್ತಿರುವೆನಲ್ಲವೆ? ನಿರ್ಗತಿಕರಾದ ಮೇಲೆ ಅವರನ್ನು ಕಾಲ ಕಸಕ್ಕೂ ಕಡೆಯಾಗಿ ಕಾಣುತ್ತಿರುವೆನಲ್ಲವೆ? ಇದು ಅನ್ಯಾಯವಲ್ಲವೆ? ಮೋಸವಲ್ಲವೆ? ವಂಚನೆಯಲ್ಲವೆ?'

'ಜಗತ್ತಿನ ಬಾಳುವೆಯೇ ಹೀಗೆ! ಅನ್ಯಾಯಕ್ಕೆ ಅನ್ಯಾಯ, ಮೋಸಕ್ಕೆ ಮೋಸ, ವಂಚನೆಗೆ ವಂಚನೆ, ಹಿಂಸೆಗೆ ಪ್ರತಿಹಿಂಸೆ. ಮೋಸಗಾರರ ಸಂತೆಯಲ್ಲಿ ಮೋಸದಿಂದಲೇ ವ್ಯಾಪಾರ ಮಾಡಬೇಕು. ಮುಯ್ಯಿಗೆ ಮುಯ್ಯಿಯೇ ಸಿದ್ಧೌಷಧ. ಇಲ್ಲವಾದರೆ ಬಾಳುವುದೇ ಕಷ್ಟವಾಗುತ್ತದೆ.'

'ಥತ್.... ಬುದ್ಧಿಜೀವಿಯಾಗಿ ಹುಟ್ಟಿ ಮನುಷ್ಯ ಕಾಡುಪ್ರಾಣಿಗಳಿಗೂ ಕಡೆಯಾಗಿ ವರ್ತಿಸುತ್ತಿದ್ದಾನೆ.'

ಚಂದ್ರಮ್ಮನ ಮನಸ್ಸು ಅಶಾಂತಿಯ ಆಗರವಾಗುತ್ತಿತ್ತು. ಅವಳ ಬಾಳ ಹೊಂಗನಸು ಮುರಿದುಬಿದ್ದುದು ನೆನಪಿಗೆ ಬಂದಾಗ ಸೇಡು ಸಹಸ್ರ ಮುಖಗಳಿಂದ ಹೆಡೆಯಾಡುತ್ತಿತ್ತು. ವಿಚಾರಶೂನ್ಯಳಾಗಿ ತಾನೂ ಪಶುವಿನಂತೆ ನಡೆದುಕೊಳ್ಳುತ್ತಿದ್ದಳು. ತನ್ನಂತೆ ಬಾಳಿನಲ್ಲಿ ವಂಚಿತರಾದ, ಜೀವನದಲ್ಲಿ ಸುಖ ಕಾಣದ ಎಷ್ಟೋ ಜನ ಹುಡುಗಿಯರಿಗೆ ಚಂದ್ರಮ್ಮ ತನ್ನ ಮನೆಯಲ್ಲಿ ಆಶ್ರಯ ಕೊಡತೊಡಗಿದಳು. ಅವಳ ಈ ವೇಶ್ಯಾವಾಟ ದಿನದಿನಕ್ಕೆ ಬೆಳೆಯತೊಡಗಿತು. ಗಂಡಸರ ನರಯಜ್ಞ ಅವ್ಯಾಹತವಾಗಿ ನಡೆಯತೊಡಗಿತು. ಚಂದ್ರಮ್ಮನೇ ಯಜ್ಞದೀಕ್ಷೆ ವಹಿಸಿದಳು, ಆ ವೇಶ್ಯಾವಾಟಿಯ ಮುಖ್ಯಸ್ಥಳಾದಳು.

ಜವಾಹಿರಿ ವ್ಯಾಪಾರಿ ರತ್ನಂಶೆಟ್ಟಿಗೆ ಚಂದ್ರಮ್ಮನ ತಾರುಣ್ಯಮಯ ಸುಂದರ ರೂಪಿನ ಮೇಲೆ ಕಣ್ಣು ಬಿತ್ತು. ಎಷ್ಟೋ ಜನ ಶ್ರೀಮಂತರು, ತನಗಿಂತಲೂ ಹೆಚ್ಚು ಅನುಕೂಲವಿದ್ದವರು ಚಂದ್ರಮ್ಮನ ಸಮ್ಮೋಹನಾಸ್ತ್ರಕ್ಕೆ ಸಿಕ್ಕಿ ಎಲ್ಲವನ್ನೂ ಕಳೆದುಕೊಂಡು ಭಿಕಾರಿಗಳಾಗಿದ್ದುದನ್ನು ಅವನು ಕಂಡಿದ್ದ. ಅಂತಹ ಹುಡುಗಿಯನ್ನು ತಾನು ಆಶಿಸುವುದೆ? ಅವನ ಹೃದಯ ಝುಮ್ಮೆಂದಿತು. ಆದರೂ ಮನಸ್ಸು ಮಾತ್ರ ಸೂಜಿಗಲ್ಲಿನಂತೆ ಅವಳೆಡೆಗೆ ಸೆಳೆಯುತ್ತಿತ್ತು.

ಒಂದು ದಿನ ಚಂದ್ರಮ್ಮ ಕೆಲವು ಚಿನ್ನಬೆಳ್ಳಿಯ ಸಾಮಾನನ್ನು ಕೊಳ್ಳಲು ಶೆಟ್ಟಿಯ ಅಂಗಡಿಗೆ ಬಂದಳು. ಜತೆಗೆ ನಂಜಾಸಾನಿ ಭೀಮಣ್ಣ ಇದ್ದರು. ರತ್ನಂಶೆಟ್ಟಿಗೆ ಅವಳನ್ನು ನೋಡಿ ಇದ್ದದ್ದೂ ಮನಸ್ಸು ಚಂಚಲ ವಾಯಿತು.

"ಇದು ಹೊಸ ಫ್ಯಾಷನ್ ನೆಕ್‌ಲೆಸ್ ನೋಡಿ. ದಿವಾನರ ಮನೇವ್ರು ಇಂಥಾದ್ದೇ ಮಾಡಿಸಿದ್ರು. ನಾನೂ ಆದರ ಪ್ಯಾಟ್ರನ್ ಒಂದಿರಲಿ ಅಂತ ಮಾಡಿಸಿಟ್ಟಿದೀನಿ........

"ಇವು ನೋಡಿ ಲೇಟೆಸ್ಟ್ ಸ್ಟೈಲ್ ಬಳೆಗಳು. ಒಳಗಡೆ ಡೈಮಂಡ್ಸ್ ಸೆಟ್ ಮಾಡಿವೆ. ಫಳಫಳ ಅಂತ ಹೊಳೆಯತ್ತೆ. ಅದರಲ್ಲೂ ನಿಮ್ಮಂಥವ್ರು ಇದನ್ನ ಖಂಡಿತ ಹಾಕ್ಕೊಳ್ಳೇಬೇಕು........

"ಈ ಓಲೆಗಳು........ಬೇಸರಿಗಳು........ಎಲ್ಲಾ ಗ್ಯಾರಂಟಿ ವಜ್ರ ಗಳು........"

ಶೆಟ್ಟಿ ತಾನೇ ಖುದ್ದಾಗಿ ನಿಂತು ಚಂದ್ರಮ್ಮನ ಮುಂದೆ ಇಡೀ ಅಂಗಡಿ ಯನ್ನೇ ಪ್ರದರ್ಶಿಸಿ ಬಿಟ್ಟ. ಅವನ್ನೆಲ್ಲ ನೋಡಿ ಚಂದ್ರಮ್ಮ ಮನಸ್ಸಿನಲ್ಲೇ ನಸುನಕ್ಕು 'ಈ ಮಿಗವೂ ಬಲೆಗೆ ಬೀಳಲು ತವಕಿಸುತ್ತಿದೆ' ಎಂದು ಅಂದು ಕೊಂಡಳು. ನಂಜಾಸಾನಿಯಂತೂ ಈ ಶೆಟ್ಟಿಯನ್ನು ಹೇಗೆ ಬಲೆಗೆಳೆದು ಕೊಳ್ಳುವುದೆಂದು ಆಗಲೇ ಲೆಖ್ಖಾಚಾರಕ್ಕೆ ತೊಡಗಿ ಅರ್ಥಪೂರ್ಣವಾಗಿ ಭೀಮಣ್ಣನ ಕಡೆಗೆ ಕಣ್ಣು ಮಿಟುಕಿಸಿದಳು. ಭೀಮಣ್ಣ ಅರ್ಥವಾದವನಂತೆ ಸೂಕ್ಷ್ಮವಾಗಿ ತಲೆಯಾಡಿಸಿದ.

ಚಂದ್ರಮ್ಮ ನಂಜಾಸಾನಿ ಇಬ್ಬರೂ ಸೇರಿ ಹಲಕೆಲವು ಒಡವೆ

ಗಳನ್ನು ಆರಿಸಿದರು. ಶೆಟ್ಟಿ ಇದೂ ಇರಲಿ ಅದೂ ಇರಲಿ ಎಂದು ಇನ್ನಷ್ಟು ಒಡವೆಗಳನ್ನು ಅವರ ಆ ಸಂಗ್ರಹಕ್ಕೆ ಬಲವಂತವಾಗಿಯೇ ಸೇರಿಸಿದ. ನಂಜಾಸಾನಿ ಮಗಳ ಕಡೆಗೆ ಸಂಜ್ಞೆ ಮಾಡಿದಳು. ಚಂದ್ರಮ್ಮ ಅವಳ ಇಂಗಿತವನ್ನು ಅರಿತುಕೊಂಡಳು.

ರತ್ನಂಶೆಟ್ಟಿ ಸಾಮಾನುಗಳನ್ನೆಲ್ಲಾ ಪ್ಯಾಕ್ ಮಾಡಿದ ನಂತರ ಚಂದ್ರಮ್ಮ ಹೇಳಿದಳು—

"ಈ ಸಾಮಾನುಗಳೆಲ್ಲಾ ಹೀಗೇ ಇಲ್ಲೇ ಇರ್ಲಿ. ನಾಳೆ ನಾಡದ್ದರಲ್ಲಿ ಬಂದು ದುಡ್ಡು ಕೊಟ್ಟು ತಗೊಂಡು ಹೋಗ್ತೇನೆ."

ರತ್ನಂಶೆಟ್ಟಿ ಬದುಕಿದವನೂ ಅಲ್ಲ, ಸತ್ತವನೂ ಅಲ್ಲ. ಅವನಿಗೆ ಏನು ಮಾಡಬೇಕೆಂಬುದೇ ತೋಚದಾಯಿತು. ಚಂದ್ರಮ್ಮ ಹೇಳಿದಂತೆ ಹಣ ಕೊಟ್ಟ ನಂತರ ಸಾಮಾನುಗಳನ್ನು ತೆಗೆದುಕೊಂಡು ಹೋಗುವಂತೆ ಒಪ್ಪಿಕೊಂಡರೆ ಅವಳು ತನ್ನ ಯೋಗ್ಯತೆಯನ್ನು ಕೀಳಾಗಿ ಕಾಣಬಹುದು; ಅವಳು ತನಗೆ ಗಿಟ್ಟದೆಯೇ ಹೋಗಬಹುದು. ಹಾಗಲ್ಲದೆ ಹಣವನ್ನು ನಿಧಾನವಾಗಿ ತಲಪಿಸುವಂತೆ ಹೇಳಿ ಸಾಮಾನುಗಳನ್ನು ಬಿಟ್ಟರೆ ಹಣ ಬರುವ ಗ್ಯಾರಂಟಿಯಾದರೂ ಏನು?

ರತ್ನಂಶೆಟ್ಟಿ ಮೇಲೆ ಕೆಳಗೆ ನೋಡಿದ, ತಲೆ ಕೆರೆದುಕೊಂಡ, ಕಣ್ಣು ಪಿಳಿಕಿಸಿದ. ಅವನಿಗೆ ಯಾವ ಉಪಾಯವೂ ಹೊಳೆಯಲಿಲ್ಲ. ಕೊನೆಗೆ ನಿರ್ವಾಹವಿಲ್ಲದೆ ಧೈರ್ಯಮಾಡಿ ಹೇಳಿಬಿಟ್ಟ—

"ಛೆ....ಛೆ....ಹಣ ಎಲ್ಲಿ ಹೋಗತ್ತೆ. ನಿದಾನವಾಗಿ ತಂದ್ಕೊಡಿ. ಸಾಮಾನುಗಳ್ನ ಈಗ್ಲೇ ತಗೊಂಡು ಹೋಗಿ."

"ಹೌದು ನಿಮಗೆ ನಮ್ಮ ಮೇಲೆ ನಂಬಿಕೆ ಇರಬೇಕಲ್ಲ?" ಹಾವ-ಭಾವ ಸೇರಿಸಿ, ವೈಯ್ಯಾರದಿಂದ ರತ್ನಂಶೆಟ್ಟಿಯ ಕಡೆಗೆ ಕುಡಿನೋಟ ಬೀರಿ, ಚಂದ್ರಮ್ಮ ಹೇಳಿದಳು. ಅವಳ ಆ ಮಾದಕ ನೋಟಕ್ಕೆ ರತ್ನಂಶೆಟ್ಟಿ ಕರಗಿ ಹೋದ. ಅವನಿಗೆ ಸ್ವರ್ಗವೇ ಎದುರು ಬಂದು ನಿಂತಂತಾಯಿತು. ನಗು ನಗುತ್ತ ಅವನಂದ—

"ಊರಿಗೇ ದೊಡ್ಡ ಜವಾಹಿರಿ ವ್ಯಾಪಾರಿಗಳಾಗಿ ನಾವು ಇಷ್ಟಕ್ಕೆಲ್ಲಾ ನಿಮ್ಮಂಥವರನ್ನ ನಂಬದೇ ಇರೋಕಾಗತ್ಯೆ! ಬೇಕಾದರೆ ಅಂಗ್ಡೀನೇ

ನಿಮ್ಮದು ಅಂತ ತಿಳ್ಕೋಳಿ, ಅಂಗಡೀಲಿರೋ ಸಾಮಾನೆಲ್ಲಾ ತಗೊಂಡ್ಹೋಗಿ, ಸಿದಾನವಾಗಿ ದುಡ್ಕೊಡಿ........"

"ಹಾಗಾದ್ರೆ ಸಾಮಾನು ತಗೋ ಚಂದ್ರು. ನಾಳೆ - ನಾಡದ್ದರಲ್ಲಿ ಭೀಮಣ್ಣನನ್ನು ಕಳಿಸೋಣ" ಶೆಟ್ಟಿ ಮಾತು ಮುಗಿಸಿದೊಡನೆ, ಸಮಯ ವರಿತು ನಂಜಾಸಾನಿ ಹೇಳಿದಳು.

"ಹಾಗೇ ಮಾಡಿ. ನಾಳೆ ನಾಡದ್ದಿಲ್ಲದಿದ್ರೆ ಎಂಟು ದಿನಕ್ಕೆ ಕಳಿಸಿ ಕೊಡಿ, ಒಂದು ತಿಂಗಳಿಗೆ ಕಳಿಸಿಕೊಡಿ, ಎಲ್ಲಿ ಹೋಗುತ್ತೆ....ಮಾತ್ರ ನಮ್ಮನ್ನ ಮರೀಬೇಡಿ"

—ರತ್ನಂಶೆಟ್ಟಿ ಹೇಳಿದ. ಕಡೆಯ ಮಾತು ಹೇಳುವಾಗ ನಾಲಗೆಯಿಂದ ಮೇಲ್ತುಟಿಯನ್ನು ಸವರುತ್ತ, ಅರ್ಥಗರ್ಭಿತ ನೋಟ ಬೀರಿದ.

ಮೂರು ದಿನಗಳ ನಂತರ ಭೀಮಣ್ಣ ರತ್ನಂಶೆಟ್ಟಿ ಅಂಗಡಿಗೆ ಬಂದ—ಹಣ ತೆಗೆದುಕೊಂಡಲ್ಲ, 'ಚಂದ್ರಮ್ಮ ನಿಮ್ಮನ್ನ ಕರ್ಕೊಂಡ್ಬರ್ಲ್ಹೇಳಿದಳು, ಏನೋ ಮಾತಾಡೋದಿದೆಯಂತೆ' ಎಂಬ ಸಂದೇಶ ಹೊತ್ತು. ರತ್ನಂಶೆಟ್ಟಿಗೆ ತಾನಿರುವುದು ಭೂಮಿಯ ಮೇಲಲ್ಲ, ವೈಕುಂಠದಲ್ಲೋ, ಕೈಲಾಸದಲ್ಲೋ ಇರಬೇಕು ಎನ್ನಿಸಿತು.

ಶೆಟ್ಟಿ ಚಂದ್ರಮ್ಮನ ಮನೆಗೆ ಸಿಂಗರಿಸಿಕೊಂಡು ಹೊರಟ. ಕೈ ಬೆರಳುಗಳಿಗೆಲ್ಲಾ ಫಳಫಳನೆ ಪ್ರಕಾಶಿಸುವ ವಜ್ರದ ಉಂಗುರಗಳನ್ನು ಹಾಕಿಕೊಂಡ. ಕಿವಿಯಲ್ಲಿದ್ದ ಎಣ್ಣೆಹಿಡಿದ ಹಳೆಯ ಹತ್ತಕಡಕನ್ನು ತೆಗೆದು ಹಾಕಿ ಹೊಸ ವಜ್ರದ ಬೆಂಡೋಲೆ ಧರಿಸಿದ. ಪಾಕೆಟ್ ಗಡಿಯಾರಕ್ಕೆ ಚಿನ್ನದ ಚೈನನ್ನು ಲಗತ್ತಿಸಿದ. ತಲೆಯ ಮೇಲೆ ಯಥಾಪ್ರಕಾರ ದಿವಾನರನ್ನೋ ಸರ್ಕಾರದ ದೊಡ್ಡ ಅಧಿಕಾರಿಗಳನ್ನೋ ನೋಡಲು ಹೋಗುವಾಗ ಹಾಕುತ್ತಿದ್ದ ನಾಲ್ಕು ಬೆರಳಗಲದ ಅಚ್ಚ ಸರಿಗೆ ಪೇಟ ಬಂದು ಕುಳಿತಿತು. ಕನ್ನಡಿ ನೋಡಿ ಮೀಸೆ ತಿದ್ದಿಕೊಂಡ. ಮೈ ಘಮಘಮಾಯಿಸುವಂತೆ ಓಟೋ ದಿಲ್ ಬಹಾರ್ ಬಳಿದುಕೊಂಡ.

ಚಂದ್ರಮ್ಮನ ಮನೆಗೆ ಶೆಟ್ಟಿಯ ಸವಾರಿ ಚಿತ್ತೈಸಿದಾಗ ಚಂದ್ರಮ್ಮ ಒಳಗಿನಿಂದಲೇ ಅವನ 'ಅಪೂರ್ವ ಚಿಂತಾಮಣಿ' ಅವತಾರವನ್ನು ನೋಡಿ ಮನಸ್ಸಿನಲ್ಲಿಯೇ ಹುಸಿನಕ್ಕಳು. ಭೀಮಣ್ಣ ಶೆಟ್ಟಿಯನ್ನು ಮರ್ಯಾದೆ

ಯಿಂದ ನಡುಮನೆಗೆ ಕರೆತಂದು ಅಲ್ಲಿದ್ದ ಮೆತ್ತನೆಯ ಕುರ್ಚಿಯ ಮೇಲೆ ಕುಳ್ಳಿರಿಸಿದ. ಶೆಟ್ಟಿಯ ಕಣ್ಣು ಗೋಡೆಯ ಮೇಲಿದ್ದ ಚಿತ್ರವಿಚಿತ್ರ ಪಟಗಳ ಮೇಲೆಲ್ಲಾ ಹರಿದಾಡಿತು. ಮೊದಲೇ ಮರ್ಕಟವಾಗಿದ್ದ ಮನಸ್ಸು ಇನ್ನೂ ವಿಭ್ರಮೆಗೊಂಡಿತು.

"ನಿಮ್ಮಂಥ ಲಕ್ಷಾಧೀಶ್ವರರು ನಮ್ಮಂಥ ಬಡವರ ಮನೆಗೆ ಬರ್ತೀರೋ ಇಲ್ಲವೋ ಅಂತಿದ್ದೆ"

—ಎಂದು ಪೀಠಿಕೆ ಹಾಕುತ್ತ ನಂಜಾಸಾನಿ ಶೆಟ್ಟಿಯನ್ನು ಹೊಗಳಿ ಮಾತನಾಡಿದಳು.

ತನ್ನನ್ನು ನಂಜಾಸಾನಿ 'ಲಕ್ಷಾಧೀಶ್ವರ' ಎಂದು ಕರೆದುದು ರತ್ನಂಶೆಟ್ಟಿಗೆ ಬಹಳ ಆಪ್ಯಾಯಮಾನವಾಯಿತು. ಅವನ ಬಂಡವಾಳ ಅವನಿಗೇ ಗೊತ್ತಿತ್ತು. ಕೈಯ್ಯಲ್ಲಿದ್ದ ಹದಿನೈದು-ಇಪ್ಪತ್ತುಸಾವಿರ ರೂಪಾಯಿ ಗಳ ಜೊತೆಗೆ ಅವರಿವರಲ್ಲೂ ಸಾಲ ತೆಗೆದು ಅವನೂ ಹೇಗೋ ಜವಾಹಿರಿ ವ್ಯಾಪಾರಿ ಎನಿಸಿಕೊಂಡಿದ್ದ. ಸಾಲದುದಕ್ಕೆ ಬ್ಯಾಂಕಿನಲ್ಲೂ ಡೈರೆಕ್ಟರುಗಳ ಕೃಪೆ ಸಂಪಾದಿಸಿ ತನ್ನ ಯೋಗ್ಯತೆಗೂ ಮೀರಿ ಓವರ್‌ಡ್ರಾಫ್ಟ್ ಪಡೆದಿದ್ದ.

ನಂಜಾಸಾನಿ ಹೇಳಿದ 'ಲಕ್ಷಾಧೀಶ್ವರ' ಎಂಬ ಮಾತು ಕೇಳಿ ಅವನಿಗೆ ಮನಸ್ಸಿನಲ್ಲೆ ನಗುಬಂತು. ಅದನ್ನು ತೋರಗೊಡದೆ ದೊಡ್ಡಸ್ತಿಕೆಯ ಸೋಗು ಹಾಕಿ ಹೇಳಿದ—

"ಏನೋ ನಿಮ್ಮ ದಯದಿಂದ, ನಮ್ಮ ಪೂರ್ವಿಕರ ಪುಣ್ಯದಿಂದ ದೇವರು ಯಾವುದಕ್ಕೂ ಕಮ್ಮಿಮಾಡಿಲ್ಲ. ವ್ಯಾಪಾರವೂ ಚೆನ್ನಾಗಿ ನಡೀತಾ ಇದೆ. ಇಷ್ಟರಲ್ಲೇ ಹೈದರಾಬಾದು, ಬೊಂಬಾಯಿ ಮದರಾಸುಗಳಲ್ಲೂ ನಮ್ಮ ಅಂಗಡಿ ಬ್ರಾಂಚು ತೆಗೀಬೇಕು ಅಂತ ಮಾಡಿದೀನಿ. ಒಂದೈವತ್ತು ಸಾವಿರ ರೂಪಾಯಿ ಧರ್ಮಾ ಮಾಡಿ ನಮ್ಮ ತಾಯಿ ಹೆಸರಿನಲ್ಲಿ ವಿಶ್ವೇಶ್ವರ ಪುರದಲ್ಲಿ ಒಂದು ಹೆರಿಗೆ ಆಸ್ಪತ್ರೆ ಕಟ್ಟಿಸ್ಬೇಕು ಅಂತ ಇದೀನಿ."

"ಹೌದು. ನಾಕ್ಜನಕ್ಕೆ ಉಪಕಾರವಾಗೋ ಪುಣ್ಯ ಕೆಲಸ ಮಾಡ ಬೇಕು. ಅದರಿಂದ ನಿಮ್ಮ ಹೆಸರೂ ಶಾಶ್ವತವಾಗಿರತ್ತೆ."

"ಅದನ್ನೇ ನಾನೂ ಯೋಚ್ನೆ ಮಾಡಿರೋದು. ಹಣಾನೂ ಚೆನ್ನಾಗಿ

ಸಂಪಾದ್ನೆ ಮಾಡ್ಬೇಕು. ಸಂತೋಷವಾಗಿ ಧರ್ಮಕಾರ್ಯಕ್ಕೆ ಖರ್ಚು ಮಾಡಬೇಕು."

"ನಿಮ್ಮ ಜನಾನೇ ಹಾಗೆ. ನಿಮ್ಮಷ್ಟು ದಾನ ಧರ್ಮ, ಒಂದು ಗುಡಿ ಕಟ್ಟಿಸೋದು ಹೇಳ್ತೀರಾ, ಒಂದು ಛತ್ರ ಕಟ್ಟಿಸೋದು ಕೇಳ್ತೀರಾ, ಇನ್ನು ಬೇರೆ ಯಾವ ಜನಾನೂ ಮಾಡೋಲ್ಲ. ಅದಕ್ಕೇ ನಿಮಗೆ ಲಕ್ಷ್ಮಿ ಅಷ್ಟು ಒಲಿದಿರೋದು."

"ಛತ್ರ ಅಂತ ಹೇಳಿದಿರಲ್ಲ. ಜ್ಞಾಪಕ ಬಂತು. ನಮ್ಮ ತ್ಯಾವ ಗೊಂಡ್ಲಿನಲ್ಲಿ ಒಂದು ಛತ್ರಾನೂ ಕಟ್ಟಿಸ್ಬೇಕು ಅಂತ ಏರ್ಪಾಡು ಮಾಡ್ಕೊಂಡಿದೀನಿ."

"ಹಾಗೇನು........?"

—ಎಂದು ನಂಜಾಸಾನಿ ಉದ್ಗಾರ ತೆಗೆದು ಚಂದ್ರಮ್ಮನ ಕೋಣೆಯ ಕಡೆ ತಿರುಗಿ—

"ಏನೇ ಮಾಡ್ತಿಯಾ ಚಂದ್ರೂ, ರೂಮ್ನಲ್ಲಿ ಕುಂತ್ಕೊಂಡು. ಒಳ್ಳೆ ನಾಚ್ಕೇನಪ್ಪ ನಿಂದು. ಮೂರ್ದಿನದಿಂದ ಹಂಬಲಿಸ್ತಿದ್ದೆ, ಶೆಟ್ರು ಬರ್‍ನಿಲ್ಲಾ, ಶೆಟ್ರುಬರ್‍ನಿಲ್ಲಾ ಅಂತ. ಅವರು ಬಂದಾಗ ರೂಮ್ನಲ್ಲಿ ಅಡಕ್ಕೊಂಡಿದಾಳೆ" ಎಂದಂದು, ನಂತರ ಶೆಟ್ಟಿಯ ಕಡೆ ನೋಡುತ್ತ—

"ನೋಡಿ, ಮೂರ್ದಿನದಿಂದ ನಿಮಗಾಗಿ ಊಟ ನಿದ್ದೆ ಬಿಟ್ಟು ಒದ್ದಾಡಿಬಿಟ್ಳು. ಆ ಭೀಮಣ್ಣನಿಗೆ ಉಸಿರಾಡೋದಕ್ಕೂ ಅವಕಾಶ ಕೊಡದೆ ನಿಮ್ಮನ್ನ ಕರ್‍ಕೊಂಡು ಬರೋದಕ್ಕೆ ಓಡಿಸಿದಳು. ಹುಚ್ಚು ಹುಡುಗಿ" ಎಂದು ನಸುನಕ್ಕಳು.

ರತ್ನಂಶೆಟ್ಟಿಗೆ ಆ ಮಾತು ಕೇಳಿ ಬಾಯಿ ಕಿವಿಯವರೆಗೂ ಹೋಯಿತು. ಮಿತಿಮೀರಿದ ಸಂತೋಷದಿಂದ ಅವನ ಕಣ್ಣುಗಳಂತೂ ಚಂದ್ರಮ್ಮನ ಕೋಣೆಯ ಕಡೆಗೇ ನೋಡತೊಡಗಿದವು.

ಚಂದ್ರಮ್ಮ ತನ್ನ ಕೋಣೆಯಿಂದ ಬಳುಕುತ್ತ ಹೊರಬಂದಳು. ಬಾಗಿಲ ನಿಲುವಿಗೆ ಮೈ ಕೊಟ್ಟು, ಮುಖದಲ್ಲಿ ನಸುನಾಚಿಕೆಯ ಭಾವ ಬೀರಿ ಕಡೆದ ಶಿಲ್ಪದಂತೆ ನಿಂತಳು. ಆ 'ನವಮೋಹನಾಂಗಿ'ಯನ್ನು ನೋಡಿ ರತ್ನಂಶೆಟ್ಟಿಯ ಎದೆ ಕಾತರತೆಯಿಂದ ಬಡಿದುಕೊಳ್ಳಹತ್ತಿತು.

ಸೀರೆಯ ತೆಳುಪೊರೆಯಿಂದ ಹೊರಕಾಣುತ್ತಿದ್ದ ಅವಳ ಅಂಗಾಂಗಗಳ ದಿವ್ಯನೋಟ ಅವನ ಮೈ ರೋಮಾಂಚನಗೊಳಿಸಿ ಬೆವರು ಮೂಡಿಸಿತು.

"ಹ್ಹೂ........ಶೆಟ್ರನ್ನ ವಿಚಾರಸ್ಕೋ........ದೊಡ್ಮನುಷ್ಯರು ದೊಡ್ಮನಸು ಮಾಡಿ ಬಂದಿದಾರೆ" ಎಂದವಳೇ ನಂಜಾಸಾನಿ ಅಲ್ಲಿಂದೆದ್ದು ಮೆಲ್ಲನೆ ನುಣುಚಿಕೊಂಡಳು.

ಚಂದ್ರಮ್ಮ ಶೆಟ್ಟಿಯನ್ನು ತನ್ನ ಶಯನಾಗೃಹಕ್ಕೆ ಕರೆದುಕೊಂಡು ಹೋದಳು. ಎಷ್ಟೋ ದಿನಗಳಿಂದ ಹೃದಯದಲ್ಲಿ ಮನೆ ಮಾಡಿದ್ದ ಅವನ ಆಸೆ ಅಂದು ಪೂರ್ತಿಗೊಂಡಂತಾಯಿತು. ರತ್ನಂಶೆಟ್ಟಿ ಚಂದ್ರಮ್ಮನ ಭಕ್ತ ಕೋಟಿಯಲ್ಲಿ ಸೇರಿಕೊಂಡ.

'ವಿಮುಕ್ತ ಭಕ್ತಕೋಟಿ'ಯ ಗುಂಪಿನಲ್ಲಿ ಸೇರಿಕೊಳ್ಳುವುದಕ್ಕೂ ಬಹಳ ದಿನ ಹಿಡಿಯಲಿಲ್ಲ ರತ್ನಂಶೆಟ್ಟಿಗೆ. ದಿನ ಕಳೆದಂತೆಲ್ಲಾ ಚಂದ್ರಮ್ಮನ ಮಾದಕ ಮೋಹಕ್ಕೆ ವಶನಾಗಿ, ಅವಳ ಬೆಡಗುಬಿನ್ನಾಣಗಳಿಗೆ ಕುರುಡಾಗಿ ತನ್ನ ಸರ್ವಸ್ವವನ್ನೂ ಅವಳಿಗೆ ಒಪ್ಪಿಸಿಬಿಟ್ಟು ಅವನ ಕೈ ಬರಿದಾಯಿತು.

ಆದರೂ ಶೆಟ್ಟಿ ಬುದ್ಧಿವಂತ. ತನ್ನ ಕೈ ಬರಿದಾದುದನ್ನು ಕೊಂಚವಾದರೂ ತೋರಗೊಡದೆ, ತಾನಿನ್ನು ಲಕ್ಷಾಧಿಪತಿಯೇ ಆಗಿರುವಂತೆ ಡಂಭದಿಂದಲೇ ವರ್ತಿಸತೊಡಗಿದ.

ಮಾತೆತ್ತಿದರೆ ಶೆಟ್ಟಿ ಲಕ್ಷದ ಮಾತೇ ಆಡುತ್ತಿದ್ದ. ತನ್ನ ಇಲ್ಲದ ಬೊಂಬಾಯಿ, ಮದರಾಸು, ಹೈದರಾಬಾದು ವ್ಯಾಪಾರಗಳನ್ನು ಇದ್ದದ್ದಕ್ಕಿಂತ ಹೆಚ್ಚಾಗಿ ವರ್ಣನೆ ಮಾಡುತ್ತಿದ್ದ. ಶೆಟ್ಟಿಯ ಮಾತುಗಳಿಗೆ ಚಂದ್ರಮ್ಮ, ಚಂದ್ರಮ್ಮನಿಗಿಂತ ಹೆಚ್ಚಾಗಿ ನಂಜಾಸಾನಿ ಮರುಳಾಗುತ್ತಿದ್ದರು. ಅವರಿಗೆ ಅವನ ನಿಜವಾದ ಬಂಡವಾಳ ಅರಿತುಕೊಳ್ಳಲು ಸಾಧ್ಯವಾಗಲೇ ಇಲ್ಲ.

ಏನಾದರೂ ಉಪಾಯ ಹೂಡಿ ಚಂದ್ರಮ್ಮನಿಗೆ ಕಾಸುಕೊಟ್ಟುದನ್ನೆಲ್ಲಾ ಅವಳಿಂದ ವಾಪಸು ಕಸಿಯಬೇಕೆಂದು ರತ್ನಂಶೆಟ್ಟಿ ಯೋಚಿಸಿದ. ವ್ಯಾಪಾರದಲ್ಲಿ ತಲೆ ಓಡಿಸಿ ಪಕ್ವವಾಗಿದ್ದ ಅವನಿಗೆ ಅಂತಹ ಉಪಾಯ ಸುಲಭವಾಗಿಯೇ ಹೊಳೆಯಿತು.

ಒಂದುದಿನ ಶೆಟ್ಟಿ ಚಂದ್ರಮ್ಮನ ಮನೆಗೆ ಬಂದಾಗ ಮಾತಿನ ಮಧ್ಯದಲ್ಲಿ ಲೋಕಾಭಿರಾಮವಾಗಿ ಹೇಳಿದ—

"ಜರ್ಮನೀಲಿ ದೊಡ್ಡದೊಂದು ಚಿನ್ನದ ಗಣಿ ಸಿಕ್ಕಿಬಿಟ್ಟಿದೆ, ಆಸ್ಟ್ರಿಯಾ ದೇಶದಲ್ಲಿ ವಜ್ರದ ದೊಡ್ಡ ದೊಡ್ಡ ಬಂಡೆಗಳನ್ನ ಪತ್ತೆಮಾಡಿದ್ದಾರೆ. ಇನ್ನು ಹದಿನೈದು–ಇಪ್ಪತ್ತು ದಿನಗಳಲ್ಲಿ ಚಿನ್ನ, ಬೆಳ್ಳಿ, ಭಂಗಾರ, ವಜ್ರ ಎಲ್ಲವರ ಬೆಲೇನೂ ಅರ್ಧಕ್ಕರ್ಧ ಇಳಿದುಹೋಗತ್ತೆ. ಹಾಗಂತ ನಮ್ಮ ಬೊಂಬಾಯಿ ಅಂಗಡೀ ಇಂದ ಟೆಲಿಗ್ರಾಂ ಬಂದಿದೆ. ಆದ್ದರಿಂದ ನಮ್ಮಲ್ಲಿರೋ ಬೆಳ್ಳಿ, ಭಂಗಾರ, ವಜ್ರ ಎಲ್ಲಾ ಇನ್ನು ಮೂರ್ನಾಲ್ಕು ದಿನಗಳಲ್ಲಿ ಮಾರಾಟ ಮಾಡಿಬಿಡಬೇಕು ಅಂತ ಮಾಡಿದೀವಿ. ಆಮೇಲೆ ಒಂದಕ್ಕೆ ಎರಡಾಗಿ ಕೊಂಡ್ಕೋಬಹುದು. ನಮ್ಮನೆ ಹೆಂಗಸ್ರೂ ಮನೇಲಿರೋ ಒಡವೇನೆಲ್ಲಾ ಈಗಲೇ ಬೆಲೆ ಜಾಸ್ತಿ ಸಿಗೋವಾಗ್ಲೇ ಮಾರಿ ಹಾಕಿಬಿಡಿ, ಬೆಲೆ ಇಳಿದ ಮೇಲೆ ಮಾಡಸ್ಕೋಬಹುದು ಅಂತ ಹೇಳಿದಾರೆ. ನಾಳೆ ಸಾಯಂಕಾಲ, ತಪ್ಪಿದರೆ ನಾಡದ್ದು ಬೊಂಬಾಯಿಗೆ ಹೋಗಬೇಕು ಅಂತಿದೀನಿ."

ಆ ಮಾತು ಕೇಳಿ ಚಂದ್ರಮ್ಮ, ನಂಜಾಸಾನಿಯರಿಗೆ ಕಿವಿ ಮೊರದಗಲವಾಯಿತು.

"ಏನು ! ಅರ್ಧಕ್ಕರ್ಧ ಬೆಲೆ ಇಳಿದು ಹೋಗತ್ಯೆ ?" ಎಂದು ಆಶ್ಚರ್ಯದಿಂದ ಕೇಳಿದಳು ನಂಜಾಸಾನಿ.

"ಹೌದು. ಆಗಲೇ ದೊಡ್ಡ ದೊಡ್ಡ ಹಡಗುಗಳಿಗೆ ತುಂಬಿಬಿಟ್ಟಿದ್ದಾರಂತೆ ಬೇಕಾದಷ್ಟು ಬೆಳ್ಳಿ, ಭಂಗಾರ, ವಜ್ರಗಳ್ನ ನಮ್ಮ ದೇಶಕ್ಕೆ ಕಳಿಸೋದಕ್ಕೆ."

"ಹಾಗಾದರೆ ಇನ್ನು ಮೇಲೆ ಎಲ್ಲಾ ಬಹಳ ಅಗ್ಗವಾಗಿ ಹೋಗತ್ತೆ."

"ಹೇಳಿನ್ನೆಲ್ಲಾ ಆಗಲೇ, ಅರ್ಧಕ್ಕರ್ಧ ಇಳಿದು ಹೋಗತ್ತೆ ಅಂತ. ಅಷ್ಟೊಂದು ಮಾಲು ಬಂದರೆ ಇನ್ನೂ ಕಡಿಮೆ ಆದರೂ ಆಗಬಹುದು. ಅದಕ್ಕೇ ನಾನು ತಕ್ಷಣ ಈಗಿರೋ ಬೆಲೇಗೆ ಎಲ್ಲಾ ಮಾರಿಬಿಟ್ಟು ದುಡ್ಡು ಮಾಡ್ಕೊಂಡುಬಿಡೋಣ ಅಂತ ಮಾಡಿರೋದು. ಆ ಹೊಸ ಮಾಲು ಬಂದ ಮೇಲೆ ಹೇಗೂ ಕಮ್ಮಿ ಬೆಲೇಗೆ ಮತ್ತೆ ಕೊಂಡುಕೊಂಡ್ರಾಯ್ತು.

ಹೀಗೇ ನೋಡಿ, ವ್ಯಾಪಾರದಲ್ಲಿ ಟೈಂ ನೋಡಿ ಬುದ್ಧಿ ಓಡಿಸಿದರೆ ಲಕ್ಷಾಂತರ ರೂಪಾಯಿ ನಿಮಿಷದಲ್ಲಿ ಸಂಪಾದಿಸಿ ಬಿಡಬಹುದು."

ಶೆಟ್ಟಿಯ ಮಾತು ನಿಜವೆಂದೇ ನಂಬಿದರು ಚಂದ್ರಮ್ಮ, ನಂಜಾ ಸಾನಿ. ನಂಜಾಸಾನಿ ಮಗಳಿಗೆ ಹೇಳಿದಳು—

"ಏನೇ ಚಂದ್ರು. ನಮ್ಮ ಹತ್ರ ಇರೋ ಒಡವೆಗಳ್ನ ಹೆಚ್ಚು ಬೆಲೆ ಇರೋವಾಗ ಈಗ್ಲೇ ಮಾರಿಬಿಟ್ಟು ಆಮೇಲೆ ಡಬ್ಬಲ್ ಮಾಡಿಸಿಕೊಂಡರೆ ಆಗೊಲ್ವೆ ?"

"ಯಾಕಾಗ್ಬಾರ್ದು. ಹದಿನೈದು ದಿನದಲ್ಲಿ ಒಂದಕ್ಕೆ ಎರಡರಷ್ಟು ಮಾಡ್ಕೋಬಹುದು. ಎಷ್ಟು ಸುಲಭ. ಇಂಥ ಅವಕಾಶ ಬರೋದೇ ಅಪರೂಪ," ಶೆಟ್ಟಿ ಮಧ್ಯೆ ಬಾಯಿಹಾಕಿ ಪ್ರೋತ್ಸಾಹಿಸಿದ.

ಚಂದ್ರಮ್ಮನಿಗೂ ಬಾಯಲ್ಲಿ ನೀರೂರಿತು. ಅವಳು ಹೇಳಿದಳು—

"ಶೆಟ್ರು ಹೇಳೋದು ನಿಜ. ಅವರಿಗೆ ವ್ಯಾಪಾರದ ಗುಟ್ಟು ಚೆನ್ನಾಗಿ ಗೊತ್ತಿದೆ. ನಿನ್ನಿಷ್ಟದಂತೇನೆ ನಮ್ಮ ಹತ್ರ ಇರೋ ಒಡವೆಗಳ್ನೆಲ್ಲಾ ಈಗಲೇ ಮಾರಿಬಿಡೋಣಾಮ್ಮ. ಇನ್ನು ಹದಿನೈದು ದಿನ ಬಿಟ್ಟು ಮತ್ತೆ ಹೊಸದಾಗಿ ಮಾಡಿಸಿಕೊಳ್ಳೋಣ........ಆಗಲ್ವೆ ಶೆಟ್ರೆ ?"

"ಓ........ಭೇಷಾಗಿ ಆಗತ್ತೆ" ಶೆಟ್ಟಿ ಉತ್ತರ ಕೊಟ್ಟ.

"ಹಾಗಾದರೆ, ಎಲ್ಲಾ ಶೆಟ್ಟರ ಹತ್ತಿರಾನೇ ಕೊಟ್ಬಿಡು. ಮಾರಾಟ ಮಾಡಿ ಹಣ ತಂದ್ಕೊಡ್ತಾರೆ" ಎಂದಳು ನಂಜಾಸಾನಿ ಮಗಳಿಗೆ.

"ಹಾಗೇ ಮಾಡಿ. ನಾನು ಹೇಗೂ ಬೊಂಬಾಯಿಗೆ ಹೋಗ್ತೀನಲ್ಲ. ಜೋತೇಲಿ ನಮ್ಮ ಸಾಮಾನುಗಳ ಸಂಗಡ ಇವನ್ನೂ ತಗೊಂಡು ಹೋಗ್ತೀನಿ. ಒಳ್ಳೆ ಬೆಲೆಗೆ ಮಾರಾಟ ಮಾಡಿ ಹಣ ತಂದ್ಕೊಡ್ತೀನಿ"

ಚಂದ್ರಮ್ಮ ನಂಜಾಸಾನಿಯರಿಗೆ 'ಲಕ್ಷಾಧೀಶ್ವರ'ನಾದ ಶೆಟ್ಟಿಯಲ್ಲಿ ಬೇಕಾದಷ್ಟು ನಂಬಿಕೆ ಭರವಸೆಗಳಿದ್ದವು. ತಾಯಿ ಮಗಳಿಬ್ಬರೂ ಸೇರಿ ಮನೆಯಲ್ಲಿದ್ದ ಎಲ್ಲ ಬೆಳ್ಳಿ, ಭಂಗಾರ, ವಜ್ರದ ಒಡವೆಗಳನ್ನೂ ರತ್ನಂ ಶೆಟ್ಟಿಯ ಕೈಯಲ್ಲಿಟ್ಟರು. ಜೊತೆಗೆ ಮನೆಯಲ್ಲಿದ್ದ ಹುಡುಗಿಯರ ಮೈ ಮೇಲಿನ ಚೂರುಪಾರು ಒಡವೆಗಳನ್ನೂ ಸೇರಿಸಿದರು. ಶೆಟ್ಟಿ ಇನ್ನು ನಾಲ್ಕೈದು ದಿನಗಳಲ್ಲಿಯೇ ಬೊಂಬಾಯಿನಿಂದ ಹಿಂದಿರುಗಿದ ಕೂಡಲೆ

ಹಣ ತಂದುಕೊಡುವುದಾಗಿ ಹೇಳಿ ಎಲ್ಲವನ್ನೂ ತೆಗೆದುಕೊಂಡು ಅಲ್ಲಿಂದ ಹೊರಟ. ಚಂದ್ರಮ್ಮ ನಂಜಾಸಾನಿ ಕನಸು ಕಾಣತೊಡಗಿದರು.

ದಿನಗಳು ಕಳೆದವು. ರತ್ನಂಶೆಟ್ಟಿ 'ಇಂದು ಬಂದಾನು, ನಾಳೆ ಬಂದಾನು' ಎಂದು ಚಂದ್ರಮ್ಮ ನಂಜಾಸಾನಿ ಕಾಯುತ್ತ ಕುಳಿತರು. ಇಂದುನಾಳೆಗಳು ಸಂದು ಹದಿನೈದು ದಿನಗಳು ಉರುಳಿಹೋದವು. ರತ್ನಂ ಶೆಟ್ಟಿಯ ನೆರಳು ಸಹ ಚಂದ್ರಮ್ಮನ ಮನೆಯ ಕಡೆ ಸುಳಿಯಲಿಲ್ಲ.

ಭೀಮಣ್ಣ ನಾಲ್ಕಾರು ಬಾರಿ ರತ್ನಂಶೆಟ್ಟಿಯ ಅಂಗಡಿಗೂ ಹೋಗಿ ಬಂದ. ಶೆಟ್ಟರು ಊರಿಗಿನ್ನೂ ಬಂದಿಲ್ಲ ಎಂಬ ಸುದ್ದಿ ತಂದ. ಚಂದ್ರಮ್ಮ, ನಂಜಾಸಾನಿ ಬೊಂಬಾಯಿಗೆ ಹೋಗಿರುವ ಶೆಟ್ಟಿ ಹಾಗೆಯೇ ಹೊಸ ಮಾಲುಗಳು ಹಡಗಿನಲ್ಲಿ ಬಂದ ಮೇಲೆ ಅವನ್ನೂ ಕೊಂಡು ಒಟ್ಟಿಗೇ ಬರ ಬಹುದೆಂದು ಭಾವಿಸಿ ಸುಮ್ಮನಾದರು.

ಮತ್ತೆ ಹದಿನೈದು ದಿನಗಳು ಒಂದರ ಹಿಂದೊಂದರಂತೆ ಬಂದು ಹೋದವು. ಶೆಟ್ಟಿಯ ಸಮಾಚಾರವೇ ತಿಳಿಯಲಿಲ್ಲ. ಚಂದ್ರಮ್ಮ, ನಂಜಾಸಾನಿಗೆ ನಿಜವಾಗಿಯೂ ಗಾಭರಿಯಾಯಿತು. ಶೆಟ್ಟಿ ತಮಗೆ ಕೈ ಕೊಟ್ಟುಬಿಟ್ಟನೋ ಎಂಬ ಆತಂಕ ಅವರನ್ನು ಕಾಡಿಸತೊಡಗಿತು.

"ಏನೇ ಚಂದ್ರು ಐನತ್ತು-ಅರವತ್ತು ಸಾವಿರ ಬೆಲೆ ಬಾಳೋ ಒಡವೆ ಗಳ್ನೆಲ್ಲಾ ಅವನನ್ನು ನಂಬಿ ಕೊಟ್ಟುಬಿಟ್ವಲ್ಲೆ" ನಂಜಾಸಾನಿ ಮಗಳ ಮುಖವನ್ನು ನೋಡುತ್ತ ಕಳವಳದಿಂದ ಹೇಳಿದಳು.

"ನೀನು ಕೊಡು ಅಂದೆ, ನಾನು ಕೊಟ್ಟೆ" ಚಂದ್ರಮ್ಮ ಉತ್ತರಿಸಿ ದಳು.

"ಏನೋ ಲಕ್ಷಾಧೀಶ್ವರ. ನಮಗೂ ಅಷ್ಟೊಂದು ಒಡವೆವಸ್ತುಗಳ್ನ ಧಾರಾಳವಾಗಿ ಕೊಟ್ಟಿದ್ದ. ನಂಬಿಕಸ್ಥ. ನಮಗೆ ಮೋಸ ಮಾಡಲಾರ ಅಂತ ತಿಳ್ಕೊಂಡಿದ್ದನಲ್ಲೆ"

"ನೋಡೋಣ. ಇನ್ನೂ ಬೊಂಬಾಯಿಂದ ವಾಪಸು ಬಂದಿಲ್ವಂತಲ್ಲ, ಬರ್‍ಲಿ" ಎಂದು ಚಂದ್ರಮ್ಮ ತಾಯಿಯನ್ನು ಸಮಾಧಾನಗೊಳಿಸಿದಳು.

ಮತ್ತೆ ಭೀಮಣ್ಣ ಶೆಟ್ಟಿಯ ಅಂಗಡಿಯ ಬಳಿಗೆ ಹೋಗಿ ಬಂದ. ಈ ಬಾರಿ ಅವನ ಮುಖ ಸಪ್ಪೆಯಾಗಿತ್ತು.

"ಏನಾಯ್ತು, ಶೆಟ್ಟಿ ಬಂದ್ನೆ, ಏನಂದ ?" ಎಂದು ಗಾಭರಿಗೊಂಡು ಕೇಳಿದಳು ನಂಜಾಸಾನಿ.

"ಆಗೋದೇನು, ಎಲ್ಲಾ ಮುಳುಗಿಹೋಯ್ತು. ಶೆಟ್ಟಿ ನಮಗೆ ಮಾತ್ರವಲ್ಲ. ಎಲ್ಲರಿಗೂ ಮೇಲ್ಕೋಟೆ ನಾಮ ಹಾಕಿ ಪಾಪರ್‌ಚೀಟಿ ತಗೊಂಡು ಎಲ್ಲೋ ಓಡಿಹೋಗಿಬಿಟ್ಟನಂತೆ."

"ಹ್ಹಾಂ......."ಎಂದು ತತ್ತರಿಸಿ ನೆಲಕ್ಕೆ ಕುಕ್ಕರಿಸಿದಳು ನಂಜಾಸಾನಿ.

"ಅಂಗಡಿ ?" ಎಂದು ಪ್ರಶ್ನಿಸಿದಳು ಚಂದ್ರಮ್ಮ.

"ಅಂಗಡೀಲೇನೈತೆ. ಖಾಲಿಯಾಗೈತೆ. ಬಾಡಿಗೆಗಿದೆ ಅಂತ ಬೋರ್ಡ್ ಹಾಕವ್ರೆ"

"ಅಂಗಡಿ ಬಿಲ್ಡಿಂಗು ಅವನ್ದಲ್ವಾ ?"

"ಅವನ್ದೆಲ್ಲಿ ಬಂತು. ಕಂಟ್ರಾಕ್ಟ ಸಂಜೀವಣ್ಣಂದಂತೆ. ಶೆಟ್ಟಿ ಬಾಡಿಗೆಗಿದ್ದನಂತೆ."

"ಹೋಯ್ತಲ್ಲೆ. ನಮ್ಮ ಸರ್ವನಾಸ ಆಗೋಯ್ತಲ್ಲೆ" ಎಂದು ನಂಜಾಸಾನಿ ಗೋಳಾಡಿದಳು.

ಚಂದ್ರಮ್ಮ ಮಾತನಾಡಲಿಲ್ಲ. ಮೌನದಿಂದ ಹಲ್ಲುಹಲ್ಲು ಕಡಿದಳು.

"ಏನು ಮಾಡೋದೇ ಈಗ ?"

—ಹೊಟ್ಟೆ ಉರಿದು ಕೇಳಿದಳು ನಂಜಾಸಾನಿ.

"ಮಾಡೋದೇನು ? ಹೋಯ್ತು ಅಂತ ಗಟ್ಟಿ ಮಾಡ್ಕೊಂಡು ತಣ್ಣೀರು ಬಟ್ಟೆ ಹಾಕ್ಕೊಳ್ಳೋದು."

"ಪೋಲೀಸಿಗಾದ್ರೂ ಕಂಪ್ಲೇಂಟ್ ಕೊಟ್ರೋ ?" ಎಂದು ಭೀಮಣ್ಣ ಕೇಳಿದ.

"ನಾವು ಅವನಿಗೆ ಸಾಮಾನು ಕೊಟ್ವಿ ಅನ್ನೋದಕ್ಕೆ ದಾಖಲೇನಾದ್ರೂ ಏನಿದೆ. ಅವನು ಹೀಗೆ ನಮಗೆ ಮೋಸ ಮಾಡ್ದ ಅಂದ್ರೆ ಯಾರ್ನಂಬ್ತಾರೆ—ಪೋಲೀಸು ಕಂಪ್ಲಯಿಂಟ್ ಕೊಡೋಕೆ"

—ಚಂದ್ರಮ್ಮ ಮನಸ್ಸಿನ ಬೇಗುದಿಯನ್ನು ಅಡಗಿಸಿಕೊಂಡು ಆದಷ್ಟು ನಿರ್ವಿಕಾರವಾಗಿಯೇ ಹೇಳಿದಳು.

"ಅನ್ಯಾಯ....ಅನ್ಯಾಯ...." ಎಂದು ಚೀರಿದಳು ನಂಜಾಸಾನಿ.

"ನಾವು ಜೇರೀವ್ರಿಗೆ ಅನ್ಯಾಯ ಮಾಡಿದ್ದೀವಿ. ಅವನು ನಮಗೆ ಅನ್ಯಾಯ ಮಾಡಿದ. ಹೋಗಲೇಳು" ಚಂದ್ರಮ್ಮ ಬಿಗಿದ ಕಂಠದಿಂದ ಹೇಳಿದಳು.

ಆದರೂ ಚಂದ್ರಮ್ಮನ ಮನಸ್ಸು ದುಃಖತಪ್ತವಾಗಿತ್ತು. ಅಷ್ಟೊಂದು ಒಡವೆವಸ್ತುಗಳು ಅನ್ಯಾಯವಾಗಿ ಹೋದುವಲ್ಲ ಎಂದು ಹೃದಯ ಕೊರೆಯುತ್ತಿತ್ತು. ದುಃಖದ ಜೊತೆಗೆ ಕೋಪವೂ ಉಮ್ಮಳಿಸಿ ಬಂದಿತು. ಸೇಡು ಹೊಸ ರೂಪ ತಾಳಿ ಮೊರೆಯತೊಡಗಿತು.

ನಂಜಾಸಾನಿ ಅದೇ ಕೊರಗಿನಲ್ಲಿ ಹಾಸಿಗೆ ಹಿಡಿದಳು. ಮಗಳು ಎಷ್ಟೆಷ್ಟೋ ಸಮಾಧಾನ ಹೇಳಿದರೂ ಅವಳಿಗೆ ಸಮಾಧಾನವಾಗಲಿಲ್ಲ. ದಿನದಿನಕ್ಕೆ ಕೃಶವಾಗಿ ಕೊನೆಗೆ ಕಣ್ಣುಮುಚ್ಚಿದಳು.

ಭೀಮಣ್ಣ, ನಂಜಾಸಾನಿ ಸತ್ತ ಮೇಲೆ ಬಹಳ ದಿನ ಆ ಮನೆಯಲ್ಲಿರಲಿಲ್ಲ. ಚಂದ್ರಮ್ಮನ ಹುಚ್ಚುಸಿಟ್ಟು ಅವನಿಂದ ತಡೆದುಕೊಳ್ಳಲಾಗಲಿಲ್ಲ. ಬೆಂಗಳೂರು ಬಿಟ್ಟು ಚಿಂತಾಮಣಿಗೆ, ನಂಜಾಸಾನಿಯ ತಂಗಿ ನೀಲಾಸಾನಿಯ ಮನೆಗೆ ಹೊರಟುಹೋದ.

ಚಂದ್ರಮ್ಮ ದೃಢಮನಸ್ಸು ಮಾಡಿಕೊಂಡಳು. ಆದಷ್ಟು ಕಠಿಣವಾಗಿಯೇ ವರ್ತಿಸಿ ತನಗಾದ ಅನ್ಯಾಯಗಳಿಗೆ ಸೇಡು ತೀರಿಸಿಕೊಳ್ಳಬೇಕೆಂದು ಯೋಚಿಸಿಕೊಂಡಳು.

ಅವಳ ವೇಶ್ಯಾವಾಟಿ ದಿನದಿನಕ್ಕೆ ವೃದ್ಧಿಸತೊಡಗಿತು ಎಷ್ಟೋ ಜನ ದಿಕ್ಕುಗೆಟ್ಟ ಹುಡುಗಿಯರು ಹೊಸದಾಗಿ ಬಂದು ಸೇರಿಕೊಂಡರು. ಸೀನುಕಳ್ಳೆ ಪುಟ್ಟಿ, ಹೊಸೂರು ಬಸವಿ, ತಿಪಟೂರು ಸುಂದರಿ, ರುದ್ರಮ್ಮ ಎಲ್ಲರೂ ಚಂದ್ರಮ್ಮನ ಮನೆಯನ್ನು ಅಲಂಕರಿಸಿದರು. ಅವರಿಗೆಲ್ಲಾ ಗಂಡಸರ ಮೇಲೆ ಹೇಗೆ ಛಲ ತೀರಿಸಿಕೊಳ್ಳಬೇಕೆಂದು ಬೋಧಿಸಿದಳು ಚಂದ್ರಮ್ಮ.

ಗೋಪಾಲಿ ಚಂದ್ರಮ್ಮನ ವೇಶ್ಯಾವಾಟಿಗೂ ಏಜಂಟನಾದ.

೨೪

ರುದ್ರಮ್ಮ ಚಂದ್ರಮ್ಮನ ಮನೆಗೆ ಬಂದದ್ದು ಬಸವಿಯ ಹೊಟ್ಟೆಗೆ ಹಸಿಖಾರ ಅರೆದು ಹುಯ್ದಂತಾಗಿತ್ತು. ಚಂದ್ರಮ್ಮನನ್ನು ಬಿಟ್ಟರೆ ತನಗಿಂತಲೂ ಹೆಚ್ಚಿನ ರೂಪವತಿಯರಿಲ್ಲವೆಂದು ಅವಳು ಹೆಮ್ಮೆಯಿಂದ ಬೀಗಿಕೊಂಡಿದ್ದಳು. ಅಲ್ಲದೆ ಚಂದ್ರಮ್ಮ ತನಗಿಂತ ರೂಪುಳ್ಳವಳಾಗಿದ್ದರೂ ವಯಸ್ಸಿನಲ್ಲಿ ಬಹಳ ಹಿರಿಯಳು. ಹೀಗಾಗಿ ಬಂದ ಗಿರಾಕಿಗಳೆಲ್ಲ ತನ್ನನ್ನೇ ಕೋರುತ್ತಿದ್ದುದು ಬೇರೆ ಅವಳ ಬಿಗುಮಾನಕ್ಕೆ ಇನ್ನಷ್ಟು ಪುಟಕೊಟ್ಟಂತಾಗಿತ್ತು.

ಬಸವಿಗಿಂತ ರುದ್ರಮ್ಮ ಎಷ್ಟೋ ಪಾಲು ಕಿರಿಯವಳು, ಸೌಂದರ್ಯವತಿ ಹಾಗೂ ರಸಿಕಳು. ಗಿರಾಕಿಗಳ ಮರ್ಜಿಯನ್ನರಿತು ಅವರಿಗೆ ತಕ್ಕಂತೆ ನಡೆದುಕೊಂಡು ಅವರ ಒಲವನ್ನು ಗಳಿಸುವುದರಲ್ಲಿ ಒಂದು ವಿಶಿಷ್ಟ ನವೀನತೆಯಿತ್ತು ಅವಳಲ್ಲಿ. ಒಮ್ಮೆ ಅವಳಲ್ಲಿ ಸುಖಪಟ್ಟ ಗಿರಾಕಿಗಳು ಮತ್ತೆ ಮತ್ತೆ ಅವಳನ್ನೇ ಅರಸುತ್ತ ಬರುತ್ತಿದ್ದರು. ಬಸವಿಯ ಮುಖ್ಯ ಗಿರಾಕಿಗಳಾದ ಶಾಮರಾಯ, ವೆಂಕಟಪ್ಪ, ಗುರುಶಾಂತಪ್ಪ ಇವರೂ ಸಹ ರುದ್ರಮ್ಮನ ಕಡೆಗೆ ವಾಲಿದರು. ಇವೆಲ್ಲವೂ ಸ್ವಾಭಾವಿಕವಾಗಿಯೆ ಬಸವಿಯ ಹೊಟ್ಟೆಯನ್ನು ಉರಿಸಿದವು. ತನ್ನ ವರಮಾನಕ್ಕೆ ರುದ್ರಮ್ಮ ಬಂದು ಪೆಟ್ಟು ಹಾಕುತ್ತಾಳಲ್ಲ ಎಂಬ ಕ್ರೋಧ ಅವಳ ಹೃದಯವನ್ನು ಹತ್ತಿಕ್ಕಿತು.

"ಇವೆಲ್ಲಾ ನಂಗೆ ಸರಿಬೀಳಕ್ಕಿಲ್ಲಕ್ಕ, ನಮ್ಮ ನಮ್ಮ ಗಿರಾಕಿಗಳು ನಮನಮಗೇ ಇರ್ಬೇಕು" ಅಸೂಯೆ ಉಕ್ಕಿಬಂದು ಒಂದುದಿನ ಬಸವಿ ಚಂದ್ರಮ್ಮನೊಂದಿಗೆ ಹೇಳಿದಳು.

"ಅಯ್ಯೋ ಹುಚ್ಚು ಹುಡುಗಿ, ಬರೋ ಗಿರಾಕಿಗಳು ತಾವು ಯಾವಾಗ್ಲೂ ಇಂಥ ಹುಡುಗಿ ಹತ್ರಾನೇ ಪರ್ಮನೆಂಟಾಗಿರ್‍ತೀವಿ ಅಂತ

ಅಗ್ರಿಮೆಂಟ್ ಮಾಡ್ಕೊಂಡು ಬರ್ತಾರೇನೇ. ಅವರಿಗೆ ಯಾವ ಹುಡುಗಿ ಛಾಯ್ಸ್ ಬರ್ತದೋ ಆ ಹುಡುಗಿ ಹತ್ರ ಹೋಗ್ತಾರೆ."

"ಪರ್ಮೆನಂಟೋ - ಅಗ್ರಿಮೆಂಟೋ ಅವೆಲ್ಲಾ ನಂಗೊತ್ತಿಲ್ಲ. ನನ್ನ ಗಿರಾಕಿಗಳು ರುದ್ರಮ್ಮನ್ತಾವು ಹೋದ್ರೆ ನಾನು ಸುಮ್ಕಿರಾಕಿಲ್ಲ."

"ಏನ್ಮಾಡ್ತೀಯಾ ?"

"ಜಗಳ ಮಾಡ್ತೀನಿ."

"ಜಗಳ ಮಾಡೋಕೆ ಅವರೇನು ನಿಂಗೆ ತಾಳಿ ಕಟ್ಟವ್ರ ?"

"ಮತ್ತೆ ನನ್ನ ಗಿರಾಕಿಗಳೆಲ್ಲಾ ಅವಳ್ತಾವ ಓದ್ರೆ ನೋಡ್ಕೊಂಡು ಸುಮ್ಕಿರ್ಲಾ."

"ಏನ್ಮಾಡೋಕಾಗತ್ತೆ. ಈಗ ನನ್ನ ಗಿರಾಕಿಗಳೂ ಎಷ್ಟೋ ಜನ ಅವಳ್ತಾವೇ ಹೋಗ್ತಾರೆ. ನಾನು ಸುಮ್ಕಿಲ್ವಾ."

"ನೀನು ಬಿಡಕ್ಕ, ಮನೆ ಯಜಮಾನಿ. ಸುಮ್ಕಿರಬೌದು. ಆದರೆ ನಾನು ?"

"ನೀನೂ ಸುಮ್ಕಿರ್ಬೇಕು, ನಿನಗೆ ಯಾವ ಗಿರಾಕಿ ಬರ್ತಾರೋ ಅವರ ಹತ್ರಾನೇ ಸರಿಹೊಂದಿಸ್ಕೊಂಡು."

"ಹ್ಞಾಂ.... ಒಳ್ಳೊಳ್ಳೆ ಗಿರಾಕಿಗಳ್ನ ಅವಳು ಹೊಡ್ಕೊಳ್ಲಿ. ನಾನು ಬಿಕನಾಸಿ ಗಿರಾಕಿಗಳ್ನ ಕಟ್ಕೊಂಡು ಒದ್ದಾಡ್ತೀನಿ."

"ಬಿಕನಾಸೀನೋ, ಬೇವಾರ್ಸೀನೋ ಪಾಲಿಗೆ ಬಂದದ್ದು ಪಂಚಾಮೃತ" ಎನ್ನುತ್ತ ಚಂದ್ರಮ್ಮ ನಕ್ಕಳು. ಅವಳು ಹಾಗೆ ನಕ್ಕದ್ದು ಬಸವಿಯನ್ನು ಇದ್ದದ್ದೂ ರೇಗಿಸಿತು.

"ಬಿಕನಾಸಿ, ಬೇವಾರ್ಸಿಗೋಳ್ನ ಆ ಆದರಗಿತ್ತಿ ಚಿನಾಲಿ ಮುಂಡೇನೇ ಕಟ್ಕೊಳ್ಲಿ"

—ಎಂದಳು ಮುಖ ಗಂಟುಹಾಕಿಕೊಂಡು. ಅವಳ ಬಾಯಿಂದ ಹೊಲಸು ಅವಾಚ್ಯ ಶಬ್ದಗಳು ಧಾರಾವಾಹಿಯಾಗಿ ಹೊರಟವು. ಚಂದ್ರಮ್ಮ ಕೊಂಚಹೊತ್ತು ಎಲ್ಲವನ್ನೂ ಕೇಳಿದಳು. ಬಸವಿಯಾಡುತ್ತಿದ್ದ ಕೆಟ್ಟ ಮಾತುಗಳು ಅವಳಿಗೂ ಕೋಪ ಹುಟ್ಟಿಸಿತು.

"ನಿನಗೆ ಅಯ್ಯೋ ಪಾಪ ಅಂತ ಮಾತಾಡ್ಸಿ ಕೊಂಚ ಸದರ ಕೊಟ್ಟರೆ

ತಲೆಮೇಲೆ ಬಂದು ಕೂತ್ಕೊಂತೀಯ. ಒಳ್ಳೇ ಮಾತ್ನಲ್ಲಿ ಬಾಯ್ಮುಚ್ಕೊಂಡು ನಿನ್ನ ರೂಮಿಗೆ ಹೋಗ್ತಿಯೋ ಇಲ್ಲ ಹಂಟರ್ ತಗೊಂಡು ಮೈಮೇಲೆ ಬಾಸುಂಡೆ ಏಳಸ್ಬೇಕೋ" ಎಂದು ಗುಡುಗಿದಳು.

'ಹಂಟರ್' ಶಬ್ದ ಕೇಳಿದ ಕೂಡಲೆ ಬಸವಿಗೆ ಆಡುತ್ತಿದ್ದ ಮಾತು ಗಳು ಗಂಟಲ ಕೆಳಗೇ ಅಡಗಿಹೋದವು. ಅವಳು ಬುಸುಗುಟ್ಟುತ್ತ ಅಲ್ಲಿಂದೆದ್ದು ಹೊರಟುಹೋದಳು.

ರುದ್ರಮ್ಮನನ್ನು ಕಂಡು ಪುಟ್ಟಿಗೂ ಆಗಾಗ ಅಸೂಯೆ ಉಕ್ಕಿ ಬರು ತ್ತಿತ್ತು. ಆದರೆ ಅದನ್ನು ತೋಡಿಕೊಳ್ಳುವ ಧೈರ್ಯ ಅವಳಿಗೆ ಯಾವಾಗಲೂ ಉಂಟಾಗುತ್ತಿರಲಿಲ್ಲ. ರುದ್ರಮ್ಮನ ಬಗೆಗೆ ಅವಳಿಗೆ ಅಂತಹ ಅಸೂಯೆ ಇದ್ದರೂ ಒಂದು ವಿಧವಾದ ಗೌರವವೂ ಇತ್ತು. ಅದಕ್ಕೆ ಕಾರಣ ರುದ್ರಮ್ಮ ತನ್ನಲ್ಲಿ ತೋರುತ್ತಿದ್ದ ಅನುಕಂಪ. ಪುಟ್ಟಿಯ ಸಂಪಾದನೆಯನ್ನೇ ನೆಚ್ಚಿ ಕೊಂಡು, ಅವಳ ಮುದುಕಿ ತಾಯಿ ಗಂಡ ಇಬ್ಬರೂ ಬದುಕು ಸಾಗಿಸಬೇಕಾ ಗಿದೆಯೆಂಬುದನ್ನರಿತ ರುದ್ರಮ್ಮ ಆಗಾಗ ಪುಟ್ಟಿಗೆ ಕೊಡುಗೈಯಿಂದ ಸಹಾಯ ಮಾಡುತ್ತಿದ್ದಳು. ಒಮ್ಮೊಮ್ಮೆ ತನ್ನ ಮೈ ನೆಟ್ಟಗಿಲ್ಲವೆಂದು ತನ್ನ ಗಿರಾಕಿಗಳನ್ನು ಪುಟ್ಟಿಯ ಬಳಿಗೆ ಕಳುಹಿಸುತ್ತಿದ್ದುದೂ ಉಂಟು.

"ಪುಟ್ಟೀಗೆ ಮಾತ್ರ ಹಣಾನೂ ಕೊಡ್ತಾಳೆ, ಗಿರಾಕೀನೂ ಸೇರಿಸಿ ಕೊಡ್ತಾಳೆ. ನನ್ನ ಕಡೆಗಣ್ಣಾಗೂ ನೋಡೋಕಿಲ್ಲ. ಇವಳ ಸೊಲ್ಲು ಅಡಗ" ಎಂದು ಕುರುಬಿ ಮನಸ್ಸಿನಲ್ಲಿಯೇ ರುದ್ರಮ್ಮನನ್ನು ಶಪಿಸಿಕೊಳ್ಳು ತ್ತಿದ್ದಳು ಬಸವಿ.

"ಪುಟ್ಟೀಯೇನು ಕಿರೀಟ ಬರಸ್ತಾಳ ಇವಳ್ಗೆ. ಒಳ್ಳೇ ರಾಮಾಣ್ಯದ ಸೂರ್ಪಣಖಿ ಇದ್ದಂಗವ್ಳೆ. ಉಗಿಯಾಕೂ ಮನಸ್ಸು ಬರಾಕಿಲ್ಲ. ಅದೆಂ ಗೋಯ್ತಾರೋ ಗಿರಾಕಿಗಳು ಅವಳ್ತಾವ ಕಣ್ಮುಚ್ಕೊಂಡು" ಪುಟ್ಟಿಯ ಮೇಲೂ ಬಸವಿಗೆ ಆಕ್ರೋಶ ಬರುತ್ತಿತ್ತು.

ಇವರಲ್ಲೆಲ್ಲಾ ಯಾವ ಗಲಾಟೆಗೂ ಹೋಗದೆ ತನ್ನಷ್ಟಕ್ಕೆ ತಾನು ಇರುವವಳೆಂದರೆ ಸುಂದರಿ. ಚಂದ್ರಮ್ಮನೇ ಕರೆದು ಹೊಂದಿಸಿಕೊಟ್ಟ ಗಿರಾಕಿಗಳೊಂದಿಗೆ ತೆಪ್ಪಗಿರುತ್ತಿದ್ದಳು. ಅವರು ಯಾರೇ ಆಗಲಿ, ಹೇಗೇ

ಇರಲಿ, ಎಷ್ಟೇ ಕೊಡಲಿ ತುಟಿಪಿಟಕ್ಕೆನ್ನುತ್ತಿರಲಿಲ್ಲ. ಸುಂದರಮ್ಮನ ಈ ನಿರಾಸಕ್ತಿಯೂ ಬಸವಿಗೆ ಕಿಡಿಕಿಡಿಯೆನಿಸುತ್ತಿತ್ತು.

"ಏನು ಸುಂದ್ರಕ್ಕ. ನಿನ್ನ ಗಿರಾಕಿಗೋಳ್ನೆಲ್ಲಾ ಆ ಹಾಳು ಮುಂಡೆ ದೋಚ್ಕೊಂಡ್ರೂ ಸುಮ್ಕಿರ್ತಿದೀಯಲ್ಲಾ ನೀನು. ಇಂಗಾದ್ರೆ ನಾವು ಬದುಕು ಮಾಡೋದಾದ್ರೂ ಎಂಗೆ. ವಸೀನೂ ನೀನು ಯೋಸ್ನೇನೇ ಮಾಡಾಕಿಲ್ಲ" ಎನ್ನುತ್ತಿದ್ದಳು ಬಸವಿ ಸುಂದರಿಯೊಂದಿಗೆ.

"ಅವಳ್ನ ಯಾಕೆ ಬಯ್ತೀಯ, ಏನು ಮಾಡಿದ್ಲು ಅಂತ. ನಮ್ಮ ಗಿರಾಕಿಗಳ್ನ ತನ್ನತ್ರಕ್ಕೇ ಬರಬೇಕು ಅಂತ ಅವಳೇನಾದ್ರೂ ಅವರು ಬಲವಂತ ಮಾಡಿ ಕರೀತಾಳ. ಗಿರಾಕಿಗಳೇ ಅವಳ್ತಾವ ಹೋಗ್ತಾರೆ, ಅವಳೇ ಬೇಕು ಅಂತ. ಅದಕ್ಕೆ ಯಾರೇನ್ಮಾಡೋಕಾಗತ್ತೆ. ಅವರವರ ನಸೀಬು ಅವರವರಿಗೆ" ಸುಂದರಿ ಸಮಾಧಾನ ಹೇಳುತ್ತಿದ್ದಳು.

"ನಸೀಬೂ ಇಲ್ಲ, ಗಿಸೀಬೂ ಇಲ್ಲ ಸುಂದರಕ್ಕ. ಏನೋ ಮಾಯಾ ಮಂತ್ರ ಕಲ್ತವ್ಳೆ ಚಿನಾಲಿ."

"ಹಾಗಾದ್ರೆ ಅವಳು ಬರೋದಕ್ಕೆ ಮೊದಲು ಗಿರಾಕಿಗಳು ನಿನ್ನೇ ಬೇಕು ಅಂತಿದ್ರಲ್ಲ, ನೀನೂ ಮಾಯಾ ಮಂತ್ರ ಕಲಿತಿದ್ಯೇನು" ನಕ್ಕು ಅವಳನ್ನೆ ಕೇಳಿದಳು ಸುಂದರಿ. ಬಸವಿಗೆ ಬಾಯಿ ಕಟ್ಟಹೋಯಿತು.

ಮತ್ತೆ ಸುಂದರಿಯೇ ಅಂದಳು—

"ಮಾಯವೂ ಇಲ್ಲ, ಮಂತ್ರವೂ ಇಲ್ಲ ನೋಡು ಇದರಲ್ಲಿ. ಈ ಗಂಡಸರ ಬುದ್ದೀನೇ ಹಾಗೆ. ಕಣ್ಣಿಗೆ ಯಾವುದು ಚೆನ್ನಾಗೈತೋ ಅದಕ್ಕೆ ಆಸೆ ಪಡ್ತಾರೆ. ಅದರಲ್ಲೂ ಹೊಸದು ಅಂದರೆ ಬಾಯಿಬಾಯಿ ಬಿಡ್ತಾರೆ."

"ಅಂಗಾರೆ ನಾನು ಚೆನ್ನಾಕಿಲ್ವ, ನೀನು ಚೆನ್ನಾಕಿಲ್ವ?"

"ಅದು ನಾನೂ ನೀನು ಹೇಳೋ ಮಾತಲ್ಲ. ನಮ್ಮನ್ನ ಅಪೇಕ್ಷೆ ಪಡೋರ್ಗೆ ಸೇರಿದ್ದು. ಅವರ್ಗೆ ನಾವು ಒಪ್ಪಿದ್ರೆ ಚೆನ್ನಾಗಿದೀವಿ, ಇಲ್ದಿದ್ರೆ ಇಲ್ಲ."

"ಬಿಡಕ್ಕ. ನೀನೊಂದು ದರ್ಮದ ಗೊಡ್ಡು. ಇಂಥ ಮನೇಲಿರೋಕ್ಕೆ ಲಾಯಕ್ಕಿಲ್ಲ."

ಸುಂದರಿ ಸುಮ್ಮನೆ ನಕ್ಕಳು.

"ಈಗ ನಾನೊಂದು ಹೊಸ ಯೋಸ್ನೆ ಮಾಡಿನ್ನಿ ಅಕ್ಕ" ಬಸವಿ ಮತ್ತೆ ಮಾತನಾಡತೊಡಗಿದಳು.

"ಏನದು ?"

"ಈ ಮನೇಲಿದ್ದು ನಾವು ನಿಭಾಯಿಸೋದು ಕಷ್ಟ. ಚಂದ್ರಕ್ಕನೂ ಅವಳ ಕಡೆಗೇ ಸವಾಲು ಹಾಕ್ತಾಳೆ."

"ಅದಕ್ಕೆ"

"ಎಲ್ಲಾನಾ ಬೇರೇ ಮನೆ ಮಾಡ್ಕೊಂಡು ನಾವೇ ಯಾಕೆ ಸ್ವಂತ ವಾಗಿ ಕಸುಬು ಮಾಡಬಾರ್ದು ಅಂತ"

"ಅಷ್ಟು ತಯಾರಾಗಿಹೋಗಿಬಿಟ್ಟಿದೀಯೇನು ?"

"ಮತ್ತಿನ್ನೇನು ? ಮೂಗ್ಮುಚ್ಕೊಂಡು ಎಲ್ಲಾ ಅನುಭವಿಸ್ಕೊಂಡಿರ ಬೇಕು ಅಂತೀಯ ?"

"ಹಾಗೆಲ್ಲಾ ಮಾಡಬಾರ್ದು. ನಮಗೆ ಕಷ್ಟಕಾಲದಲ್ಲಿ ಆಶ್ರಯ ಕೊಟ್ಟು ಕಾಪಾಡಿದೋಳ್ಗೆ ಎರಡು ಬಗೀಬಾರ್ದು. ಅದು ನಿಯತ್ತಲ್ಲ."

"ಒಪ್ಕೊಂತ್ತೀನಿ. ಚಂದ್ರಕ್ಕನ ಮ್ಯಾಗೆ ಅಪ್ಪಾರ ಗೌರವ ಐತೆ. ಅವಳು ನಂಗೆ ತಾಯಿ ಇದ್ದಂಗೆ. ಆದರೂ ಕಂಡೂ ಕಂಡೂ ನಮ್ಮ ಬಾಳು ವ್ಯರ್ಥ ಮಾಡ್ಕೊಳ್ಳೋದ. ಈಗ, ಈ ಚಿಕ್ಕ ವಯಸ್ನಾಗೇ ನಾವು ದುಡದು ನಾಕ್ಕಾಸು ಮಾಡ್ಕೊಳ್ದಿದ್ರೆ ಮುಂದೆ ನಮ್ಮನ್ನ ಯಾರು ಮೂಸ್ತಾರೆ, ನೀನೇ ಯೋಸ್ನೆಮಾಡು."

"ಏನೋಮ್ಮ ನಿಂಗೆ ಹೇಳೋಕಾಗಲ್ಲ. ನಿನ್ನಿಷ್ಟ ಹೇಗೆ ಬರತ್ತೋ ಹಾಗೆ ಮಾಡು" ಎಂದು ಸುಮ್ಮನಾದಳು ಸುಂದರಿ.

"ನಾನು ಬೇರೇ ಮನೆ ಮಾಡಿದ್ರೆ ನೀನೂ ಬತ್ತೀಯಾ ?" ಕ್ಷಣ ಹೊತ್ತುಬಿಟ್ಟು ಬಸವಿ ಕೇಳಿದಳು.

"ನಾನು ಎಲ್ಲೂ ಬರೋದಿಲ್ಲಮ್ಮ. ದೇವರು ಏನು ಕೊಡ್ತಾನೋ ಅದರಲ್ಲೇ ತೃಪ್ತಿಪಟ್ಕೊಂಡು ಸಾಯೋವರ್ಗು ಇಲ್ಲೇ ಇದ್ಬಿಡ್ತೀನಿ"

ಅಷ್ಟರಲ್ಲಿ ನಡುಮನೆಯಿಂದ ಚಂದ್ರಮ್ಮನ ಕೂಗು ಕೇಳಿಬಂತು—

"ಲೇ ಸುಂದರಿ....ಲೇ ಬಸವಿ....ಬನ್ರೇ ಇಲ್ಲಿ....ಎಲ್ಲರೂ ಬನ್ರೇ"

ಸುಂದರಿ, ಬಸವಿ, ಪುಟ್ಟಿ ಎಲ್ಲರೂ ತಮ್ಮ ತಮ್ಮ ಕೋಣೆಗಳಿಂದ ಹೊರಬಿದ್ದು, ಅಟ್ಟದ ಪಾವಟಿಗೆಗಳನ್ನಿಳಿದು ನಡುಮನೆಗೆ ಧಾವಿಸಿದರು. ನಡುಮನೆಯಲ್ಲಿ ಕುರ್ಚಿಯ ಮೇಲೆ ಕುಳಿತಿದ್ದ ಚಂದ್ರಮ್ಮನನ್ನು ಸುತ್ತುಗಟ್ಟಿ ನಿಂತರು.

"ನೋಡ್ರೆ. ನಾನೂ, ರುದ್ರಮ್ಮ ಮುಡುಕುತೊರೆ ಜಾತ್ರೇಗೆ ಹೋಗಿ ಬರ್ತೀವಿ. ವಾಪಸು ಬರೋದಕ್ಕೆ ಎಂಟು–ಹತ್ತು ದಿನ ಹಿಡೀತದೆ. ಹಾಗೇ ಕೊಳ್ಳೇಗಾಲ, ಬ್ಳಪ್ಪೂ ಸುತ್ಕೊಂಡು ಬರ್‍ತೀವಿ. ನೀವು ಯಾರೂ ಒಬ್ಬರಿಗೊಬ್ಬರು ಕಚ್ಚಾಡದೆ ಅನುಸರಿಸ್ಕೊಂಡು ಒಳ್ಳೇತನದಲ್ಲಿ ಇರ್ಬೇಕು. ಸುಂದರಿ, ನೀನು ಇವರ್ಗೆಲ್ಲಾ ಮೇಲ್ವಿಚಾರ್ಣೆ ನೋಡ್ಕೊಂಡಿರ್ಬೇಕು. ತಿಳೀತೇ" ಎಂದು ಎಲ್ಲರನ್ನೂ ಕುರಿತು ಹೇಳಿದಳು ಚಂದ್ರಮ್ಮ.

ಯಾರೂ ಯಾವ ಮಾತೂ ಆಡದೆ ಸುಮ್ಮನೆ ನಿಂತರು. ಬಸವಿಗೆ ಮಾತ್ರ ಹೊಟ್ಟೆಯಲ್ಲೆ ಉಬ್ಬಸ ಹುಟ್ಟಿದಂತಾಯಿತು.

'ನಮ್ಮನ್ನೆಲ್ಲಾ ಬಿಟ್ಟು ಈ ಪಡಪೋಸಿ, ಬಿಕನಾಸಿ ರುದ್ರೀನೇ ಕರ್ಕೊಂಡೋಯ್ತಾಳಂತೆ ಜಾತ್ರೇಗೆ. ಅದೂ ಅಲ್ದೆ ಮನೇಗೆ ಸುಂದರಿ ಯಜಮಾನಿ ಆಗಿರ್ಬೇಕಂತೆ. ನಾನಷ್ಟು ಇವಳಿಗೆ ದುಡಿದಿದ್ರೂ ನನ್ನ ಮೇಗೆ ವಶೀನೂ ಪಿರೀತಿ ಇಲ್ಲ' ಎಂದು ಮನಸ್ಸಿನಲ್ಲೆ ಮುಸುಗುಟ್ಟಿದಳು.

"ಯಾರಾದ್ರೂ ಗಲಾಟೆ ಗಿಲಾಟೆ ಮಾಡಿದ್ರೆ ಅಂದ್ರೆ ಹಂಟರ್ ತಗೊಂಡು ಮೈ ಚರ್ಮ ಸುಲಿದುಬಿಡ್ತೀನಿ."

ಚಂದ್ರಮ್ಮ ಅವರ ಬಗ್ಗೆ ಎಷ್ಟು ಮೃದುವಾಗಿ ನಡೆಯುತ್ತಿದ್ದಳೋ ಸಮಯ ಬಂದಾಗ ಅಷ್ಟೇ ಕಠೋರವಾಗಿ ವರ್ತಿಸುತ್ತಿದ್ದಳು. ಕೋಪ ಉಕ್ಕಿ ಬಂದ ವೇಳೆಗಳಲ್ಲಿ ಮುಖ ಮುಸುಡಿ ನೋಡದೆ ಇನಿತಿಷ್ಟೂ ಕನಿಕರವಿಲ್ಲದೆ ಮೈ ಮೇಲೆ ಬೊಬ್ಬೆಗಳೇಳುವಂತೆ ಹಂಟರಿನಿಂದ ಥಳಿಸುತ್ತಿದ್ದಳು. ಆದರಿಂದ 'ಹಂಟರ್' ಎಂದರೆ ಸಾಕು ಅವರೆಲ್ಲಾ ಗಡಗಡ ನಡುಗುತ್ತಿದ್ದರು.

ಅದೇ ದಿನ ಚಂದ್ರಮ್ಮ ರುದ್ರಮ್ಮ ಇಬ್ಬರೂ ಮುಡುಕುತೊರೆಗೆ

ಪ್ರಯಾಣ ಬೆಳೆಸಿದರು. ಬಸವಿ ಸದ್ಯಕ್ಕಾದರೂ ಪೀಡೆ ತೊಲಗಿತೆಂದು ಲಟಲಟ ಲಟಿಕೆ ಮುರಿದಳು.

ಚಂದ್ರಮ್ಮ ಹೊರಟುಹೋದ ಮೇಲೆ ಬಸವಿ ಸುಂದರಿಯನ್ನು ಯಾವುದಕ್ಕೂ ಲಕ್ಷಿಸಲಿಲ್ಲ. ಅವಳ ಬಾಯಿಗೆ ಎಲ್ಲ ಹುಡುಗಿಯರೂ ಹೆದರುತ್ತಿದ್ದರು. ಸುಂದರಿ ಬಸವಿಗೆ ಒಂದೆರಡು ಬಾರಿ ಒಳ್ಳೆಯ ಮಾತಿನಲ್ಲಿ ಹೇಳಿ ನೋಡಿದಳು. ಬಸವಿ ಅವಳನ್ನೂ ಉಡಾಯಿಸಿ ಮಾತನಾಡಿಬಿಟ್ಟಳು. ತನಗ್ಯಾಕೆ ಇಲ್ಲದ ಪಾರುಪತ್ಯ, ಯಾವುದು ಹೇಗಾದರೂ ಹಾಳಾಗಿ ಹೋಗಲಿ ಎಂದುಕೊಂಡು ಸುಂದರಿ ನಿರುಪಾಯಳಾಗಿ ಸುಮ್ಮನಿದ್ದುಬಿಟ್ಟಳು. ಬಸವಿ ನಿರಾತಂಕವಾಗಿ ತನ್ನ ದರ್ಬಾರು ನಡಸಹತ್ತಿದಳು. ಗಿರಾಕಿಗಳು ಎಷ್ಟೇ ಜನ ಬರಲಿ ಯಾರಿಗೂ ಬಿಡದೆ ತಾನೇ ಆಕ್ರಮಿಸತೊಡಗಿದಳು. ಇತರ ಹುಡುಗಿಯರಾದರೂ ಹೆದರಿಕೊಂಡು ತುಟಿಯಾಡದೆ ಬಾಯಿಗೆ ಬೀಗ ಬಿಗಿದುಕೊಂಡು ತಮ್ಮ ಸಂಕಟ ತಾವೇ ನುಂಗಿಕೊಂಡಿರಬೇಕಾಯಿತು.

ಸೇರುಕಳ್ಳಿ ಪುಟ್ಟಿಗೆ ಬಸವಿಯ ಈ ವರ್ತನೆ ಬಹಳ ಕಷ್ಟಕ್ಕಿಟ್ಟುಕೊಂಡಿತು. ನಾಲ್ಕಾರು ದಿನಗಳು ಒಂದೇ ಸಮನೆ ತನಗೆ ಒಬ್ಬ ಗಿರಾಕಿಯೂ ಇಲ್ಲದೆ ಹೋದುದು ಬರುವ ಅಲ್ಪ ಸ್ವಲ್ಪ ವರಮಾನಕ್ಕೂ ಧಕ್ಕೆ ತಂದಿತ್ತು. ಅವಳ ಗಂಡ ತಿರುಮಲಯ್ಯ ಬೇರೆ ಬಂದು ದಿನವೂ ಪೀಡಿಸುತ್ತಿದ್ದ. ಮನೆಯಲ್ಲಿ ಕಾಳು ಅಕ್ಕಿ ಇಲ್ಲ, ಹಿಡಿ ರಾಗಿ ಇಲ್ಲ, ಮುದುಕಿಗೂ ತನಗೂ ಉಪವಾಸವೆಂದು ಗೋಳಿಡುತ್ತಿದ್ದ.

ತನಗೆ ದಿನಕ್ಕೆ ಒಬ್ಬನಾದರೂ ಗಿರಾಕಿಯನ್ನು ಬಿಟ್ಟುಕೊಡುವಂತೆ ಪುಟ್ಟಿ ಬಸವಿಯನ್ನು ಅಂಗಲಾಚಿ ಕೇಳಿಕೊಂಡಳು.

"ನಾನೇನಾಗಿವ್ನಿ ? ನಿಂಗೆ ಗಿರಾಕಿ ಬಿಟ್ಕೊಡೋಕೆ. ಅದೆಲ್ಲಾ ಆಗಾಕಿಲ್ಲ ಹೋಗು" ಎಂದುಬಿಟ್ಟಳು ಬಸವಿ, ನಿರ್ದಾಕ್ಷಿಣ್ಯವಾಗಿ.

"ಮನೇಲಿ ಹಿಡಿ ಕಾಳಿಲ್ವಂತೆ. ಯಜಮಾನ ಬಂದು ಮೂರ್ದಿನದಿಂದ ಗೋಗರೀತಾ ಅವ್ನೆ. ವಸಿ ದರ್ಮ ಮಾಡು. ಅವರ ಪರಾಣ ಉಳಿಸಿದ ಪುಣ್ಯ ಬತ್ತದೆ ನಿಂಗೆ" ಮನಕರಗುವ ಧ್ವನಿಯಲ್ಲಿ ಪುಟ್ಟಿ ಹೇಳಿಕೊಂಡಳು.

"ವಿಾಸೆ ಒತ್ತ ಗಂಡಸ್ಗೆ ಮನೇಗೆ ಕಾಳು ತತ್ತ ಅಂತ ಏಳು. ನಿನ್ನ ಪೀಡಿಸಾಕೆ ಅವನಿಗೇನು ಮಾನ ಇಲ್ವ" ಬಸವಿ ಮೂದಲಿಸಿದಳು.

ಪುಟ್ಟಿಗೆ ಒಂದು ಕಡೆ ಸಿಟ್ಟು, ಒಂದು ಕಡೆ ದುಃಖ, ಇನ್ನೊಂದು ಕಡೆ ನಾಚಿಕೆ ಹುಟ್ಟಿತು. ಜೊತೆಗೆ ಕಣ್ಣುಗಳಲ್ಲಿ ನೀರೂರಿತು.

ಬಸವಿ ಅಷ್ಟಕ್ಕೆ ಬಿಡದೆ ಮತ್ತೆ ಹಂಗಿಸಿದಳು—

"ಇವ್ನೂ ಗಂಡಸಂತೆ, ಯಜಮಾನನಂತೆ. ಎಂಡ್ತಿ ತಲೆ ಇಡ್ದು ಜೀವಣ ಮಾಡೋನು."

ತನ್ನ ಗಂಡನನ್ನು ತನ್ನ ಇದುರಿನಲ್ಲೇ ಇನ್ನೊಬ್ಬಳು ಹಾಗೆ ದೂರುತ್ತಿದ್ದುದು ಪುಟ್ಟಿಗೆ ತಡೆಯಲಾಗಲಿಲ್ಲ. "ನಿಂಗೆಲ್ಲಾ ಯಾಕೆ ಆ ರಾಮಣ್ಯ ಕಟ್ಕೊಂಡು. ನಾವೇನಾನಾ ಮಾಡ್ಕೊಂತೀವಿ. ನಿನ್ನಷ್ಟಕ್ಕೆ ನೀನು ಬಾಯ್ಮುಚ್ಕೊಂಡು ಬಿದ್ದಿರು ಬೋಸುಡಿ ಮುಂಡೆ......ಎಚ್ಚು ಮಾತಾಡಿದ್ರೆ ಹಲ್ಲು ಮುರಿದು ಕೈಯ್ಗೆ ಕೊಟ್ಟೇನು. ನಾನೇನು ಕೈಲಾಗ್ದೋಳು ಅಂತ ತಿಳ್ಕೋಬೇಡ" ಎಂದು ಹೇಳಿ ಜಗಳಕ್ಕೆ ನಿಲ್ಲಬೇಕು ಎನ್ನಿಸಿತು ಅವಳಿಗೆ. ಆದರೆ ಹಾಗೆ ಜಗಳ ಮಾಡುವುದರಿಂದ ಬರಿ ಗದ್ದಲವಾಗುತ್ತದೆಯೇ ಹೊರತು ಅದರಿಂದ ತನಗೆ ಯಾವ ಪ್ರಯೋಜನವೂ ಆಗಲಾರದೆಂದು ಯೋಚಿಸಿ, ಬಂದ ಸಿಟ್ಟನ್ನು ನುಂಗಿಕೊಂಡು ಶಾಂತಳಾಗಿ ಹೇಳಿದಳು—

"ಏನೋ ಅದೆಲ್ಲಾ ನಮ್ಮ ಗಾಚಾರ ಅಕ್ಕ. ನೀನು ವಸಿ ದೊಡ್ಡ ನಸ್ಸು ಮಾಡು."

"ಆಗಾಕಿಲ್ಲ, ಗಿರಾಕಿ ಬಿಟ್ಕೊಡೋಕೆ ಬಿಲ್‌ಕುಲ್ ಆಗಾಕಿಲ್ಲ" ಎಂದು ಪಟ್ಟುಹಿಡಿದವಳಂತೆ ಹೇಳಿದಳು ಬಸವಿ.

"ಹೋಗ್ಲಕ್ಕ. ವಸಿ ದುಡ್ನಾರ ಕೊಡು. ಮನೇಲಿ ಉಪಾಸ ಇರೋರು ಗಂಜೀನಾರ ಕುಡೀಲಿ"

"ಹ್ಞಾ....ದುಡ್ಡಿನಗಿಡ ಬೆಳಸಿವ್ನಿ ಅಲ್ವಾ, ನಾನು ನಿಂಗೆ ಕೊಡೋಕೆ ....ನಂತಾವೆಲ್ಲೈತೆ ದುಡ್ಡು."

"ದಿನಾ ಅಷ್ಟೊಂದು ಗಿರಾಕಿ ಬತ್ತಾರಲ್ಲಕ್ಕ ನಿಂಗೆ"

"ಬಂದರೆ....ನಾನು ದುಡಿದು ನಿಂಗೆ ಕೊಡಬೇಕೇನೋ?"

"ಅಂಗೇ ಕೊಡ್ಬೇಡ. ಸಾಲ ಕೊಟ್ಟಿರು. ತೀರಿಸ್ತೀನಿ."

"ಸಾಲ ಕೊಡೋಕೆ ನಾನು ಮಾರ್‍ವಾಡಿ ಅಂಗಡಿ ಇಟ್ಟಿಲ್ಲ. ನಾಮರ್ದ ಅನ್ನಲ್ಲ ನಿನ್ನ ಗಂಡ ಅವನಿಗೇಳು, ಮಾರ್ಕೆಟ್ಟಿನ್ತಾವು ಓಗಿ ಕೂಲಿ ನಾಲಿ ಮಾಡೋಕೆ."

ಪುಟ್ಟಿಗೆ ಇದುವರೆಗೆ ಬಿಗಿಹಿಡಿದಿದ್ದ ಸಹನೆಯು ದಡ ಕಳಚಿತು. ಅವಳು ಒಮ್ಮಿಂದೊಮ್ಮೆಗೇ ಬಸವಿಯ ಮೇಲೆ ಏರಿಹೋಗಿ ಅವಳ ಮುಡಿ ಹಿಡಿದೆಳೆದು ಕೋಪದಿಂದ ಕನಲಿದಳು—

"ಯಾರ್ನೇ ನಾಮರ್ದ ಗೀಮರ್ದ ಅನ್ನೋದು, ಬೋಸುಡಿ. ಏನೋ ಮರ್‍ವಾದೆ ಕೊಟ್ಟು ಸಯಿಸಿಕೊಂಡು ಓದ್ರೆ ನಾಲ್ಗೆ ದೊಡ್ಡದು ಮಾಡ್ತೀಯ. ಸೊಂಟ ಮುರ್ದು ಊತಾಕ್ಬಿಡ್ತೀನಿ. ಏನೂ ಅಂತ ತಿಳ್ಕೊಂಡಿದ್ದೀಯ."

ಗುದ್ದುಗಳು ಬಸವಿಯ ಬೆನ್ನಮೇಲೆ ದಬದಬ ಬೀಳತೊಡಗಿದವು. ಬಸವಿ ಒದ್ದಾಡುತ್ತ ಪುಟ್ಟಿಯ ಎಡಗೈ ಹಿಡಿಯಲ್ಲಿದ್ದ ತನ್ನ ಮುಡಿಯನ್ನು ಬಿಡಿಸಿಕೊಳ್ಳಲು ಅತ್ತಿತ್ತ ಹೊರಳಿ ಹೆಣಗಹತ್ತಿದಳು.

"ನೀನ್ಯಾಕಣೆ ಬೋಸುಡಿ. ಬಿಡೇ ಮುಡೀನ. ನಿನ್ನ ಕೊಂದಾಕ್ಬಿಡ್ತೀನ್ನೋಡು "

"ಬಯ್ತೀಯಾ....ನನ್ನ ಕೊಲ್ತೀಯಾ ?"

—ಎಂದು ಬಸವಿಯ ಮುಡಿಯನ್ನು ಮೇಲಕ್ಕೆ ಜಗ್ಗಿ ಎಳೆದು ಪುಟ್ಟಿ ಅವಳ ಕೆನ್ನೆಗೆ ಫಟೀರನೆ ಬಿಗಿದಳು.

ಮುಡಿ ಎಳೆದದ್ದರಿಂದುಂಟಾದ ನೋವಿಗೆ ಬಸವಿ 'ಹ್ಹಾಂ' ಎಂದು ಚೀರಿದಳು. ಪುಟ್ಟಿಯ ಹಿಡಿತವಿದ್ದ ಕೈಮೇಲೆ ತನ್ನ ಎರಡು ಕೈಗಳನ್ನೂ ಹಾಯಿಸಿ ಮೊನಚಾದ ಉಗುರುಗಳನ್ನು ಅದರಲ್ಲಿ ನಾಟಿದಳು. ಪುಟ್ಟಿ ನೋವಿನಿಂದ ಬಸವಿಯ ಮುಡಿ ಬಿಟ್ಟಳು.

ಪುಟ್ಟಿ ನೋವಿನಿಂದ ಕೈ ಒದರಿಕೊಳ್ಳುತ್ತಿರುವಷ್ಟರಲ್ಲೇ ಬಸವಿ ಅವಳ ಮೇಲೆ ಏರಿಹೋಗಿ ಅವಳ ಮುಖವನ್ನು ಪರಪರನೆ ಪರಚಿದಳು. ಮತ್ತೆ ಮಲ್ಲಯುದ್ಧ ಪ್ರಾರಂಭವಾಯಿತು. ಒಬ್ಬರ ಮುಡಿಯನ್ನೊಬ್ಬರು ಎಳೆದಾಡಿದರು. ಮೈಮೇಲೆಲ್ಲಾ ಸಿಕ್ಕಿದಂತೆ ಗುದ್ದಾಡಿದರು. ಮುಖಕ್ಕೆ ಉಗಿದಾಡಿದರು. ಬಾಯಲ್ಲಿ ಬರುತ್ತಿದ್ದ ಅಸಹ್ಯ ಅವಾಚ್ಯ ಪದಗಳಿಗಂತೂ

ಕೊನೆಯೇ ಇರಲಿಲ್ಲ. ಇಬ್ಬರ ಮೈ, ಮುಖಗಳಿಂದಲೂ ರಕ್ತ ಹರಿಯು ತೊಡಗಿತು. ಇತರ ಹುಡುಗಿಯರ ಸಹಾಯದಿಂದ ಅವರಿಬ್ಬರನ್ನೂ ಬಿಡಿಸುವುದರಲ್ಲಿ ಸುಂದರಿಗೆ ಸಾಕುಸಾಕಾಗಿ ಹೋಯಿತು.

"ನೀವೆಲ್ಲಾ ಸೇರ್ಕೊಂಡು ಪುಟ್ಟೀನ ಬಿಟ್ಟು ಪಿತೂರಿ ಮಾಡಿದೀರಾ, ಹಾದರಗಿತ್ತಿ ಮುಂಡೇರಾ?" ಎನ್ನುತ್ತ ಬಸವಿ ಅವರೆಲ್ಲರ ಮೇಲೂ ಹಾರಾಡಿದಳು.

ಅವಳ ಆ ಮಾತು ಕೇಳಿ ಹುಡುಗಿಯರಿಗೂ ಕೋಪ ಬಂತು. ಆದರೆ ಸುಂದರಿ ಅವರಿಗೆಲ್ಲ ಸಮಾಧಾನ ಹೇಳಿ ಸುಮ್ಮನಾಗಿಸಿದಳು.

ಅಂದಿನ ಪ್ರಸಂಗದಿಂದ ಬಸವಿ, ಪುಟ್ಟಿ ಸುಧಾರಿಸಿಕೊಳ್ಳಲು ಎಂಟು ದಿನ ಹಿಡಿಯಿತು. ಬಸವಿ ಗಿರಾಕಿಗಳನ್ನೆಲ್ಲಾ ತಾನೇ ಆಕ್ರಮಿಸುವುದು ತಪ್ಪಿದಂತಾಯಿತು. ಇದರಿಂದ ಹುಡುಗಿಯರಿಗೆ ಕೊಂಚ ಸಮಾಧಾನ ವೆನ್ನಿಸಿತು. ಅವರಿಗೂ ಗಿರಾಕಿಗಳು ಬಂದು ನಾಲ್ಕು ಕಾಸು ಸಿಕ್ಕು ವಂತಾಯಿತು.

ಚಂದ್ರಮ್ಮ ಮುಡುಕುತೊರೆಯಿಂದ ಹಿಂದಿರುಗುವ ವೇಳೆಗೆ ಹದಿನೈದು ದಿನಗಳಾದವು. ಮನೆಯಲ್ಲಿ ನಡೆದ ರಾದ್ಧಾಂತ ಅವಳ ಕಿವಿಗೆ ಬಿದ್ದ ಕೂಡಲೇ ಅವಳು ಕಿಡಿಕಿಡಿಯಾದಳು.

"ಹೀಗೇ ಬಿಟ್ಟರೆ ನೀವೆಲ್ಲಾ ಹೆಚ್ಚಿಹೋಗ್ತೀರಿ" ಎಂದು ಅವಳು ಹಂಟರ್ ತೆಗೆದುಕೊಂಡಳು ಕೈಗೆ.

ಪುಟ್ಟಿ ಭಯಗೊಂಡು ಓಡಿಹೋಗಿ ತನ್ನ ಕೋಣೆಯಲ್ಲಿ ಅಡಗಿ ಕೊಂಡಳು.

ಬಸವಿ ಮಾತ್ರ ಚಂದ್ರಮ್ಮನನ್ನು ಎದುರಿಸಿಯೇ ನಿಂತಳು.

"ಹೆಚ್ಚಿ ಹೋಗೋದಲ್ಲಾ. ಈ ದರಿದ್ರ ಮನೇಲಿದ್ರೆ ನಾವು ಕೊಚ್ಚಿ ಹೊಯ್ತೀವಿ" ಎಂದು ಹೂಂಕರಿಸುತ್ತ ಜವಾಬಿತ್ತಳು.

"ಎಷ್ಟೇ ನಿಂದು ಗರ್ವ. ದರಿದ್ರಮನೇನಂತೆ. ಮುಚ್ಚೇ ಬಾಯಿ" ಚಂದ್ರಮ್ಮ ಕೋಪದಿಂದ ಕನಲಿ ನುಡಿದಳು.

"ನೀನು ಮುಚ್ಚು ಬಾಯಿ" ಅಷ್ಟೇ ಆಟಾಟೋಪದಿಂದ ಬಸವಿ ಮಾರ್ನುಡಿದಳು.

ಇದ್ದದ್ದೂ ಕೋಪ ಉಲ್ಬಣಿಸಿತು ಚಂದ್ರಮ್ಮನಿಗೆ. ಅವಳು ಬಸವಿಗೆ ಬಾರಿಸಲು ಹಂಟರ್ ಮೇಲೆತ್ತಿದಳು.

"ನನ್ನೇ ಎದರ್ಸೋೕ ಹಂಗಾದ್ಯಾ ಬೋಸುಡಿ" ಎನ್ನುತ್ತ ಬಸವಿ ನಿಂತಿದ್ದ ಕಡೆಗೆ ನುಗ್ಗಿದಳು.

"ನೀನು ಬೋಸುಡಿ, ನಿಮ್ಮವ್ವ ಬೋಸುಡಿ" ಎಂದು ಬಸವಿ ಛಂಗನೆ ಹಾರಿ ಚಂದ್ರಮ್ಮ ಮೇಲೆತ್ತಿದ್ದ ಹಂಟರನ್ನು ಹಾಗೆಯೇ ತನ್ನ ಕೈಯಿಂದ ಬಿಗಿಹಿಡಿದಳು. ಕೊಂಚಹೊತ್ತು ಇಬ್ಬರೂ ಸೆಣಸಾಡಿದರು. ಬಸವಿ ಚಂದ್ರಮ್ಮನ ತೋಳಿಗೆ ಬಾಯಿಹಾಕಿ ಹಲ್ಲುಗಳನ್ನೂರಿ ರಕ್ತ ಕಾಣಿಸಿದಳು. ಚಂದ್ರಮ್ಮ ನೋವಿನಿಂದ ಕಿರಿಚಿಕೊಂಡಳು. ಹಂಟರ್ ಅವಳ ಕೈಯಿಂದ ಸಡಿಲಿಕೊಂಡಿತು. ಬಸವಿ ಅದನ್ನು ಕಿತ್ತುಕೊಂಡು ಚಂದ್ರಮ್ಮನನ್ನು ಹೊಡೆಯಲು ಮೇಲೆತ್ತಿದಳು. ಅಷ್ಟರಲ್ಲಿ ಸುಂದರಿ ಓಡಿಬಂದು ಅವಳನ್ನು ತಡೆದು ಹಂಟರ್ ಹಿಡಿಯಲು ಕೈಹಾಕಿದಳು. ಬಸವಿ ಇನ್ನೇನು ಅವಳಿಗೂ ತನ್ನ ಹಲ್ಲುಗಳ ಪ್ರತಾಪ ತೋರಿಸಬೇಕೆನ್ನು ವಾಗಲೇ ಇತರ ಹುಡುಗಿಯರು ಒಟ್ಟಾಗಿ ಬಂದು ಬಸವಿಯನ್ನು ಸುತ್ತು ಗಟ್ಟಿ ಅವಳನ್ನು ನೆಲಕ್ಕೆ ಕೆಡವಿದರು. ಆಳಿಗೊಂದು ಗುದ್ದು ಬಿಗಿಯ ಹತ್ತಿದರು.

ಚಂದ್ರಮ್ಮ ಚೇತರಿಸಿಕೊಂಡು ಬಸವಿಯನ್ನು ಬಿಟ್ಟು ದೂರ ಸರಿಯು ವಂತೆ ಹುಡುಗಿಯರಿಗೆಲ್ಲ ಅಪ್ಪಣೆ ಮಾಡಿದಳು. ಹುಡುಗಿಯರು ಅವಳನ್ನು ಬಿಟ್ಟರು. ಬಸವಿ ಬುಸುಗುಟ್ಟುತ್ತ ಎದ್ದುನಿಂತಳು.

"ಹ್ಞಾಂ.... ಇನ್ನೊಂದು ಘಳಿಗೆ ಈ ಮನೇಲಿರೋಕಾಗ್ದು ನೀನು. ನಿನ್ನ ಸಾಮಾನೇನಿದ್ಯೋ ಎಲ್ಲಾ ಕಟ್ಕೊಂಡು ಹೊರಟ್ಹೋಗು ಇಲ್ಲಿಂದ" ಬಸವಿಯ ಮುಖ ದಿಟ್ಟಿಸುತ್ತ ಘರ್ಜಿಸಿದಳು ಚಂದ್ರಮ್ಮ.

"ಓಯ್ತೀನಿ. ನಿನ್ನ ಮನೆ ಇಲ್ದಿದ್ರೆ ಕತ್ತೆಬಾಲಾನೇ ಓಯ್ತು" ಎಂದು ಗೊಣಗುತ್ತ ಬಸವಿ ತನ್ನ ಕೋಣೆಗೆ ನಡೆದಳು. ಬಟ್ಟೆಬರೆಗಳ ನ್ನೆಲ್ಲಾ ಟ್ರಂಕಿನಲ್ಲಿ ತುರುಕಿಕೊಂಡಳು. ಸೀರೆಗಳನ್ನು ಹಾಸಿಗೆಯಲ್ಲಿ ಸೇರಿಸಿ ಕಟ್ಟಿದಳು. ನೂರೆಂಟು ಮಾತುಗಳಲ್ಲಿ ಚಂದ್ರಮ್ಮನನ್ನೂ, ಅವಳ ಮನೆಯಲ್ಲಿದ್ದ ಹುಡುಗಿಯರನ್ನೂ ವಟವಟ ಶಪಿಸುತ್ತ ಚಂದ್ರಮ್ಮನ ಮನೆ

ಬಿಟ್ಟು ಹೊರನಡೆದಳು. ಬಸವಿ ಹೋಗುತ್ತಲೂ ಚಂದ್ರಮ್ಮ ಕುರ್ಚಿಯಲ್ಲಿ ಕುಸಿದು ಕುಳಿತಳು. ಅವಳಿಗರಿಯದಂತೆಯೇ ಅವಳ ಕಣ್ಣುಗಳಲ್ಲಿ ಹನಿ ಗೂಡಿದವು.

ಚಂದ್ರಮ್ಮನ ಮನೆಯನ್ನು ಬಿಟ್ಟು ಹೊರಟ ಬಸವಿ ತನ್ನ ಕೈಯ್ಯಲ್ಲಿನ ಹಣದಿಂದ ದಿವಾನಖಾನೆ ಗಲ್ಲಿಯಲ್ಲಿದ್ದ ಮನೆಯೊಂದನ್ನು ಬಾಡಿಗೆಗೆ ಹಿಡಿದಳು. ಸ್ವತಂತ್ರವಾಗಿ ಕಸುಬು ಮಾಡತೊಡಗಿದಳು. ಗೋಪಾಲಿಯನ್ನು ಆಶ್ರಯಿಸಿ ತನ್ನ ಮನೆಗೂ ಹಲವಾರು ಹುಡುಗಿಯರನ್ನು ಸೇರಿಸಿಕೊಂಡಳು. ಹೊಸೂರು ಬಸವಿಯ ವೇಶ್ಯಾವಾಟಿಯೂ ಬೆಂಗಳೂರಿನ ರಸಿಕವೃಂದದಲ್ಲಿ ಪ್ರಸಿದ್ಧವಾಯಿತು.

ಮನೆ ತಪ್ಪಿ ಬಂದ ಸಣ್ಣಯ್ಯಪ್ಪನಿಗೆ ಹಿಂದಿನ ನಿಯತ್ತು ನೆನೆದು ಕೃತಜ್ಞತೆಯಿಂದ ಆಶ್ರಯಕೊಟ್ಟಳು ಬಸವಿ. ದುಡ್ಡು ಕಾಸಿನ ವಹಿವಾಟೆಲ್ಲಾ ಬಸವಿಯ ಕೈಯ್ಯೊಳಗಿದ್ದರೂ ಸಣ್ಣಯ್ಯಪ್ಪನೇ ಆ ಮನೆಗೆ ಯಜಮಾನ ಎನ್ನಿಸಿಕೊಂಡ. ಬಸವಿ ಸಣ್ಣಯ್ಯಪ್ಪನ ಮಾತಿಗೆ ಬೆಲೆಕೊಡುತ್ತ ಅವನಿಗೆ ವಿಧೇಯವಾಗಿದ್ದುಕೊಂಡೇ ತನ್ನ ವೇಶ್ಯಾವಾಟಿ ನಡೆಸುತ್ತಿದ್ದಳು.

೨೫

ಚಂದ್ರಮ್ಮ ಹಾಸಿಗೆ ಹಿಡಿದು ಮಲಗಿದುದು ಮನೆಯಲ್ಲಿದ್ದ ಹುಡುಗಿಯರಿಗೆಲ್ಲ ಕಳವಳಕ್ಕಿಟ್ಟುಕೊಂಡಿತು. ಎಂಟು ದಿನಗಳಿಂದ ಕೆಟ್ಟ ಜ್ವರ ಬಿಡದೆ ಕೆಂಡದಂತೆ ಕಾಯುತ್ತಿತ್ತು. ರುದ್ರಮ್ಮನಿಗಂತೂ ಆಕಾಶವೇ ಕಳಚಿ ತಲೆಯ ಮೇಲೆರಗಿದಂತಾಯಿತು. ಸುಂದರಿ ರೋಗಿಯ ಸಮೀಪದಲ್ಲೆ ಕುಳಿತು ಶುಶ್ರೂಷೆ ಮಾಡತೊಡಗಿದಳು. ಗಿರಾಕಿಗಳೇನೋ ಯಾವುದನ್ನೂ ಲಕ್ಷಿಸದೆ ಬರುತ್ತಿದ್ದರು, ಹೋಗುತ್ತಿದ್ದರು. ವಿಧಿಯಿಲ್ಲದೆ, ಕೀಲುಬೊಂಬೆಗಳಂತೆ ಹುಡುಗಿಯರೂ ಅವರನ್ನು ರಮಿಸುತ್ತಿದ್ದರು. ಏನೇ ಆಗಲಿ ದೈನಂದಿನ ವ್ಯಾಪಾರವನ್ನು ಅವರು ಬಿಡುವಂತಿರಲಿಲ್ಲ. ಚಂದ್ರಮ್ಮ ಬಿಡಲು ಅವಕಾಶವನ್ನೂ ಕೊಡುತ್ತಿರಲಿಲ್ಲ.

"ಎಂಟು ದಿನದಿಂದ ಬಿಟ್ಟಿಲ್ಲ ಹಾಳು ಜ್ವರ. ಹೋಗಿ ಡಾಕ್ಟರನ್ನಾರೋ ಕರ್ಕೊಂಡು ಬರ್ತೀನಿ. ಇದೆಂಥಾ ಜ್ವರಾನೋ ಏನೋ ಮದ್ದು ತಗೊಳ್ದೆ ನೀನಿಂಗೆ ಹಠ ಮಾಡಬೇಡಾಕ್ಕ" ಎಂದು ಕಣ್ಣಲ್ಲಿ ನೀರು ತಂದುಕೊಂಡು ಹೇಳಿದಳು ರುದ್ರಮ್ಮ.

"ಹೌದು. ಹಿಂಗೆ ಮದ್ದು ತಗೊಳ್ದೆ ಖಾಯಿಲೆ ಗುಣ ಆಗೋದು ಹೆಂಗೆ. ಸುಮ್ಕೆ ನರಳ್ತಿರೋದು ಯಾವ ದೇವರಿಗೆ ಪ್ರೀತಿ" ಸುಂದರಿಯೂ ದುಗಡಗೊಂಡು ನುಡಿದಳು.

"ಏನು ಮಾಡ್ತದೆ ಬಿಡ್ರೆ. ನಾಕ್ದಿನ ಪೀಡಿಸ್ತದೆ ಈ ಜ್ವರ. ಆಮೇಕೆ ನಮ್ಮ ಹಠ ನೋಡಿ ಅದೇ ಹೆದರ್ಕೊಂಡು ಓಡಿಹೋಯ್ತದೆ. ಇದಕ್ಕೆಲ್ಲಾ ಡಾಕ್ಟರ್ ಯಾಕೆ" ಎಂದು ಸಮಾಧಾನ ಹೇಳಿಬಿಡುತ್ತಿದ್ದಳು ಚಂದ್ರಮ್ಮ.

ಒಂದು ದಿನ ಜ್ವರದ ತಾಪದಲ್ಲಿ ಪ್ರಜ್ಞೆ ತಪ್ಪಿ, ಏನೇನೋ ಮಾತನಾಡತೊಡಗಿದಳು ಚಂದ್ರಮ್ಮ. ಅದನ್ನು ನೋಡಿ ಎಲ್ಲರಿಗೂ ಗಾಭರಿ

ಯಾಯಿತು. ರುದ್ರಮ್ಮ ಓಡಿಹೋಗಿ ಬಳೇಪೇಟೆಯಲ್ಲಿ 'ಔಷಧಾಲಯ' ಇಟ್ಟುಕೊಂಡಿದ್ದ ಡಾಕ್ಟರ್ ಸುಬ್ಬರಾಯರನ್ನು ಕರೆತಂದಳು.

ಡಾಕ್ಟರ್ ರೋಗಿಯನ್ನು ಪರೀಕ್ಷಿಸತೊಡಗಿದರು. ಅವರೇನು ಹೇಳುವರೆಂದು ಹುಡುಗಿಯರೆಲ್ಲ ಕಾತರದಿಂದ ನಿಂತಿದ್ದರು.

"ಜೀವಕ್ಕೇನೂ ಭಯವಿಲ್ಲವಾ, ಡಾಕ್ಟರೇ ?" ಗದ್ಗದ ಕಂಠದಿಂದ ಕೇಳಿದಳು ರುದ್ರಮ್ಮ.

ರೋಗಿಯನ್ನು ಪರೀಕ್ಷಿಸಿ ಕಿವಿಯಿಂದ ಸ್ಟೆತಸ್ಕೋಪನ್ನು ಬಿಚ್ಚುತ್ತ ಡಾಕ್ಟರು ನಿಧಾನವಾಗಿ ಹೇಳಿದರು—

"ಅಂಥಾದ್ದೇನಿಲ್ಲ. ಆದರೆ ಇದು ಬಹಳ ಕೆಟ್ಟ ಜ್ವರ. ಟೈಫಾಯಿಡ್ಡು. ಆಗಲೇ ವಿಷಮಿಸಿದೆ. ನೀವು ಇಲ್ಲೇ ಇಟ್ಕೊಳ್ಳೋದು ಅಪಾಯ. ಹೊತ್ತುಹೊತ್ತಿಗೆ ಔಷಧ ಪಥ್ಯ ನಡೆಸೋದು ಕಷ್ಟ. ಆದ್ದರಿಂದ ವಿಕ್ಟೋರಿಯಾ ಆಸ್ಪತ್ರೆಗೆ ಕರ್ಕೊಂಡು ಹೋಗಿ ಸೇರಿಸಿ. ಅಲ್ಲಿ ಚೆನ್ನಾಗಿ ನೋಡ್ಕೋತಾರೆ. ಭಯ ಏನೂ ಪಡಬೇಕಾದ್ದಿಲ್ಲ" ಎಂದು ಹೇಳಿ ಡಾಕ್ಟರು ಹೊರಟುಹೋದರು.

ಚಂದ್ರಮ್ಮ ಇನ್ನೂ ಮೈಮೇಲೆ ಪ್ರಜ್ಞೆಯಿಲ್ಲದೆ ತಡಬಡಿಸುತ್ತಿದ್ದಳು. ಆಸ್ಪತ್ರೆಗೆ ಕರೆದುಕೊಂಡು ಹೋಗುವುದೇ ಬೇಡವೇ ಎಂದು ಹುಡುಗಿಯರಲ್ಲಿ ಕೊಂಚ ಹೊತ್ತು ಚರ್ಚೆ ನಡೆಯಿತು. ಡಾಕ್ಟರು ಹೇಳಿದಂತೆ ಆಸ್ಪತ್ರೆಗೆ ಕರೆದುಕೊಂಡು ಹೋಗುವುದೇ ಒಳ್ಳೆಯದೆಂದು ಸುಂದರಿ ತೀರ್ಮಾನಿಸಿದಳು. ರುದ್ರಮ್ಮ ಹೋಗಿ ಟ್ಯಾಕ್ಸಿಯೊಂದನ್ನು ಗೊತ್ತುಮಾಡಿಕೊಂಡು ಬಂದಳು. ಎಲ್ಲರೂ ಸೇರಿ ಚಂದ್ರಮ್ಮನನ್ನು ಎತ್ತಿ ತಂದು ಟ್ಯಾಕ್ಸಿಯಲ್ಲಿ ಮಲಗಿಸಿದರು. ರುದ್ರಮ್ಮ, ಸುಂದರಿ ಇಬ್ಬರೂ ಚಂದ್ರಮ್ಮನ ಜತೆಯಲ್ಲಿ ಆಸ್ಪತ್ರೆಗೆ ಹೊರಟರು.

ಚಂದ್ರಮ್ಮನನ್ನು ಆಸ್ಪತ್ರೆಯಲ್ಲಿ ಇನ್‌ಪೇಷೆಂಟಾಗಿ ಸೇರಿಸಿಕೊಂಡರು. ಸುಂದರಿ, ರುದ್ರಮ್ಮ ಒಬ್ಬರ ತಪ್ಪ ಒಬ್ಬರು ಚಂದ್ರಮ್ಮನ ಸಂಗಡ ಇದ್ದು ಅವಳ ಉಪಚಾರ ಮಾಡುತ್ತಿದ್ದರು.

ರುದ್ರಮ್ಮ ಯಾವುದಕ್ಕೂ ಹಿಂದು ಮುಂದು ನೋಡದೆ ಎಷ್ಟು

ಬೇಕಾದರೂ ಹಣ ಬಿಚ್ಚುತ್ತಿದ್ದಳು. ಹಾಗೆ ಮಾಡಿ ಆಸ್ಪತ್ರೆಯಲ್ಲಿ ಚಂದ್ರಮ್ಮನ ಕಡೆಗೆ ವಿಶೇಷ ಲಕ್ಷ್ಯವನ್ನೂ ಸೆಳೆದಳು. ದಿನದಿನಕ್ಕೆ ಚಂದ್ರಮ್ಮ ಉತ್ತಮಗೊಂಡಳು. ಇಪ್ಪತ್ತೊಂದು ದಿನ ಎಡೆಬಿಡದೆ ಕಾದ ಜ್ವರ ಕೊನೆಗೆ ಕಾಲ್ತೆಗೆಯಿತು. ಸುಂದರಿ, ರುದ್ರಮ್ಮ ಸಮಾಧಾನದ ನಿಟ್ಟುಸಿರು ಬಿಟ್ಟರು.

ಜ್ವರ ಬಿಟ್ಟಮೇಲೂ ನಾಲ್ಕೈದು ದಿನ ಚಂದ್ರಮ್ಮ ಆಸ್ಪತ್ರೆಯಲ್ಲೆ ಇದ್ದಳು. "ಇನ್ನು ಪರ್ವಾಗಿಲ್ಲ, ಮನೇಗೆ ಹೋಗಬಹುದು" ಎಂದು ಆಸ್ಪತ್ರೆಯಲ್ಲಿ ಡಾಕ್ಟರುಗಳಿಂದ ಧೈರ್ಯ ದೊರೆತ ಮೇಲೆ ಸುಂದರಿ, ರುದ್ರಮ್ಮ ಚಂದ್ರಮ್ಮನನ್ನು ಮನೆಗೆ ಕರೆತಂದರು. ಹುಡುಗಿಯರ ಸಂತೋಷಕ್ಕೆ ಪಾರವೇ ಇರಲಿಲ್ಲ. ದೊಡ್ಡದೊಂದು ಗಂಡಾಂತರ ತಪ್ಪಿತೆಂದು ಎಲ್ಲರೂ ಸಂತೋಷಗೊಂಡರು.

ಸಂತೋಷದ ಹೊಳಪಿನ ಹಿಂದೆಯೇ ದುಃಖದ ಮೋಡ ಹೆಪ್ಪುಗಟ್ಟಿ ಕೂತಿತ್ತು. ನಾಲ್ಕಾರು ದಿನ ಕಳೆಯುವುದಕ್ಕಿಲ್ಲ ಚಂದ್ರಮ್ಮನಿಗೆ ಪುನಃ ಜ್ವರ ಕಾಣಿಸಿಕೊಂಡಿತು. ಮೊದಲೇ ನಿರ್ಬಲಳಾಗಿದ್ದ ಅವಳು ಬಹಳ ಬಳಲಿದಳು. ಸುಂದರಿ, ರುದ್ರಮ್ಮ ಮತ್ತೆ ಅವಳನ್ನು ಆಸ್ಪತ್ರೆಗೆ ಕರೆದು ಕೊಂಡು ಹೋಗುವ ಯೋಚನೆ ಮಾಡಿದರು. ಚಂದ್ರಮ್ಮ ಅದಕ್ಕೆ ಕೊಂಚವೂ ಒಪ್ಪಿಗೆಯೀಯಲಿಲ್ಲ. 'ಹೋಗುತ್ತದೆ ಬಿಡು' ಎಂದು ಹಠ ಹಿಡಿದು ಮನೆಯಲ್ಲೆ ಉಳಿದುಕೊಂಡುಬಿಟ್ಟಳು.

ದಿನ ದಿನಕ್ಕೆ ಜ್ವರ ಏರತೊಡಗಿತು. ಯಾರೆಷ್ಟು ಹೇಳಿದರೂ ಚಂದ್ರಮ್ಮ ಆಸ್ಪತ್ರೆಗೆ ಮತ್ತೆ ಹೋಗಲು ಮನಸ್ಸು ಮಾಡಲೇ ಇಲ್ಲ. ಕೊನೆಗೆ ಮರುಕಳಿಸಿದ ಆ ವಿಷಮಶೀತಜ್ವರ ಪಟ್ಟುಹಿಡಿದು ಚಂದ್ರಮ್ಮನ ಉಸಿರನ್ನು ಕೊಂಡೊಯ್ದಿತು.

ಮನೆಯನ್ನೆಲ್ಲಾ ಭಯಂಕರ ಗೋಳು ಆವರಿಸಿತು. ರುದ್ರಮ್ಮ ತಲೆಯ ಮೇಲೆ ಕೈಹೊತ್ತು ಕಣ್ಣೀರಿಡುತ್ತ ಕುಳಿತುಬಿಟ್ಟಳು. ಇದ್ದುದರಲ್ಲಿ ಸುಂದರಿಯೇ ಸಮಾಧಾನ ತಂದುಕೊಂಡು ಮುಂದಿನ ವ್ಯವಸ್ಥೆಯನ್ನೆಲ್ಲಾ ಮಾಡಿದಳು.

ಚಂದ್ರಮ್ಮನ ಅಕಾಲಮರಣದಿಂದ ಖಾಯಮ್ಮಾಗಿ ಬರುತ್ತಿದ್ದ ಗಿರಾಕಿಗಳು ತಮ್ಮ ಅನುತಾಪ ವ್ಯಕ್ತಪಡಿಸಿದರು.

ದಿನ ಕಳೆದಂತೆ ಹುಡುಗಿಯರು ದುಃಖದ ಹಾಳೆ ಮಗುಚಿ ತಮ್ಮ ಅನುದಿನದ ಬಾಳಿನ ಅಧ್ಯಾಯಕ್ಕೆ ಬಂದರು.

೨೬

ಚಂದ್ರಮ್ಮ ಕಾಲವಾದ ನಂತರ ರುದ್ರಮ್ಮ ಮನೆಯೊಡತಿಯಾದಳು. ಅವಳಲ್ಲಿ ಹೊಸ ಹುರುಪು, ಹೊಸ ಉತ್ಸಾಹ ಮೂಡಿತು.

ಸುಂದರಿಯನ್ನೇ ಮನೆಯ ಯಜಮಾನಿಯ ಪಟ್ಟಕ್ಕೇರಿಸಲು ರುದ್ರಮ್ಮನೇನೋ ಬಹಳ ಸಾಹಸ ಮಾಡಿದಳು. ಆದರೆ ಸುಂದರಿ ತನಗೆ ಯಾವ ಜವಾಬ್ದಾರಿಯೂ ಬೇಡವೆಂದು ಸ್ಪಷ್ಟವಾಗಿ ಹೇಳಿಬಿಟ್ಟಳು.

"ನೀನೇ ಹೀಗೆ ಹೇಳಿಬಿಟ್ಟರೆ ಹ್ಯಾಗಕ್ಕ?" ಎಂದು ರುದ್ರಮ್ಮ ವಾದಿಸಿದಳು.

"ನಿಂಗೊತ್ತಿಲ್ಲ. ನನ್ನ ಸ್ವಭಾವ ಬಹಳ ಮೃದು. ಇದನ್ನೆಲ್ಲಾ ನಿರ್ವಹಿಸೋ ತಾಕತ್ತು ನನಗಿಲ್ಲ. ನಂಗೂ ಇಲ್ಲಿ ಬಹಳ ದಿನ ಇರೋಕೆ ಮನಸ್ಸಿಲ್ಲ."

"ಏನು, ಇಲ್ಲಿಂದ ಹೊಂಟೋಯ್ತೀಯಾ?" ರುದ್ರಮ್ಮ ವ್ಯಗ್ರವಾಗಿ ಕೇಳಿದಳು.

"ಹ್ಞಾ. ಹೊರಟುಹೋಗಬೇಕು ಅಂತ ಮಾಡಿದೀನಿ. ನನಗ್ಯಾಕೋ ಈ ಜೀವನ ಹಿಡಿಸಲಿಲ್ಲ."

"ಮತ್ತೆ ಏನು ಮಾಡಬೇಕು ಅಂತ ಮಾಡಿದೀಯ. ಎಲ್ಲಿ ಹೋಗಬೇಕು ಅಂತ ಇದ್ದೀಯಾ?"

"ಏನು ಮಾಡಬೇಕು, ಎಲ್ಲಿ ಹೋಗಬೇಕು ಅಂತ ಇನ್ನೂ ನಿರ್ಧರಿಸಿಲ್ಲ."

ಆ ಮಾತನ್ನು ಮುಂದುವರಿಸಲು ರುದ್ರಮ್ಮನಿಗೇಕೋ ಇಚ್ಛೆ ಬರಲಿಲ್ಲ. ಅದನ್ನು ಅಲ್ಲಿಗೇ ನಿಲ್ಲಿಸಿಬಿಟ್ಟಳು.

ಕಾಲಚಕ್ರದ ಅನಂತ ಪ್ರವಾಹದಲ್ಲಿ ದಿನಗಳು ಒಂದಾದಮೇಲೊಂದರಂತೆ ತೇಲಿಹೋದವು. ರುದ್ರಮ್ಮನ ಹೊಸ ವೇಶ್ಯಾವಾಟ ದಿನದಿನಕ್ಕೆ

ಬೆಳೆಯತೊಡಗಿತು. ಹೊಸ ಹೊಸ ಹುಡುಗಿಯರು ಬಂದು ಸೇರಿಕೊಂಡರು. ಹೊಸ ಹೊಸ ಗಿರಾಕಿಗಳೂ ಬರತೊಡಗಿದರು.

ರುದ್ರಮ್ಮ ವೇಶ್ಯಾವಾಟಿಯ ಯಜಮಾನಿಕೆ ಹೊತ್ತಾಗ ಕಾಲ ಬದಲಾಯಿತು. ಆದೇ ತಾನೆ ಪ್ರಾರಂಭವಾಗಿದ್ದ ದ್ವಿತೀಯ ಮಹಾಯುದ್ಧ ಹೊಸದೊಂದು ನಾಗರಿಕತೆಗೇ ಜನ್ಮವಿತ್ತಿತ್ತು. ಜನರ ಮನಸ್ಸು ವಿಲಾಸ ವಿಭ್ರಮಗಳಿಗೆ ವಶವಾಗಿ ಅನಾಗರಿಕವಾದ ವಿಷಯಲಾಲಸೆಯೇ ನಾಗರಿಕತೆಯ ರೂಪ ತಾಳಿ ವಿಕಟನೃತ್ಯ ಮಾಡತೊಡಗಿತು. ಹೆಣ್ಣುಗಂಡುಗಳ ನಡುವೆ ಇದ್ದ ನೀತಿಯ ತೆರೆ ಕಳಚಿಬಿದ್ದು 'ಹೆಣ್ಣು ಗಂಡಿಗಾಗಿ, ಗಂಡು ಹೆಣ್ಣಿಗಾಗಿ. ಅದೇ ಸೃಷ್ಟಿಯ ಗುರಿ' ಎಂಬ ನೂತನ ಸಂಪ್ರದಾಯ ಬೆಳೆಯ ಹತ್ತಿತ್ತು.

ಸಂಭಾವಿತ ಮನೆತನದ ಹೆಣ್ಣುಮಕ್ಕಳೂ ಕ್ಷಣಿಕ ಸುಖಕ್ಕೆ ಮನ ಸೋತು ಮುಂದಾಲೋಚನೆಯಿಲ್ಲದೆ ಮೈಮಾರಿಕೊಳ್ಳುವಂತಾಗಿದ್ದರು. ಸ್ತ್ರೀಸ್ವಾತಂತ್ರ್ಯ, ಸಹವಿದ್ಯಾಭ್ಯಾಸ ಮೊದಲಾದ ನಾಗರಿಕತೆಯ ನವ ಮಾಲಿಕೆಗಳು ಯುವಕ ಯುವತಿಯರಲ್ಲಿ ಸ್ವೈರವೃತ್ತಿ ಬೆಳೆಯಲು ಎಡೆ ಮಾಡಿಕೊಟ್ಟಿದ್ದವು. ಬರ್ಬರ ಯುದ್ಧ, ಅದರ ನೇರ ಪರಿಣಾಮವಾಗಿ ಹುಟ್ಟಿದ ಭೀಕರ ಬಡತನಗಳು ವೇಶ್ಯಾವೃತ್ತಿ ನಿರಾತಂಕವಾಗಿ, ನಿರ್ಭಯವಾಗಿ ಬೇರೂರಲು ಅವಕಾಶ ಕಲ್ಪಿಸಿಕೊಟ್ಟವು. ತಿಂಗಳ ದುಡಿಮೆಯನ್ನು ಕ್ಷಣದಲ್ಲಿ ಸಂಪಾದಿಸಬಹುದಾದ ನಿರ್ಲಜ್ಜ ಸುಲಭ ಜೀವನಕ್ಕೆ ಎಷ್ಟೋ ಮಂದಿ ದೇಹವೊಡ್ಡಿದರು.

ಹಣ!....ಹಣ!!....ಹಣ!!!....ಎಲ್ಲೆಲ್ಲೂ ಹಣ! ಎಲ್ಲರಲ್ಲೂ ಹಣ ಝಣಗುಟ್ಟುತ್ತಿತ್ತು!! ಎಲ್ಲರಿಗೂ ಸುಖ ಬೇಕು. ಎಲ್ಲರಿಗೂ ಷೋಕಿ ಬೇಕು. ಎಷ್ಟು ಹಣ ಬೇಕಾದರೂ ಸುರಿಯಲು ಸಿದ್ಧರಾಗಿರುತ್ತಿದ್ದರು ಗಿರಾಕಿಗಳು. ರುದ್ರಮ್ಮನಿಗಂತೂ ಹುಡುಗಿಯರನ್ನು ಹಿಡಿದು ತರುವುದೇ ದಿನದ ಇಪ್ಪತ್ನಾಲ್ಕು ಘಂಟೆಯ ಕೆಲಸವಾಯಿತು. ಹೊಸ ಹೊಸ ಗಿರಾಕಿಗಳು! ಹೊಸ ಹೊಸ ಹುಡುಗಿಯರು!! ಇನ್ನೂ ಬೇಕು........ಮತ್ತೂ ಬೇಕು........ವಿರಾಮವೇ ಇಲ್ಲದೆ ನೊಣಗಳಂತೆ ಗಿಜಗುಟ್ಟುತ್ತಿತ್ತು ಗಿರಾಕಿಗಳ ತಂಡ. ಹೊಲಸು! ದುರ್ನಾತ!! ಆದರೇನು? ಅದೇ ಕುಬೇರನ

ಅಲಕಾವತಿ! ಅದೇ ದೇವೇಂದ್ರನ ಅಮರಾವತಿ!! ಒಂದೊಂದು ದಿನವಂತೂ ಬೇಸರದಿಂದ ತಲೆ ಸಿಡಿದುಹೋಗುತ್ತಿತ್ತು ರುದ್ರಮ್ಮನಿಗೆ. ಬಾಗಿಲಿಗೆ ಬೀಗ ಬಡಿದು ಒಳಗೆ ಅಡಗಿ ಕುಳಿತುಬಿಡಬೇಕೆನ್ನಿಸಿಬಿಡುತ್ತಿತ್ತು ಅವಳಿಗೆ. ಆದರೆ........ಹಣ! ಇಂತಹ ಅಪೂರ್ವ ಅವಕಾಶ ಬಿಟ್ಟರೆ ಅದು ಮತ್ತೆ ಸಿಗುತ್ತದೆಯೆ ಇಡೀ ಜೀವಮಾನದಲ್ಲಿ....! ಊಹ್ಞೂ....ಬಿಡಬಾರದು.... ಖಂಡಿತ ಬಿಡಬಾರದು. ಸುಗ್ಗಿ ಬಂದಾಗಲೇ ಅಲ್ಲವೆ ಹಗೆವು ತುಂಬಿಕೊಳ್ಳುವುದು.

ಮನೆಯಲ್ಲಿದ್ದ ಹುಡುಗಿಯರನ್ನು ಬೀದಿಯಲ್ಲಿ ಅಡ್ಡಾಡುವ ಜನರಿಗೆ ಪ್ರದರ್ಶನ ಮಾಡಿ ಅವರ ಮನಸೆಳೆಯಲು ಈಗಾಗಲೇ ರುದ್ರಮ್ಮ ಮನೆಯ ಮುಂಭಾಗದ ಕೋಣೆಗಳನ್ನು ಒಡೆಸಿ ವಿಶಾಲವಾದ ನಡುಸಾಲೆ ಮಾಡಿಸಿ ಅದಕ್ಕೆ ಜಾಲರಿ ಬಡಿಸಿದ್ದಳು.

ಆ ಮುಂದಲ ಕೋಣೆಗಳೂ ಈಗ ಉಪಯೋಗಕ್ಕೆ ಇಲ್ಲದಂತಾಗಿದ್ದವು. ರುದ್ರಮ್ಮನಿಗೆ ಬಹಳ ಕಷ್ಟಕ್ಕಿಟ್ಟುಕೊಂಡಿತು. ಗಿರಾಕಿಗಳು ಕಾದು ಕಾದು ಬೇಸರಗೊಳ್ಳುತ್ತಿದ್ದರು. ಮನಸ್ಸಿಗೆ ಕಡಿವಾಣ ಹಾಕಿ ತಮ್ಮ ಸರದಿ ಬರುವವರೆಗೆ ಕಾಯುವಷ್ಟು ಸಹನೆಯಾಗಲಿ, ಸಮಯವಾಗಲಿ ಅವರಿಗೆ ಇದ್ದಂತಿರಲಿಲ್ಲ. ಆದಷ್ಟು ಬೇಗ ತಮ್ಮ ಚಟ ತೀರಿಸಿಕೊಂಡು ಬಿಡಬೇಕೆಂಬ ಆತುರ ಅವರಲ್ಲಿ ಎದ್ದು ಕುಣಿಯುತ್ತಿತ್ತು! ಅವರನ್ನು ಸಂತೈಸುವುದೇ ಸಾಕಾಗಿಹೋಗುತ್ತಿತ್ತು. ಕೊನೆಗೆ ರುದ್ರಮ್ಮನಿಗೆ ಉಪಾಯ ಹೊಳೆಯಿತು.

ಅವಳು ಒಮ್ಮೆ ಹೋಗಿ ಮಿಲಿಟರಿ ಕ್ಯಾಂಪುಗಳನ್ನು ನೋಡಿ ಬಂದಿದ್ದಳು. ಅಲ್ಲಿ ಕಟ್ಟಿದ್ದ ಸಿಪಾಯಿಗಳ ಬಿದುರುತಟ್ಟೆಯ ಗೂಡುಗಳನ್ನು ಕಂಡಿದ್ದಳು. ರುದ್ರಮ್ಮ ಬಿದಿರುತಟ್ಟೆಗಳನ್ನೂ ತರಿಸಿದಳು. ಮಹಡಿಯ ಮೇಲಿದ್ದ ದೊಡ್ಡ ದೊಡ್ಡ ಪಡಸಾಲೆಗಳಿಗೆ ಅಡ್ಡವಿಟ್ಟು ಸಣ್ಣ ಸಣ್ಣ ಕೋಣೆಗಳನ್ನು ಮಾಡಿಸಿದಳು. ಒಂದೊಂದೇ ಹಾಸಿಗೆಯಗಲ, ಮೂರು ಮೊಳ ಅಗಲ, ಆರು ಮೊಳ ಉದ್ದ.

ಸಮಸ್ಯೆ ತೀರಿತು. ಊಹ್ಞೂ....ತೀರಲಿಲ್ಲ. ಗಿರಾಕಿಗಳು ಇನ್ನೂ ಹೆಚ್ಚಿದರು. ಮಾಡುವುದೇನು?

ರುದ್ರಮ್ಮ ಅಡಿಗೆಮನೆ ಬಚ್ಚಲುಮನೆಗಳಿಗೆ ತಟ್ಟೆ ಕಟ್ಟಿಸಿ ಅವುಗಳನ್ನೂ ಕೋಣೆಗಳನ್ನಾಗಿ ಮಾಡಿದಳು. ಸಮೀಪದಲ್ಲೇ ಇದ್ದ ಸಂತೋಜಿರಾಯನ ಮಿಲಿಟರಿ ಹೋಟಲಿನಿಂದ ಊಟ ತರುವ ವ್ಯವಸ್ಥೆಯಾಯಿತು. ಗಿರಾಕಿಗಳ ಕೈಯ್ಯಿಂದಲೇ ತಿಂಡಿ ತರಿಸಿ ಅದರಿಂದಲೇ ಉಪಹಾರ ಕಳೆಯುತ್ತಿತ್ತು.

ಅಲ್ಲಿಗೂ ಕೋಣೆಗಳು ಸಾಲದೆ ಬಂದವು. ಅಟ್ಟದ ಮೇಲಿದ್ದ ಎರಡು ಕಕ್ಕಸ್ಸುಗಳ ಪೈಕಿ, ಒಂದೇ ಸಾಕೆಂದು ಮತ್ತೊಂದನ್ನು ಕೋಣೆಯಾಗಿ ಪರಿವರ್ತಿಸಿದಳು. ಹಾಗೆಯೇ ಕೆಳಭಾಗದಲ್ಲಿದ್ದ ಎರಡು ಕಕ್ಕಸುಗಳಲ್ಲಿ ಒಂದು ಕೋಣೆಯಾಯಿತು.

'ಅಬ್ಬಾ! ಸಾಕಪ್ಪ ಈ ಹೊಲಸು!'—ಒಮ್ಮೊಮ್ಮೆ ರುದ್ರಮ್ಮನಿಗೆ ಹಾಗನಿಸುತ್ತಿದ್ದರೂ ನಡುಮನೆಯಲ್ಲಿ ಕುಳಿತಿರುತ್ತಿದ್ದ ತನ್ನ ಮುಂದಿದ್ದ ಇಳಿಜಾರು ಕಾಲುಮಣೆಯ ಮೇಲೆ ಬಂದು ಬೀಳುತ್ತಿದ್ದ ನೋಟಿನ ಕಂತೆಗಳನ್ನು ನೋಡಿ ಅವಳಿಗೆ ಬೇಕು, ಇನ್ನೂ ಬೇಕು ಎನ್ನಿಸುತ್ತಿತ್ತು.

ಜೀವಣ್ಣರಾಯನಂತೂ ಅವಳ ಜೀವ ಹಿಂಡಿಬಿಡುತ್ತಿದ್ದ. ಅವನು ನಿತ್ಯವೂ ಬರುತ್ತಿದ್ದ. ನಿತ್ಯವೂ ಅವನಿಗೆ ಹೊಸ ಹುಡುಗಿಯರೇ ಬೇಕು. ನೀರಿನಂತೆ ಹಣ ಸುರಿಯುತ್ತಿದ್ದ. ಅದನ್ನು ನೋಡಿದರೆ ಯಾರ ಬಾಯಲ್ಲಾದರೂ ನೀರೂರುತ್ತಿತ್ತು. ಹುಡುಗಿಯರಿಗೇನೂ ಕೊರತೆಯಿರಲಿಲ್ಲ! ಆದರೆ ಅವರನ್ನು ಹುಡುಕಿ ಹಿಡಿದು ತರುವುದು? ಗೋಪಾಲಿಯಿದ್ದ, ಬಸವಣ್ಣಪ್ಪನಿದ್ದ, ಸಾವಂತ್ ಇದ್ದ, ಕನಕರಾಜು ಇದ್ದ. ಅವರೆಷ್ಟೋ ಹುಡುಗಿಯರನ್ನು ಕರೆತರುತ್ತಿದ್ದರು. ಬಹಳ ಉಪಕಾರವಾಗುತ್ತಿತ್ತು ಅವರಿಂದ.

ಮನೆಯಲ್ಲಿದ್ದ ಹುಡುಗಿಯರಿಗಂತೂ ಸಾಕುಸಾಕಾಗಿ ಹೋಗುತ್ತಿತ್ತು. ಎಷ್ಟೆಂದು ಗಿರಾಕಿಗಳನ್ನು ಸುಧಾರಿಸುವುದು? ಒಬ್ಬರೆ, ಇಬ್ಬರೆ, ಹತ್ತು ಜನರೇ ದಿನಕ್ಕೆ! ಹುಡುಗಿಯರ ದೇಹವೇನು ಮರದ ಡಬ್ಬವೇ! ರಬ್ಬರ್ ಚೀಲವೆ!

ಅವರು ಬಂದು ರುದ್ರಮ್ಮನಲ್ಲಿ ಗೋಳಾಡಿಕೊಳ್ಳುತ್ತಿದ್ದರು

"ನಮ್ಮ ಕೈಯ್ಯಾಗ ಆಗಾಕಿಲ್ಲ ಕಣಕ್ಕ"

"ಯಾಕಾಗಾಕಿಲ್ಲ? ಏನಾಗೈತೆ?"

—ಸಿಡಿದು ಕೇಳುತ್ತಿದ್ದಳು ರುದ್ರಮ್ಮ. ಸದಾ ಹಣದ ಮುಂದೆ ಕುಳಿತಿರುತ್ತಿದ್ದ ಅವಳಿಗೆ ಅದರ ಮುಸುಕಿನಲ್ಲಿ ಮಾನವತೆಯೇ ಮರೆತು ಹೋಗಿತ್ತು.

"ನಂಗೆ ಜ್ವರ"

"ಔಸ್ದ ಕುಡಿ."

"ನಂಗೆ ಮೈ ನೋವು"

"ಎಣ್ಣೆ ತಿಕ್ಕೋ"

"ನಂಗೆ........"

"ನಾಳೆ ಔಸ್ದ ಕೊಡಸೋಣ. ಈವತ್ಹೋಗು."

ನಾಳೆ ಅದೇ ಪುನರಾವರ್ತನೆ. ರುದ್ರಮ್ಮ ಅವರಿಗೆ ಔಷಧ ಕೊಡಿಸುವಂತಿರಲಿಲ್ಲ. ಪಥ್ಯ ಮಾಡಿಸುವಂತಿರಲಿಲ್ಲ. ಕೊಂಚವಾದರೂ ವಿಶ್ರಮಿಸಿಕೊಳ್ಳಲು ಬಿಡುವಂತಿರಲಿಲ್ಲ. ಅದಕ್ಕೆಲ್ಲಾ ಅವಕಾಶವೆಲ್ಲಿ, ಆ ಜನ ಜಾತ್ರೆಯಲ್ಲಿ? ಹುಳಿತು ನಾರುತ್ತಿತ್ತು ಆ ಹುಡುಗಿಯರ ಮೈ. ನಾರುತ್ತಿದ್ದರೇನು? ಗಿರಾಕಿಗಳು ಬಳಿದುಕೊಂಡು ಬರುತ್ತಿದ್ದ ಅತ್ತರ್‌ವಾಸನೆ ಅದನ್ನೆಲ್ಲಾ ಮುಚ್ಚಿಬಿಡುತ್ತಿತ್ತು!

ಆ ಹಿಂಸೆ ತಾಳಲಾರದೆ ಎಲ್ಲಿಗಾದರೂ ಓಡಿಹೋಗಿಬಿಡಬೇಕು ಎನ್ನಿಸುತ್ತಿತ್ತು ಹುಡುಗಿಯರಿಗೆ. ಆದರೆ ಹೋಗುವುದಾದರೂ ಎಲ್ಲಿಗೆ? ಎಲ್ಲಿಗೆ ಹೋದರೂ ಅವರದು ಅದೇ ಬಾಳು.

"ಸಾಕಪ್ಪಾ ಈ ನರಕ. ಎಂದಿಗಪ್ಪಾ ಈ ಹಾಳು ಯುದ್ಧ ನಿಲ್ಲುತ್ತೆ" ಎಂದವರು ಅರಚುತ್ತಿದ್ದರು.

ಕುಡಿತ. ಬ್ರಾಂದಿ...ವ್ಹಿಸ್ಕಿ...ಬೀರ್...ಸೇಂದಿ...ಶರಾಬ್! ಗಿರಾಕಿಗಳೇ ತರಿಸುತ್ತಿದ್ದರು. ಹುಡುಗಿಯರಿಗೂ ಕುಡಿಸುತ್ತಿದ್ದರು, ಇದ್ದುದರಲ್ಲಿ ಅದೇ ಅವರಿಗೆ ತಾತ್ಕಾಲಿಕ ಶಕ್ತಿ ನೀಡುತ್ತಿತ್ತು. ಆದರೇನು? ಅವರ ದೇಹದಲ್ಲಿನ ರಕ್ತವನ್ನು ಇದ್ದದ್ದೂ ಹಿಂಡಿಬಿಡುತ್ತಿತ್ತು ಆ ಕುಡಿತ. ಆದರೂ ಕುಡಿಯಬೇಕು. ಇನ್ನೂ ಕುಡಿಯಬೇಕು.

ನಡೆಯುತ್ತಿತ್ತು........ನಡೆಯುತ್ತಿತ್ತು........ಕೊನೆಗಾಣದ ಆ ರುದ್ರ ನಾಟಕ. ಎಂದಿಗೆ ಮುಗಿಯುವುದೋ........ಏನೋ ?

ಮುಗಿಯಿತು. ಹ್ಞಾಂ........ಕೊನೆಗೂ ಮುಗಿಯಿತು. ಅಂಕದ ಪರದೆ ಕೆಳಗಿಳಿಯಿತು, ಯುದ್ಧ ನಿಂತಿತು........ಜಗತ್ತನ್ನೇ ಜಾಲಾಡಿಸಿದ ಮಹಾಯುದ್ಧ ಕೊನೆಗೊಮ್ಮೆ ಮುಕ್ತಾಯಗೊಂಡಿತು.

"ಸದ್ಯ....ಬದುಕಿದೆವು" ಎಂದುಕೊಂಡರು ಹುಡುಗಿಯರು.

"ಯುದ್ಧ ಯಾಕಾದರೂ ನಿಂತಿತೋ. ಇನ್ನೂ ನಡೆದಿದ್ದರೆ ಆಗಿತ್ತು" ಎನ್ನದಿರಲಿಲ್ಲ ರುದ್ರಮ್ಮ.

೨೭

ಮಹಾಯುದ್ಧವೇನೋ ಮುಕ್ತಾಯಗೊಂಡಿತು.

ಆದರೆ ಮಳೆಗಾಲದ ಮಹಾಪ್ರವಾಹದಂತೆ ಹರಿಯುತ್ತಿದ್ದ ಹಣ ನಡುಬೇಸಿಗೆಯ ಝರಿಯಂತೆ ಎಲ್ಲಿಯೋ ಬತ್ತಿಹೋಯಿತು. ದೇಶದಲ್ಲೆಲ್ಲಾ ಭೀಕರ ಬಡತನ ವ್ಯಾಪಿಸಿತು. ನಿತ್ಯಜೀವನದ ಸಾಮಾನ್ಯವಸ್ತುಗಳ ಬೆಲೆ ಮುಗಿಲನ್ನು ಮುಟ್ಟಿತು. ಈ ತುಟ್ಟಿಯ ಜೊತೆಗೆ ನಿರುದ್ಯೋಗ ಬೇರೆ. ದುಡಿಯುವವರು ಮುಂದೆ ಬಂದರೂ ದುಡಿಸಿಕೊಳ್ಳುವವರಿಗೆ ಕೊರತೆ ಪ್ರಾರಂಭವಾಯಿತು. ಹಸಿವು! ಎಲ್ಲೆಲ್ಲೂ ಹಸಿವು ತನ್ನ ಸಹಸ್ರ ನಾಲಗೆ ಗಳನ್ನು ಚಾಚಿ ಭಯಂಕರವಾಗಿ ಲೋಕವನ್ನು ದಹಿಸತೊಡಗಿತು. ಹಿಡಿ ಅನ್ನಕ್ಕಾಗಿ ಏನು ಮಾಡಲೂ ಸಿದ್ಧರಾಗಿದ್ದರು ಜನ.

ರುದ್ರಮ್ಮನಿಗೆ ಕಣ್ಣಿಗೆ ಕತ್ತಲು ಕವಿದಂತಾಯಿತು. ಗಿರಾಕಿಗಳ ಅಬ್ಬರದ ಹುಯಿಲು ಇದ್ದಕ್ಕಿದ್ದಂತೆಯೇ ಸ್ತಬ್ಧವಾಯಿತು. ನೋಟಿನ ಕಂತೆಗಳು ರಾಶಿರಾಶಿಯಾಗಿ ಬಂದು ಬೀಳುತ್ತಿದ್ದ ತನ್ನ ಮುಂದಿದ್ದ ಕಾಲು ಮಣೆಯನ್ನು ನೋಡನೋಡುತ್ತ ರುದ್ರಮ್ಮನಿಗೆ ದುಃಖ ಉಕ್ಕಿ ಬರುವಂತಾ ಯಿತು. ಸಾಲದುದಕ್ಕೆ ಮನೆಯ ಖರ್ಚಂತೂ ಏರುತ್ತಿತ್ತು. ಹುಡುಗಿ ಯರ ಸಂಖ್ಯೆ ಮಿತಿಮೀರಿ ಬೆಳೆದಿತ್ತು. ಎಲ್ಲರಿಗೂ ರೋಗ! ಎಲ್ಲರಿಗೂ ಔಷಧೋಪಚಾರ! ಎಲ್ಲಿಂದ ತರುವುದು ಹಣವನ್ನು ಹುಡುಗಿಯರನ್ನು ಅಟ್ಟಿಬಿಡುವಂತಿಲ್ಲ, ಇಟ್ಟುಕೊಳ್ಳುವಂತಿಲ್ಲ.

ಮೊದಲಿನ ಮಾಮೂಲು ಗಿರಾಕಿಗಳೇನೋ ಬರುತ್ತಿದ್ದರು. ಮನೆ ಯಲ್ಲಿದ್ದ ಹುಡುಗಿಯರು ಅವರಿಗೆ ಬೇಡವಾಗಿದ್ದರು. ಅವರನ್ನು ನೋಡಿಯೆ ಗಿರಾಕಿಗಳು 'ಇಶ್ಶಿಶ್ಶಿ' ಎಂದು ಅಸಹ್ಯ ಸೂಚಿಸುತ್ತಿದ್ದರು. ಅವರಿಗಾಗಿ ಹೊಸ ಹುಡುಗಿಯರ ಬೇಟೆ ನಡೆಸಬೇಕಾಗಿತ್ತು. ಹಿಂದಿನಂತೆ ಕೇಳಿದಷ್ಟು

ಹಣವಾದರೂ ಧಾರಾಳವಾಗಿ ಸಿಗುತ್ತಿತ್ತೆ? ಊಹ್ಞೂ. ಅದೂ ಇಲ್ಲ. ಗಿರಾಕಿಗಳು ಕೊಟ್ಟಷ್ಟರಲ್ಲೆ ತೃಪ್ತಿಪಟ್ಟುಕೊಳ್ಳಬೇಕಾಗಿತ್ತು.

ಜೊತೆಗೆ ಹೊಸೂರು ಬಸವಿ, ಕೊಳ್ಳೇಗಾಲದ ನರಸಿ, ಹೊಳೆ ಹೊನ್ನೂರಿನ ಕರಿಪಾರ್ವತಿಯರದು ಬೇರೆ ಪೈಪೋಟಿ. ಸರಿಸಮನಿಂತು ಅವರು ವೇಶ್ಯಾವಾಟಿಗಳನ್ನು ನಡೆಸುತ್ತಿದ್ದರು.

ಯುದ್ಧಕಾಲದಲ್ಲಿ ಕೂಡಿಟ್ಟಿದ್ದ ಹಣವನ್ನಾದರೂ ಖರ್ಚು ಮಾಡೋಣವೆಂದರೆ ಯಾಕೋ ಮನಸ್ಸೇ ಬರದು. ದುಡಿಮೆ ಮಾಡದೆ ಕೂಡಿಟ್ಟ ಹಣ ಖರ್ಚುಮಾಡುತ್ತ ಬಾಳು ಸಾಗಿಸುವುದು ಯಾವ ನ್ಯಾಯ? ಅಷ್ಟಕ್ಕೂ ಅದೆಷ್ಟು ದಿನ ಬಂದೀತು! ಅಲ್ಲದೆ ಆ ಹಣಕ್ಕೆ ಬಸವನಗುಡಿಯಲ್ಲಿ ಒಂದು ಮನೆ ಕೊಂಡುಕೊಳ್ಳಬೇಕೆಂದು ಆಗಲೇ ನಿರ್ಧರಿಸಲಾಗಿದೆ. ಅದನ್ನು ಖರ್ಚುಮಾಡುವಂತಿಲ್ಲ.

ಮತ್ತೆ?

ಯೋಚನೆಯಲ್ಲಿ ಮುಳುಗಿ ತಲೆಗೆ ಕೈಯಿಟ್ಟು ಕುಳಿತಳು ರುದ್ರಮ್ಮ.

"ಅಳೇ ಹುಡುಗೀರ್ನ ಸರಿಯಾದ ಗಿರಾಕಿಗಳು ಮುಟ್ಟಾಕಿಲ್ಲ. ಆವರ್ನೆಲ್ಲಾ ಎಳ್ಡನೇ ಗ್ರೇಡು ಮಾಡ್ಬಿಟ್ಟು ಹೊಸ ಉಡುಗೀರ್ನ ತರ್ಬೇಕು ರುದ್ರಮ್ಮ" ಬಸವಣ್ಣಪ್ಪ ಸೂಚಿಸಿದ.

"ಹ್ಞಾಂ........ಈಗಿರೋ ಉಡುಗೀರೇ ಸಾಕಾಗೈತೆ ನಂಗೆ. ಇನ್ನು ಒಸ ಉಡುಗೀರ್ನ ಸೇರಿಸ್ಕೋ ಅಂತೀಯ."

"ಹ್ಞಾ ಮತ್ತೆ. ಯಾಪಾರ ನಡೀಬೇಕೋ ಬೇಡ್ವೋ? ಈಗಿರೋ ಉಡುಗೀರ್ನ, ನಾನು ಯೇಳಿದ್ನಲ್ಲಾ 'ಆಲ್ಡ್‌ಸೇರಿ' ಗಿರಾಕಿಗೋಳ್ಗೆ ಬುಟ್ಬುಡು. ಏನೋ ಗಿಟ್ಟಿದಷ್ಟು ಗಿಟ್ಲಿ. ನಷ್ಟ ಏನೂ ಆಗಾಕಿಲ್ಲ. ಇನ್ನು ಒಸ ಉಡುಗೀರ್ನ 'ಪೆಸಲ್' ಗಿರಾಕಿಗಳಿಗೆ 'ರಿಜರ್ವ್' ಮಾಡ್ಬುಡು. ಆಗ ನೋಡು. ಎಂಗಿರ್ತದೆ ಅಂತ."

"ನಿಜ. ನೀ ಏಳೋ ಮಾತು. ಒಳ್ಳೇ ಪಳಾನೇನೋ ಔದು. ಅಪ್ರೆ ನಾಕುದಿನ ಕಳೀತು ಅಂದ್ರೆ ಅವರೂ ಅಳೇದು ಆಗೋಯ್ತಾರೆ."

"ಅವರ್ನೂ ಅಳಬರ ಗುಂಪಿಗೆ ಸೇರಿಸಿ ಮತ್ತೆ ಒಸಬರ್ನ ತರ್ತಿರೋದು."

"ಸರಿ. ಇಂಗೆ ಮಾಡ್ತಾ ಓದ್ರೆ ಈ ಮನೇಲಿ ಜಾಗ ಎಲ್ಲಿಂದ

ತರೋದು. ಇದೇನು ಕುರಿ ದೊಡ್ಡಿ ಕಟ್ಟೋಯ್ತಾ ?" ಎಂದು ರುದ್ರಮ್ಮ ನಕ್ಕಳು.

"ನಿಂಗಾಗೋ ನಷ್ಟ ಏನು ? ಕುರಿ ಎಚ್ಚಿದಷ್ಟೂ ಕುರುಬನಿಗೆ ಲಾಭ ಇದ್ದೇ ಇರ್ತದೆ. ಈ ಮನೇಲಿ ಜಾಗ ಸಾಲ್ದಿದ್ರೆ ಅಳ್ಳೀಪೇಟೇಲೊಂದು, ಶ್ರೀರಾಂಪುರದಲ್ಲೊಂದು 'ಬರಾಂಚ್' ತೆಗದ್ಬುಡು. ಎಂಗೂ ಮಿಲ್ ಜನ ಅವ್ರೆ. ಒಬ್ಬೊಬ್ಬ್ರು ದಿನಾ ಏನಿಲ್ಲ ಅಂದ್ರೂ ಐದೈದು ರೂಪಾಯಿ ದುಡಿಯಾಕಿಲ್ವಾ! ಅವರ ಪಾಲು ಕೊಟ್ಟು, ಮನೆ ಕರ್ಚು ಕಳ್ದು ನಿಂಗೆ ದಿನಕ್ಕೆ ಇಸಂಗೊಂದು ರೂಪಾಯಿ ಉಳೀಲೇಳು. ಒಂದೊಂದು ಮನೇಲೂ ಅತ್ತತ್ತು ಉಡುಗೀರ್ನಿಟ್ರೂ ಇಪ್ಪತ್ತು ಜನದಿಂದ ಇಪ್ಪತ್ತು ರೂಪಾಯಿ ಬಂದಂಗಾಯ್ತು, ದಿನಾ. ನಿಂಗೆ ತಿಂಗಳಿಂಗಾರ್ನೂರು ರೂಪಾಯಿ ಕುಂತ ಕಡೇಲೇ ಸಿಕ್ತದೆ. ಇನ್ನು ಒಸ ಉಡುಗೀರ್ದು ಅಲಾಯಿದ.

"ಅಷ್ಟೇ ಅಲ್ಲ. ಇನ್ನೂ ಉಪಾಯ ಹೇಳ್ಕೊಡ್ತೀನಿ ಕೇಳು. ಬಜಾರ್ನಾಗೆ ಅಲೆಯೋ ಈ ತೊಂಡಉಡುಗೀರು ಅವ್ರಲ್ಲ ಅವರ್ನ ವಸಿ ನಿಗಾ ಮಡಗಿದ್ದು ಅವತ್ತವತ್ತಿಗೆ ಕರಕೊಂಡ್ಬಂದು ಅವಗ್ಳೂ ಕೈ ವಸಿ ಬಿಸಿ ಮಾಡಿ ಗಿರಾಕಿಗಳ್ಗೂ ಮೈ ಬಿಸಿ ಮಾಡಬೌದು. ಅಲ್ದೆ ಮೊಸರ್ಮಾರೋರು ಅಲು ಮಾರೋರು ಪರಾಯಕ್ಕೆ ಬಂದಿರೋ ಉಡುಗೀರೂ ಎಷ್ಟೋ ಜನ ಸಿಕ್ತಾರೆ. ಮೇಲು ಕರ್ಚಿಗೆ ಅವರಿಗೇನಾರಾ ಗಿಟ್ಟಿದರೆ ಒಂದುದಿನ ಇಲ್ಲೇ ಉಳ್ಕೊಳ್ಳಾಕೂ ಸಿದ್ಧ ಅವರು. ಅವರ ಬಟ್ಟೆ ಬದಲಾಯಿಸಿ ನಾಜೂಕು ಬಟ್ಟೆ ಆಕ್ಬಿಟ್ಟು ಮುಖಕ್ಕೆ ವಸಿ ಪೌಡರ್ ಬಳಿದುಬಿಟ್ಟರೆ ಮುಗೀತು. ಗಿರಾಕಿಗಳು ಗುಂ ಆಗೋಯ್ತಾರೆ. ಮಾಲೂ ಅವರಿಗೆ ಒಸದಾಗಿರ್ತೈತೆ. ಎಂಗದೆ ಪ್ಲ್ಯಾನು ?"

"ಸರಿಕಣಪ್ಪ" ರುದ್ರಮ್ಮ ಬಸವಣ್ಣಪ್ಪ ಸೂಚಿಸಿದ ಯೋಜನೆಗೆ ಸಮ್ಮತಿ ಕೊಟ್ಟಳು.

"ಮತ್ತೆ ಬುದ್ಧಿ ಓಡಸ್ದೆ ತಲೆಮ್ಯಾಗೆ ಕೈಯ್ಯಿಟ್ಕೊಂಡು ಕೂತ್ರೆ ಆಯ್ತುದ. ನಾನೇಳ್ದಂಗ್ಮಾಡು. ಆಮೇಲ್ನೋಡು. ಅದರ ಖರಾಮತ್ತು."

ರುದ್ರಮ್ಮನಲ್ಲಿ ನೂತನ ಶಕ್ತಿ ಸಂಚಾರವಾದಂತಾಯಿತು. ಅವಳಂದಳು—

"ಮಾಡ್ತೀನ್ಕಣಪ್ಪ. ಇವೆಲ್ಲಾ ಕಷ್ಟ ಆಗಾಕಿಲ್ಲ. ಅಷ್ಟೊಂದು ಖರ್ಚೂ ಆಗಾಕಿಲ್ಲ. ಮೂರ್ನಾಕು ಸೆಟ್ಟು ಬಟ್ಟೆ ಇಟ್ಬುಟ್ರೆ ಆಯ್ತು. ಒಳ್ಳೇ ಉಪಾಯಾನೇ!"

"ನಾನಿನ್ನು ಬರ್ಲಾ?" ಬಸವಣ್ಣಪ್ಪ ಎದ್ದ.

"ನೀನೇಳ್ದಂಗೆ ಯಾವುದಾನ ಒಸ ಉಡುಗೀರ್ನ್ನೂ ನೋಡಬೇಕಲ್ಲ ಖಾಯಮ್ಮಾಗಿರೋಕೆ."

"ಆಗಲಿ. ನೋಡ್ತೀನಿ. ಮಂಚನಳ್ಳೀಲಿ ಒಬ್ಳವ್ಳೆ. ಅವರವ್ವನ್ನ ವಿಚಾರಿಸ್ತೀನಿ."

"ಮತ್ತೆ ಯಾವಾಗ ಬತ್ತೀಯ?"

"ಇನ್ನು ಎಂಟೆತ್ತು ದಿನ ಆಗಾಕಿಲ್ಲ. ನಗರದಾಗೆ ನನ್ನ ತಂಗೀ ಮಗಳ ಮದುವೆ, ನಾಳೆ ದಸಮೀಗೆ. ಅಲ್ಲೀಗೆ ಓಗಿ ಬರ್ಬೇಕು."

"ಅಂಗೇ ಪುರಸತ್ತು ಮಾಡ್ಕೊಂಡು ಈಗ ನೀನು ಏಳ್ದಲ್ಲ ಆ ಉಡುಗೀನೂ ಇಚಾರಸ್ಕೊಂಡು ಬಾ. ಯಾಪಾರ ಬೋ ಬಿದ್ದೋಗದೆ."

"ಹ್ಞೂಂ......ಹಾಗೇ ಮಾಡ್ತೀನಿ. ಗೋಪಾಲಿಗೂ ಹೇಳು. ಅವನೂ ಯಾವುದಾನ ಉಡುಗೀರ್ನ ತಲಾಸ್ ಮಾಡ್ತಿರ್ಲಿ."

"ಅವನೆಲ್ಲಪ್ಪ. ಯಾವುದಾನ ದಿಕ್ಕೆಟ್ಟ ಉಡುಗೀರ್ನ ತಂದು ಸೇರಸ್ತಾನೇ ಹೊರ್ತು ಅದೇ ಕಸುಬಾಗಿ ಉಡಕ್ಕೊಂಡು ಹೋಯ್ತಾನಾ?"

"ಅಂಥೋರೂ ಬರ್ಲಿ. ಆಗ ನಿನ್ನ ಚಂದ್ರಮ್ಮನ ಮನೆಗೆ ತಂದು ಸೇರಸ್ನಿಲ್ವಾ ಅಂಗೇ."

"ಹ್ಞೂಂ........ಅವನ್ಗೂ ಹೇಳ್ತೀನಿ."

ಬಸವಣ್ಣಪ್ಪ ಬಾಗಿಲು ಓರೆಮಾಡಿ ಹೊರಬಿದ್ದ. ಅವನು ಹೊರಟು ಹೋಗುತ್ತಲೂ ಮನೆಯಲ್ಲಿದ್ದ ಹುಡುಗಿಯರನ್ನು ಉದ್ದೇಶಿಸಿ ಕೂಗಿ ಹೇಳಿದಳು ರುದ್ರಮ್ಮ—

"ಏನ್ರೇ........ಲೇ ಪುಟ್ಟೀ....ನರಸಿ....ಸುಬ್ಬಿ....ಕಾಳೀ....ಎಲ್ರೂ ಏನ್ರೇ ಮಾಡ್ತೀರ ಇನ್ನೂ ರೂಮೊಳ್ಳೀಕ್ಕೊತ್ಕೊಂಡು. ಸೀರೆ ಉಟ್ಕೊಂಡು, ಊ ಮುಡ್ಕೊಂಡು ಪಡಸಾಲೇಲಿ ನಿಂತ್ಕೊಳ್ರೇ........"

ಅವಳ ಕೂಗು ಮನೆಯನ್ನೆಲ್ಲಾ ಪ್ರತಿಧ್ವನಿಸಿತು.

೨೮

"ಬಾ ರುದ್ರಮ್ಮ....ಏನು ಬಹಳ ದೂರ ಬಂದ್ಬಿಟ್ಟಲ್ಲ...." ಕುಂದಾಪುರದ ಕಮ್ತಿ ಮನೆಯ ಬಳಿಗೆ ಬಂದ ರುದ್ರಮ್ಮನನ್ನು ಆದರಪೂರ್ವಕವಾಗಿ ಆಹ್ವಾನಿಸಿ ಒಳಗೆ ಕರೆದೊಯ್ದು ಪಡಸಾಲೆಯಲ್ಲಿ ಹಾಕಿದ್ದ ಕುರ್ಚಿಯಲ್ಲಿ ಕುಳ್ಳಿರಿಸಿ ತಾನೂ ಒಂದು ಕುರ್ಚಿಯ ಮೇಲೆ ಕುಳಿತು ಕೇಳಿದ —

"ಏನು ಸಮಾಚಾರ, ವ್ಯಾಪಾರ ಚೆನ್ನಾಗಿ ನಡೀತಾ ಇದೆಯಾ ?"

"ಯಾಪಾರಕ್ಕೇನಣ್ಣ ? ಎಣ್ಣಿದ್ದ ಕಡೇ ಕಣ್ಮುಚ್ಕೊಂಡು ಬತ್ತಾರೆ ಜನ."

"ಪುಟ್ಟಿ, ಸುಬ್ಬಿ, ಕಾಳಿ, ರಂಗಿ, ಎಲ್ಲಾ ಚೆನ್ನಾಗಿದ್ದಾರಾ ?"

"ಏನು ಚಂದಾಕವ್ರೋ ? ಬರೀ ರ್ವಾಗದ ಮುದ್ದೆ ಆಗವೆ. ನಂಗೂ ಮದ್ದು ಕೊಡಿಸಿ ಕೊಡಿಸಿ ಸಾಕಾಗೋಯ್ತು. ವಾಸಿಯಾಗೋ ರ್ವಾಗಗಳಾದ್ರೆ ಏಳ್ಬೋದು, ಒಂದು ರ್ವಾಗ ಆದರೆ, ಒಬ್ಬರಗಾದ್ರೆ ಏಳ್ಬೋದು ಎಲ್ರದ್ದೂ ಅದೇ ಗೋಳಾಗ್ಯೆತೆ. ತಲೆ ಕೂದ್ಲಿಂದ ಇಡದು ಕಾಲು ಬೆರಳ ಗಂಟ ತುಂಬ್ಕೊಂಡ್ಯೆತೆ ಥರಥರಾವರೀ ರ್ವಾಗ. ಮೈಯ್ಯಾಗೆ ಜೇರೆ ಉಳು ಆಡ್ತವೆ. ನಂಗೂ ಅವರ್ನ ನೋಡಿ 'ಅಯ್ಯೊ' ಅನ್ನಸ್ತದೆ. ಆದರೇನು ಮಾಡೋದು. ಗಿರಾಕಿಗಳು ಬಂದಾಗ ಎಂಗೋ ತಡ್ಕೊಂಡು ಅವರಿಗೆ ಖುಸಿ ಮಾಡ್ಬೇಕಲ್ಲಾ."

"ಮತ್ತೆ ಈ ರೋಗದವುಗಳ್ನ ಕಟ್ಕೊಂಡು ಹೇಗೆ ವ್ಯಾಪಾರ ನಡಸ್ತಿದೀಯ ?"

"ಬರೀ ಅವನ್ನೇ ನೆಚ್ಕೊಂಡ್ರೆ ಆಯ್ತುದ. ಜೇರೆ ಅವ್ರೂ, ಇವ್ರೂ ಬತ್ತಾಅವ್ರೆ. ನಾನೂ ಕೈಯ್ಯಿಗೆ ಸಿಕ್ಕಿದೋರ್ನ ಇಡ್ಕೊಂಡು ಬಂದು ಆವತ್ತವತ್ತಿನ ಯಾಪಾರಾನೂ ನಡಸ್ತ ಇನ್ನಿ."

"ಸುಂದರಿ ಹೇಗಿದಾಳೆ ?"

"ಬೋ ಇಳ್ದೋಗವ್ಳೆ. ಅವಳ್ಗೆ ಈ ಕಸ್ಬೇ ಇಡಿಸಿಲ್ಲ. ಏನೋ ನನ್ಮೇಲಿನ ಇಸ್ವಾಸಕ್ಕೆ ಉಳಕೊಂಡವ್ಳೆ."

"ಗೋಪಾಲಿ, ಬಸವಣ್ಣಪ್ಪ, ಸಾವಂತ್ ಹುಡುಗೀರ್ನ ತರ್ತಾ ಅವ್ರಾ........"

"ತರ್ತಾ ಅವ್ರೆ........"

"ಸರಿ ಹಾಗಾದ್ರೆ."

"ಆದರೂ ಒಂದೊಂದು ಗಿರಾಕಿ ಬೋ ಇಚಿತ್ರದ ಗಿರಾಕಿ ಬರ್ತವೆ ಕಣಪ್ಪ."

"ಅಂದ್ರೆ ?"

"ಕೈ ತುಂಬ ಅಣ ಕೊಡ್ತಾರೆ. ಅವರಿಗೆ ಬಂದಾಗೆಲ್ಲಾ ಒಸಮಾಲೇ ಬೇಕು. ಅದೂ ಅಳ್ಳಿಪಳ್ಳಿಯೋವಾಗದು. ಪೇಟೇವೇ ಆಗಬೇಕು. ಅಂಥೋವು ಎಲ್ಲಿಂದ ತರೋಣ ಹೇಳು ?"

"ಅವಕ್ಕೇನು ? ಬೇಕಾದಷ್ಟು ಸಿಗ್ತವೆ ರುದ್ರಮ್ಮ."

"ಸಿಗ್ತವೆ ನಿಜ. ಇಲ್ಲಾ ಅನ್ನಾಕಿಲ್ಲ. ಸಮಯದಲ್ಲಿ ಸಿಗೋದು ಕಷ್ಟ. ಅಲ್ದೇ ಅವನ್ನೇ ಉಡಿಕ್ಕೊಂಡು ಓಗಿ ಕರ್ಕೊಂಡ್ಬರೋರೂ ನನ್ತಾವಿಲ್ಲ."

"ಯಾಕೆ ? ಸಾವಂತ್‌ಗೆ ಹೇಳಿದರೆ ಅಂಥವ್ನ್ನ ಬೇಕಾದಷ್ಟು ತರ್ತಾನೆ. ಅವನು ಪ್ರಚಂಡ."

"ಬಿಡು. ಅವನು ಅಂಥೋವು ಸಿಕ್ಕಿದರೆ ಅಲ್ಲಲ್ಲೆ ಅಜಂ ಮಾಡ್ತಾನೆ. ಓಟಲ್ನಾಗೆ ರೂಮು ಮಾಡಿಟ್ಟು ಗಿರಾಕಿಗಳ ಕಡೆ ಇಂದ ಎಲ್ಲಾ ತಾನೇ ಗಿಟ್ಟಿಸ್ಕೊಂತಾನೆ."

"ಹಾಗೂ ಮಾಡ್ತಾನೇನು ?"

"ನಂಗೊತ್ತಿರ್ನಿಲ್ಲ. ಒಂದಿನ ಬಸವಣ್ಣಪ್ಪನೇ ಏಳ್ದ."

"ಸರಿ........ ಈಗ ನೀನು ಬಂದ ಕೆಲಸ ಏನು ?"

"ಅದೇ ಜೀವಣ್ಣರಾಯ ಅಂತ ಒಬ್ಬ ಗಿರಾಕಿ ಅವ್ನೆ. ಅವ್ನೂ ಇಚಿತ್ರ ಜಾತಿಗೆ ಸೇರಿದೋನು. ಅವನಿಗೊಂದು ಒಳ್ಳೆ ಮಾಲು ಬೇಕಾಗೈತೆ. ಎಷ್ಟು ಬೇಕಾದ್ರೂ ಅಣ ಕೊಡ್ತಾನೆ."

"ಆಯ್ತು. ಆದರೆ ನಿನಗೆ ಗೊತ್ತಿರೋ ಹಾಗೆ ನಾನು ಸಣ್ಣಪುಟ್ಟದಕ್ಕೆಲ್ಲಾ ಕೈ ಹಾಕೋನಲ್ಲ. ಬೀದೀಲಿ ಇಂಥೋನು ಅಂತ ಕಾಣಸ್ಕೊಂಡು ನನ್ನ ಮರ್ಯಾದೆ ಕಳ್ಕೊಳ್ಳೋನಲ್ಲ. ಏನಿದ್ರೂ ದೊಡ್ಡವರ ಸಹವಾಸ ಆಯ್ತು, ನಾನಾಯ್ತು. ಏನ್ಮಾಡಿದ್ರೂ ಯಾರಿಗೂ ತಿಳೀಬಾರ್ದು."

"ಅವನೂ ದೊಡ್ಮನಸ್ನೇ ಕಣಪ್ಪ. ಕಂತ್ರಾಟ್ ಮಾಡ್ತಾನೆ. ಮೋಟ್ರು ಕಾರು ಇಟ್ಟವ್ನೆ."

"ಕಂತ್ರಾಕ್ಟ್ ಮಾಡ್ಬಿಟ್ರೆ, ಮೋಟಾರ್‌ಕಾರ್ ಇಟ್ಬಿಟ್ರೆ ದೊಡ್ಮನುಷ್ಯರು ಅಂತ ತಿಳ್ಕೊಂಡ್ಬಿಡಬೇಡ. ಅವರ ನಡೆ-ನುಡಿ ನೋಡ್ಬೇಕು. ನಾಳೆ ಅವರಿಂದ ನಮಗೆ ತೊಂದರೆ ಆಗಬಾರದು. ಯಾಕೆ ಅಂತೀಯೋ, ನಾವು ತರೋವೆಲ್ಲಾ ದೊಡ್ಡವರ ಮನೆ ಮಕ್ಕಳು."

"ನೀನೇನೂ ಭಯಪಡಬೇಡ. ನಾನಿರ್‍ತೀನಿ ಜವಾಬ್ದಾರಿ."

"ಆದರೆ ನಿನ್ನ ಮನೇಲಿ ಆಗೋಲ್ಲ."

"ಯಾಕೆ?"

"ನಿನ್ನ ಮನೆ ಹಿಂದಿದ್ದ ಹಾಗಿಲ್ಲ ಈಗ. ಊರಿನ ಜನರ ಕಣ್ಣೆಲ್ಲಾ ಅದರ ಮೇಲಿದೆ. ಆಮೇಲೆ ಯಾರಿಗಾದ್ರೂ ತಿಳಿದುಬಿಟ್ರೆ ಮಾನಕಳ್ಕೊಂಡು ಜೈಲಿಗೆ ಹೋಗೋ ಪ್ರಸಂಗ."

"ಮತ್ತೆ ಏನು ಮಾಡು ಅಂತೀಯ."

"ಬೇರೆ ಎಲ್ಲಾದ್ರೂ ಏರ್ಪಾಡು ಮಾಡಬೇಕು."

"ಸರಿ. ಅವನಿಗೇ ಹೇಳಿ ನೋಡ್ತೀನಪ್ಪ."

"ಆಗ್ಲಿ ನಾನೂ ಸರಿಯಾದ್ದು ಯಾವುದನ್ನಾದ್ರೂ ನೋಡಿ ಏರ್ಪಾಡು ಮಾಡ್ತೀನಿ - ಮೂರ್‍ನಾಕುದಿನದಲ್ಲಿ."

"ಅಯ್ಯೋ.... ಅಯ್ಯೋ.... ಮೂರ್‍ನಾಕುದಿನ ಆಗಾಕಿಲ್ಲಪ್ಪ. ಅವನು ಕತ್ತಿನ ಮೇಲೆ ಕೂತವ್ನೆ. ಈವತ್ತೆ ನೋಡು."

"ಈವತ್ತೆಲ್ಲಿ ಆಗೋದಿಲ್ಲ. ನಾಳೆ ಪ್ರಯತ್ನಮಾಡ್ತೀನಿ."

"ಅಂಗನ್ಬೇಡ. ಮಾಡ್಻ೇಬೇಕು. ಆವತ್ತು ಕರ್ಕೊಂಡು ಬಂದಿದ್ಯಲ್ಲ ಆ ನಿಮ್ಮಿ, ಅವಳ್ನೆ ನೋಡು."

"ಯಾರು.... ನರ್ಮದಾನಾ?"

"ಅವಳೆಸ್ರು ನರ್ಮದಾ ಅಂತ್ಲಾ ?"

"ಹೌದು."

"ಮತ್ತೆ. ಆ ಉಡ್ಗ ಜೊತೇಲಿ ಬಂದಿದ್ದೋನು 'ನಿಮ್ಮಿ' 'ನಿಮ್ಮಿ' ಅಂತಿದ್ದ."

"ಪ್ರೀತಿಗೆ ಹಾಗೆ ಕರೆಯೋದು."

"ಸರಿ. ಆ ಹುಡುಗೀನ ಏರ್ಪಾಟುಮಾಡು."

"ನಿಂತ ನಿಲುವಿನಲ್ಲಿ ಎಲ್ಲಿ ಆಗತ್ತೇ ಹೇಳು. ಆ ಹುಡುಗಿ, ತಂದೆಗೆ ಒಬ್ಬಳೇ ಮಗಳು. ಅವರಪ್ಪ ಕಾಶೀಪತಯ್ಯ ಅಂತ. ಬಹಳ ಮುದ್ದಿನಿಂದ ಸಾಕ್ತಾ ಇದಾನೆ. ಅದಕ್ಕೇ ಇನ್ನೂ ಮದುವೇನೂ ಮಾಡಿಲ್ಲ. ಆದರೆ ವಯಸ್ಸು ಕೇಳತ್ತೆ. ಕುಣಿಸತ್ತೆ. ಎಲ್ಲಾದಕ್ಕೂ ಸಿದ್ಧವಾಗೇನೋ ಇದೆ ಹುಡ್ಗಿ. ಆದರೆ ದೊಡ್ಡೋರಿಗೆ ತಿಳೀದಂತೆ ಉಪಾಯವಾಗಿ ಕೆಲಸ ನಡೆಸಬೇಕು - ನಾಳೆ ನಾವು ಯಾವುದಕ್ಕೂ ಸಿಕ್ಕಿ ಹಾಕ್ಕೊಳ್ದಂತೆ. ಹೌದೋ ಅಲ್ಲವೋ ?"

"ಹೌದಪ್ಪ."

"ಅದಕ್ಕೇ ನಾನು ಹೇಳಿದ್ದು. ನಾಳೆ ಆ ಹುಡುಗೀನೇ ಏರ್ಪಾಡು ಮಾಡ್ತೀನಿ. ಹೇಗೂ ಅವನಿಗೆ ಕಾರಿದೆ ಅಂತೀಯ. ದುಡ್ಡು ಕಾಸು ಎಲ್ಲ ಮಾತಾಡಿ ಸೆಟಲ್ ಮಾಡ್ಬಿಟ್ಟು - ತಿಪ್ಪಗೊಂಡ್ನಹಳ್ಳೀಗೆ, ಅಲ್ಲಿ ಹೇಗೂ ಟ್ರಾವಲರ್ಸ್ ಬಂಗಲೆ ಇದೆ, ಮಧ್ಯಾಹ್ನ ಕರ್ಕೊಂಡು ಹೋಗಿ ಸಂಜೆಗೆ ತಂದು ಬಿಟ್ಬಿಡ್ಲಿ. ಏನಂತೀಯ ? ಅದೂ ಅವನು ನಂಬಿಕಸ್ಥನಾಗಿದ್ದರೆ."

"ಆಗಬಹುದು. ಒಳ್ಳೆ ಉಪಾಯ. ಅವನೇನೂ ಅಂತ ಅಪಾಪೋಲಿ ಅಲ್ಲ. ಬಹಳ ನಂಬಿಕಸ್ತ."

"ಇಲ್ದಿದ್ರೆ ನೀನೇ ಅವನ ಜತೇಲಿ ಹೋಗಿ ಬರ್ಬೇಕು. ನನಗೆ ಪುರಸತ್ತಿಲ್ಲ. ನಾಳೆ ಕೋರ್ಟು ಕೆಲಸ ಇದೆ."

"ಅದೇನೂ ಯೋಚ್ನೆ ಇಟ್ಕೋಬೇಡಾಪ್ಪ. ಅದಕ್ಕೆ ನಾನು ಜವಾಬ್ದಾರಿ ಇರ್ತೀನಿ."

"ಸರಿ. ನಾಳೆ ಹನ್ನೆರಡುಘಂಟೆ ಹೊತ್ತಿಗೆ ನಮ್ಮ ಮನೆ ಹತ್ತಿರಕ್ಕೆ ಅವನ್ನೂ ಕರ್ಕೊಂಡು ಬಾ."

"ಆಗಬಹುದು."

"ಆವರೂ........"

"ಏನು ?"

"ಅವರ ಜೊತೇಲಿ ನೀನೂ ಹೋಗಿಬಂದರೆ ಒಳ್ಳೇದು ರುದ್ರಮ್ಮ"

"ನಿಂಗೆ ನಂಬಿಕೆ ಇಲ್ದಿದ್ರೆ ಅಂಗೇ ಮಾಡ್ತೀನಿ ಬಿಡು. ನಂಗೂ ತಿಪ್ಪಗೊಂಡ್ನಳ್ಳಿ ನೋಡಿದಂಗಾಗ್ತದೆ."

"ಈಗ ನಂಗೆ ಧೈರ್ಯ ಬಂತು."

"ಒಳ್ಳೆ ಪುಕ್ಕಲ ಕಣಪ್ಪ ನೀನು" ಎಂದು ರುದ್ರಮ್ಮ ನಕ್ಕಳು.

"ಹಾಗಲ್ಲ ರುದ್ರಮ್ಮ. ಇಂಥ ಕೆಲಸ ಮಾಡಬೇಕಾದ್ರೆ ದಿಗಲಾಗತ್ತೆ. ಏನೋ ನಾಲ್ಕುಕಾಸಿನ ಆಸೇಗೆ ನಾವು, ಮಾಡಬಾರದಿದ್ರೂ ಇದನ್ನ ಮಾಡ್ತಿದೀವಿ."

"ನಿಜಕಣಪ್ಪ."

"ಇನ್ನು ನೀನು ಹೊರಡು. ನಾಳೆ ಹೇಳಿದೆನಲ್ಲಾ ಅಪ್ಹೊತ್ತಿಗೆ ಅವನ್ನೂ ಕರ್ಕೊಂಡು ಬಂದ್ಬಿಡು. ಎಲ್ಲಾ ರೆಡಿ ಮಾಡಿಟ್ಟರ್ತೀನಿ"

ರುದ್ರಮ್ಮ ಹೊರಟುಹೋದ ನಂತರ ಕಪ್ತಿ ತನ್ನ ಹೆಂಡತಿ ಕುಸುಮ ಳೊಂದಿಗೆ ಸಮಾಲೋಚಿಸಿದ. ಕುಸುಮ ನರ್ಮದೆಯನ್ನು ಕಂಡು ಮಾರ ನೆಯ ದಿನ ಬರುವಂತೆ ತಿಳಿಸುವುದಾಗಿ ಒಪ್ಪಿಕೊಂಡಳು.

ಮರುದಿನ ಗೊತ್ತಾದ ಹೊತ್ತಿಗೆ ಸರಿಯಾಗಿ ರುದ್ರಮ್ಮ ಜೀವಣ್ಣರಾಯ ನನ್ನೂ ಕರೆದುಕೊಂಡು ಅವನ ಕಾರಿನಲ್ಲಿಯೇ ಕಪ್ತಿಯ ಮನೆಯ ಬಳಿಗೆ ಬಂದಳು. ಜೀವಣ್ಣರಾಯನನ್ನು ಕಪ್ತಿಗೆ ಪರಿಚಯ ಮಾಡಿಸಿಕೊಟ್ಟದ್ದಾ ಯಿತು.

ನರ್ಮದೆಯೂ ಆ ವೇಳೆಗೆ ಸಿದ್ಧಳಾಗಿ ಅಲ್ಲಿಗೆ ಬಂದಳು. ಅವಳನ್ನು ನೋಡಿ ಜೀವಣ್ಣರಾಯನಿಗಂತೂ ಬಾಯಲ್ಲಿ ನೀರು ಊರಿಹೋಯಿತು. ಅವಳ ರೂಪಲಾವಣ್ಯಗಳ ಬಗ್ಗೆ ರುದ್ರಮ್ಮ ಹೊಗಳಿದ್ದುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇರಲಿಲ್ಲ. ಅಂತಹ ಹುಡುಗಿ ತನಗೆ ದೊರೆಯುತ್ತಿರುವುದ

ಕ್ಕಾಗಿ ಅವನು ತನ್ನಲ್ಲಿಯೇ ಆನಂದಿತನಾದ. ಅವನ ಮನಸ್ಸು ಚಡಪಡಿಸ ತೊಡಗಿತು. ಅವಳಿಗಾಗಿ ಎಷ್ಟು ಹಣ ಸುರಿಯಲೂ ಅವನು ಸಿದ್ಧನಾದ.

ಕವಿತ್ತಿ ನರ್ಮದೆಯನ್ನು ಮನೆಯೊಳಕ್ಕೆ ಕರೆದುಕೊಂಡುಹೋದ. ಕುಸುಮಳೂ, ಅವನೂ ಅವಳಿಗೆ ಹೇಳಬೇಕಾದುದೆಲ್ಲವನ್ನೂ ಹೇಳಿ ಮುಗಿಸಿದರು. ಅನಂತರ ಕವಿತ್ತಿ ಒಬ್ಬನೆ ಹೊರಬಂದು ಜೀವಣ್ಣರಾಯನೊಂದಿಗೂ ರುದ್ರಮ್ಮನೊಂದಿಗೂ ಮಾತನಾಡಿ ಹಣದ ವ್ಯವಹಾರ ಮುಗಿಸಿದ. ಇತರ ವ್ಯವಸ್ಥೆಯ ಮಾತುಕತೆಯೂ ಆಯಿತು.

ಜೀವಣ್ಣರಾಯ, ನರ್ಮದೆ, ರುದ್ರಮ್ಮ ಕಾರಿನಲ್ಲಿ ಹೊರಟರು. "ಸಾಯಂಕಾಲ ಏಳು ಎಂಟು ಘಂಟೆ ಹೊತ್ತಿಗೆ ವಾಪಸು ಬಂದುಬಿಡಬೇಕು" ಹೊರಡುವಾಗ ಕವಿತ್ತಿ ಎಚ್ಚರಿಸಿದ.

"ನೀನೇನೂ ಆ ಯೋಚ್ನೆ ಇಟ್ಕೋಬೇಡ ಕಣಪ್ಪ, ನಾನೆಲ್ಲಾ ನೋಡ್ಕೊಂತೀನಿ" ರುದ್ರಮ್ಮ ಭರವಸೆ ಕೊಟ್ಟಳು.

ಕಾರು ಹೊರಟಿತು. ಜೀವಣ್ಣರಾಯ ಕಂಟೋನ್ಮೆಂಟಿನ ಕಡೆ ಕಾರು ತಿರುಗಿಸಿದ.

"ಏನು ಈ ಕಡೆ ಒಂಟ್ಯಲ್ಲ" ಎಂದಳು ರುದ್ರಮ್ಮ.

"ಕೊಂಚ ಕೆಲಸ ಇದೆ" ಎಂದ ಜೀವಣ್ಣರಾಯ.

ಮಹಾತ್ಮಗಾಂಧಿ ರೋಡಿನಲ್ಲಿದ್ದ ಬಾರೊಂದರ ಮುಂದೆ ಕಾರು ನಿಂತಿತು.

ಜೀವಣ್ಣರಾಯ ಕಾರಿನಿಂದ ಇಳಿದು ಹೋಗಿ ಒಂದು ಬಾಟಲು ವ್ಹಿಸ್ಕಿ, ಸೋಡ ಹಾಗೂ ಬೀರ್‌ಬಾಟಲುಗಳನ್ನು ತಂದು ಕಾರಿನಲ್ಲಿಟ್ಟ.

"ಇವೆಲ್ಲಾ ಯಾಕಪ್ಪ ಈಗ" ಬಾಟಲುಗಳನ್ನು ನೋಡಿ ರುದ್ರಮ್ಮ ಹೇಳಿದಳು.

"ಇವ್ಲಿ. ಪಿಕ್‌ನಿಕ್ ಪಾರ್ಟಿ ಹೊರಟಿದೀವಿ" ಜೀವಣ್ಣರಾಯ ನಗುತ್ತ ಉತ್ತರಿಸಿದ.

"ಪಾಪ, ಈ ಉಡುಗೀಗೆ ಇದೆಲ್ಲಾ ಅಭ್ಯಾಸ ಇದೆಯೋ ಇಲ್ಲವೋ ?"

"ನಮ್ಮ ಜೊತೇಲಿ 'ಕಂಪನಿ' ಕೊಡ್ತಾಳೆ ಬಿಡು. ಇದಕ್ಕೆಲ್ಲಾ

ಏನು ಅಭ್ಯಾಸ ಬೇಕು. ಅಲ್ಲವೆ ನರ್ಮದ?" ನರ್ಮದೆಯ ಮುಖದತ್ತ ನೋಡಿ ಜೀವಣ್ಣರಾಯ ನಕ್ಕ. ನರ್ಮದೆಯೂ ಮರುನಕ್ಕಳು.

ಅಲ್ಲಿಂದ ಕಾರು ಬೊಂಬಾಯಿ ಆನಂದಭವನದ ಬಳಿಗೆ ಹೋಯಿತು. ಜೀವಣ್ಣರಾಯ ಹಲವಾರು ಸೀ ಮತ್ತು ಖಾರದ ತಿಂಡಿಗಳನ್ನು ಕಟ್ಟಿಸಿ ತನ್ನಲ್ಲಿದ್ದ ಎರಡು ದೊಡ್ಡ ಫ್ಲಾಸ್ಕುಗಳಲ್ಲೂ ಕಾಫಿ ತುಂಬಿಸಿದ. ಹಾಗೇ ರಸಲ್‌ಮಾರ್ಕೆಟ್ಟಿಗೆ ಹೋಗಿ ರಸಬಾಳೆಹಣ್ಣು, ಕಿತ್ತಲೆಹಣ್ಣು, ಕಾಬೂಲು ದ್ರಾಕ್ಷಿ, ಸೇಬು, ತನಗೆ ಪ್ರೀತಿಯಾಗಿದ್ದ ಅಂಜೂರಗಳನ್ನು ಕೊಂಡು ತಂದ. ನಾಲ್ಕಾರು ಪೊಟ್ಟಣ ಬ್ರಿಟಾನಿಯ ಬಿಸ್ಕತ್‌ಗಳನ್ನೂ ಕೊಂಡದ್ದಾಯಿತು.

"ಏನಪ್ಪ ಇದೆಲ್ಲಾ ಬಹಳ ನಡಸ್ತಿದೀಯಲ್ಲ?"

—ರುದ್ರಮ್ಮ ಮತ್ತೆ ಕೇಳಿದಳು.

"ಮದ್ಯಾಹ್ನಕ್ಕೆ ಇವೆಲ್ಲಾ ಬೇಡವೆ? ಅಲ್ಲೇನು ಹೊಟ್ಟೆಗೆ ಏನೂ ಇಲ್ದೆ ಮಿಕಮಿಕ ಅಂತ ಕೂತು ಬರ್ಬೇಕೆ? ಒಂದಷ್ಟು ಖುಷಿಯಾಗಿ ತಿನ್ನೋಣ, ಕುಡಿಯೋಣ" ಎಂದ ಜೀವಣ್ಣರಾಯ.

ಕಾರು ತಿಪ್ಪಗೊಂಡನಹಳ್ಳಿ ಸೇರುವ ವೇಳೆಗೆ ಮಧ್ಯಾಹ್ನ ಎರಡು ಘಂಟೆಯ ಸಮಯವಾಗಿತ್ತು. ಕಟ್ಟೆಯ ಮೇಲಿದ್ದ ಪ್ರಯಾಣಿಕರ ಬಂಗಲೆಯಲ್ಲಿ ಸಾಮಾನುಗಳನ್ನೆಲ್ಲಾ ಇಟ್ಟು, ಮುಖ ಕೈಕಾಲುಗಳನ್ನು ತೊಳೆದು, ಕೊಂಚಹೊತ್ತು ದಣಿವಾರಿಸಿಕೊಂಡು, ಬಿಸ್ಕತ್ - ಕಾಫಿ ಉಪಾಹಾರ ಮುಗಿಸಿ ಎಲ್ಲರೂ ವಾಟರ್‌ವರ್ಕ್ಸ್ ನೋಡಲು ಹೊರಟರು.

"ನಾನು ನೋಡಿದೀನಿ ವಾಟರ್‌ವರ್ಕ್ಸ್"

—ಎಂದಳು ಇದುವರೆಗೂ ಯಾವ ಮಾತೂ ಆಡದೆ ಬಿಂಕದಲ್ಲಿದ್ದ ನರ್ಮದ.

"ನಾನೂ ನೋಡಿದೀನಿ. ರುದ್ರಮ್ಮ ನೋಡಿಲ್ವಂತೆ ಪಾಪ, ತೋರಿಸ್ಕೊಂಡು ಬರೋಣ" ಜೀವಣ್ಣರಾಯನೆಂದ.

"ನನ್ನಿಂದ ನಿಮಗೆ ತೊಂದರೆ ಆಗೋದಾದ್ರೆ, ಟೇಮ್ ಆಗೋದಾದ್ರೆ ಬೇಡಾಕಣಪ್ಪ" ಎಂದಳು ರುದ್ರಮ್ಮ.

“ಅದರಲ್ಲೇನು ತೊಂದರೆ. ಅಲ್ಲದೆ ಆದೆಷ್ಟು ಹೊತ್ತು ನೋಡ್ಕೊಂಡು ಬರೋದು” ಎಂದು ಉಪಚಾರ ಹೇಳಿದ ಜೀವಣ್ಣರಾಯ.

ವಾಟರ್‌ವರ್ಕ್ಸ್‌ನಿಂದ ಹಿಂದಿರುಗಿದ ನಂತರ ‘ಬಾಟಲಿ ಸೇವೆ’ ನಡೆಯಿತು. ತಿಂಡಿ ಪೊಟ್ಟಣಗಳು ಖಾಲಿಯಾಗತೊಡಗಿದವು. ರುದ್ರಮ್ಮ ಕುಡಿದು, ಕುಡಿದು ಅದರ ಅಮಲಿನಲ್ಲಿ ಏನೇನೋ ಬಾಯಿಗೆ ಬಂದಂತೆ ಹರಟತೊಡಗಿದಳು. ನರ್ಮದೆ ಅಷ್ಟು ಕುಡಿದರೂ ಸರಿಯಾಗಿಯೇ ಇದ್ದುದನ್ನು ಕಂಡು ಜೀವಣ್ಣರಾಯನಿಗೆ ಆಶ್ಚರ್ಯವಾಯಿತು. ನಗುತ್ತ ಅವಳಂದಳು—

“ನನಗೆ ಇದೆಲ್ಲಾ ಅಭ್ಯಾಸ ಇದೇರಿ. ಇನ್ನು ಇಷ್ಟು ಕುಡಿದರೂ ನನಗೇನೂ ಆಗಲ್ಲ.”

ಇಬ್ಬರೂ ಮತ್ತೆ ಕುಡಿದರು.

ಅನಂತರ ಜೀವಣ್ಣರಾಯ ಅವಳನ್ನು ಪಕ್ಕದಲ್ಲಿದ್ದ ಕೋಣೆಯೊಳಕ್ಕೆ ಕರೆದುಕೊಂಡು ಹೋದ.

ಕೋಣೆಯಿಂದ ಅವರು ಹೊರಬೀಳಬೇಕಾದರೆ ಸಂಜೆಯಾಗಿತ್ತು. ರುದ್ರಮ್ಮ ಇನ್ನೂ ಜೂಂಕರಿಸುತ್ತಲೇ ಇದ್ದಳು. ಕೈಕಾಲು ಮುಖ ತೊಳೆದು ಸರೋವರದ ದಂಡೆಯಲ್ಲಿ ಕುಳಿತು ಹಣ್ಣುಗಳನ್ನು ಹಚ್ಚಿ ತಿನ್ನುತ್ತ ಅವರು ಪ್ರಕೃತಿಯ ರಮ್ಯನೋಟವನ್ನು ಸವಿಯತೊಡಗಿದರು.

ನರ್ಮದೆ ನವಚೇತನಗೊಂಡವಳಂತಿದ್ದಳು. ಅವಳು ಅದೆಷ್ಟೋ ಯುವಕರ ಸಹವಾಸ ಮಾಡಿದ್ದಳು. ಆದರೆ ಅಂದು ಜೀವಣ್ಣರಾಯನಲ್ಲಿ ಅವಳು ಕಂಡ ಸುಖ ಅವಳನ್ನು ಮೋಹಗೊಳಿಸಿತ್ತು.

ಜೀವಣ್ಣರಾಯನೂ ಅವಳ ಮಾದಕ ಸೌಂದರ್ಯಕ್ಕೆ ಮಾರು ಹೋಗಿದ್ದ. ಹೇಗಾದರೂ ಅವಳನ್ನು ಇನ್ನು ಕೆಲವು ದಿನವಾದರೂ ಬಿಡದೆ ಸವಿಯಬೇಕೆಂದು ಅವನ ವಿಚಾರಶೂನ್ಯ ಮನಸ್ಸು ಕಾತರಿಸುತ್ತಿತ್ತು. ಆದರೆ ಅದಕ್ಕೆ ಉಪಾಯ? ಹುಡುಗಿ ಕೈಗೆ ಸಿಕ್ಕಿರುವಾಗಲೇ ಅವಳನ್ನು ಮರುಳು ಗೊಳಿಸಿ ನಾಲ್ಕಾರು ದಿನ ಎಲ್ಲಿಗಾದರೂ ಕರೆದುಕೊಂಡು ಹೋಗಿ ತನ್ನ ಚಪಲ ತೀರಿಸಿಕೊಳ್ಳಬೇಕೆಂದು ಅವನು ಯೋಚಿಸಿದ. ರುದ್ರಮ್ಮನಿಗೆ ಹೇಳಿದರೆ ಅವಳು ಒಪ್ಪುವಳೆ? ಖಂಡಿತ ಒಪ್ಪುವಂತಿಲ್ಲ. ಅವಳು

ಮೊದಲೇ ಹೆದರಿ, ತನ್ನನ್ನೂ ನಂಬದೆ ಬೆನ್ನು ಹಿಡಿದು ಬಂದಿದ್ದಳು. ಆದ ರಿಂದ ಅವಳಿಗೂ ತಿಳಿಯಗೊಡದೆ ಹುಡುಗಿಯನ್ನು ಕರೆದುಕೊಂಡು ಹೋಗಿ ಬಿಡುವುದು ಲೇಸು.

ಒಂದು ವೇಳೆ ಏನಾದರೂ ಆಗಬಾರದ ಅಪಾಯ ಅವಘಡಿಸಿದರೆ? ತನ್ನಲ್ಲಿ ಬೇಕಾದಷ್ಟು ಹಣವಿದೆ. ಎಂತಹ ಕುತ್ತನ್ನು ಬೇಕಾದರೂ ಆದರಿಂದ ಲೀಲಾಜಾಲವಾಗಿ ಪರಿಹರಿಸಿಕೊಂಡುಬಿಡಬಹುದು. ಭಯ ಪಡುವುದೇಕೆ?

ಜೀವಣ್ಣರಾಯ ನಿರ್ಧರಿಸಿದ.

ತನ್ನ ಥಳುಕು ಮಾತುಗಳಿಂದ ನರ್ಮದೆಯನ್ನು ರಂಜಿಸಿದ. ಅವಳ ಮನಸ್ಸನ್ನು ಚಂಚಲಗೊಳಿಸಿದ. ನರ್ಮದೆಯದು ಮೊದಲೇ ಮರ್ಕಟ ಸ್ವಭಾವ. ಮೇಲೆ ಚೇಳು ಕುಟುಕಿಸಿ ಕಳ್ಳು ಕುಡಿಸಿದಂತಾಯಿತು. ಮುಂದೇ ನಾಗಬಹುದು ಎಂಬುದರ ಕಡೆಗೆ ಅವಳ ಗಮನವೇ ಹೋಗಲಿಲ್ಲ. ಹೆಚ್ಚೆಂದರೆ ನಾಲ್ಕಾರು ದಿನ ಮನೆಬಿಟ್ಟು ಹೋದುದಕ್ಕೆ ತಂದೆ ರೇಗಬಹುದು. ಆದರೆ ಅವರಿಗೆ ತನ್ನನ್ನು ಕಂಡರೆ ಬಹಳ ಮಮತೆ. ಅವರನ್ನು ಸಮಾಧಾನ ಗೊಳಿಸುವುದೇ ಕಷ್ಟವಾಗಲಾರದು.

ನರ್ಮದೆ ನಾಲ್ಕಾರು ದಿನ ಜೀವಣ್ಣರಾಯನೊಂದಿಗೆ ಇರಲು ಸಮ್ಮ ತಿಸಿದಳು. ಜೀವಣ್ಣರಾಯ ಮದರಾಸಿಗೆ ಹೋಗಿ ಬರುವ ಸಲಹೆ ಕೊಟ್ಟ. ನರ್ಮದೆ ಒಪ್ಪಿಕೊಂಡಳು.

ರುದ್ರಮ್ಮ ತೂರಾಡುತ್ತ ಬಂದು "ಆಗಲೇ ಹೊತ್ತು ಅಪಾರ ಆಗೋಯ್ತು. ಮನೆ ಕಡೆ ಏನಾಗೈತೋ. ನಡೀರಿ ಒಂಡೋಣ" ಎಂದು ಚಡಪಡಿಸಿದಳು.

"ನೀನಿನ್ನೂ ಎಚ್ಚರ ಇಲ್ದೆ ಬಿದ್ಕೊಂಡಿದ್ದೆ. ನಿನ್ನೇ ಕಾಯ್ತಿದ್ವಿ" ಜೀವಣ್ಣರಾಯ ಹೇಳಿದ್ದ.

ಉಳಿದಿದ್ದ ತಿನಿಸುಗಳ ಲಘುಫಲಾಹಾರದ ನಂತರ ಎಲ್ಲರೂ ಬೆಂಗ ಳೂರು ಕಡೆ ಹೊರಟರು. ದಾರಿಯುದ್ದಕ್ಕೂ "ಒತ್ತಾಗೋಯ್ತು, ಮನೇಲಿ ಏನೇನು ರಾಮಾಯ್ಣ ಆಗೋಗೈತೋ" ಎಂದು ವಟಗುಟ್ಟುತ್ತಲೇ ಇದ್ದಳು ರುದ್ರಮ್ಮ.

“ಭಯಪಡಬೇಡ. ಅರ್ಧಗಂಟೇಲಿ ಬೆಂಗಳೂರು ಸೇರಿಸಿಬಿಡ್ತೀನಿ. ಮೊದ್ಲು ನಿನ್ನೇ ಮನೇಲಿ ಬಿಟ್ಬಿಟ್ಟು, ಆಮೇಲೆ ನರ್ಮದೇನ ಕಪ್ತಿ ಮನೇಗೆ ಬಿಟ್ಟು ನಂತರ ನಾನು ಹೋಗ್ತೀನಿ” ಎಂದು ಜೀವಣ್ಣರಾಯ ಅವಳಿಗೆ ಸಮಾಧಾನ ಹೇಳಿದ.

“ಹಾಗೇ ಮಾಡು” ಎಂದಳು ರುದ್ರಮ್ಮ.

ಅವಳಿಗೇನು ಗೊತ್ತು ಇವರ ಹಂಚಿಕೆ. ಅಲ್ಲದೆ ಅವಳಿಗೆ ಜೀವಣ್ಣರಾಯನ ಬಗೆಗೆ ಅಂತಹ ಅಪನಂಬಿಕೆಯೂ ಇರಲಿಲ್ಲ; ಅವನು ಅವಳ ಬಹಳ ಹಳೆಯ ಗಿರಾಕಿ.

ರುದ್ರಮ್ಮನನ್ನು ಅವಳ ಮನೆಯ ಬಳಿ ಇಳಿಸಿದುದಾಯಿತು. ಅವಳು ಅವರಿಬ್ಬರನ್ನೂ ಬೀಳ್ಕೊಟ್ಟಳು. ಜೀವಣ್ಣರಾಯ ಕಾರಿಗೆ ಪೆಟ್ರೋಲ್ ತುಂಬಿಸಿ ತನ್ನಲಿದ್ದ ಸ್ಪೇರ್‌ಕ್ಯಾನುಗಳಿಗೂ ಪೆಟ್ರೋಲ್ ಹಾಕಿಸಿದ. ದಂಡಿನಲ್ಲಿದ್ದ ಭೋಜನಾಲಯವೊಂದರಲ್ಲಿ ಇಬ್ಬರೂ ಊಟ ಮುಗಿಸಿಕೊಂಡರು. ನಂತರ ಕಾರು ಮದರಾಸು ರಸ್ತೆ ಹಿಡಿಯಿತು.

ಮದರಾಸಿನ ‘ವುಡ್‌ಲ್ಯಾಂಡ್’ ಹೋಟಲಿನಲ್ಲಿ ಭವ್ಯವಾದ ಕೋಣೆಯೊಂದನ್ನು ತೆಗೆದುಕೊಂಡ ಜೀವಣ್ಣರಾಯ. ನರ್ಮದೆಯನ್ನು ಮದರಾಸಿನಲ್ಲೆಲ್ಲಾ ಸುತ್ತಾಡಿಸಿದ. ಅವಳು ಅದುವರೆಗೆ ಮದರಾಸು ನೋಡಿರಲಿಲ್ಲ. ಆ ಜನ, ಆ ಟ್ರಾಂಗಾಡಿಗಳು, ಆ ಆಹ್ಲಾದಕರವಾದ ಸಮುದ್ರ ತೀರ ಎಲ್ಲವೂ ನರ್ಮದೆಯನ್ನು ಬೆರಗುಗೊಳಿಸಿದವು. ‘ವುಡ್‌ಲ್ಯಾಂಡಿ’ನಲ್ಲಿ ದೊರೆತ ಆದರಾತಿಥ್ಯವಂತೂ ಅವಳನ್ನು ಆಹ್ಲಾದಗೊಳಿಸಿತು. ತಿಂಡಿ, ತಿನಸು, ಕುಡಿತ ಯಾವುದಕ್ಕೂ ಕಡಿಮೆಯಿರಲಿಲ್ಲ. ಮ್ಯೂಸಿಯಂ, ಅಡ್ಯಾರ್, ಹಾರ್ಬರ್, ಲೈಟ್‌ಹೌಸ್‌ಗಳಂತಹ ಪ್ರೇಕ್ಷಣೀಯ ಸ್ಥಳಗಳಿಗೆಲ್ಲಾ ಅವಳನ್ನು ಕರೆದುಕೊಂಡುಹೋಗಿ ತೋರಿಸಿಕೊಂಡು ಬಂದ ಜೀವಣ್ಣರಾಯ.

ನಾಲ್ಕಾರು ದಿನಗಳು ನಾಲ್ಕಾರು ನಿಮಿಷಗಳಂತೆ ಕಳೆದುಹೋದವು ಜೀವಣ್ಣರಾಯನ ಜೊತೆಯಲ್ಲಿ. ನರ್ಮದೆಗೆ ಮನೆಯ ಕಡೆ ಯೋಚನೆಯೇ ಬರಲಿಲ್ಲ. ತಂದೆಯ ನೆನಪೂ ಬರಲಿಲ್ಲ.

ಒಂದುದಿನ ಜೀವಣ್ಣರಾಯ ಒಬ್ಬನೇ ಹೊರಗೆ ಹೋದವನು ಎಷ್ಟು ಹೊತ್ತಾದರೂ ಕೋಣೆಗೆ ಹಿಂದಿರುಗಲಿಲ್ಲ. ನರ್ಮದೆ ಕಾದುಕಾದು ಸಾಕಾದಳು. ಜೀವಣ್ಣರಾಯ ಬರಲೇ ಇಲ್ಲ. ಮಾರನೆಯ ದಿನವೂ ಇಲ್ಲ. ಮೂರನೆಯ ದಿನವೂ ಇಲ್ಲ. ನರ್ಮದೆಗೆ ಗಾಭರಿಯಾಯಿತು. ಗುರುತು ಪರಿಚಯಗಳಿಲ್ಲದ ಯಾವನನ್ನೋ ನಂಬಿಕೊಂಡು ಬಂದುದಕ್ಕೆ ಪೇಚಾಡಿದಳು. ಮುಂದೆ ಎಂತಹ ಅಪಾಯ ತನಗಾಗಿ ಕಾದಿದೆಯೋ ಎಂದು ಅವಳು ಹೆದರಿದಳು. ತನ್ನ ಮಂಕುಬುದ್ಧಿಗಾಗಿ ತನ್ನನ್ನೆ ನಿಂದಿಸಿಕೊಂಡಳು.

ಹೋಟಲಿನವರು ಬೇರೆ ಅಡ್ವಾನ್ಸ್ ತೀರಿಹೋಯಿತು ಎಂದು ಬಿಟ್ಟರು. ಇನ್ನು ಅಲ್ಲಿಂದ ಹೊರಡಲೇಬೇಕು. ಆದರೆ ಹೋಗುವುದು ಹೇಗೆ? ಬೆಂಗಳೂರಿಗೆ ಹೊರಡಲು ರೈಲುಚಾರ್ಜಿಗೂ ಕಾಸಿಲ್ಲ. ಮೈ ಮೇಲೆ ಉಟ್ಟ ಬಟ್ಟೆಯ ಹೊರತು ಮತ್ತೇನಿಲ್ಲ. ಒಡವೆವಸ್ತುಗಳನ್ನಾದರೂ ಮಾರಿ ಹಣ ಮಾಡಿಕೊಂಡು ಬೆಂಗಳೂರಿಗೆ ಹೋಗೋಣವೆಂದರೆ ಮೈ ಮೇಲೆ ತುಣುಕು ಒಡವೆಯೂ ಇರಲಿಲ್ಲ. ಅವನ್ನು ಧರಿಸುವುದು ಆಧುನಿಕತೆಯ ಲಕ್ಷಣವಲ್ಲವೆಂದು ಅವರಿವರನ್ನು ನೋಡಿ ಭಾವಿಸಿ ಅವಳು ಎಂದೋ ಬಿಟ್ಟುಬಿಟ್ಟಿದ್ದಳು.

ಏನು ಮಾಡಲೂ ತೋರದೆ ತಲೆಗೆ ಕೈ ಹೊತ್ತು ಯೋಚನಾಮಗ್ನಳಾಗಿ ಕುಳಿತುಬಿಟ್ಟಳು ನರ್ಮದ.

೨೯

"ಕೇಳಿದೆಯಾ ಬಸವ್ಮ್ರ ರುದ್ರವ್ಮ್ರನ ಕತೇನ ?" ಚಿಕ್ಕರಂಗಣ್ಣ ಬಾಗಿಲಲ್ಲಿ ಬರುತ್ತಿದ್ದಂತೆಯೇ ಕೇಳಿದ ಬಸವಿಯನ್ನು.

"ಆ ಬೇವಾರ್ಸಿ ಮುಂಡೆ ಕತೆ ನಂಗ್ಯಾಕೆ ? ಅವಳ ನಾಶನವಾಗ, ಅವಳ ಮನೆ ಎಕ್ಕುಟ್ಹೋಗ" ಬಸವಿ ಶಪಿಸತೊಡಗಿದಳು.

"ಬಿಡು. ಅವಳು ನಾಶನವಾದ ಹಾಗೇ. ಅವಳು ಮನೆ ಎಕ್ಕುಟ್ಹೋದ ಹಾಗೇ ಇನ್ನು" ಅಲ್ಲಿದ್ದ ಮುರುಕಲು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತ ಹೇಳಿದ ಚಿಕ್ಕರಂಗಣ್ಣ.

"ಆ್ಞ........ಏನಾಯ್ತು........" ಬಸವಿಗೆ ಕಿವಿಯರಳಿತು.

"ಪೋಲೀಸ್ನೋರು ಹಿಡ್ಕೊಂಡುಹೋದ್ರು."

"ಯಾಕೆ ? ಏನ್ಸಮಾಚಾರ ?"

"ಅವಳೂ........ಆ ಜೀವಣ್ಣರಾಯ ಇದಾನಲ್ಲ........"

"ಹ್ಞೂ........ಅವಳ ಖಾಸಾ ಗಿರಾಕಿ"

"ಅವನು, ಆಮೇಲೆ ಕವ್ತಿ ಅಂತ ಒಬ್ಬ ಇದಾನಲ್ಲ ಅವನು, ಅವನ ಎಂಡ್ತಿ ಕುಸುಮ ಅನ್ನೋಳು ನಾಕು ಜನಾನೂ ಸೇರ್ಕೊಂಡು ದೊಡ್ಮನುಸ್ಯರ ಮನೆ ಉಡುಗೀ ಒಬ್ಬಳ್ನ—ಅವಳ ಹೆಸರು ನರ್ಮದ ಅಂತ, ನಿಮ್ಮ್ರ ಅಂತ್ಲೂ ಕರೀತಾರೆ ಮುದ್ದಿಗೆ—ಗಿಲೀಟು ಮಾಡಿ ಹಾರಸ್ಕೊಂಡು ಹೋದರಂತೆ. ಜೀವಣ್ಣರಾಯ ಅವಳ್ನ ಮದರಾಸಿಗೆ ಕರ್ಕೊಂಡ್ಹೋಗಿ ಅಲ್ಲೊಂದು ಹೋಟ್ಲಲ್ಲಿ ಒಬ್ಬಳ್ನಿ ಬಿಟ್ಬಿಟ್ಟು ತಲೆ ತಪ್ಪಿಸಿಕೊಂಡ್ಬಿಟ್ಟಿದ್ನಂತೆ, ಉಡುಗಿ ಅಪ್ಪ ಉಡುಗಿ ನಾಪತ್ತೆ ಅಂತ ಕಂಪ್ಲೇಂಟು ಕೊಟ್ಟಿದ್ನಂತೆ. ಈಗ ಇವರ್ನೆಲ್ಲಾ ಹಿಡಿದವ್ರೆ. ಜೀವಣ್ಣರಾಯನೂ ಸಿಕ್ಕವ್ನೆ. ಉಡುಗೀನ ಮದರಾಸಿನಿಂದ ಪೋಲಿಸ್ನೋರು ಕರ್ಕೊಂಡ್ಬದ್ರಂತೆ. ಈಗ 'ಕಿಡ್ನಾಪ್ ಕೇಸು' ಮಾಡ್ತಾರಂತೆ ಇವರ ಮೇಲೆ.

"ಸರಿಕಣಪ್ಪ. ಭಾರಿ ರಾಮಣ್ಯವೇ ಆಗೈತೆ."

"ನೋಡು. ಇದೇ ಸಮಯ. ಅಲ್ಲಿ ಒಳ್ಳೇ ಉಡುಗೀರು ಯಾರಾದ್ರೂ ಇದ್ರೆ ಉಪಾಯವಾಗಿ ಕರ್ಕೊಂಡ್ಬಂದು ನಿನ್ನ ಮನೆ ಸೇರಿಸ್ಕೊಂಡ್ಬಿಡು."

"ಬಿಡಪ್ಪ, ನಾನ್ಯಾಕೆ ಕರ್ಕೊಂಡ್ಬರ್ಲಿ. ನಾಕುದಿನ ಕಳೆದ ಮೇಕೆ ಅವೆ ಬತ್ತವೆ ಇತ್ಲಾಗೆ."

"ಅದೂ ನಿಜ ಅನ್ನು."

ಮದರಾಸಿನಲ್ಲಿ ಅಂದು ಜೀವಣ್ಣರಾಯ ನರ್ಮದೆಯೊಬ್ಬಳನ್ನೇ ಹೋಟಲಿನ ಕೋಣೆಯಲ್ಲಿ ಬಿಟ್ಟು ಕಾರಿನಲ್ಲಿ ಹಾಗೆಯೇ ಸುತ್ತಾಡಿಕೊಂಡು ಸೆಂಟ್ರಲ್ ರೈಲು ನಿಲ್ದಾಣದ ಬಳಿ ಬಂದ. ಅಲ್ಲಿದ್ದ 'ಹಿಗಿನ್ ಬಾತಂಸ್ ನ್ಯೂಸ್ ಸ್ಟಾಲಿ'ನಲ್ಲಿ 'ಹೆರಾಲ್ಡ್' ಪತ್ರಿಕೆಯನ್ನು ಕೊಂಡು ಹಾಳೆಗಳನ್ನು ತಿರುವಿಹಾಕತೊಡಗಿದ. ಅದರಲ್ಲಿ ಪ್ರಕಟವಾಗಿದ್ದ 'ಕನ್ಯಾಪಹಾರ'ದ ಸುದ್ಧಿ ಥಟ್ಟನೆ ಅವನ ಕಣ್ಣಿಗೆ ಬಿತ್ತು. ನರ್ಮದೆ ಎಂಬ ಹುಡುಗಿ ಪತ್ತೆಯಿಲ್ಲವೆಂದೂ, ಅವಳನ್ನು ಯಾರೋ ಅಪಹರಿಸಿಕೊಂಡು ಹೋಗಿರುವರೆಂದೂ, ಹುಡುಗಿಯ ತಂದೆ ಪೋಲೀಸರಿಗೆ ದೂರಿತ್ತಿರುವರೆಂದೂ, ಪೋಲೀಸರು ಪತ್ತೆ ತರದೂದು ನಡೆಸಿರುವರೆಂದೂ ಸುದ್ದಿ ಪ್ರಕಟವಾಗಿತ್ತು.

ಜೀವಣ್ಣರಾಯನ ಜಂಘಾಬಲವೇ ಉಡುಗಿಹೋಯಿತು. ಆ ಕುತ್ತಿನಿಂದ ಪಾರಾಗಬೇಕಾದರೆ ಹುಡುಗಿಯನ್ನು ಅಲ್ಲಿಯೇ ಬಿಟ್ಟು, ತನಗೆ ಏನೂ ಗೊತ್ತಿಲ್ಲದವನಂತೆ ಬೆಂಗಳೂರು ಸೇರಿಕೊಳ್ಳುವುದೇ ಸರಿಯಾದ ಉಪಾಯವೆಂದು ಅವನು ಯೋಚಿಸಿದ. ಕೂಡಲೆ ಕಾರನ್ನು ಬೆಂಗಳೂರು ದಾರಿಗೆ ತಿರುಗಿಸಿದ.

ಜೀವಣ್ಣರಾಯ ಬೆಂಗಳೂರು ತಲಪುವ ವೇಳೆಗಾಗಲೇ ಪೋಲೀಸಿನವರು ಕುಂದಾಪುರದ ಕಮ್ಮಿ, ಕಮ್ಮಿಯ ಹೆಂಡತಿ ಕುಸುಮ, ರುದ್ರಮ್ಮ ಮೂವರನ್ನೂ ದಸ್ತಗಿರಿ ಮಾಡಿ ಅವರಿಂದ ನೈಜಸಂಗತಿಯನ್ನು ಹೊರಪಡಿಸಿದ್ದರು. ಜೀವಣ್ಣರಾಯನನ್ನು ಹುಡುಕುವ ಸನ್ನಾಹ ನಡೆಯುತ್ತಿತ್ತು.

ಪೋಲೀಸರ ಕಣ್ಣು ತಪ್ಪಿಸಿ ಪರಾರಿಯಾಗಲು ತನ್ನ ಕೈಲಾದ ಸಾಹಸವನ್ನೆಲ್ಲಾ ನಡೆಸಿದ ಜೀವಣ್ಣರಾಯ. ಆದರೆ ಅದರಲ್ಲಿ ಕೃತಕೃತ್ಯನಾಗಲಿಲ್ಲ.

ಪೋಲೀಸರ ಹದ್ದುಗಣ್ಣಿಗೆ ಮಣ್ಣೆರಚಲು ಯತ್ನಿಸಿ ಅವನು ವಿಫಲನಾದ.

ಜೀವಣ್ಣರಾಯನಿಂದ ಹೊರಬಿದ್ದ ಸುದ್ದಿಯ ಮೇಲೆ ನರ್ಮದೆಯ ಪತ್ತೆಯಾಯಿತು. ಪೋಲೀಸರು ಅವಳನ್ನು ಮದರಾಸಿನಿಂದ ಕರೆತಂದರು. ಅವಳ ಹೇಳಿಕೆಯನ್ನು ಬರೆದುಕೊಂಡು ಅಪರಾಧಿಗಳ ಮೇಲೆ 'ಚಾರ್ಜ್ ಷೀಟ್' ಹಾಕಿದರು.

ಮೊಖದ್ದಮೆ ನಡೆದು ಅಪರಾಧಿಗಳ ಅಪರಾಧ ಸಾಬೀತಾಯಿತು. ಜೀವಣ್ಣರಾಯನಿಗೆ ನಾಲ್ಕುವರ್ಷ ಕಠಿಣ ಶಿಕ್ಷೆ, ಒಂದುಸಾವಿರ ರೂಪಾಯಿ ಜುಲ್ಮಾನೆ, ಜುಲ್ಮಾನೆ ಕೊಡಲು ತಪ್ಪಿದರೆ ಮತ್ತೆ ಒಂದು ವರ್ಷ ಕಠಿಣ ಸಜ; ಕುಂದಾಪುರದ ಕಮ್ತಿಗೆ ಮೂರು ವರ್ಷ ಕಠಿಣ ಶಿಕ್ಷೆ, ಆರು ನೂರು ರೂಪಾಯಿ ಜುಲ್ಮಾನೆ, ಜುಲ್ಮಾನೆ ಕೊಡಲು ತಪ್ಪಿದರೆ ಮತ್ತೆ ಎಂಟು ತಿಂಗಳು ಕಠಿಣ ಶಿಕ್ಷೆ, ಕಮ್ತಿಯ ಹೆಂಡತಿ ಕುಸುಮಳಿಗೂ ರುದ್ರಮ್ಮನಿಗೂ ತಲಾ ಎರೆಡೆರಡು ವರ್ಷಗಳ ಕಠಿಣ ಶಿಕ್ಷೆಯಾಗಿ ಎಲ್ಲರನ್ನೂ ಕಾರಾಗೃಹಕ್ಕೆ ಕಳಿಸಲಾಯಿತು.

ರುದ್ರಮ್ಮ ಜೈಲಿಗೆ ಹೋದ ಮೇಲೆ 'ಜಾಲರಿಮನೆ'ಯ ಜೀವವೇ ಹಾರಿಹೋದಂತಾಯಿತು. ಮನೆಯಲ್ಲಿದ್ದ ಹುಡುಗಿಯರೆಲ್ಲಾ ದಿಕ್ಕಾಪಾಲಾದರು. ಸಿಕ್ಕಿದುದನ್ನು ದೋಚಿಕೊಂಡು ಸಿಕ್ಕಿದಂತೆ ನಡೆದರು. ಕೆಲವರು ಹೊಸೂರು ಬಸವಿಯ ಮನೆ ಸೇರಿಕೊಂಡರು. ಉಳಿದವರು ತಮಗೆ ತೋರಿದ ಕಡೆ ಹಾರಿದರು.

ಎಲ್ಲರೂ ಅವರವರ ದಾರಿ ಹಿಡಿದು ಹೋದಮೇಲೆ 'ಜಾಲರಿಮನೆ' ಯಲ್ಲಿ ಉಳಿದವಳೆಂದರೆ ಸುಂದರಿಯೊಬ್ಬಳು. ಕಸುಬು ಮುಳ್ಳಿನ ಹಾಸಿಗೆಯಾಗಿ ಅವಳ ಮನೋಭಾವಕ್ಕೆ ಅದು ಅಂಟಿಬರದಿದ್ದರೂ, ಹಿಂದೊಮ್ಮೆ ಹಸಿದು ಬಂದಾಗ ತಾವಿತ್ತು ಜೀವದಾನ ಮಾಡಿದ 'ಜಾಲರಿಯಮನೆ'ಯ ಮೇಲಿನ ವ್ಯಾಮೋಹದಿಂದ, ತಾಯಿಯಂತೆ ಸಲಹಿ ಶಿವಪಾದ ಸೇರಿದ್ದ ಚಂದ್ರಮ್ಮನ ಮೇಲಿನ ಮಮತೆಯಿಂದ, ಅವಳು ಸತ್ತಮೇಲೆ ಅಕ್ಕತಂಗಿಯರಿಗಿಂತ ಹೆಚ್ಚಾಗಿ ಪ್ರೀತಿವಿಶ್ವಾಸಗಳನ್ನು ತೋರಿದ್ದ ರುದ್ರಮ್ಮನ

ಮೇಲಿನ ಅಂತಃಕರಣದಿಂದ 'ಜಾಲರಿಮನೆ'ಯ ಜ್ಯೋತಿ ಆರದಂತೆ ಮುಂದುವರೆಸಿದಳು. ಬಂದ ಗಿರಾಕಿಗಳನ್ನು ತನ್ನ ಕೈಲಾದಷ್ಟು ರಮಿಸುತ್ತ ಹೇಗೋ ಜೀವನನಿರ್ವಹಣ ಮಾಡುತ್ತ ಅಲ್ಲಿಯೇ ಇರತೊಡಗಿದಳು. ರುದ್ರಮ್ಮನ ಎರಡು ವರ್ಷಗಳ ಕಠಿಣಶಿಕ್ಷೆ ಎಂದು ಮುಗಿಯುವುದೋ ಎಂದು ಗಳಿಗೆ ಗಳಿಗೆಯನ್ನೂ ಎಣಿಸುತ್ತ ಕಾಲ ಹಾಕಲಾರಂಭಿಸಿದಳು.

೩೦

ಸುಂದರಿಗೆ ಹದಿನೈದು ದಿನಗಳಿಂದ ಕಾಯುತ್ತಿದ್ದ ಜ್ವರ ಬಿಟ್ಟಿರಲಿಲ್ಲ. ಹಾಳು ಜ್ವರ ದಿನದಿನಕ್ಕೆ ಏರುತ್ತಿತ್ತು. ಜೊತೆಗೆ ಅಸಹ್ಯದ ರೋಗ ಬೇರೆ. ಮೈಯೆಲ್ಲಾ ಹುಳುತು ಹೊಲಸು ನಾರುತ್ತಿತ್ತು. ಒಮ್ಮೊಮ್ಮೆ ಉಸಿರು ಕಟ್ಟಿಹೋದಂತಾಗುತ್ತಿತ್ತು. ತೊಡೆ, ಮೊಣಕಾಲುಗಳು ಬೇರೆ ಬಾತು ಕೊಂಡಿದ್ದವು. ಕೈಕಾಲುಗಳ ಕೀಲುಗಳೆಲ್ಲ ಅಸಾಧ್ಯವಾಗಿ ನೋಯು ತ್ತಿದ್ದವು. ಅವಳ ಆರೈಕೆ ಮಾಡುವವರು ಮನೆಯಲ್ಲಿ ಒಬ್ಬರಾದರೂ ಇರ ಲಿಲ್ಲ. ಗಂಜಿ ಕಾಯಿಸಿಕೊಳ್ಳಲು ಕೂಡ ಅವಳ ಕೈಯ್ಯಿಂದ ಆಗುತ್ತಿರಲಿಲ್ಲ.

ಆದರೂ ಗಿರಾಕಿಗಳು ಅವಳನ್ನು ಬಿಡುವಂತಿರಲಿಲ್ಲ. ಅವಳ ದೇಹ ವನ್ನು ಮುಟ್ಟುವುದಕ್ಕೆ ಹೇಸಿಗೆಯೆನಿಸುತ್ತಿದ್ದರೂ ಅವರು ತಮ್ಮ ಕ್ಷಣಿಕ ಚಟವನ್ನು ತೀರಿಸಿಕೊಳ್ಳದೆ ಬಿಡುತ್ತಿರಲಿಲ್ಲ. ಅವಳು ಹೇಗಿದ್ದರೇನು, ಏನಾದರೇನು, ತಮ್ಮ ಚಪಲ ತೀರಿಸಿಕೊಂಡರಾಯಿತು.

ಅವರ ಉಪಟಳ ಸಹಿಸಿ, ಸುಂದರಿಗಂತೂ ಸಾಕುಸಾಕಾಗಿ ಹೋಗಿತ್ತು. ಬೇಡವೆಂದರೆ ಬಿಡುವವರು ಯಾರು? ಆಗುವುದಿಲ್ಲವೆಂದರೂ ಕೇಳುವವರು ಯಾರು? ಮೃಗದಂತಹ ಜನ! ಮಾನವೀಯತೆಯನ್ನೇ ಮರೆತ ಜನ! ಕುಡಿದು ಉನ್ಮತ್ತರಾಗಿ ಬರುತ್ತಿದ್ದ ಪಶುಗಳವರು! ಸುಂದರಿ ಅವರನ್ನು ಪ್ರತಿಭಟಿಸಲೂ ಶಕ್ತಿಯಿಲ್ಲದವಳಾಗಿ ನೆಲಕ್ಕೆ ಉರುಳುತ್ತಿದ್ದಳು. ಗಿರಾಕಿಗಳು ತಮ್ಮ ಬೇಟೆ ತೀರಿಸಿಕೊಂಡು, ತಮಗೆ ತೋರಿದಷ್ಟು ಹಣ ಅವಳ ಬಳಿ ಎಸೆದು ಹೊರಟುಹೋಗುತ್ತಿದ್ದರು.

ಒಂದು ರಾತ್ರಿ. ಹನ್ನೆರಡು ಘಂಟೆ ಹೊಡೆದ ಮೇಲೆ ಅರ್ಧ ತಾಸಾ ಗಿರಬಹುದು. ಸುಂದರಿ ನರಳುತ್ತ ಬಿದ್ದುಕೊಂಡಿದ್ದಳು. ಅವಳ ಬಳಿ ಸುಳಿಯಲು ನಿದ್ರೆಯೂ ಹೇಸಿದಂತಿತ್ತು. ಗಿರಾಕಿಗಳ ಕಾಟ ತಡೆಯಲಾರದೆ ಅವಳು ತೂರಾಡುತ್ತ ಎದ್ದುಹೋಗಿ ಬೀದಿಯ ಬಾಗಿಲಿನ ಚಿಲಕ ಹಾಕಿ

ಕೊಂಡು ಬಂದು ಹಾಸಿಗೆಯಲ್ಲಿ ಹೊರಳಾಡುತ್ತ, ನರಳುತ್ತ ಬಿದ್ದುಕೊಂಡಳು. ಸಣ್ಣ ದೀಪವೊಂದು ಮಿಣಗುಟ್ಟುತ್ತಿತ್ತು.

ಗಿರಾಕಿಯೊಬ್ಬ ಬಂದು ಬಾಗಿಲು ದಡಬಡ ಬಡಿದ. ಕುಡಿದು ಕಾಡು ಮನುಷ್ಯನಾಗಿದ್ದ ಅವನು.

"ಯಾರೂ........?" ಮಲಗಿದ್ದಲ್ಲಿಂದಲೇ ಕ್ಷೀಣಸ್ವರದಿಂದ ಕೇಳಿದಳು ಸುಂದರಿ.

ಗಿರಾಕಿಗೆ ಆ ಸ್ವರ ಕೇಳಿ ಬರಲಿಲ್ಲವೇನೋ. ಮತ್ತೆ ಬಾಗಿಲು ಬಡಿಯಹತ್ತಿದ ಗಿರಾಕಿ.

"ಯಾರು........ಯಾರದೂ........?" ಈ ಬಾರಿ ಶಕ್ತಿ ಮೀರಿ ಕೂಗಿದಳು ಸುಂದರಿ.

"ನಾನು............ಕರಿಯಣ್ಣ............ಬಾಗಿಲು ತೆಗಿ" ಒದರಿದ ಗಿರಾಕಿ.

"ನನ್ಕೈಲ್ಯಾಗಾಕಿಲ್ಲ. . .ನರಳ್ತಾ ಬಿದ್ದಿವ್ನಿ. . .ಹೋಗಣ್ಣ" ಎಂದು ಸುಂದರಿ ಉತ್ತರವಿತ್ತಳು.

"ಸಾಕು ನಿನ್ನ ಸೋಗ್ಲಾಡಿತನ. ಒಳ್ಳೇ ಮಾತ್ನಲ್ಲಿ ತೆಗೀತೀಯೋ ಇಲ್ಪೊ, ಬಾಗಲ್ನ ?" ಅರಚಿದ ಕರಿಯಣ್ಣ. ಸುಂದರಿ ಮಾತನಾಡಲಿಲ್ಲ, ಮಲಗಿದ್ದೆಡೆಯಿಂದ ಏಳಲೂ ಇಲ್ಲ.

ಕರಿಯಣ್ಣ ಬಹಳ ಹಳೆಯ ಗಿರಾಕಿ. ಆ ಮನೆಯ ಅಡಿಪಾಯದಿಂದ ಹಿಡಿದು ಮೇಲ್ಛಾವಣಿಯವರೆಗಿನ ಎಲ್ಲ ವಹಿವಾಟೂ ಅವನಿಗೆ ಗೊತ್ತಿತ್ತು. ಹೊರಗಿನಿಂದಲೇ ಒಳಹಾಕಿದ್ದ ಅಗಣಿಯನ್ನು ಹೇಗೆ ತೆಗೆಯಬೇಕೆಂಬುದನ್ನು ಅವನು ಅರಿತಿದ್ದ. ಬಾಗಿಲು ತೆಗೆದು ಒಳಹೋಗಲು ಅವನಿಗೆ ಕಷ್ಟವಾಗಲಿಲ್ಲ.

"ಬೇಡ ಕಣಣ್ಣ.... ಈವತ್ಬೇಡ.... ನಿನ್ನ ದಮ್ಮಯ್ಯ ಅಂತೀನಿ.... ನಿನ್ನ ಕಾಲಿಗೆ ಬೀಳ್ತೀನಿ........ಮೈ ಚಂದಾಕಿಲ್ಲ........" ಅವನು ಒಳಬಂದುದನ್ನು ಕಂಡು ಆರ್ತಳಾಗಿ ಭಯದಿಂದ ಕೂಗಿಕೊಂಡಳು ಸುಂದರಿ.

ಕರಿಯಣ್ಣ ಹಸಿದು ಬಂದಿದ್ದ. ತನ್ನ ಹಸಿವು ಇಂಗಿಸಿಕೊಳ್ಳುವುದೊಂದೇ ಅವನ ಗುರಿಯಾಗಿತ್ತು. 'ಬಿದ್ದಿರೇ ಬಾಯ್ಮುಚ್ಕೊಂಡು'

ಎಂದವನೇ ಕರಿಯಣ್ಣ ಅವಳನ್ನು ಬಲವಾಗಿ ಹಿಡಿದು ಅವಳ ಮೈಮೇಲೆರಗಿದ. ಸುಂದರಿ ನಿಶ್ಚೇಷ್ಟಿತಳಾಗಿ ಬಿದ್ದುಕೊಂಡಳು. ಅವನ ಪಶುವೃತ್ತಿಗೆ ಅಡ್ಡಿಮಾಡಲು ಅವಳಲ್ಲಿ ಯಾವ ಶಕ್ತಿಯೂ ಉಳಿದಿರಲಿಲ್ಲ. ತನಗಾಗುತ್ತಿದ್ದ ಬಾಧೆ ತಡೆಯಲಾರದೆ ಒಮ್ಮೆ ಗಟ್ಟಿಯಾಗಿ ಚೀರಿಕೊಂಡಳು ಅಷ್ಟೆ.

ಎಷ್ಟೋ ಹೊತ್ತಿನ ಮೇಲೆ ಸುಂದರಿಯ ದೇಹವನ್ನು ಹಿಡಿದಿದ್ದ ಕರಿಯಣ್ಣನ ಹಿಡಿತ ಸಡಲಿತು. ಅವನು ಪಕ್ಕಕ್ಕೆ ಹೊರಳಿಕೊಂಡ. ಕೂಡಲೆ ಗಾಢನಿದ್ರೆ ಅವನನ್ನು ಮುಸುಕಿತು.

ಮತ್ತೆ ಎಷ್ಟೋ ಹೊತ್ತಿನ ನಂತರವೇ ಅವನಿಗೆ ಎಚ್ಚರವಾದದ್ದು. ಕುಡಿತದ ಅಮಲು ಇಳಿದಿತ್ತು. ಮಗ್ಗುಲಲ್ಲಿ ಸುಂದರಿ ಅಲುಗಾಡದೆ ಮಲಗಿದ್ದಳು. ಕರಿಯಣ್ಣನಿಗೆ ಎಲ್ಲವೂ ನೆನಪಿಗೆ ಬಂತು. ಮತ್ತೆ ಪಶುವೃತ್ತಿಗೆ ಮನಸ್ಸು ಕೆರಳಿತು. ಸುಂದರಿಯನ್ನು ಬಾಚಿ ಹಿಡಿದ. ಅವನಿಗೆ ಗಾಭರಿಯಾಯಿತು. ಮೈ 'ಜುಂ' ಎಂದಿತು. ಸುಂದರಿಯ ಮೈ ಹಿಮದ ಗಡ್ಡೆಯಂತೆ ತಣ್ಣನೆ ಕೊರೆಯುತ್ತಿತ್ತು.

ಕರಿಯಣ್ಣ ಮೇಲೆದ್ದು ಉರಿಯಲೋ ಬೇಡವೋ ಎಂದು ಉರಿಯುತ್ತಿದ್ದ ದೀಪವನ್ನು ದೊಡ್ಡದು ಮಾಡಿದ. ಸುಂದರಿಯ ಮುಖವನ್ನೊಮ್ಮೆ ನೋಡಿದ. ಭೀಕರವಾಗಿತ್ತು ಆ ದೃಶ್ಯ. ಕರಿಯಣ್ಣನ ಕೈಕಾಲುಗಳು ನಡುಗತೊಡಗಿದವು. ಧೈರ್ಯಮಾಡಿಕೊಂಡು ಸುತ್ತಲೂ ಒಮ್ಮೆ ಕಣ್ಣು ಹೊರಳಿಸಿದ. ಗೋಡೆಯ ಗೂಟದಲ್ಲೊಂದು ಬೀಗ ಬೀಗದಕೈ ಸಮೇತ ನೇತಾಡುತ್ತಿತ್ತು.

ಕರಿಯಣ್ಣನಿಗೆ ಏನೋ ಹೊಳೆಯಿತು. ಬೀಗ, ಬೀಗದ ಕೈಯನ್ನು ಕೈಗೆತ್ತಿಕೊಂಡ. ಶಬ್ದ ಮಾಡದೆ ಹೊರಬಾಗಿಲು ತೆರೆದ. ಹೊರಗೆ ಕತ್ತಲೆ ಇನ್ನೂ ಆವರಿಸಿತ್ತು. ಹೊತ್ತು ಹುಟ್ಟಲು ಇನ್ನೂ ಬಹಳ ವೇಳೆಯಿತ್ತು. ಹೊರಬಾಗಿಲ ಚಿಲಕ ಹಾಕಿ ಅದಕ್ಕೆ ಬೀಗ ಜಡಿದು ಬೀಗದ ಕೈಯನ್ನು ಎದುರಿಗಿದ್ದ ದೊಡ್ಡ ಗಟಾರದಲ್ಲಿ ಎಸೆದು ಹಾದಿ ಹಿಡಿದು ಕತ್ತಲಲ್ಲಿ ಕಣ್ಮರೆಯಾದ.

ಬೆಳಗಾಯಿತು. ಜನ ಬೀದಿಯಲ್ಲಿ ತಿರುಗಾಡತೊಡಗಿದರು, ಅವರವಕ್ಕೆ ಅವರು, ಅವರವರ ಕೆಲಸಗಳಲ್ಲಿ ಅವರವರು. ರುದ್ರಮ್ಮನ

ಮನೆಗೆ ಜಡಿದ ಬೀಗ ಜಡಿದಂತೆಯೇ ಇತ್ತು. ಅದರ ಕಡೆಗೆ ಯಾರ ಗಮನವೂ ಬೀಳಲಿಲ್ಲ.

ರಾತ್ರಿ ಮತ್ತೆ ಮುಸುಕಿತು....ಬಂದ ಗಿರಾಕಿಗಳು ಮನೆಗೆ ಹಾಕಿದ್ದ ಬೀಗ ನೋಡಿ, ಯಾರೂ ಇಲ್ಲವೆಂದುಕೊಂಡು ಬಂದಂತೆಯೇ ಹಿಂದಿರುಗಿದರು.

ನಾಲ್ಕು ದಿನ ಹೀಗೆಯೇ ಉರುಳಿಹೋದವು.

ಐದನೆಯ ದಿನ ಬೀದಿಯಲ್ಲಿ ಅಡ್ಡಾಡುವ ಜನ "ಏನೋ ದುರ್ನಾಥ" ಎನ್ನುತ್ತ, ಮೂಗು ಹಿಡಿದು, ಉಸಿರುಕಟ್ಟಿ ತಿರುಗಾಡತೊಡಗಿದರು. "ಗಟಾರದ ಹೊಲಸಿರಬೇಕು" ಎಂದುಕೊಂಡು ಮುನಿಸಿಪಾಲಿಟಿಯವರನ್ನು ಮನಸ್ಸಿನಲ್ಲಿಯೇ ಶಪಿಸಿಕೊಂಡರು ಕೆಲವರು.

ಆರನೆಯ ದಿನವಂತೂ ಆ ಕೆಟ್ಟವಾಸನೆ ತಡೆಯಲಾಗಲಿಲ್ಲ. ರುದ್ರಮ್ಮನ ಮನೆಯೊಳಗಿನಿಂದಲೇ ಆ ವಾಸನೆ ಬಡೆಯುತ್ತಿದೆಯೆಂಬುದು ಎಲ್ಲರಿಗೂ ಪತ್ತೆಯಾಯಿತು. ನೆರೆಹೊರೆಯವರು ಪೋಲೀಸಿಗೆ ಹೋಗಿ ದೂರಿತ್ತರು. ಪೋಲೀಸರು ಬಂದು ಪಂಚಾಯಿತರ ಸಮಕ್ಷ ಬೀಗ ಒಡೆದರು. ಹೊಟ್ಟೆಯಲ್ಲಿರುವುದನ್ನೆಲ್ಲಾ ಕಲಕಿ ಕರುಳು ಸಮೇತ ಒಂದೇ ಸಾರಿಗೆ ಕಕ್ಕಿಸುವಂತಹ ಅಸಹ್ಯವಾಸನೆ. ಬಂದಿದ್ದವರೆಲ್ಲರೂ ಭದ್ರವಾಗಿ ಮೂಗು ಮುಚ್ಚಿ ಕಣ್ಣರಳಿಸಿ ನೋಡಿದರು.

ಒಮ್ಮೆ ನೋಡಿದರಷ್ಟೆ. ಮತ್ತೆ ಅವರಿಂದ ನೋಡಲಾಗಲಿಲ್ಲ. ಸುಂದರಿಯ ಶವ ಕೊಳೆತು ನಾರುತ್ತಿತ್ತು.

ಮಹಜರಾಯಿತು. ಶವಪರೀಕ್ಷೆ ಆಯಿತು. ವಾರಸುದಾರರಿಲ್ಲದ ಹೆಣವೆಂದು ಒಪ್ಪಲಾಯಿತು.

ಅಲ್ಲಿಗೆ ಮುಗಿಯಿತು 'ಜಾಲರಿಮನೆ'ಯ ಕಥೆ.

'ಜಾಲರಿಮನೆ'ಯ ನಂದಾದೀಪ ಕೊನೆಗೂ ನಂದಿಹೋಯಿತು!

೩೧

ಸುಂದರಿಯ ದಾರುಣ ಮರಣದ ಘೋರ ಸುದ್ಧಿ ತುರಂಗದಲ್ಲಿದ್ದ ರುದ್ರಮ್ಮನ ಕಿವಿಗಳನ್ನು ಮುಟ್ಟದೇ ಇರಲಿಲ್ಲ. ಆ ಸುದ್ಧಿ ಕೇಳಿ ಅಪ್ರತಿಭಳಾದಳು ರುದ್ರಮ್ಮ. ಸೆರೆಮನೆಯ ಕಲ್ಲುಗೋಡೆಗಳ ಕಠಿಣ ಹೃದಯವೂ ಕರಗುವಂತೆ ಗೋಳಿಟ್ಟಳು. ಎದೆ ಎದೆ ಬಡಿದುಕೊಂಡು ಅತ್ತಳು.

ಒಂದೇ ತಾಯಿಯ ಮಕ್ಕಳಾಗಿ ಹುಟ್ಟಿರದಿದ್ದರೂ ರುದ್ರಮ್ಮ ಸುಂದರಿಯನ್ನು ಪ್ರೀತಿಯಿಂದ ಮಮತೆಯಿಂದ ಕಾಣುತ್ತಿದ್ದಳು. ಸುಂದರಿಯೂ ಅಷ್ಟೆ, ರುದ್ರಮ್ಮನೆಂದರೆ ಪ್ರಾಣಬಿಡುತ್ತಿದ್ದಳು. ದೇಹ ಎರಡು, ಜೀವ ಒಂದಾಗಿತ್ತು ಅವರಿಗೆ.

ರುದ್ರಮ್ಮನಿಗೆ ತನ್ನ ಸುಖಕ್ಕಿಂತ ಅವಳ ಸುಖವೇ ಹೆಚ್ಚಾಗಿತ್ತು; ತನ್ನ ಪ್ರಾಣಕ್ಕಿಂತ ಅವಳ ಪ್ರಾಣವೇ ಅಮೂಲ್ಯವಾಗಿತ್ತು. ಸೆರೆಮನೆಯ ವಾಸವೂ ಅವಳಿಗೆ ಅಷ್ಟು ಕಠಿಣವಾಗಿ ತೋರುತ್ತಿರಲಿಲ್ಲ. ಸುಂದರಿಯ ಸಾವು ಅವಳ ಜೀವವನ್ನೆ ಹಿಂಡಿತು. ಸಾಯಲಾರಳು, ಬದುಕಿರಲಾರಳು. ಸುಂದರಿಯನ್ನು ನೆನೆಸಿಕೊಂಡಂತೆಲ್ಲಾ ದುಃಖ ಒತ್ತರಿಸುತ್ತಿತ್ತು. ಧಾರೆ ಧಾರೆಯಾಗಿ ಕಣ್ಣೀರು ಸುರಿಯುತ್ತಿತ್ತು.

ದಿನದಿನಕ್ಕೆ ರುದ್ರಮ್ಮನಿಗೆ ಬುದ್ಧಿಯ ಸ್ವಾಧೀನತೆಯೇ ತಪ್ಪಿತು. ಏನೋ ತನ್ನಷ್ಟಕ್ಕೆ ತಾನೇ ಮಾತನಾಡುವಳು; ತನ್ನಷ್ಟಕ್ಕೆ ತಾನೆ ನಗುವಳು; ಮಾತನಾಡಬಂದವರ ಮೇಲೆಲ್ಲಾ ಸಿಕ್ಕಿದಂತೆ ಎರಗುವಳು. ಬಾಯಿಗೆ ಬಂದಂತೆಲ್ಲಾ ಅವರನ್ನು ಬಯ್ಯುವಳು. ದಿನಕ್ರಮೇಣ ಹುಚ್ಚು ಪ್ರಕೋಪಕ್ಕೇರಿತು. ಕೈಯಿಗೆ ಏನು ಸಿಕ್ಕಿದರೆ ಅದರಿಂದ ತನ್ನನ್ನು ತಾನೇ ಹೊಡೆದುಕೊಳ್ಳುವಳು. ಎದುರಿಗೆ ಬಂದವರನ್ನು ಬಡಿಯುವಳು. ಅವಳನ್ನು ತಡೆದು ನಿಲ್ಲಿಸುವುದೇ ಕಷ್ಟವಾಗುತ್ತಿತ್ತು. ಬಂದೀಖಾನೆಯ ಬಾಗಿಲುಗಳ

ದಪ್ಪ ಸಲಾಕೆಗಳೂ ಅವಳಿಗೆ ಲಕ್ಷ್ಯವಿರಲಿಲ್ಲ. ಕಿರಚುತ್ತ, ಅರಚುತ್ತ ಅವನ್ನೂ ಜಗ್ಗಿಸಿ, ಬಗ್ಗಿಸಿಬಿಡುತ್ತಿದ್ದಳು.

ಅಧಿಕಾರಿಗಳಿಗೆ ಅವಳನ್ನು ಸುಧಾರಿಸುವುದು ಕಷ್ಟಕ್ಕಿಟ್ಟುಕೊಂಡಿತು. ಸೆರೆಮನೆಯ ವೈದ್ಯರು ಅವಳನ್ನು ಹುಚ್ಚರ ಆಸ್ಪತ್ರೆಗೆ ಸಾಗಿಸುವ ಸಲಹೆಯಿತ್ತರು. ಅದರಂತೆ ರುದ್ರಮ್ಮನನ್ನು ಹುಚ್ಚರ ಆಸ್ಪತ್ರೆಗೆ ಕಳುಹಿಸಿದರು. ಅಲ್ಲಿದ್ದ ವೈದ್ಯರುಗಳೂ ತಮ್ಮ ಸಾಹಸವನ್ನೆಲ್ಲಾ ಖರ್ಚುಮಾಡಿದರು. ರುದ್ರಮ್ಮನಿಗೆ ಹಿಡಿದಿದ್ದ ಹುಚ್ಚು ಇಳಿಯಲಿಲ್ಲ, ಇಳಿಯುವ ಲಕ್ಷಣವೂ ತೋರಿಬರಲಿಲ್ಲ. ವೈದ್ಯರು ಹತಾಶರಾಗಿ ಕೈ ಬಿಟ್ಟರು. ಕಾಲ ಸವೆಯಿತು. ರುದ್ರಮ್ಮನ ಕಾರಾಗೃಹವಾಸದ ಅವಧಿ ಮುಗಿಯಿತು. ಅವಳ ಬಿಡುಗಡೆಯಾಯಿತು. ಹುಚ್ಚುಹುಚ್ಚಾಗಿ ಬೀದಿಬೀದಿ ಅಲೆಯಹತ್ತಿದಳು ಹುಚ್ಚಿ ರುದ್ರಮ್ಮ! ಎಲ್ಲಿಯೋ ನಿಲ್ಲುವಳು, ಎಲ್ಲಿಯೋ ಮಲಗುವಳು, ಎಲ್ಲಿಯೋ ಏನೋ ಸಿಕ್ಕಿದುದನ್ನು ಹೊಟ್ಟೆಗೆ ಹಾಕಿಕೊಳ್ಳುವಳು.

ಏನೋ ಮಾತು, ಏನೋ ಅಳು, ಏನೋ ನಗು!

ಬೀದಿಯಲ್ಲಿ ಹೋಗುತ್ತಿದ್ದ ಜನ "ಏ ರುದ್ರಮ್ಮ!" ಎಂದು ಹಾಸ್ಯ ಮಾಡಿ ಕೂಗಿದರೆ ತಾನೂ ಕಿಲಕಿಲನೆ ನಗುವಳು. ಇಲ್ಲವೇ ಕಣ್ಣುಗಳನ್ನು ಅರಳಿಸಿ ಅವರನ್ನು ದುರುದುರು ನೋಡಿ ಬೀದಿಯಲ್ಲಿ ಬಿದ್ದಿದ್ದ ಕಲ್ಲನ್ನೋ ಮಣ್ಣುಹೆಂಟೆಯನ್ನೋ ಎತ್ತಿಕೊಂಡು ಓಡಿಸಿಕೊಂಡು ಹೋಗುವಳು!

ಆದರೂ ಜನ ಅಂದೇ ಅನ್ನುವರು–ಪರಿಹಾಸ್ಯ ಮಾಡುತ್ತ, ಅವಳನ್ನು ಕೆಣಕುತ್ತ—

"ಏ, ರುದ್ರಮ್ಮ........ರುದ್ರಮ್ಮ........!"

"ಏ, ಜಾಲರಿಮನೆ........!"

ಅವಳೂ ಅರುಚುವಳು—

"........ಹೌದು ಕಣೋ. ನಾನೇ ರುದ್ರಮ್ಮ, ಜಾಲರಿಮನೆ ರುದ್ರಮ್ಮ. ಉಡುಗೀರು ಬೇಕಾ ನಿಂಗೆ? ಎಂತೆಂಥಾ ಉಡುಗೀರು ಬೇಕು? ಅಳ್ಳೀ ಉಡುಗೀರು ಬೇಕಾ? ಪೇಟೆ ಉಡುಗೀರು ಬೇಕಾ? ತತ್ತೀನಿ.... ಬೇಕಾದ ಉಡುಗೀರ್ನ ತತ್ತೀನಿ. ಚಂಜೇಗೆ ಬಂದ್ಬುಡು ಹ ಹ್ಹ ಹ್ಹ ಹ್ಹ!.... ಹ ಹ್ಹ ಹ್ಹ ಹ್ಹ........!!

"........ಜಾಲರಿಮನೆ! ಊರ್ನಾಗೆಲ್ಲಾ ಜಾಲರೀಮನೆ ತೆಗೀತೀನಿ.... ಒಳ್ಳೊಳ್ಳೇ ಉಡುಗೀರ್ನೆಲ್ಲಾ ತಂದ್ಮಡಗ್ತೀನಿ........ಚಂದುಳ್ಳಿ ಉಡುಗೀರ್ನ ತಂದ್ಮಡಗ್ತೀನಿ........ಹ ಹ್ಹ ಹ್ಹ ಹ್ಹ ಹ್ಹ!........ಹ ಹ್ಹ ಹ್ಹ ಹ್ಹ....!!"

ಅವಳ ಆ ಹುಚ್ಚು ನಗು ದಿಕ್ಕುದಿಕ್ಕುಗಳನ್ನೆಲ್ಲ ವ್ಯಾಪಿಸಿ ಪ್ರತಿಧ್ವನಿಸುತ್ತಿತ್ತು, ವಿಕಾರವಾಗಿ, ವಿರೂಪವಾಗಿ, ಭಯಂಕರವಾಗಿ.

"ಹ........ಹ್ಹ........ಹ್ಹ........!"

"ಹ........ಹ್ಹ........ಹ್ಹ........ಹ್ಹ!!"

"ಹ........ಹ್ಹ........ಹ್ಹ........ಹ್ಹ........ಹ್ಹ........!!!"

ನಮ್ಮ ಮುಂದಿನ ಪ್ರಕಟನೆಗಳು

ಮೂರಕ್ಕೆ ಮುಕ್ತಿ

ಶ್ರೀ ನಾಡಿಗೇರ ಕೃಷ್ಣರಾಯ

ಕನ್ನಡನಾಡಿನ ಪ್ರಸಿದ್ಧ ಹಾಸ್ಯಲೇಖಕರಾದ ನಾಡಿಗೇರ ಕೃಷ್ಣರಾಯರ ಹಾಸ್ಯರಸಪೂರ್ಣ ಕಾದಂಬರಿ. ವಿರಸಜೀವನದ ಸುರಸ ಚಿತ್ರ.

ಗೃಹದೇವತೆ

ಶ್ರೀ ಕೊರಟಿ ಶ್ರೀನಿವಾಸರಾವ್

ದುರ್ಗಾಸ್ತಮಾನ

ಶ್ರೀ ತ. ರಾ. ಸು.

'ಹಂಸಗೀತೆ', 'ನೃಪತುಂಗ', 'ಕಂಬನಿಯ ಕುಯಿಲು' ಮತ್ತು 'ರಕ್ತರಾತ್ರಿ'ಗಳಂತಹ ಅದ್ಭುತ ಚಾರಿತ್ರಿಕ ಕಾದಂಬರಿಗಳನ್ನು ರಚಿಸಿ ವಿಖ್ಯಾತರಾಗಿರುವ ಶ್ರೀ ತ. ರಾ. ಸು. ರವರ ಸಿದ್ಧಹಸ್ತದಿಂದ ಅವುಗಳ ಜಾಡಿನಲ್ಲಿಯೇ ಮತ್ತೊಂದು ಐತಿಹಾಸಿಕ ರೋಮಾಂಚಕ ದುರಂತ ಕಾದಂಬರಿ. ಇದಕ್ಕೂ ಚಿತ್ರದುರ್ಗದ ವೈಭವಯುತ ಚರಿತ್ರೆಯೇ ಹಿನ್ನೆಲೆ.

ಬ ು-೨

ನಮ್ಮ ಪ್ರಕಟಣೆಗಳು

ಕನ್ನಡಮ್ಮನ ಗುಡಿಯಲ್ಲಿ

[illegible]

[illegible]

[illegible]

ಹೊಸಲು ದಾಟಿದ ಹೆಣ್ಣು

ಅ. ನ. ಕೃ

[illegible]

(ಪ್ರತಿಗಳು ತೀರಿವೆ)

[illegible]

[illegible]

[illegible]

[illegible]

ಅ. ನ. ಕೃ

ಸ್ತ್ರೀಸ್ವಾತಂತ್ರ್ಯದ ಆಗುಹೋಗುಗಳ ಪೃಥಕ್ಕರಣೆ.

[illegible]

[illegible]

[illegible]

[illegible]

ಹಿಂದೂಸ್ಥಾನ ಪ್ರಕಾಶನ

ಬಳೇಪೇಟೆ, ಬೆಂಗಳೂರು-೨

ವೇಶ್ಯಾವೃತ್ತಿಯ ಮೇಲೆ

ಒಂದು ಉಜ್ವಲ, ಅಪೂರ್ವ, ಅಸಮಾನ ಕೃತಿ

ಇದು ನಾಲ್ಕು ಗೋಡೆಗಳ ಮಧ್ಯೆ ಎರವಲು ಅನುಭವದ ಕಿರುದೋಣಿಯಲ್ಲಿ ತೇಲಿಹೋದ ಲೇಖಕನೊಬ್ಬನ ತೆವಲು ಬರಹವಲ್ಲ. ಪೋಲೀಸು ಅಧಿಕಾರಿಯೊಬ್ಬರ ಇಪ್ಪತ್ತು ವರ್ಷಗಳ ಸಾಹಸಪೂರ್ಣ ದಿನಚರಿಯ ಮಹಾಗರ್ಭದಲ್ಲಿ ಜನಿಸಿದ ಬಿಚ್ಚುಮಾತಿನ, ಕೆಚ್ಚೆದೆಯ ಕೃತಿ. ಇದಕ್ಕೆ ಆಧಾರ ಕುರುಡು ಕಲ್ಪನೆಯಲ್ಲ, ಕಣ್ಣಾರೆ ಕಂಡ ಸತ್ಯ ಸಂಗತಿಗಳು. ಇವರ ಗುರಿ ಅಗ್ಗದ ಕಾಮೋದ್ದೀಪನವಲ್ಲ, ಉದಾತ್ತವಾದ ಕನಿಕರ.

ಈ ಮಾನವೀಯ ಕೃತಿಯ ಪ್ರತಿ ಪುಟದಲ್ಲೂ ರಕ್ತ ಹೆಪ್ಪುಗಟ್ಟಿಸುವ ಸನ್ನಿವೇಶಗಳಿವೆ. ಎದೆ ಝಲ್ಲೆನ್ನಿಸುವ ಸ್ಪಷ್ಟ ಪಾತ್ರಗಳಿವೆ. ನರನಾಡಿಗಳನ್ನು ಸೆಟೆದು ನಿಲ್ಲಿಸುವ ನಾಟಕತೆಯಿದೆ. ಹಾಕು ಹಾಕೆನಿಸುವಷ್ಟು ಕಥೆಯಿದೆ. ನೀರಿನಂತೆ ನಿರರ್ಗಳವಾಗಿ ಹರಿಯುವ ಭಾಷಾಶೈಲಿಯಿದೆ.